ಶನಿವಾರ, ಏಪ್ರಿಲ್ 23, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭದ್ರತೆ
ಶ್ರೀನಗರದ ಮಾರುಕಟ್ಟೆ ಪ್ರದೇಶದಲ್ಲಿ ಶುಕ್ರವಾರ ನಡೆದ ಶೋಧ ಕಾರ್ಯಾಚರಣೆ ವೇಳೆ ಭದ್ರತೆಗಾಗಿ ನಿಯೋಜನೆಗೊಂಡಿದ್ದ ಅರೆಸೇನಾ ಪಡೆಯ ಮಹಿಳಾ ಸಿಬ್ಬಂದಿ

RR NAGAR is ₹6000/sq.ft.

Homes 5 mins from RR Nagar

Just ₹3999/sq.ft.

Make the smart choice!

RERA: PRM/KA/RERA/1251/310/PR/210422/004845
For more details, visit: rera.karnataka.gov.in

LAUNCHING CASAGRAND **AQUENE**
5 mins from RR Nagar

KENGERI MARKET PRICE ~~₹5500~~ per sq.ft.

CASAGRAND LAUNCH PRICE ~~₹4250~~ per sq.ft.

CASAGRAND EARLY BIRD PRICE **₹3999*** per sq.ft. (for first 20 bookings only)

LIFESTYLE 2 & 3 BHK APTS AT KENGERI FROM **₹49 L**

BIG REASONS TO BUY

- 500 m from Kengeri bus terminal Metro station & project within BBMP limits
- 5 mins from Global Village Tech Park & 10 mins from Gopalan Arcade Mall
- Kids themed community
- 60+ Amenities (40 for kids)

SALIENT FEATURES

- Thoughtfully crafted 333 homes spread across a 3.77 acre expanse
- Basement + Ground floor + 8 floors design structure
- Secured apartment community with a vehicle-free podium
- Offers a standalone clubhouse of 12,000 sq.ft.
- 75% open space for maximised ventilation & abundant lush greenery
- 100% Vaastu compliant homes with zero wastage of space
- Surrounded by prominent landmarks, schools, colleges & hospitals

*Conditions apply

INCREDIBLY PRICED! (Launching Phase 1)

Type	Size (sq.ft.)	Casagrand Launch Price	Casagrand Early Bird Price
1 BHK	504 - 798	~~₹26 L - ₹39 L~~	**₹25 L - ₹37 L**
2 BHK	1039 - 1260	~~₹52 L - ₹61 L~~	**₹49 L - ₹58 L**
3 BHK	1350 -1525	~~₹65 L - ₹73 L~~	**₹62 L - ₹69 L**

Total Units: 195 | Units Sold: 69 | Units Left: 126

COMPLETION IN 18 MONTHS

CREDAI
Exclusive site visit available. Visit model house at site.
77956 54058 | www.casagrand.co.in

CASAGRAND
building aspirations

ಶನಿವಾರ, ಏಪ್ರಿಲ್ 23, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕರಕುಶಲ ಪ್ರದರ್ಶನ

ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಆವರಣದಲ್ಲಿ ಶುಕ್ರವಾರ ಆಯೋಜಿಸಿದ್ದ ಇಂಡಿಯನ್ ಕ್ರಾಫ್ಟ್ ಕಲೆಕ್ಟಿವ್ 2ನೇ ಆವೃತ್ತಿಯ ಹತ್ತು ದಿನಗಳ ಕರಕುಶಲ ಮತ್ತು ಕೈಮಗ್ಗ ಪ್ರದರ್ಶನದಲ್ಲಿ ನಟಿ ಅನ್ವಿತಾ ಸಾಗರ್ ಕಲಾಕೃತಿಯೊಂದನ್ನು ವೀಕ್ಷಿಸಿದರು

ಶನಿವಾರ, ಏಪ್ರಿಲ್ 23, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 112 | ಪುಟ 22

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ

ಮಕ್ಕಳು ತಮ್ಮ ಜೀವನ ರೂಪಿಸಿಕೊಂಡು ಮನೆಯಿಂದ ಹೊರಟ ಮೇಲೆ ತಾಯಂದಿರಿಗೆ ಮನಸ್ಸಿನಲ್ಲಿ ಆವರಿಸುವ ಶೂನ್ಯಭಾವದಿಂದ ಉಂಟಾಗುವ ತಳಮಳವನ್ನು ‘ಎಮ್ಟಿ ನೆಸ್ಟ್ ಸಿಂಡ್ರೋಮ್’ ಎನ್ನುತ್ತಾರೆ.

ಚರ್ಚೆ ಏಕಕಾಲದಲ್ಲಿ ಎರಡು ಪದವಿ ಓದುವ ಅವಕಾಶ ವಿದ್ಯಾರ್ಥಿಗಳಿಗೆ ಉಪಯುಕ್ತವೇ? 9

ಉತ್ತರಹಳ್ಳಿ: ಕೊಳೆಗೇರಿ ನಿವಾಸಿಗಳು ಬೀದಿಪಾಲು 5A

ಕೋವಿಡ್: ಸಕ್ರಿಯ ಪ್ರಕರಣ 14 ಸಾವಿರಕ್ಕೆ ಏರಿಕೆ 13

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,197	17,172	₹54,180 (ಬೆಂಗಳೂರು)	₹68,600 (ಬೆಂಗಳೂರು)	76.42

ಸುದರ್ಶನ್ ಜ್ಯುವೆಲರ್ಸ್
ಚಿನ್ನ ❖ ಬೆಳ್ಳಿ ❖ ಚಿನ್ನದ ಆಭರಣಗಳು
916 Hallmark Gold Rate
₹ 4850/-gm
ಬೆಳ್ಳಿ ₹ 63,000/- *CA
ಚಿಕ್ಕಪೇಟೆ: 41300355
Gangothri

ಹಿಜಾಬ್: ಮೂವರು ವಿದ್ಯಾರ್ಥಿನಿಯರು ಗೈರು

ಉಡುಪಿ: ಹಿಜಾಬ್ ಧರಿಸಿ ಪರೀಕ್ಷೆ ಬರೆಯಲು ಅವಕಾಶ ನಿರಾಕರಿಸಿದ ಕಾರಣಕ್ಕೆ ಹಿಜಾಬ್‌ಗಾಗಿ ಹೋರಾಟ ನಡೆಸುತ್ತಿರುವ ವಿದ್ಯಾರ್ಥಿನಿಯರಾದ ಅಲಿಯಾ ಅಸಾದಿ ಹಾಗೂ ರೇಶಮ್ ಶುಕ್ರವಾರ ದ್ವಿತೀಯ ಪಿಯುಸಿ ಪರೀಕ್ಷೆ ಬರೆಯದೆ ಮನೆಗೆ ವಾಪಸಾದರು. 7

ಮ್ಯಾನ್‌ಹುಶ್‌ನಲ್ಲೂ ಸಾಮೂಹಿಕ ಸಮಾಧಿ ಪತ್ತೆ 13

ಚಿನಕುರಳಿ

ಪ್ರಕಾಶ್ ಶೆಟ್ಟಿ

ರಷ್ಯಾ ಆಕ್ರಮಣಕ್ಕೆ ಭಿನ್ನ ನಿಲುವಿನ ಮಧ್ಯೆಯೂ ಬ್ರಿಟನ್ ಒಪ್ಪಂದ

ಭಾರತಕ್ಕೆ ರಕ್ಷಣಾ ಸಹಕಾರ

ನವದೆಹಲಿ (ರಾಯಿಟರ್ಸ್/ಎಎಫ್‌ಪಿ/ಪಿಟಿಐ): ಭಾರತ ಮತ್ತು ಬ್ರಿಟನ್ ಮಧ್ಯೆ ನೂತನ ಮತ್ತು ವಿಸ್ತೃತ ರಕ್ಷಣಾ ಸಹಕಾರ ಒಪ್ಪಂದಕ್ಕೆ ಪ್ರಧಾನಿ ನರೇಂದ್ರ ಮೋದಿ ಮತ್ತು ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರು ಒಪ್ಪಿಗೆ ಸೂಚಿಸಿದ್ದಾರೆ. ಉಕ್ರೇನ್‌ನಲ್ಲಿ ರಷ್ಯಾ ಅತಿಕ್ರಮಣದ ವಿಚಾರದಲ್ಲಿ ಭಾರತದ ನಿಲುವಿಗೆ ಸಂಬಂಧಿಸಿದಂತೆ ಬ್ರಿಟನ್ ಭಿನ್ನಾಭಿಪ್ರಾಯ ಹೊಂದಿದ್ದರೂ ಎರಡೂ ದೇಶಗಳು ಒಪ್ಪಂದಕ್ಕೆ ಸಮ್ಮತಿ ಸೂಚಿಸಿವೆ.

ಭಾರತದ ಜತೆಗೆ ರಕ್ಷಣಾ ಸಹಕಾರವನ್ನು ವಿಸ್ತರಿಸಲು ಉತ್ಸುಕತೆ ತೋರಿಸುವ ಜಾನ್ಸನ್, ‘ಭಾರತದಲ್ಲೇ ಯುದ್ಧವಿಮಾನಗಳನ್ನು ತಯಾರಿಸಲು ಸಂಪೂರ್ಣ ಸಹಕಾರ ನೀಡುತ್ತೇವೆ’ ಎಂದು ಹೇಳಿದ್ದಾರೆ. ಜತೆಗೆ, ‘ಸೈಬರ್ ಭದ್ರತೆ, ಯುದ್ಧನೌಕೆಗಳ ಎಂಜಿನ್ ಅಭಿವೃದ್ಧಿ, ಹಿಂದೂ ಮಹಾಸಾಗರ ಮತ್ತು ಪೆಸಿಫಿಕ್ ಪ್ರದೇಶದಲ್ಲಿ ಮುಕ್ತ ಮತ್ತು ಸ್ವತಂತ್ರ ಸಮುದ್ರಯಾನವನ್ನು ಕಾಯ್ದುಕೊಳ್ಳುವಲ್ಲಿ ನೆರವು ನೀಡುತ್ತೇವೆ’ ಎಂದೂ ಅವರು ಹೇಳಿದ್ದಾರೆ.

ನವದೆಹಲಿಯಲ್ಲಿ ಬೋರಿಸ್ ಜಾನ್ಸನ್ ಮತ್ತು ನರೇಂದ್ರ ಮೋದಿ ಅವರು ಪರಸ್ಪರ ಹಸ್ತಲಾಘವ ಮಾಡಿದರು –ಪಿಟಿಐ ಚಿತ್ರ

ಸೇನಾ ಸಾಮಗ್ರಿಗಳು ಮತ್ತು ಯುದ್ಧೋಪಕರಣಗಳಿಗಾಗಿ ರಷ್ಯಾ ಮೇಲೆ ಭಾರತದ ಅವಲಂಬನೆಯನ್ನು ತಗ್ಗಿಸಲು ಬ್ರಿಟನ್ ಈ ಸಹಕಾರವನ್ನು ಮುಂದಿಟ್ಟಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ. ಭಾರತಕ್ಕೆ ರಕ್ಷಣಾ ಸಾಮಗ್ರಿಗಳನ್ನು ಅತ್ಯಂತ ತ್ವರಿತವಾಗಿ ಮಾರಾಟ ಮಾಡಲು ಅನುಕೂಲ ಮಾಡಿಕೊಡುವ ‘ಮುಕ್ತ ಸಾಮಾನ್ಯ ರಫ್ತು ಪರವಾನಗಿ’ (ಒಜಿಇಎಲ್) ಅನ್ನು ನೀಡುವುದಾಗಿ ಜಾನ್ಸನ್ ಅವರು ಘೋಷಿಸಿದ್ದಾರೆ. ಈ ಪರವಾನಗಿ ದೊರೆತರೆ, ಬ್ರಿಟನ್‌ನಿಂದ ಹಲವು ಹಂತದ ರಾಜತಾಂತ್ರಿಕ ಪ್ರಕ್ರಿಯೆಗಳನ್ನು ಕೈಬಿಟ್ಟು, ರಕ್ಷಣಾ ಸಾಮಗ್ರಿಗಳನ್ನು ನೇರವಾಗಿ ತರಿಸಿಕೊಳ್ಳುವುದು ಸಾಧ್ಯವಾಗುತ್ತದೆ.

ತೆರಿಗೆ ಮುಕ್ತ ವ್ಯಾಪಾರ: ‘ಭಾರತದೊಂದಿಗೆ ತೆರಿಗೆ ಮುಕ್ತ ವ್ಯಾಪಾರಕ್ಕೆ ಎದುರು ನೋಡುತ್ತಿದ್ದೇವೆ. ಬ್ರಿಟನ್‌ನಿಂದ ರಫ್ತಾಗುವ ಹಲವು ವಸ್ತುಗಳಿಗೆ ಭಾರತವು ಸುಂಕ ವಿನಾಯಿತಿ ನೀಡಿದೆ. ಭಾರತದಿಂದ ರಫ್ತಾಗುವ ಸರಕುಗಳಿಗೆ ಬ್ರಿಟನ್‌ನಲ್ಲಿ ಸುಂಕ ವಿನಾಯಿತಿ ನೀಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ದೀಪಾವಳಿ ವೇಳೆಗೆ ಇದು ಅಂತಿಮವಾಗುವುದನ್ನು ಎದುರು ನೋಡುತ್ತಿದ್ದೇವೆ’ ಎಂದು ಬೋರಿಸ್ ಜಾನ್ಸನ್ ಹೇಳಿದ್ದಾರೆ.

> **ರಕ್ಷಣಾ ಕ್ಷೇತ್ರದಲ್ಲಿ ಸಂಶೋಧನೆ, ಅಭಿವೃದ್ಧಿ, ತಂತ್ರಜ್ಞಾನ ಮತ್ತು ತಯಾರಿಕೆಯಲ್ಲಿ ಭಾರತವು ಆತ್ಮನಿರ್ಭರವಾಗಲು ಬ್ರಿಟನ್‌ನ ಸಹಕಾರವನ್ನು ಸ್ವಾಗತಿಸುತ್ತೇವೆ**
> **ನರೇಂದ್ರ ಮೋದಿ,** ಪ್ರಧಾನಿ

> **ನೆಲ, ಜಲ, ಆಗಸ ಮತ್ತು ಸೈಬರ್ ಜಗದ ಹೊಸ ಅಪಾಯಗಳನ್ನು ಎದುರಿಸಲು ಬ್ರಿಟನ್ ಮತ್ತು ಭಾರತವು ಒಟ್ಟಾಗಿ ಕೆಲಸ ಮಾಡಲು ಒಪ್ಪಿಕೊಂಡಿದ್ದೇವೆ**
> **ಬೋರಿಸ್ ಜಾನ್ಸನ್,** ಬ್ರಿಟನ್ ಪ್ರಧಾನಿ

ಇನ್ನೊಂದು ಸುದ್ದಿ 13

ಪಿಎಸ್‌ಐ ನೇಮಕಾತಿ ಹಗರಣ

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೇರಿ ಮತ್ತೆ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್‌ಐ ನೇಮಕಾತಿ ಪರೀಕ್ಷೆಯ ಹಗರಣಕ್ಕೆ ಸಂಬಂಧಪಟ್ಟಂತೆ, ಜಿಲ್ಲೆಯ ಅಫಜಲಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಾಂತೇಶ ಪಾಟೀಲ ಸೇರಿ ಮತ್ತೆ ಮೂವರನ್ನು ಶುಕ್ರವಾರ ಬಂಧಿಸಲಾಗಿದೆ. ಇದರೊಂದಿಗೆ ಪ್ರಕರಣ ಮತ್ತೊಂದು ತಿರುವು ಪಡೆದಿದೆ.

ಪರೀಕ್ಷೆ ಕೊಠಡಿಯಲ್ಲೇ ಬ್ಲೂಟೂತ್ ಬಳಸಿದ ಕಲಬುರಗಿಯ ವಿಶಾಲ್ ಶಿರೂರ ಹಾಗೂ ಶಾಸಕ ಎಂ.ವೈ.ಪಾಟೀಲ ಅವರ ಗನ್‌ಮ್ಯಾನ್ ಹಯ್ಯಾಳಿ ದೇಸಾಯಿ ಅವರಿಗೆ ನೆರವಾದ ಅಫಜಲಪುರದ ಶರಣಬಸಪ್ಪ ಎಂಬವರನ್ನೂ ಸಿಐಡಿ ಅಧಿಕಾರಿಗಳು ಶುಕ್ರವಾರ ಬಂಧಿಸಿದರು.

5A ಪುಟ ನೋಡಿ

ಇನ್ನಷ್ಟು ಸುದ್ದಿಗಳು 7

ಸಕಾಲದಲ್ಲಿ ಗುತ್ತಿಗೆ ಹಣ ಪಾವತಿಸಿ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗುತ್ತಿಗೆದಾರರು ಯಾವುದೇ ಲೋಪವಿಲ್ಲದೆ ಕಾಮಗಾರಿ ಪೂರ್ಣಗೊಳಿಸಿದ ಸಂದರ್ಭದಲ್ಲಿ ರಾಜ್ಯ ಸರ್ಕಾರ ಮತ್ತು ಅಧೀನ ಸಂಸ್ಥೆಗಳು ಗುತ್ತಿಗೆದಾರರಿಗೆ ಸಕಾಲದಲ್ಲಿ ಹಣ ಪಾವತಿ ಮಾಡಬೇಕು’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಖಡಕ್ ನಿರ್ದೇಶನ ನೀಡಿದೆ.

‘ಕಾಮಗಾರಿ ಪೂರ್ಣಗೊಂಡು ಹಲವು ತಿಂಗಳು ಕಳೆದಿದ್ದರೂ ಗುತ್ತಿಗೆಯ ₹ 15 ಕೋಟಿಗೂ ಹೆಚ್ಚಿನ ಮೊತ್ತ ನೀಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವಿಳಂಬ ಮಾಡುತ್ತಿದೆ’ ಎಂದು ಆಕ್ಷೇಪಿಸಿ ಬೆಂಗಳೂರಿನ ‘ಸತ್ಯ ಕನ್‌ಸ್ಟ್ರಕ್ಷನ್ಸ್’, ಬಿ.ಬಿ.ಉಮೇಶ್ ಮತ್ತು ಕೆ.ಎಸ್.ರೋಹಿತ್ ಸಲ್ಲಿಸಿದ್ದ ರಿಟ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ತೀರ್ಪು ಪ್ರಕಟಿಸಿದೆ.

5A ಪುಟ ನೋಡಿ

‘ನಿಜವಾದ ರೈತರಿಗೆ ಏನೂ ಸಿಗುತ್ತಿಲ್ಲ’

ಮೈಸೂರು: ತಾಲ್ಲೂಕಿನ ತಳೂರು ಗ್ರಾಮದಲ್ಲಿ ರೈತ ಮಾದಪ್ಪ ಅವರು ‘ನಿಜವಾದ ರೈತರಿಗೆ ಏನೂ ಸಿಗುತ್ತಿಲ್ಲ’ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ ಅವರ ಮುಂದೆ ಆಕ್ರೋಶ ವ್ಯಕ್ತಪಡಿಸಿದರು.

‘ನಾನೊಬ್ಬ ಪ್ರಗತಿಪರ ರೈತ. ಯಾವುದೇ ಸೌಲಭ್ಯ ನೀಡಿಲ್ಲ. ಸಚಿವರಿಗೆ ಕರೆ ಮಾಡಿದರೆ ಸ್ವೀಕರಿಸುತ್ತಿಲ್ಲ’ ಎಂದು ಕಿಡಿಕಾರಿದರು.

ಅವರಿಗೆ ಪ್ರತಿಕ್ರಿಯಿಸಿದ ಸಚಿವರು, ‘ಎಲ್ಲರ ಕರೆಯನ್ನೂ ಸ್ವೀಕರಿಸಲು ಆಗುವುದಿಲ್ಲ. ನಿಮ್ಮ ಸಮಸ್ಯೆ ಬಗ್ಗೆ ಅಧಿಕಾರಿಗಳಿಗೆ ಹೇಳಿ. ಕಾರ್ಯಕ್ರಮ ಮುಗಿದ ಬಳಿಕ ನಿಮ್ಮ ದೂರನ್ನೂ ಆಲಿಸುತ್ತೇನೆ’ ಎಂದು ಭರವಸೆ ನೀಡಿದರು.

‘ಗೃಹ ಖಾತೆ ಕೊಟ್ಟರೆ ನಿಭಾಯಿಸುವೆ’: ‘25 ವರ್ಷ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡಿದ್ದೇನೆ. ನಾನು ಗೃಹಖಾತೆ ಬಗ್ಗೆ ಚಿಂತನೆ ಮಾಡಿಲ್ಲ. ಗೃಹ ಖಾತೆ ನೀಡುವುದು ಮುಖ್ಯಮಂತ್ರಿ ವಿವೇಚನೆಗೆ ಬಿಟ್ಟಿದ್ದು’ ಎಂದು ಹೇಳಿದರು.

ಬಿಬಿಎಂಪಿ ಐಎಫ್‌ಎಂಎಸ್‌ನಲ್ಲಿ ಫೋಟೊ ಅಪ್‌ಲೋಡ್

ಒಂಟಿ ಮನೆಗೆ ಆರು ವಿದ್ಯುತ್ ಮೀಟರ್!

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಬಿಬಿಎಂಪಿಯು ಕಲ್ಯಾಣ ಕಾರ್ಯಕ್ರಮದಡಿ ಮಂಜೂರಾದ ‘ಒಂಟಿ ಮನೆ’ ಯೋಜನೆಯ ಕೆಲವು ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡಿರುವ ವಿವರಗಳನ್ನು ಸಮಗ್ರ ಹಣಕಾಸು ನಿರ್ವಹಣೆ ವ್ಯವಸ್ಥೆಯಲ್ಲಿ (ಐಎಫ್‌ಎಂಎಸ್) ಅಪ್‌ಲೋಡ್ ಮಾಡಿದೆ. ಐಎಫ್‌ಎಂಎಸ್‌ನಲ್ಲಿ ಅಪ್‌ಲೋಡ್ ಮಾಡಿರುವ ದಾಖಲೆಗಳು ಒಂದಕ್ಕಿಂತ ಹೆಚ್ಚು ವಾಸದ ಘಟಕಗಳನ್ನು ಹೊಂದಿರುವ ಮನೆಗಳಿಗೂ ಈ ಯೋಜನೆಯಡಿ ಹಣ ಪಾವತಿ ಮಾಡುತ್ತಿರುವುದಕ್ಕೆ ಪುಷ್ಟಿ ನೀಡುತ್ತಿವೆ.

ಒಂಟಿ ಮನೆ ಫಲಾನುಭವಿಗೆ ಹಣ ಬಿಡುಗಡೆ ಮಾಡಿದ ಸಂಬಂಧ ಬಿಬಿಎಂಪಿಯ ಐಎಫ್‌ಎಂಎಸ್‌ನಲ್ಲಿ ಅಪ್‌ಲೋಡ್ ಮಾಡಿರುವ ಫೋಟೊ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಆರ್ಥಿಕವಾಗಿ ಹಿಂದುಳಿದ ವಸತಿರಹಿತ ಕುಟುಂಬಗಳು, ಸ್ವಂತ ಜಮೀನು ಹೊಂದಿದ್ದರೆ, ಅಂಥವರು ವಸತಿ ನಿರ್ಮಿಸಿಕೊಳ್ಳಲು ಒಂಟಿ ಮನೆ ಯೋಜನೆ ಅಡಿ ಬಿಬಿಎಂಪಿ ₹ 4.5 ಲಕ್ಷ ಆರ್ಥಿಕ ನೆರವು ಒದಗಿಸುತ್ತದೆ. ಅರ್ಹ ಫಲಾನುಭವಿಗಳ ಪಟ್ಟಿಯನ್ನು ವಾರ್ಡ್ ಮಟ್ಟದಲ್ಲಿ ತಯಾರಿಸಬೇಕು. ವಲಯ ಮಟ್ಟದ ಸಮಿತಿಯಲ್ಲಿ ಚರ್ಚಿಸಿ ಅರ್ಹರನ್ನು ಆಯ್ಕೆ ಮಾಡಬೇಕು ಎಂಬುದು ನಿಯಮ. ಆದರೆ, ಫಲಾನುಭವಿಗಳ ಆಯ್ಕೆಯು ಜನಪ್ರತಿನಿಧಿಗಳು ಮಾಡುವ ಶಿಫಾರಸುಗಳನ್ನು ಆಧರಿಸಿಯೇ ನಡೆಯುತ್ತಿದೆ. ಆರ್ಥಿಕವಾಗಿ ದುರ್ಬಲರಲ್ಲದ ಅನರ್ಹರಿಗೂ ಈ ಯೋಜನೆಯ ಅಡಿ ಆರ್ಥಿಕ ನೆರವು ಒದಗಿಸಲಾಗುತ್ತಿದೆ ಎಂಬ ಟೀಕೆಗಳಿವೆ.

ಬಿಬಿಎಂಪಿಯ ಐಎಫ್‌ಎಂಎಸ್‌ನಲ್ಲಿರುವ ಡಿ.ಸಿ.ಬಿಲ್ ಸಂಖ್ಯೆ 000104ರ ಪ್ರಕಾರ ಆಸ್ಟಿನ್‌ಟೌನ್‌ನ ನಿವಾಸಿ ರಾಣಿ ಕಲಾ ಎಂಬವರಿಗೆ ಏ. 4ರಂದು (ಪಿ–ಕೋಡ್: ಪಿ–2021) ₹ 4.5 ಲಕ್ಷವನ್ನು ಪಾವತಿಸಲಾಗಿದೆ. ಈ ಬಿಲ್‌ಗೆ ಸಂಬಂಧಿಸಿ ಮನೆಯ ಒಂದು ಪಾರ್ಶ್ವದ ಫೋಟೊವನ್ನು ಅಪ್‌ಲೋಡ್ ಮಾಡಲಾಗಿದೆ. ಆ ಮನೆಯು ಒಟ್ಟು 6 ವಿದ್ಯುತ್ ಮೀಟರ್‌ಗಳನ್ನು ಹೊಂದಿರುವುದು ಫೋಟೊದಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಪೂರ್ವ ವಲಯದ ಸಹಾಯಕ ಕಲ್ಯಾಣ ಅಧಿಕಾರಿಯವರು ಈ ಬಿಲ್ ಪಾವತಿಗೆ ಕ್ರಮ ಕೈಗೊಂಡ ವಿವರಗಳು ಐಎಫ್‌ಎಂಎಸ್‌ನಲ್ಲಿವೆ.

ಬಿಬಿಎಂಪಿ ಸುತ್ತೋಲೆ ಪ್ರಕಾರ, ಒಂಟಿ ಮನೆ ಯೋಜನೆಯ ಫಲಾನುಭವಿಯು ಬಿಬಿಎಂಪಿ ವ್ಯಾಪ್ತಿಯ ನಿವಾಸಿ ಆಗಿರಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಡುಬಡವರ ವೈಯಕ್ತಿಕ ಅಭಿವೃದ್ಧಿ ಕಾಮಗಾರಿಯಡಿ ಒಂಟಿ ಮನೆ ಕಾಮಗಾರಿ ಕೈಗೊಳ್ಳುವುದರಿಂದ ಫಲಾನುಭವಿ ಕುಟುಂಬದ ವಾರ್ಷಿಕ ಆದಾಯ ಸರ್ಕಾರ ನಿಗದಿಪಡಿಸಿದ ಮಿತಿಯಲ್ಲಿರಬೇಕು. ಪೌರಕಾರ್ಮಿಕರಿಗೆ ಈ ಸವಲತ್ತು ನೀಡುವಾಗಲೂ ಅವರ ಕುಟುಂಬದ ವಾರ್ಷಿಕ ಆದಾಯ ನಿಗದಿತ ಮಿತಿಯನ್ನು ಮೀರುವಂತಿಲ್ಲ.

ಈ ಕುರಿತು ಪ್ರತಿಕ್ರಿಯಿಸಿದ ಬಿಬಿಎಂಪಿ ವಿಶೇಷ ಆಯುಕ್ತ (ಕಲ್ಯಾಣ) ಶರತ್ ಬಿ ಅವರು, ‘ಕಡು ಬಡವರಿಗಷ್ಟೇ ಬಿಬಿಎಂಪಿ ಕಲ್ಯಾಣ ಕಾರ್ಯಕ್ರಮಗಳಡಿ ಒಂಟಿ ಮನೆ ಮಂಜೂರು ಮಾಡಬಹುದು. ಅರ್ಹರಲ್ಲದವರಿಗೆ ಸವಲತ್ತು ನೀಡಿದ್ದರೆ ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇವೆ’ ಎಂದರು.

ಸುದ್ದಿ 2 ನಿಮಿಷ

ನಿರ್ವಹಣಾ ಕಾಮಗಾರಿ: ಮೆಟ್ರೊ ರೈಲು ತಾತ್ಕಾಲಿಕ ಸ್ಥಗಿತ

ಬೆಂಗಳೂರು: ಮೆಟ್ರೊ ರೈಲು ನೇರಳೆ ಮಾರ್ಗದಲ್ಲಿ ಸಿವಿಲ್ ನಿರ್ವಹಣಾ ಕಾಮಗಾರಿಯನ್ನು ಬಿಎಂಆರ್‌ಸಿಎಲ್ ಕೈಗೆತ್ತಿಕೊಂಡಿದ್ದು, ಶನಿವಾರ ರಾತ್ರಿ 9.30ರಿಂದ 11.30ರ ವರೆಗೆ ಎಂ.ಜಿ. ರಸ್ತೆಯಿಂದ ಬೈಯಪ್ಪನಹಳ್ಳಿ ತನಕ ರೈಲುಗಳ ಸಂಚಾರ ತಾತ್ಕಾಲಿಕವಾಗಿ ಸ್ಥಗಿತಗೊಳ್ಳಲಿದೆ.

ಇಂದಿರಾನಗರ ಮತ್ತು ಸ್ವಾಮಿ ವಿವೇಕಾನಂದ ಮೆಟ್ರೊ ನಿಲ್ದಾಣಗಳ ನಡುವೆ ಕಾಮಗಾರಿ ನಿರ್ವಹಿಸಲಾಗುತ್ತಿದೆ. ಬೈಯಪ್ಪನಹಳ್ಳಿಯಿಂದ ಅಂದು ಕೊನೆಯ ರೈಲು ರಾತ್ರಿ 8.30ಕ್ಕೆ ಹೊರಡಲಿದೆ. ಬೈಯಪ್ಪನಹಳ್ಳಿ ತನಕ ಹೋಗುವ ಕೊನೆಯ ರೈಲು ಕೆಂಗೇರಿ ಮೆಟ್ರೊ ನಿಲ್ದಾಣದಿಂದಲೂ 8.30ಕ್ಕೆ ಹೊರಡಲಿದೆ.

ರಾತ್ರಿ 9.30ರ ನಂತರ ಕೆಂಗೇರಿಯಿಂದ ಎಂ.ಜಿ.ರಸ್ತೆ ತನಕ ಮಾತ್ರ ರೈಲುಗಳು ಸಂಚರಿಸಲಿವೆ. ಭಾನುವಾರ ಬೆಳಿಗ್ಗೆ ವೇಳೆಗೆ ಕಾಮಗಾರಿ ಪೂರ್ಣಗೊಳ್ಳಲಿದ್ದು, ಬೆಳಿಗ್ಗೆ 7 ಗಂಟೆಯಿಂದ ವೇಳಾಪಟ್ಟಿಯಂತೆ ಎಲ್ಲ ಮಾರ್ಗದಲ್ಲೂ ರೈಲುಗಳ ಸಂಚಾರ ಪುನರ್ ಆರಂಭವಾಗಲಿದೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ದೋಸೆ ಜೀವತಳೆದ ಕಥೆ ಹೇಳಲಿರುವ ‘ವಿದ್ಯಾರ್ಥಿ ಭವನ’

ಬೆಂಗಳೂರು: 79 ವರ್ಷಗಳಿಂದ ಹೋಟೆಲ್ ಉದ್ಯಮ ಕ್ಷೇತ್ರದಲ್ಲಿರುವ ‘ವಿದ್ಯಾರ್ಥಿ ಭವನ’ ಈಗ ರಂಗಭೂಮಿ ಕ್ಷೇತ್ರಕ್ಕೂ ಅಡಿ ಇಟ್ಟಿದೆ. ಅರ್ಜುನ್ ಕಬ್ಬಿಣ ನಿರ್ದೇಶನದ ‘ವಿದ್ಯಾರ್ಥಿ ಭವನ’ ನಾಟಕ ಮೇ 6ರಿಂದ 8ರವರೆಗೂ ಮಲ್ಲೇಶ್ವರದ ಚೌಡಯ್ಯ ಸ್ಮಾರಕ ಭವನದಲ್ಲಿ ಪ್ರದರ್ಶನ ಕಾಣಲಿದೆ.

ವಿದ್ಯಾರ್ಥಿ ಭವನದ ಅರುಣ್‌ಕುಮಾರ್ ಅಡಿಗ ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಈ ಕುರಿತು ಮಾಹಿತಿ ನೀಡಿದರು. ‘ವಿದ್ಯಾರ್ಥಿ ಭವನ ಬೆಳೆದು ಬಂದ ವಿವಿಧ ಮಜಲುಗಳನ್ನು ಬಿಂಬಿಸುವ ಹೊಸ ಪ್ರಯತ್ನಕ್ಕೆ ನಾವು ಮುಂದಾಗಿದ್ದೇವೆ. ಎಂಟು ದಶಕಗಳಿಂದ ನೂರಾರು ಅವಿಸ್ಮರಣೀಯ ಅನುಭವಗಳಿಗೆ ಸಾಕ್ಷಿಯಾದ ‘ವಿದ್ಯಾರ್ಥಿ ಭವನ’ದ ರುಚಿಕರ ದೋಸೆ ಜೀವತಳೆದ ಕಥೆ ಈ ನಾಟಕದಲ್ಲಿ ಮೈದಳೆಯಲಿದೆ’ ಎಂದರು.

‘ಬೆಂಗಳೂರು ಥಿಯೇಟರ್ ಫೌಂಡೇಷನ್‌ನೊಂದಿಗೆ ಮೂಡಿಬಂದ ಈ ನಾಟಕವು ಮೇ 6 ಮತ್ತು 7ರಂದು ಸಂಜೆ 6ಕ್ಕೆ, ಮೇ 8ರಂದು ಬೆಳಿಗ್ಗೆ 11.30 ಮತ್ತು ಸಂಜೆ 6ಕ್ಕೆ ಪ್ರದರ್ಶನ ಇರಲಿದೆ. ಟಿಕೆಟ್‌ಗೆ ₹249 ದರ ನಿಗದಿ ಮಾಡಲಾಗಿದೆ. ಬುಕ್ ಮೈ ಶೋದಲ್ಲಿ ಸೋಮವಾರದಿಂದ ಟಿಕೆಟ್ ಲಭ್ಯವಿರಲಿದೆ. ಆಸಕ್ತರು ವಿದ್ಯಾರ್ಥಿ ಭವನದಲ್ಲೂ ಟಿಕೆಟ್ ಪಡೆಯಬಹುದು’ ಎಂದು ವಿವರಿಸಿದರು. ನಾಟಕದ ನಿರ್ದೇಶಕ ಅರ್ಜುನ್ ಕಬ್ಬಿಣ, ‘ಸಿಹಿಕಹಿ ಚಂದ್ರು, ವೀಣಾ ಸುಂದರ್ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ. ರಾಜೇಂದ್ರ ಕಾರಂತ್ ನಾಟಕ ರಚಿಸಿದ್ದಾರೆ’ ಎಂದರು.

‘ದಲಿತರು ಆರ್ಥಿಕ, ಶೈಕ್ಷಣಿಕ ಪ್ರಗತಿ ಕಾಣಲಿ’

ಬೆಂಗಳೂರು: ‘ದಲಿತರು ಹಾಗೂ ಹಿಂದುಳಿದ ಸಮುದಾಯದವರು ಬಾಬಾ ಸಾಹೇಬ್ ಅಂಬೇಡ್ಕರ್ ಹೇಳಿದ ಆರ್ಥಿಕ ಹಾಗೂ ಶೈಕ್ಷಣಿಕ ಪ್ರಗತಿ ಕಾಣಬೇಕು’ ಎಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್) ನೌಕರರ ಸಂಘದ ಅಧ್ಯಕ್ಷ ಟಿ.ಆರ್. ರಾಮಕೃಷ್ಣಯ್ಯ ಹೇಳಿದರು.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ಪಶ್ಚಿಮ–5 ವಿಭಾಗ ಹಮ್ಮಿಕೊಂಡಿದ್ದ ವಿಶ್ವರತ್ನ ಅಂಬೇಡ್ಕರ್ ಅವರ 131ನೇ ಜಯಂತಿ ಕಾರ್ಯಕ್ರಮದಲ್ಲಿ ಅಧಿಕಾರಿ ಹಾಗೂ ನೌಕರರಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

‘ಈ ಸಮುದಾಯದವರು ಸಂವಿಧಾನದ ಮೂಲಕ ದೊರೆತಿರುವ ಹಕ್ಕುಗಳು ಹಾಗೂ ಸವಲತ್ತುಗಳನ್ನು ಬಳಸಿಕೊಂಡು ತಮ್ಮ ಮಕ್ಕಳ ಭವಿಷ್ಯ ಉಜ್ವಲಗೊಳಿಸಲು ಪ್ರಯತ್ನಿಸಬೇಕು’ ಎಂದರು.

ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಆರ್.ರಾಜಾನಾಯಕ್, ‘ಅಂಬೇಡ್ಕರ್ ಅವರ ಸಂವಿಧಾನದ ಮೂಲ ಆಶಯಗಳು ಜಾರಿಯಾಗಬೇಕು. ಆಗ ದೇಶ ಪ್ರಗತಿ ಕಾಣಲಿದೆ’ ಎಂದರು.

ಕೆಪಿಟಿಸಿಎಲ್ ಕನ್ನಡ ಸಂಘದ ಕಾರ್ಯದರ್ಶಿ ಎ.ಆರ್.ಗೋವಿಂದ ಸ್ವಾಮಿ ಅವರು ಉಪಸ್ಥಿತರಿದ್ದರು.

ಲಾರಿ ಅಡಿಗೆ ಬೈಕ್ ನುಗ್ಗಿ ಅಪಘಾತ

ಹಿರಿಯೂರು: ನಗರದ ಹೊರವಲಯದ ರಾಷ್ಟ್ರೀಯ ಹೆದ್ದಾರಿ ನಾಲ್ಕರಲ್ಲಿ ಶುಕ್ರವಾರ ಸಂಜೆ ಬುಲೆಟ್ ಬೈಕಿಗೆ ಕಾರೊಂದು ಸ್ಪರ್ಶಿಸಿದ್ದರಿಂದ ಸವಾರನ ನಿಯಂತ್ರಣ ಕಳೆದುಕೊಂಡ ಬೈಕ್ ರಸ್ತೆ ಬದಿ ನಿಂತಿದ್ದ ಲಾರಿಯ ಕೆಳಗೆ ನುಗ್ಗಿತು. ನಂತರ ಪೆಟ್ರೋಲ್ ಸೋರಿಕೆಯಾಗಿ ಸಂಭವಿಸಿದ ಅಪಘಾತದಲ್ಲಿ ಮುದ್ರಣ ಕಾಗದದ ಬಂಡಲ್‌ಗಳಿದ್ದ ಲಾರಿ ಬಹುತೇಕ ಸುಟ್ಟುಹೋಗಿದ್ದು, ಬೈಕ್ ಸವಾರನಿಗೆ ಸುಟ್ಟಗಾಯಗಳಾಗಿವೆ.

ಬೆಂಗಳೂರಿನಿಂದ ಕುಷ್ಟಗಿ ತಾಲ್ಲೂಕಿನ ಹಲಗೇರಿಗೆ ಹೋಗುತ್ತಿದ್ದ ಶರಣಯ್ಯ ಆಲೂರಯ್ಯ ಹಿರೇಮಠ (41) ಹಾಗೂ ಮಲ್ಲಪ್ಪ (35) ಅವರ ಬೈಕಿಗೆ ದಾವಣಗೆರೆ ಕಡೆ ಹೊರಟಿದ್ದ ಕಾರು ಸ್ಪರ್ಶಿಸಿದ್ದರಿಂದ ಸವಾರನ ನಿಯಂತ್ರಣ ತಪ್ಪಿದ ಬೈಕ್ ಲಾರಿ ಅಡಿಗೆ ನುಗ್ಗಿತು. ಬೈಕಿನಿಂದ ಪೆಟ್ರೋಲ್ ಸೋರಿಕೆಯಾಗಿ ಬೆಂಕಿ ಹತ್ತಿದೆ. ಶರಣಯ್ಯ ಅವರ ಎರಡೂ ಕಾಲುಗಳ ಬಹುತೇಕ ಭಾಗ ಸುಟ್ಟಿವೆ.

‘ಕೌಟುಂಬಿಕ ದೌರ್ಜನ್ಯ ಕುರಿತ ದೂರು: ಜಾಗೃತಿ ಅಗತ್ಯ’

ಬೆಂಗಳೂರು: ‘ಕೌಟುಂಬಿಕ ದೌರ್ಜನ್ಯದ ಕುರಿತು ಮಹಿಳೆಯರು ಧೈರ್ಯದಿಂದ ದೂರು ದಾಖಲಿಸುವಂತಾಗಬೇಕು. ಈ ಬಗ್ಗೆ ಅವರಲ್ಲಿ ಜಾಗೃತಿ ಮೂಡಿಸಬೇಕು’ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ತಿಳಿಸಿದರು.

‘ಸಖಿ’ ಸಮನ್ವಯ ಸಮಿತಿ ಸಭೆಯಲ್ಲಿ ಅಧಿಕಾರಿಗಳೊಂದಿಗೆ ಶುಕ್ರವಾರ ಚರ್ಚಿಸಿದರು.

‘ಮಹಿಳೆಯರ ನೆರವಿಗಾಗಿ ‘ಸಖಿ’ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಕೌಟುಂಬಿಕ ದೌರ್ಜನ್ಯ ಸಂಬಂಧ ಇಲ್ಲಿ ಒಂದು ವರ್ಷದಲ್ಲಿ 438 ದೂರುಗಳು ದಾಖಲಾಗಿವೆ. ಮಹಿಳಾ ಸಹಾಯವಾಣಿ ಮತ್ತು ದೌರ್ಜನ್ಯ ವಿರುದ್ಧದ ಪರಿಹಾರ ಪ್ರಕ್ರಿಯೆ ಕುರಿತು ಇನ್ನೂ ಹೆಚ್ಚಿನ ಜಾಗೃತಿ ಅಗತ್ಯವಿರುವುದನ್ನು ಇದು ಬಿಂಬಿಸುತ್ತದೆ’ ಎಂದರು.

‘ವರದಕ್ಷಿಣೆ ಕಿರುಕುಳ, ಆ್ಯಸಿಡ್ ದಾಳಿ ಸೇರಿದಂತೆ ಇತರ ದೌರ್ಜನ್ಯದಿಂದಾಗಿ ಸಾಕಷ್ಟು ಮಹಿಳೆಯರು ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಿಗೆ ದಾಖಲಾಗುತ್ತಾರೆ. ಆ ಮಾಹಿತಿಯು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಸಕಾಲದಲ್ಲಿ ದಾಖಲಾಗಬೇಕು. ಆಗ ಪ್ರಕರಣಗಳ ನಿಖರ ಅಂಕಿ ಅಂಶ ದೊರೆಯಲಿದೆ. ಸಖಿ ಕೇಂದ್ರಗಳಿಗೆ ಹೋಗಿ ದೂರು ನೀಡುವಂತೆ ನೊಂದವರನ್ನು ಪ್ರೇರೇಪಿಸಬೇಕು. ಇದಕ್ಕಾಗಿ ಎಲ್ಲಾ ಆಸ್ಪತ್ರೆ, ಸರ್ಕಾರಿ ಕಚೇರಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಭಿತ್ತಿಪತ್ರಗಳನ್ನು ಪ್ರದರ್ಶಿಸಬೇಕು’ ಎಂದು ಸೂಚಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಡಾ.ನಿಶ್ಚಲ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಜಿ.ಎ.ಶ್ರೀನಿವಾಸ್, ಆರ್.ಸಿ.ಎಚ್.ಅಧಿಕಾರಿ ಡಾ.ಸಯ್ಯದ್ ಮದಿನಿ ಇದ್ದರು.

ನೀತಿ ಆಯೋಗದ ಉಪಾಧ್ಯಕ್ಷ ಹುದ್ದೆ: ರಾಜೀವ್ ಕುಮಾರ್ ನಿರ್ಗಮನ

ನವದೆಹಲಿ (ಪಿಟಿಐ): ನೀತಿ ಆಯೋಗದ ಉಪಾಧ್ಯಕ್ಷ ಹುದ್ದೆಯಿಂದ ರಾಜೀವ್ ಕುಮಾರ್ ಅವರು ಕೆಳಗಿಳಿದಿದ್ದಾರೆ. ಈ ನಡೆಗೆ ನಿರ್ದಿಷ್ಟ ಕಾರಣ ಇನ್ನೂ ತಿಳಿದುಬಂದಿಲ್ಲ ಎಂದು ಮೂಲಗಳು ತಿಳಿಸಿವೆ.

ನೀತಿ ಆಯೋಗದ ಉಪಾಧ್ಯಕ್ಷ ಸ್ಥಾನದಿಂದ ಅರವಿಂದ್ ಪನಗಾರಿಯ ಅವರು ನಿರ್ಗಮಿಸಿದ ಬಳಿಕ ದೇಶದ ಪ್ರಮುಖ ಅರ್ಥಶಾಸ್ತ್ರಜ್ಞರಲ್ಲೊಬ್ಬರಾದ ರಾಜೀವ್ ಕುಮಾರ್ ಅವರು 2017ರ ಆಗಸ್ಟ್‌ನಲ್ಲಿ ನೀತಿ ಆಯೋಗದ ಉಪಾಧ್ಯಕ್ಷ ಹುದ್ದೆಗೇರಿದ್ದರು. ರಾಜೀವ್ ಅವರು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಿಂದ ‘ಡಿಫಿಲ್’ ಪದವಿ ಮತ್ತು ಲಖನೌ ವಿವಿಯಿಂದ ಪಿಎಚ್‌ಡಿ ಪದವಿ ಪಡೆದಿದ್ದಾರೆ.

ವಾಣಿಜ್ಯ ತೆರಿಗೆ ಇಲಾಖೆ

ವಾಣಿಜ್ಯ ತೆರಿಗೆಗಳ ಉಪ ಆಯುಕ್ತರವರ ಕಛೇರಿ, (ಲೆಕ್ಕ ಪರಿಶೋಧನೆ)–1.7, ವಿ.ಸ.&ಸೇ.ತೆ.ಕಛೇರಿ–1, 3ನೇ ಮಹಡಿ, ಟಿ.ಟಿ.ಎಂ.ಸಿ., ಕಟ್ಟಡ, ಯಶವಂತಪುರ, ಬೆಂಗಳೂರು

ಸಂ.:ವಾ.ತೆ.ಉ.ಆ.(ಲೆ.ಪ)–1.7/17/2022–23 ದಿನಾಂಕ: 06–04–2022

ತೆರಿಗೆ ಬಾಕಿದಾರರ ಪತ್ತೆಗಾಗಿ ಸಾರ್ವಜನಿಕ ಪ್ರಕಟಣೆ

ಈ ಕಚೇರಿಗೆ ಈ ಕೆಳಕಂಡ ಕರದಾತರು ತೆರಿಗೆ ಬಾಕಿ ಮೊತ್ತವನ್ನು ಪಾವತಿ ಮಾಡಬೇಕಾಗಿರುತ್ತದೆ. ಸದರಿ ಕರದಾತರು ವ್ಯಾಪಾರ ಸ್ಥಳದಲ್ಲಿ ಹಾಗೂ ನೋಂದಣಿ ಕಡತದಲ್ಲಿರುವ ಮನೆ ವಿಳಾಸದಲ್ಲಿಯೂ ಲಭ್ಯವಿರುವುದಿಲ್ಲ. ಆದುದರಿಂದ ಕೆಳಗೆ ಕಾಣಿಸಿರುವ ಭಾವಚಿತ್ರದಲ್ಲಿರುವ ವ್ಯಕ್ತಿಯನ್ನು ಕಂಡಲ್ಲಿ ದೂರವಾಣಿ ಸಂಖ್ಯೆ : **080–23372550 (ಈ ಕಛೇರಿಗೆ) ಮತ್ತು 080–23570382 (ವಾಣಿಜ್ಯ ತೆರಿಗೆ ಜಂಟಿ ಆಯುಕ್ತರವರ ಕಛೇರಿಗೆ) ಕರೆ ಮಾಡಿ** ಅಥವಾ ಮೇಲ್ಕಾಣಿಸಿದ ಯಶವಂತಪುರದ ಕಛೇರಿಗೆ ಖುದ್ದಾಗಿ ತಿಳಿಸಿ, ಸರ್ಕಾರದ ರಾಜ್ಯ ಬೊಕ್ಕಸಕ್ಕೆ ಉಂಟಾಗುವ ನಷ್ಟವನ್ನು ತಪ್ಪಿಸಲು ಸಹಕರಿಸಬೇಕಾಗಿ ಸಾರ್ವಜನಿಕರಲ್ಲಿ ವಿನಂತಿ ಹಾಗೂ ಈ ರೀತಿಯಾಗಿ ಸಹಕರಿಸಿದವರ ಹೆಸರನ್ನು ಗೌಪ್ಯವಾಗಿ ಇಡಲಾಗುವುದೆಂದು ಈ ಮೂಲಕ ಕೋರಲಾಗಿದೆ.

ಕ್ರ. ಸಂ.	ಕರದಾತರ ಹೆಸರು & ವ್ಯಾಪಾರ ಸ್ಥಳದ ವಿಳಾಸ	ಟಿನ್ ಸಂಖ್ಯೆ	ವ್ಯಾಪಾರ ಮಾಡುತ್ತಿದ್ದ ಸರಕುಗಳು	ವರ್ಷ	ಬಾಕಿ ತೆರಿಗೆ ಮೊತ್ತ	ಕರದಾತರ ಪೋಟೋ
1	ಶ್ರೀ. ಸುಶೀಲ್ ಡಿ. ಪೋರ್ವಾಲ್, ಮೆ: ರಾಜ್‌ದೀಪ್ ಜ್ಯುವೆಲ್ಲರ್ಸ್ ಶಾಪ್ ನಂ.21, 1ನೇ ಮಹಡಿ, ನಂ. 145, ರಂಗನಾಥ್ ಮ್ಯಾನ್‌ಷನ್, ಅವೆನ್ಯೂ ರಸ್ತೆ, ಬೆಂಗಳೂರು – 560002	29450279076	ಜ್ಯುವೆಲ್ಲರ್ಸ್	2005–06	ರೂ.1,16,14,907/-	

ಸಹಿ/– ವಾಣಿಜ್ಯ ತೆರಿಗೆ ಉಪ ಆಯುಕ್ತರು
(ಲೆ.ಪ–1.7) ವಿ.ಸ.&ಸೇ.ತೆ.ಕಛೇರಿ–01, ಬೆಂಗಳೂರು

DIPR/CP/212/Yakshi/2022-23

ನೈರುತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ.: ಎಲ್7225247 ದಿನಾಂಕ: 13.04.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಈ ಕೆಳಗಿನ ಐಟಂ ಪೂರೈಕೆಗಾಗಿ ಮಾತ್ರ ಐಆರ್‌ಇಪಿಎಸ್ ಮೂಲಕ ಇ–ಟೆಂಡರ್‌ನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ.

ಸಂಕ್ಷಿಪ್ತ ವಿವರಣೆ: 20–25 ಕೆಜಿಗಳಲ್ಲಿ ಪ್ಯಾಕ್ ಮಾಡಲಾದ ನದಿಯ ಮರಳು (ಪ್ರಮಾಣ 990)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 09.05.2022 ಸಮಯ: 14:00 ಗಂಟೆಯವರೆಗೆ.

ಹೆಚ್ಚಿನ ಮಾಹಿತಿಗಾಗಿ www.ireps.gov.in ಲಾಗ್‌ಆನ್ ಮಾಡಿ

ಹಿರಿಯ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು ಹುಬ್ಬಳ್ಳಿ

ಪಿಯುಬಿ/47/ಎಎಎಲ್/ ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2022–23

S.W.Railways SWRRLY SWRRLY

CLINICAL RESEARCH UNIT (UNANI), MEDICINE
(CCRUM-Ministry of AYUSH, Govt of India)
NATIONAL INSTITUTE OF UNANI MEDICINE, CAMPUS
Kottigepalya, Magadi Main Road, Bengaluru - 560091
Email-id: crubangalore2000@yahoo.com

TENDER NOTICE NO.01/2022-23

The Deputy Director, CRU, Bengaluru inviting separate sealed tenders from reputed / authorized firms / companies engaged in the hospital business for providing **Manpower at CRU Bengaluru-560091.** The Tender documents may be downloaded from the CCRUM Website: www.ccrum.res.in or can be obtained in the person by remitting the tender fee or Rs.100/- Through D.D. Last date of submission of separate sealed tender 12.05.2022 at 5.00 pm.

Any change/extension in due date will appear in the above website only in future. No press note will be issued further.

Sd/-
DEPUTY DIRECTOR

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ ಇದರ ಕಛೇರಿ ವಿಳಾಸ 1ನೇ 'ಬಿ' ಮುಖ್ಯ ರಸ್ತೆ, ವಿಜಯನಗರ ಬೆಂಗಳೂರು–560040. ಶ್ರೀ ಮಠದ ಪ್ರತಿನಿಧಿಯಾಗಿ ಶ್ರೀ. ನಿರ್ಮಲಾನಂದ ಮಹಾಸ್ವಾಮೀಜಿಯವರು (**ಮಾಲೀಕರು**) ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ ಗಂಗಸಂದ್ರ ಗ್ರಾಮದಲ್ಲಿರುವ (ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರವಾಗಿ ತಿಳಿಸಿರುವ) ಸರ್ವೆ ನಂಬರುಗಳ ಜಮೀನಿನ ಮಾಲೀಕರಾಗಿದ್ದು, ಇದರ ಶೀರ್ಷಿಕೆಯನ್ನು ಪರಿಶೀಲಿಸುತ್ತಿದ್ದೇವೆ. ಕುಲ್ ಅರ್ಬನ್ ಡೆವಲಪ್‌ಮೆಂಟ್ ಪ್ರೈ. ಲಿ. ಕಂಪನಿಯ ಕಛೇರಿ ವಿಳಾಸ 10ನೇ ಮಹಡಿ, ಕುಮಾರ್ ಬಿಸಿನೆಸ್ ಸೆಂಟರ್, ಸಿ.ಟಿ.ಎಸ್. ನಂ.29, ಬಂಡ್ ಗಾರ್ಡನ್ ರಸ್ತೆ, ಪುಣೆ–411001 (ಕುಲ್) ಕುಲ್ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಕ್ರಮ ಸಂಖ್ಯೆ 1 ರಿಂದ 4 ರವರೆಗಿನ ಜಮೀನನ್ನು ಖರೀದಿಸಲಿದ್ದು ಕಂಪನಿಯ ಹೆಸರಿನಲ್ಲಿ ಅಥವಾ ಕಂಪನಿಯ ವಾರಸುದಾರರ ಹೆಸರಿನಲ್ಲಿ ಖರೀದಿಸಲು ನಿಶ್ಚಯಿಸಿದೆ. ಹಾಗೂ ಕ್ರಮ ಸಂಖ್ಯೆ 5 ರಲ್ಲಿ ವಿವರಿಸಿರುವ ಷೆಡ್ಯೂಲ್ ಸ್ವತ್ತಿನಲ್ಲಿ 60 ಅಡಿ ಹಾದುಹೋಗುವ ಪ್ರವೇಶ ರಸ್ತೆಯ ಸ್ವತ್ತಿನ ಖರೀದಿಯ ಹಕ್ಕನ್ನು ಹೊಂದಿದೆ.

ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ ಅಥವ ಕಂಪನಿಗಳಿಗೆ ಯಾವುದೇ ಕ್ಲೇಮು, ಹಕ್ಕು ಬಾಧ್ಯತೆಗಳು ಅಥವ ಹಿತಾಸಕ್ತಿಗಳಿದ್ದಲ್ಲಿ ಸೂಕ್ತ ದಾಖಲಾತಿ ಪುರಾವೆಗಳೊಂದಿಗೆ ಈ ಪ್ರಕಟಣೆ ಪ್ರಕಟವಾದ **15 ದಿನಗಳ ಒಳಗಾಗಿ** ಕೆಳ ಸಹಿದಾರರಿಗೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸತಕ್ಕದ್ದು. 15 ದಿನಗಳ ಒಳಗಾಗಿ ಯಾವುದೇ ಆಕ್ಷೇಪಣೆಗಳು ಬಾರದಿದ್ದಲ್ಲಿ ಷೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ಸ್ವತ್ತಿನ ಮಾಲಿಕರ ಶೀರ್ಷಿಕೆಯು ಸ್ಪಷ್ಟ ಮಾರುಕಟ್ಟೆಯನ್ನು ಹೊಂದಿದ್ದು ಮತ್ತು ಯಾವುದೇ ರೀತಿಯ ಋಣಭಾರಗಳಿಂದ ಮುಕ್ತವಾಗಿದೆ ಮತ್ತು ಮಾಲಿಕರು ಹಾಗೂ ಕುಲ್ ಹೊರತುಪಡಿಸಿ (ಖರೀದಿ ಒಪ್ಪಂದ ಮಾಡಿಕೊಂಡಿರುವವರು) ಬೇರೆ ಯಾರಿಗೂ ಯಾವುದೇ ವಿಧವಾದ ಹಕ್ಕು ಬಾಧ್ಯತೆಗಳು ಹಾಗೂ ಹಿತಾಸಕ್ತಿಗಳು ಇಲ್ಲವೆಂದು ಪರಿಗಣಿಸಲಾಗುವುದು ಮತ್ತು 15 ದಿನಗಳ ನಂತರ ಬಂದ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಷೆಡ್ಯೂಲ್ ಸ್ವತ್ತು

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಗಂಗಸಂದ್ರ ಗ್ರಾಮದಲ್ಲಿರುವ ಭೂಪರಿವರ್ತನೆಯಾದ ಜಮೀನಿನ ಚಕ್ಕುಬಂದಿ:

ಕ್ರ. ಸಂ.	ಸರ್ವೆ ನಂ.	ವಿಸ್ತೀರ್ಣ ಎಕರೆ	ವಿಸ್ತೀರ್ಣ ಗುಂಟೆ	ಚಕ್ಕುಬಂದಿ: ಪೂ: ಪೂರ್ವಕ್ಕೆ, ಪ: ಪಶ್ಚಿಮಕ್ಕೆ, ಉ: ಉತ್ತರಕ್ಕೆ, ದ: ದಕ್ಷಿಣಕ್ಕೆ
1	44	0	17	ಪೂ: ಸ.ನಂ.34 ಮತ್ತು 46 ರ ಜಮೀನು ಪ: ಸ.ನಂ.47 ಮತ್ತು 34 ರ ಜಮೀನು ಉ: ಸ.ನಂ.34 ರ ಜಮೀನು ದ: ಸ.ನಂ.34 ರ ಜಮೀನು
	45	0	34	
2	46	0	28	ಪೂ: ಸ.ನಂ.34 ರ ಜಮೀನು ಪ: ಸ.ನಂ.34 ಮತ್ತು 45 ರ ಜಮೀನು ಉ: ಸ.ನಂ.35 ರ ಜಮೀನು ದ: ಸ.ನಂ.34 ರ ಜಮೀನು
3	47	2	38	ಪೂ: ಸ.ನಂ.34 ಮತ್ತು 35ರ ಜಮೀನು ಪ: ಸ.ನಂ.34 ಜಮೀನು ಉ: ಸ.ನಂ.34 ರ ಜಮೀನು ದ: ಸ.ನಂ.34 ರ ಜಮೀನು
	48	0	27	
4	35	24	0	ಪೂ: ಸ.ನಂ.32 ರ ಜಮೀನು ಪ: ಸರ್ಕಾರಿ ಜಮೀನು ಉ: ಸ.ನಂ.57 ಮತ್ತು 37 ರ ಜಮೀನು ದ: ಸ.ನಂ.34 ಮತ್ತು 46 ರ ಜಮೀನು
5	37	24	0	ಪೂ: ಸ.ನಂ.37 ಮತ್ತು 32 ರ ಜಮೀನು ಪ: ಸ .ನಂ.51, 53, 54, 55, 56 ಮತ್ತು 57 ರ ಜಮೀನು ಉ: ರಸ್ತೆ ದ: ಸ.ನಂ.35 ರ ಜಮೀನು

ಮಾಲಿನಿ ರಾಜು
ಜೆ ಎಸ್ ಎ, ವಕೀಲರು ಮತ್ತು ಕಾನೂನು ಸಲಹೆಗಾರರು,
ಲೆವೆಲ್3, ಪ್ರೆಸ್ಟೀಜ್ ಒಬೆಲಿಸ್ಕ್, ನಂ.3, ಕಸ್ತೂರಬಾ ರಸ್ತೆ, ಬೆಂಗಳೂರು–560001.
ಫೋನ್ :080–43503600. Email:malini.raju@jsalaw.com
ಸ್ಥಳ: ಬೆಂಗಳೂರು ದಿನಾಂಕ: 23.04.2022

ಚಿತ್ರಾವಳಿ

ಅಗ್ರಹಾರ ದಾಸರಹಳ್ಳಿಯ ಕೆ.ಎಚ್‌ಬಿ ಕಾಲೊನಿಯಲ್ಲಿರುವ ಮುನೇಶ್ವರ ಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ಕೆ ವಸತಿ ಸಚಿವ ವಿ.ಸೋಮಣ್ಣ ಭೂಮಿ ಪೂಜೆ ನೆರವೇರಿಸಿದರು. ಬಿಜೆಪಿ ಮುಖಂಡರಾದ ಶಿಲ್ಪಾ ಶ್ರೀಧರ್, ಗಂಗಬೈರಯ್ಯ, ಶ್ರೀಧರ್, ದೇವಸ್ಥಾನದ ಟ್ರಸ್ಟ್‌ನ ಸದಸ್ಯರು ಹಾಗೂ ಇತರರು ಇದ್ದಾರೆ

ನಗರದಲ್ಲಿ ಶುಕ್ರವಾರ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಆಯೋಜಿಸಿದ್ದ ಅಭಿನಂದನೆ ಸಮಾರಂಭದಲ್ಲಿ ನಾಡೋಜ ಪ್ರಶಸ್ತಿ ಪುರಸ್ಕೃತ ಗೊ.ರು. ಚೆನ್ನಬಸಪ್ಪ ರವರಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಆಯುಕ್ತರು ಪಿಜಿಆರ್ ಸಿಂಧ್ಯಾ ಅವರು ಅಭಿನಂದನೆ ಸಲ್ಲಿಸಿದರು. (ಎಡದಿಂದ) ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಸಂಘಟನಾ ಆಯುಕ್ತರು ಮಂಜುಳಾ, ಪ್ರಭಾರಿ ರಾಜ್ಯ ಆಯುಕ್ತರು ರಾಧಾ ವೆಂಕಟೇಶ್, ರಾಜ್ಯ ಜಂಟಿ ಕಾರ್ಯದರ್ಶಿ ಬಿ.ವಿ. ರಾಮಲತಾ ಮತ್ತು ಉಪಾಧ್ಯಕ್ಷರು ಕೊಂಡಜ್ಜಿ ಬ. ಷಣ್ಮುಖಪ್ಪ ಇದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ

ಬೆಂ.ಮ.ಪ್ರ.ಪ್ರಾ.
ನಂ.1, ಆಲಿ ಅಸ್ಕರ್ ರಸ್ತೆ, ಬೆಂಗಳೂರು560 052 ದೂ:080–22263479.

ಸಂಖ್ಯೆ : ಬಿಎಂಆರ್‌ಡಿಎ/ಲೆಕ್ಕಶಾಖೆ/32/2021–22 ದಿನಾಂಕ: 12.04.2022

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಹೆಚ್ಚುವರಿ ನಿಧಿಗಳ ಹೂಡಿಕೆಗಾಗಿ ಇ-ಹರಾಜನ್ನು GoKಯ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್: www.eproc.karnataka.gov.inನಿಂದ ಪಡೆಯಬಹುದಾಗಿದೆ.

ಸಹಿ/- ಸಹಾಯಕ ಮಹಾನಗರ ಆಯುಕ್ತರು(ಪ್ರ),
ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ರೈಲು ಗಾಲಿ ಕಾರ್ಖಾನೆ

ಯಲಹಂಕ, ಬೆಂಗಳೂರು–560 064.

ಇ ಟೆಂಡರ್ ಸೂಚನೆ ಸಂ. ಆರ್‌ಡಬ್ಲ್ಯೂಎಫ್/ಎಮ್/ಒಟಿ/ಎಂಎಂಆರ್/2022–23/02 ದಿನಾಂಕ: 19.04.2022

ಇ–ಟೆಂಡರ್: ಭಾರತದ ರಾಷ್ಟ್ರಪತಿಗಳ ಪರವಾಗಿ ಪ್ರಧಾನ ಮೆಕ್ಯಾನಿಕಲ್ ಇಂಜಿನಿಯರ್‌ರವರು ಈ ಕೆಳಗಿನ ಕೆಲಸಕ್ಕಾಗಿ ಆನ್‌ಲೈನ್ ಮೂಲಕ ವೆಬ್‌ಸೈಟ್ http://www.ireps.gov.in ನಲ್ಲಿ ಎಲೆಕ್ಟ್ರಾನಿಕ್ ಟೆಂಡರ್ ಆಹ್ವಾನಿಸಿದ್ದಾರೆ.

ಟೆಂಡರ್ ಸಂ. ಆರ್‌ಡಬ್ಲ್ಯೂಎಫ್/ಎಮ್/ಒಟಿ/ಎಂಎಂಆರ್/2022–23/02 ದಿನಾಂಕ: 19.04.2022

ಕೆಲಸದ ಹೆಸರು	ಅಂದಾಜು ಮೌಲ್ಯ ರೂ.ಗಳಲ್ಲಿ	ಇಎಂಡಿ ಮೊತ್ತ ರೂ.ಗಳಲ್ಲಿ	ಟೆಂಡರ್ ಮುಕ್ತಾಯದ ದಿನಾಂಕ ಮತ್ತು ಸಮಯ	ಒಪ್ಪಂದದ ಅವಧಿ
ಅಗತ್ಯಾನುಸಾರ ಟ್ಯೂಬ್ ಓವನ್‌ಗಳ ರಿಲೈನಿಂಗ್ (ಒಟ್ಟು 06 ಸಂಖ್ಯೆಗಳು)	24,15,377/-	48,400/-	19-05-2022 ರ 15.30 ಗಂಟೆಯವರೆಗೆ	12 ತಿಂಗಳುಗಳು

ಈ ಟೆಂಡರ್ ಸೂಚನೆಯನ್ನು ನಮ್ಮ ವೆಬ್‌ಸೈಟ್ www.rwf.indianrailways.gov.in ನಲ್ಲಿ ವೀಕ್ಷಿಸಬಹುದು.
ಉಪ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರ್/ಡಬ್ಲ್ಯೂಎಸ್ಎಂ

ಕೊನೆಯ 3 ದಿನಗಳ **ಭಾರಿ ಪರ್ನಿಚರ್ ಸೇಲ್!** ನಿಮ್ಮ ಡೀಲ್ಸ್ ಮತ್ತು ರಿಯಾಯಿತಿ ಪಡೆಯಿರಿ

FURNITURE FAIR™

INTERIOR & EXTERIOR EXHIBITION

ಭಾರಿ ರಿಯಾಯತಿ ಸೇಲ್

ದಿನಾಂಕ ಮತ್ತು ಸ್ಥಳ
22 | 23 | 24 | 25 ಏಪ್ರಿಲ್ 2022
ಬೆಳಗ್ಗೆ 10.00 ರಿಂದ 8.30

ತ್ರಿಪುರವಾಸಿನಿ ಅರಮನೆ ಮೈದಾನ
(ಮೇಖ್ರಿ ವೃತ್ತದ ಸಮೀಪ, ಬೆಂಗಳೂರು)

UPTO 70% OFF

ಲಿವಿಂಗ್ ರೂಮ್ • ಡೈನಿಂಗ್ ಸೆಟ್ • ಬೆಡ್‌ರೂಮ್ • ಔಟ್‌ಡೋರ್ • ಹೋಮ್ ಡೆಕೋರ್ • ಬ್ರಾಸ್ & ಆಂಟಿಕ್ರಾಫ್ಟ್ • ರೆಕ್ಲೈನರ್ ಸೋಫಾ ಸೆಟ್ಸ್ • ಕಾರ್ಪೆಟ್ & ಕುಷನ್ಸ್ • ಮ್ಯಾಟ್ರೆಸ್ಸ್ • ಕರ್ಟನ್ಸ್ • ವಾಟರ್ ಫೌಂಟೈನ್ಸ್

5000+ ಅಧಿಕ ಅನನ್ಯ ವಿನ್ಯಾಸಗಳು ಮತ್ತು ಶೈಲಿಗಳು | ಎಕ್ಸಚೇಂಜ್ ಆಫರ್ | ಬಿಗ್ ಡೀಲ್ಸ್! ಭಾರಿ ರಿಯಾಯಿತಿ! ದೊಡ್ಡ ಉಳಿತಾಯ! | ಎಲ್ಲಾ ಮೇಜರ್ ಕ್ರೆಡಿಟ್ / ಡೆಬಿಟ್ ಕಾರ್ಡ್ ಸ್ವೀಕರಿಸಲಾಗುತ್ತದೆ | ವಿವಿಧ ವೈವಿಧ್ಯಮಯ! ಉತ್ತಮ ವಿನ್ಯಾಸ! ಆಕರ್ಷಕ ಬೆಲೆ!

exhibitions_iadsnevents
iadsnevents

Covid-19 protocol followed inside the venue

+91 93425 77908
ಪ್ರವೇಶ ಉಚಿತ

AN EVENT BY iads & events COMPLETE BUSINESS SOLUTIONS

ನಗರದಲ್ಲಿ ಇಂದು

ಸಕ್ಷಮ್–2022: ಸಿಎನ್‌ಜಿ ಕಾರು ಮತ್ತು ಆಟೊ ರ‍್ಯಾಲಿ, ಆಯೋಜನೆ–ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ, ಪಿಸಿಆರ್‌ಎ, ಗ್ಯಾಸ್ ಇಂಡಿಯಾ ಲಿಮಿಟೆಡ್ (ಗೇಲ್), ಸ್ಥಳ–ಗೇಲ್ ಗ್ಯಾಸ್ ಸಿಎನ್‌ಜಿ ಸ್ಟೇಷನ್, ಗೊಲ್ಲಹಳ್ಳಿ, ಬೆಳಿಗ್ಗೆ 9

ಅಕ್ಷರ ಜಾತ್ರೆ ವಾರ್ಷಿಕೋತ್ಸವ: ಸ್ಮರಣ ಸಂಚಿಕೆ ಮತ್ತು ಕೃತಿ ಬಿಡುಗಡೆ–ಸಚಿವ ಕೆ.ಗೋಪಾಲಯ್ಯ, ಬಿ.ಎನ್.ಪ್ರಾಣೇಶ್ ರಾವ್, ಉದ್ಘಾಟನೆ–ಲೀಲಾದೇವಿ ಆರ್. ಪ್ರಸಾದ್, ಅಧ್ಯಕ್ಷತೆ–ಡಾ.ಬಿ.ಎಸ್., ಸ್ಥಳ–ಬಸವೇಶ್ವರ ನಗರ ಹಿರಿಯ ನಾಗರಿಕರ ವೇದಿಕೆ, ಕರ್ನಾಟಕ ಕಾಲೇಜು, ಬಸವೇಶ್ವರ ನಗರ, ಬೆಳಿಗ್ಗೆ 10

ಪ್ರೇಕ್ಷಾಧ್ಯಾನ ಶಿಬಿರ ಉದ್ಘಾಟನೆ: ಅತಿಥಿಗಳು–ಮನೋಜ್ ಕುಮಾರ್ ಲುನಿಯ, ಮಹೇಂದ್ರ ಮನೋತ್, ಮೂಲ್‌ಚಂದ್ ನಹಾರ್, ಅಮಿತ್ ಕುಮಾರ್ ನಹಾತಾ, ಆಯೋಜನೆ–ಪ್ರೇಕ್ಷ ಫೌಂಡೇಷನ್, ಸ್ಥಳ–ಆಚಾರ್ಯ ತುಳಸಿ ಮಹಾಪ್ರಜ್ಞ, ಚೇತನ ಸೇವಾ ಕೇಂದ್ರ, ಕುಂಬಳಗೋಡು, ಬೆಳಿಗ್ಗೆ 10

ನ್ಯಾಯಾಂಗ ಅಧಿಕಾರಿಗಳ ದ್ವಿವಾರ್ಷಿಕ ಸಮ್ಮೇಳನ: ಉದ್ಘಾಟನೆ–ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಧನಂಜಯ ವೈ.ಚಂದ್ರಚೂಡ್, ಅತಿಥಿಗಳು–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ನ್ಯಾಯಮೂರ್ತಿಗಳಾದ ದಿನೇಶ್ ಮಾಹೇಶ್ವರಿ, ಅಬ್ದುಲ್ ನಜೀರ್, ಸೋಮಯ್ಯ ಬೋಪಣ್ಣ, ಬಿ.ವಿ.ನಾಗರತ್ನ, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ರಿತುರಾಜ್ ಅವಸ್ಥಿ, ಆಯೋಜನೆ–ರಾಜ್ಯ ನ್ಯಾಯಾಂಗ ಅಧಿಕಾರಿಗಳ ಸಂಘ, ಸ್ಥಳ–ಬಾಬು ರಾಜೇಂದ್ರ ಪ್ರಸಾದ್ ಸಮ್ಮೇಳನ ಸಭಾಂಗಣ, ಜಿಕೆವಿಕೆ, ಬೆಳಿಗ್ಗೆ 10.30

ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್‌ನ ಸುವರ್ಣ ಮಹೋತ್ಸವ: ಉದ್ಘಾಟನೆ–ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಸ್ಮರಣ ಸಂಚಿಕೆ ಬಿಡುಗಡೆ–ಸಿದ್ದಲಿಂಗ ಸ್ವಾಮೀಜಿ, ನೂತನ ಕಟ್ಟಡಕ್ಕೆ ಶಂಕುಸ್ಥಾಪನೆ–ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ, ಬ್ಯಾಂಕಿನ ಸಾಕ್ಷ್ಯಚಿತ್ರ ಬಿಡುಗಡೆ–ಸಹಕಾರ ಸಚಿವ ಎಸ್.ಟಿ.ಸೋಮಶೇಖರ್, ನೆನಪಿನ ಕಾಣಿಕೆ ವಿತರಣೆ–ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಸ್ಥಳ–ಕಿಂಗ್ಸ್ ಕೋರ್ಟ್, ಅರಮನೆ ಮೈದಾನ, ಬೆಳಿಗ್ಗೆ 11

ವಿಶ್ವ ಪುಸ್ತಕ ಮತ್ತು ಕೃತಿಸ್ವಾಮ್ಯ ದಿನ: ಅಧ್ಯಕ್ಷತೆ–ಚಂದ್ರಶೇಖರ ಕಂಬಾರ, ಅತಿಥಿಗಳು–ಮನು ಬಳಿಗಾರ್, ಎಸ್.ಪಿ.ಮಹಾಲಿಂಗೇಶ್ವರ, ಪ್ರಕಾಶ್ ಕಂಬತ್ತಳ್ಳಿ, ಪ್ರಶಸ್ತಿ ಪುರಸ್ಕೃತರು–ಪ್ರಕಾಶ್ [illegible], ವಸಂತ ಶ್ರೀನಿವಾಸನ್, ಆಯೋಜನೆ–ಸಾಹಿತ್ಯ ಅಕಾಡೆಮಿ ಮತ್ತು ಕರ್ನಾಟಕ ಪ್ರಕಾಶಕರ ಸಂಘ, ಸ್ಥಳ–ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 11

ಸ್ವಾಮಿ ಜಪಾನಂದಜೀ ಮಹಾರಾಜ್ ಅವರ ಲೇಖನಗಳ ಗುಚ್ಛ 'ಸಾಧನೆಯ ಸೋಪಾನಗಳು' ಪುಸ್ತಕ ಬಿಡುಗಡೆ: ಸಾನ್ನಿಧ್ಯ–ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಆಶೀರ್ವಚನ–ಶಿವರುದ್ರ ಸ್ವಾಮೀಜಿ, ಅತಿಥಿ–ರಾಜ್ಯಶ್ರೀ ಸತೀಶ್, ಆಯೋಜನೆ–ರಾಮಕೃಷ್ಣ ಸೇವಾಶ್ರಮ, ವಿವೇಕ ಹಂಸ ಬಳಗ, ಸ್ಥಳ–ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬಸವನಗುಡಿ, ಬೆಳಿಗ್ಗೆ 11

ಜೋಯ್ ಅಲುಕ್ಕಾಸ್ ನೂತನ ಮಳಿಗೆ ಉದ್ಘಾಟನೆ: ಸ್ಥಳ–ಡಿಕೆನ್ಸನ್ ರಸ್ತೆ, ಬೆಳಿಗ್ಗೆ 11

ವಿಶ್ವ ಪುಸ್ತಕ ದಿನದ ಅಂಗವಾಗಿ ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮ: ಉದ್ಘಾಟನೆ–ಟಿ.ಎನ್.ಸೀತಾರಾಮ, ಅತಿಥಿಗಳು–ನಾಗತಿಹಳ್ಳಿ ಚಂದ್ರಶೇಖರ್, ಭಾಗವಹಿಸುವವರು–ವಿಶ್ವೇಶ್ವರ ಭಟ್, ಜೋಗಿ, ವಸುಧೇಂದ್ರ, ಜಿ.ಎನ್.ಮೋಹನ್, ಎಂ.ಆರ್.ದತ್ತಾತ್ರಿ, ದುಂಡಿರಾಜ್, ಬಿ.ಆರ್.ಲಕ್ಷ್ಮಣರಾವ್, ರಾ.ನಂ. ಚಂದ್ರಶೇಖರ, ಎಂ.ಡಿ.ಪಲ್ಲವಿ ಸೇರಿದಂತೆ ಹಲವರು, ಆಯೋಜನೆ ಮತ್ತು ಸ್ಥಳ–ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಳಿಗ್ಗೆ 11

ಟಿ.ಎನ್ ಸೀತಾರಾಂ

ಆಕೃತಿ–22 ವಾರ್ಷಿಕ ತಾಂತ್ರಿಕ–ಸಾಂಸ್ಕೃತಿಕ ಹಬ್ಬ: ಹಾಸ್ಯನಟ ನಿಶಾಂತ್ ಸೂರಿ ಅವರಿಂದ ಹಾಸ್ಯ ಕಾರ್ಯಕ್ರಮ, ಆಯೋಜನೆ ಮತ್ತು ಸ್ಥಳ–ಮುಖ್ಯ ಸಭಾಂಗಣ, ಪಿಇಎಸ್ ವಿಶ್ವವಿದ್ಯಾಲಯ, ಆರ್.ಆರ್.ಕ್ಯಾಂಪಸ್, ಸಂಜೆ 4

ರಾಗಂ ಅವರ 'ಕೀಟ್ಸ್' ಕೃತಿ ಆಧಾರಿತ 'ಲೆಟರ್ಸ್ ಟು ಡೆತ್' ನಾಟಕ ಪ್ರದರ್ಶನ: ನಿರ್ದೇಶನ–ಬೇಲೂರು ರಘುನಂದನ್, ಆಯೋಜನೆ–ಅಂಚೆ ಮಹಾಕಾವ್ಯಾಲಯದ ಅಂಚೆ ಮನರಂಜನಾ ಕೂಟ, ರಂಗಚಂದಿರ, ಸ್ಥಳ–ಮೇಘದೂತ ಸಭಾಂಗಣ, ಪ್ರಧಾನ ಅಂಚೆ ಕಚೇರಿ (ಜಿಪಿಒ), ರಾಜಭವನ ರಸ್ತೆ, ಸಂಜೆ 4

ನೂತನ ಚರ್ಚ್ ಉದ್ಘಾಟನೆ: ಲಿಯೋಪೋಲ್ಡೊ ಗಿರೆಲ್ಲಿ, ಅತಿಥಿಗಳು–ಪೀಟರ್ ಮಚಾಡೊ, ಬರ್ನಾರ್ಡ್ ಮೊರಾಸ್, ಆಯೋಜನೆ ಮತ್ತು ಸ್ಥಳ–ಸಂತ ಇಗ್ನೇಷಿಯಸ್ ಚರ್ಚ್, ಬೇಗೂರು, ಸಂಜೆ 4.30

ದುರ್ಗಾಮಹೇಶ್ವರಮ್ಮ ದೇವಾಲಯದ ವಾರ್ಷಿಕೋತ್ಸವ: ಕಲಶ ಸ್ಥಾಪನೆ, ಪುಣ್ಯಾಹವಾಚನ, ಯಾಗಶಾಲೆ ಪ್ರವೇಶ, ಸ್ಥಳ–ದೇವಸ್ಥಾನದ ಆವರಣ, ಕೆ.ಆರ್. ಪುರ, ಸಂಜೆ 5ರಿಂದ



ಲಕ್ಷ್ಮಿ ಚಂದ್ರಶೇಖರ್

'ಶೇಕ್ಸ್‌ಪಿಯರನ ಶ್ರೀಮತಿ' ನಾಟಕ ಪ್ರದರ್ಶನ: ಅಭಿನಯ–ಕಲಾವಿದೆ ಲಕ್ಷ್ಮಿ ಚಂದ್ರಶೇಖರ್, ರಚನೆ–ಉದಯ ಇಟಗಿ, ನಿರ್ದೇಶನ–ವಿಶ್ವರಾಜ್ ಪಾಟೀಲ, ಧ್ವನಿ ಸಂಯೋಜನೆ–ಗಜಾನನ ನಾಯಕ್, ವಸ್ತ್ರವಿನ್ಯಾಸ–ಎನ್.ಮಂಗಳಾ, ಆಯೋಜನೆ–ಕ್ರಿಯೇಟಿವ್ ಥಿಯೇಟರ್, ಸ್ಥಳ–ರಂಗಶಂಕರ, ಮಧ್ಯಾಹ್ನ 3.30 ಮತ್ತು ಸಂಜೆ 7.30ಕ್ಕೆ

ಬೇಸಿಗೆ ಶಿಬಿರ ಮತ್ತು 'ಶ್ರೀಕೃಷ್ಣ ಪಾರಿಜಾತ' ನಾಟಕ ಪ್ರದರ್ಶನ: ಪ್ರಸ್ತುತಿ–ಕಲಾ ಕದಂಬ ಆರ್ಟ್ ಸೆಂಟರ್, ನಿರ್ದೇಶನ–ರಾಧಾಕೃಷ್ಣ ಉರಾಳ, ಅತಿಥಿ–ಆರೂಢ ಭಾರತೀ ಸ್ವಾಮೀಜಿ, ಸ್ಥಳ–ಸಿದ್ಧಾರೂಢ ಮಿಷನ್ ಆಶ್ರಮ, ರಾಮೋಹಳ್ಳಿ, ಸಂಜೆ 6

ಉಜಂಬಲ್ ಸಂಗೀತೋತ್ಸವ: ಭಾವನಾ ಉಮೇಶ್, ವಾದ್ಯ ಸಹಕಾರ–ಶ್ರೀನಿವಾಸ ಕಾಖಂಡಕಿ, ಅಮಿತ್ ಶರ್ಮಾ, ಆಯೋಜನೆ–ತಿರುಮಲ ತಿರುಪತಿ ದೇವಸ್ಥಾನಗಳು, ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ–ವೆಂಕಟೇಶ್ವರ ಸ್ವಾಮಿ ದೇವಸ್ಥಾನ, ವೈಯಾಲಿಕಾವಲ್, ಸಂಜೆ 6

ಗುರುರಾಜ ಭಜನಾ ಮಂಡಳಿಯ ಸಡಗರದ 'ಭಜನಾಮೃತ' ಕಾರ್ಯಕ್ರಮ: ಸ್ಥಳ–ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6

'ಆ ಹದಿನೆಂಟು ದಿನಗಳು'–ಮಹಾಭಾರತ ಆಧಾರಿತ ನೃತ್ಯ ನಾಟಕ ಪ್ರದರ್ಶನ: ಭರತ್ ಆರ್.ಪ್ರಭಾತ್ ಮತ್ತು ಶರತ್ ಆರ್.ಪ್ರಭಾತ್, ಆಯೋಜನೆ–ಪ್ರಭಾತ್ ಆರ್ಟ್ಸ್ ಇಂಟರ್‌ನ್ಯಾಷನಲ್, ಸ್ಥಳ–ರವೀಂದ್ರ ಕಲಾಕ್ಷೇತ್ರ, ಸಂಜೆ 6.15

ವೇರಿಯಸ್ ರೊಬೋಟಿಕ್ ಸರ್ಜಿಕಲ್ ಸಿಸ್ಟಂ ಚಾಲನೆ: ಅತಿಥಿಗಳು–ಗೋವಿಂದ ರಂಗರಾಜನ್, ಟಿ.ವಿ. ಮೋಹನದಾಸ್ ಪೈ, ಆಯೋಜನೆ–ಎನ್‌ಯು ಆಸ್ಪತ್ರೆ, ಸ್ಥಳ–ಜೆ.ಡಬ್ಲ್ಯು ಮ್ಯಾರಿಯಟ್ ಹೋಟೆಲ್, ವಿಠ್ಠಲ್ ಮಲ್ಯ ರಸ್ತೆ, ಸಂಜೆ 6.30

ಆದಿಶಕ್ತಿ ಯಲ್ಲಮ್ಮ ದೇವಿ ಕರಗ ಮಹೋತ್ಸವ: ಅತಿಥಿ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ– ಸಹಕಾರ ಸಚಿವ ಎಸ್.ಟಿ.ಸೋಮಶೇಖರ್, ಸ್ಥಳ–ಕೆಂಗೇರಿ, ರಾತ್ರಿ 12.55

ಭರತನಾಟ್ಯ ರಂಗಪ್ರವೇಶ: ರಜನಿ ಕಲ್ಲೂರು, ಅತಿಥಿಗಳು–ಯತಿರಾಜ ಜೀಯರ್ ಸ್ವಾಮಿ, ಪೂರ್ಣಿಮಾ ಗುರುರಾಜ್, ಪಿ.ಪ್ರವೀಣ್ ಕುಮಾರ್, ಆಯೋಜನೆ–ನರ್ತನ ಕೀರ್ತನ ಪ್ರದರ್ಶನ ಕಲೆಗಳ ಕೇಂದ್ರ, ಸ್ಥಳ–ಎಡಿಎ ರಂಗಮಂದಿರ, ಜೆ.ಸಿ.ರಸ್ತೆ, ಸಂಜೆ 5.30

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ಮಲ್ಲಾಡಿ ಸಹೋದರರಿಗೆ 'ರಾಮ ಗಾನ ಕಲಾಚಾರ್ಯ–2021' ಪ್ರಶಸ್ತಿ ಪ್ರದಾನ, ಸಂಗೀತ ಕಾರ್ಯಕ್ರಮ–ಮಲ್ಲಾಡಿ ಸಹೋದರರು, ಎಂಬಾರ್ ಕಣ್ಣನ್, ತುಮಕೂರು ರವಿಶಂಕರ್, ಗಿರಿಧರ್ ಉಡುಪ, ಆಯೋಜನೆ–ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ–ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ, ಸಂಜೆ 5ರಿಂದ



ಮಲ್ಲಾಡಿ ಸಹೋದರರು

ಹಸಿರು ಉಳಿಸುವ ಸಂದೇಶ ಸಾರುವ ಫಲಕಗಳನ್ನು ನಗರದ ಪ್ರಮುಖ ವೃತ್ತಗಳ ಬಳಿ ಸ್ವಯಂ ಸೇವಕರು ಶುಕ್ರವಾರ ಪ್ರದರ್ಶಿಸಿದರು

ಭೂಮಿ ಉಳಿಸಿ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಭೂ ದಿನದ ಅಂಗವಾಗಿ 'ನಮ್ಮ ಬೆಂಗಳೂರು ಫೌಂಡೇಷನ್' ಹಾಗೂ ಮೌಂಟ್ ಕಾರ್ಮೆಲ್ ಕಾಲೇಜುಗಳ ಆಶ್ರಯದಲ್ಲಿ 'ಭೂಮಿಯನ್ನು ಉಳಿಸಿ, ನಮ್ಮ ಭವಿಷ್ಯವನ್ನು ಉಳಿಸಿ' ಜನಜಾಗೃತಿ ಅಭಿಯಾನವು ಶುಕ್ರವಾರ ನಡೆಯಿತು.

ಪ್ರತಿಷ್ಠಾನದ ಸ್ವಯಂಸೇವಕರು, ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರು, 'ಮರಗಳನ್ನು ಉಳಿಸಿ, ಭೂಮಿ ಉಳಿಸಿ', 'ಸೈಕಲ್ ಬಳಸಿ ಹಸಿರು ಉಳಿಸಿ', 'ಪ್ಲಾಸ್ಟಿಕ್ ಬಳಕೆ ತಪ್ಪಿಸಿ', 'ಕೆರೆಗಳನ್ನು ಉಳಿಸಿ' ಮುಂತಾದ ಸಂದೇಶವನ್ನು ಹೊಂದಿದ್ದ ಫಲಕಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸಿದರು. ಸಂಚಾರದ ಸಿಗ್ನಲ್‌ಗಳಲ್ಲಿ 'ಸಿಗ್ನಲ್‌ಗಳಲ್ಲಿ ವಾಹನದ ಎಂಜಿನ್ ಆಫ್ ಮಾಡಿ ಇಂಧನ ಉಳಿಸಿ' ಎಂಬ ಸಂದೇಶ ಸಾರಿದರು.

ಸಿಗ್ನಲ್‌ಗಳಲ್ಲಿ ನಿಲ್ಲಿಸಿದ್ದ ವಾಹನ ಸವಾರರ ಬಳಿ ತೆರಳಿ ವಾಹನದ ಎಂಜಿನ್ ಅನ್ನು ಆಫ್ ಮಾಡುವಂತೆ ಮನವಿ ಮಾಡಿದ ಸ್ವಯಂ ಸೇವಕರು, 'ಇದರಿಂದ ಇಂಧನ, ಹಣವನ್ನು ಮಾತ್ರ ಉಳಿಸುವುದಲ್ಲ. ಈ ನಡೆಯು ವಾಯುಮಾಲಿನ್ಯ ಮತ್ತು ಜಾಗತಿಕ ತಾಪಮಾನವನ್ನು ಕಡಿಮೆಗೊಳಿಸಲಿದೆ. ಪರಿಸರ ಮತ್ತು ನಮ್ಮ ಗ್ರಹವನ್ನು ಉಳಿಸುವುದಕ್ಕೂ ಕೊಡುಗೆ ನೀಡುತ್ತದೆ' ಎಂದು ತಿಳಿ ಹೇಳಿದರು.

ಮಕ್ಕಳ ಸಾಹಿತ್ಯ– ಸಂಸ್ಕೃತಿ ಕಮ್ಮಟ

ಹಾಸನ: 'ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ಹಾಗೂ ಶೃಂಗೇರಿಯ ಬಾಲಗಂಗಾಧರನಾಥ ಸ್ವಾಮೀಜಿ ಸಂಗೀತ ನೃತ್ಯ ನಾಟಕ ಕೇಂದ್ರದಿಂದ ಏ.25ರಿಂದ 28ರವರೆಗೆ ಶೃಂಗೇರಿಯಲ್ಲಿ ಮಕ್ಕಳ ಸಾಹಿತ್ಯ– ಸಂಸ್ಕೃತಿ ಕಮ್ಮಟ ನಡೆಯಲಿದೆ' ಎಂದು ಆದಿಚುಂಚನಗಿರಿ ಶಾಖಾ ಮಠದ ಶಂಭುನಾಥ ಸ್ವಾಮೀಜಿ ತಿಳಿಸಿದರು.

'1887ರಲ್ಲೇ ಬಾಲಗಂಗಾಧರನಾಥ ಸ್ವಾಮೀಜಿ ರಾಜ್ಯ ಮಟ್ಟದ ಮಕ್ಕಳ ಸಾಹಿತ್ಯ ಸಮ್ಮೇಳನ ನಡೆಸಿ ಮಕ್ಕಳ ಸಾಹಿತ್ಯಕ್ಕೆ ಉತ್ತೇಜನ ನೀಡಿದ್ದರು. ನಿರ್ಮಲಾನಂದನಾಥ ಸ್ವಾಮೀಜಿ ಆಶೀರ್ವಾದದೊಂದಿಗೆ ಮಕ್ಕಳಲ್ಲಿ ಸಾಹಿತ್ಯ ಸಂಸ್ಕೃತಿ ಅಭಿರುಚಿ ಬಿತ್ತುವ ಸಲುವಾಗಿ ಚ.ನ.ಅಶೋಕ್ ನೇತೃತ್ವದಲ್ಲಿ ಪರಿಷತ್ ರಚಿಸಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ' ಎಂದು ಶ್ರೀಗಳು ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಕೋವಿಡ್‌ನಿಂದಾಗಿ ಮೂರು ವರ್ಷ ಕಾರ್ಯಕ್ರಮ ನಡೆಸಿರಲಿಲ್ಲ. ಶೃಂಗೇರಿಯ ಬಿಜಿಎಸ್ ನಿರ್ಮಲ ಸಿರಿ ರಂಗ ಮಂಟಪದಲ್ಲಿ ನಡೆಯಲಿರುವ ಕಮ್ಮಟದಲ್ಲಿ ಸಾಹಿತ್ಯ, ಕಥೆ, ರಂಗಭೂಮಿ, ನೃತ್ಯ ಕ್ಷೇತ್ರಗಳ ಹಿರಿಯರು ತರಬೇತಿ ನೀಡಲಿದ್ದಾರೆ' ಎಂದರು.

'25ರಂದು ಸಂಜೆ ಸಮಾರಂಭ [illegible] ಕಮ್ಮಟ ಉದ್ಘಾಟಿಸುವರು. ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಪ್ರತಿ ಜಿಲ್ಲೆಯಿಂದ ಐವರು ಮಕ್ಕಳನ್ನು ಆಯ್ಕೆ ಮಾಡಿ, ತರಬೇತಿ ನೀಡಲಾಗುವುದು. ಊಟ, ವಸತಿ, ಪ್ರಯಾಣ ವೆಚ್ಚವನ್ನು ಮಠ ಭರಿಸಲಿದೆ' ಎಂದರು.

ಸುಧಾ, ಮಯೂರ ಓದಿರಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ,. ರಸ್ತೆ, ಬೆಂಗಳೂರು – 560 002. ದೂರವಾಣಿ:080–22213530/22241325, ಫ್ಯಾಕ್ಸ್: 080–22214379. ಇ–ಮೇಲ್:kanbhavblr@gmail.com, ವೆಬ್‌ಸೈಟ್: www.kannadasiri.in, www.kanaja.in

ಸಂಖ್ಯೆ: 17015/89/2022 ದಿನಾಂಕ:21.04.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಮಾತ್ರ)

ವಿಷಯ : 2022–23ನೇ ಸಾಲಿಗೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಅಧಿಕಾರಿಗಳ ಅಧಿಕೃತ ಕಛೇರಿ ಕೆಲಸಗಳಿಗಾಗಿ ಖಾಸಗಿ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಸೇವೆ ಪಡೆಯಲು ಇ–ಟೆಂಡರ್ ಕರೆಯುವ ಬಗ್ಗೆ:

ಉಲ್ಲೇಖ : 1) ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 30 ಶಿವಾನಿ 2019, ಬೆಂಗಳೂರು 31.03.2022.
2) ಸರ್ಕಾರದ ಪತ್ರ ಸಂಖ್ಯೆ : ಕಸಂವಾ/43/ಕಸನಿ/ಆಶ/2019, ದಿನಾಂಕ : 18.09.2019.

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಕೆಳಕಂಡ ಅಧಿಕಾರಿಗಳ ಅಧಿಕೃತ ಕಛೇರಿ ಕರ್ತವ್ಯಗಳಿಗೆ ಉಲ್ಲೇಖ (1) ಸರ್ಕಾರದ ಆದೇಶದನ್ವಯ ಮಾರುತಿ ಸ್ವಿಫ್ಟ್ ಡಿಸೈರ್ / ಟೊಯೋಟ ಇಟಿಯೋಸ್ ವಾಹನಗಳನ್ನು ಚಾಲಕರನ್ನೊಳಗೊಂಡಂತೆ ಬಾಹ್ಯಮೂಲದಿಂದ ಬಾಡಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಒದಗಿಸಲು ಹಾಗೂ ಅವಶ್ಯಕತೆ ಇದ್ದಲ್ಲಿ ದಿನ ನಿತ್ಯ ಬಾಡಿಗೆ ಆಧಾರದ ಮೇಲೆ ಸೇವೆ ಒದಗಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ–2000 ಅಡಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ಮುಖಾಂತರ ಅರ್ಹ ಸಂಸ್ಥೆಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ವಿವರ	ವಾಹನದ ಮಾದರಿ	ವಾಹನದ ಪರಿಮಾಣ
1	ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರ ಕಛೇರಿ ಕೆಲಸಗಳಿಗೆ	ಮಾರುತಿ ಸ್ವಿಫ್ಟ್ ಡಿಸೈರ್ / ಟೊಯೋಟ ಇಟಿಯೋಸ್	2
2	ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ/ಅಧಿಕಾರಿಗಳ ಕಛೇರಿ ಕರ್ತವ್ಯಗಳಿಗೆ		2
3	ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕೇಂದ್ರ ಕಛೇರಿ ಅಧಿಕಾರಿಗಳಿಗೆ		3
		ಒಟ್ಟು	7

1) ಟೆಂಡರ್ ಡಾಕ್ಯುಮೆಂಟ್ ಆನ್‌ಲೈನ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ : **22.04.2022, ಬೆಳಿಗ್ಗೆ 11.00 ಗಂಟೆಯ ನಂತರ.** 2) ಟೆಂಡರ್ ಡಾಕ್ಯುಮೆಂಟ್ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವ ಅಂತಿಮ ದಿನಾಂಕ : **06.05.2022.** 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **07.05.2022, ಬೆಳಿಗ್ಗೆ 11.00 ಗಂಟೆಗೆ.** 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : **10.05.2022, ಬೆಳಿಗ್ಗೆ 11.00 ಗಂಟೆಗೆ.** 5) ಟೆಂಡರಿಗಿಟ್ಟ ಇ.ಎಂ.ಡಿ. ಮೊತ್ತ : **ರೂ. 87,500/–** 6) ಟೆಂಡರ್ ಅಂದಾಜು ಮೊತ್ತ (12 ತಿಂಗಳಿಗೆ) : **ರೂ. 35,00,000/–.**

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಾಸಾಸಂಇ/ವಾಪ್ರ/ಜಗದಾಳೆ ಅಡ್ವರ್ಟೈಸಿಂಗ್/234/2022–23

ಸಹಿ/– ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–01/844/2022–23 ದಿನಾಂಕ: 20.04.2022

ಟೆಂಡರ್ ಆಹ್ವಾನ ಪ್ರಕಟಣೆ

(ಜಿ.ಓ.ಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ತಾಂತ್ರಿಕ ಕೌಶಲ್ಯತೆಗಳು, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವ ಸಂಪನ್ಮೂಲ ಹೊಂದಿರುವ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಕರ್ನಾಟಕ ಸರ್ಕಾರದ ಕೆ.ಪಿ.ಡಬ್ಲ್ಯೂ.ಡಿ ದರ್ಜೆ–1 (ಸಿವಿಲ್) ಪರವಾನಗಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು: ವಿಜಯಪುರ ಜಿಲ್ಲೆ ಕೊಲ್ಹಾರ್ ತಾಲ್ಲೂಕಿನ ಅಲಮಟ್ಟಿ ಜಲಾಶಯದ ಕೊರ್ತಿ–ಕೊಲ್ಹಾರ ಸೇತುವೆ ಬಳಿಯಿಂದ ಮುಳವಾಡ ಕೈಗಾರಿಕಾ ಪ್ರದೇಶಕ್ಕೆ 18.20 ಎಂ.ಎಲ್.ಡಿ ನೀರು ಸರಬರಾಜು ಯೋಜನೆ ಅನುಷ್ಠಾನದ ಕಾಮಗಾರಿ.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 19.05.2022 ಸಂಜೆ 4.00 ಗಂಟೆವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/CP/243/Zenkar/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಉಪ ಆಯುಕ್ತರು ಅಭಿವೃದ್ಧಿರವರ ಕಛೇರಿ
ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು ಮಹಾನಗರ ಪಾಲಿಕೆ, ಮೈಸೂರು – 570024
ಇ–ಮೇಲ್: superintendingengineer@gmail.com

ಸಂ: ಮೈನಪಾ/ಉ.ಆ(ಅ)/ಸಾ.ಟೆಂ.ಪ್ರ–01/2022–23 ದಿನಾಂಕ : 16.04.2022

ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರುಗಳ ಕೋರಿಗೆ ಮೇರೆಗೆ ವಿವಿಧ ಲೆಕ್ಕ ಶೀರ್ಷಿಕೆಗಳಾದ ನಗರಪಾಲಿಕೆ ಸಾಮಾನ್ಯ ನಿಧಿ/ಎಸ್/ಎಫ್/ಸಿ/14ನೇ ಹಣಕಾಸು/15ನೇ ಹಣಕಾಸು/ಶೇಕಡ 24.10/ಡೇ–ನಲ್ಮ್/ಎಂ.ಜಿ.ಎಂ.ಬಿ.ವೈ ಅನುದಾನದಡಿ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಿರುತ್ತದೆ.

ಕ್ರ ಸಂ	ವಿವರ	ಒಟ್ಟು ಕಾಮಗಾರಿಗಳು	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಇ–ಪೋರ್ಟಲ್ ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ (ಸಂಜೆ 5.30 ಗಂಟೆಗೆ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ (ಸಂಜೆ 5.30 ಗಂಟೆಗೆ)	ಟೆಂಡರ್ ತೆರೆಯುವ ದಿನಾಂಕ (ಸಂಜೆ 5.30 ಗಂಟೆಗೆ)
1	ಘನತ್ಯಾಜ್ಯ ಹಾಗೂ ವಾಹನ ವಿಭಾಗ ಕಾರ್ಯಪಾಲಕ ಅಭಿಯಂತರರು (ಸಿವಿಲ್)	2	30.94	19.04.2022	04.05.2022	05.05.2022
		3	279.09	19.04.2022	04.05.2022	05.05.2022
2	ಕಾರ್ಯಪಾಲಕ ಅಭಿಯಂತರರು (ವಿದ್ಯುತ್ ವಿಭಾಗ)	5	24.23	18.04.2022	02.05.2022	04.05.2022
		1	96.98	18.04.2022	17.05.2022	18.05.2022
3	ಕಾರ್ಯಪಾಲಕ ಅಭಿಯಂತರರು (ಒಳಚರಂಡಿ ವಿಭಾಗ)	2	480	18.03.2022	18.04.2022	19.04.2022
		72	899.77	19.04.2022	04.05.2022	05.05.2022
4	ಕಾರ್ಯಪಾಲಕ ಅಭಿಯಂತರರು (ವಾ.ವಿ.ನೀ.ಸ ವಿಭಾಗ)	20	379.20	18.04.2022	04.05.2022	05.05.2022
		3	773.00	18.04.2022	18.05.2022	19.05.2022
5	ಕಾರ್ಯಪಾಲಕ ಅಭಿಯಂತರರು (ಸಿವಿಲ್–ಪೂರ್ವ ಮತ್ತು ಪಶ್ಚಿಮ ವಿಭಾಗ)	74	1171.68	28.04.2022	16.05.2022	17.05.2022
		58	920.18	25.04.2022	10.05.2022	11.05.2022
		1	500.00	13.04.2022	27.05.2022	28.05.2022
		4	1620.00	20.04.2022	05.05.2022	06.05.2022
		20	314.27	27.04.2022	12.05.2022	13.05.2022
		ಸೇವಾ ಟೆಂಡರ್				
		1	18.18	22.04.2022	09.05.2022	10.05.2022
		2	88.12	21.04.2022	05.05.2022	06.05.2022

ಇ–ಪೋರ್ಟಲ್ ಮುಖಾಂತರ ಸಿಂಗಲ್ / ದ್ವಿಲಕೋಟೆ ಕವರ್ ಡಾಕ್ಯುಮೆಂಟ್ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿದ್ದು, ಅರ್ಹ ಗುತ್ತಿಗೆದಾರರು / ಏಜೆನ್ಸಿದಾರರು / ಸರಬರಾಜುದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನ (https://eproc.karnataka.gov.in) ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರವನ್ನು ಕಚೇರಿ ಸಮಯದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಸಿವಿಲ್ (ಪೂರ್ವ/ಪಶ್ಚಿಮ), ವಿದ್ಯುತ್, ಒಳಚರಂಡಿ ಹಾಗೂ ನೀರುಸರಬರಾಜು ಕಾರ್ಯಪಾಲಕ ಅಭಿಯಂತರರುರವರ ಕಚೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು.

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ / ಬದಲಾವಣೆ / ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ. ಹಾಗೂ ಕಾಮಗಾರಿ ನಿರ್ವಹಿಸಿರುವ ದೃಢೀಕರಣ ಪ್ರಮಾಣ ಪತ್ರದಲ್ಲಿ ಇಂಡೆಂಟ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿರಬೇಕು.

ಸಹಿ/– ಉಪ ಆಯುಕ್ತರು (ಅಭಿವೃದ್ಧಿ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು.

ವಾಸಾಸಂಇ/ಮೈಸೂರು/ಶಿರಡಿ ಸಾಯಿ/42/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅಂತರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ನಿಯಮಿತ

ನಂ.24, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು – 560024, ಫೋನ್ ನಂ. 080–23413125/ 9480433818
E-Mail:- ifablimited@gmail.com, Website :-www.ifabindia.org

No.IFAB/MD/Admin/MWST/18/2020-21/call-2 Date: 21.04.2022

ಅಲ್ಪಾವಧಿ ಟೆಂಡರ್ ಪ್ರಕಟಣೆ :– ಮಳೆ ನೀರು ಸಂಗ್ರಹದ ಸ್ಟೀಲ್ ಟ್ಯಾಂಕ್ ನಿರ್ಮಿಸಲು

ಅಂತರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರ ಬೆಂಗಳೂರು ಸಂಸ್ಥೆಯಲ್ಲಿ ಮಳೆ ನೀರು ಸಂಗ್ರಹದ ಸ್ಟೀಲ್‌ಟ್ಯಾಂಕ್ ನಿರ್ಮಿಸಲು ಸಂಬಂಧಪಟ್ಟ ಪೂರೈಕೆದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ವಿವರ ಮತ್ತು ದಾಖಲೆಗಳು 20.04.2022 ರಿಂದ ಲಭ್ಯವಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 05.05.2022 ರ ಸಂಜೆ 5.00 ಗಂಟೆ. ಹೆಚ್ಚಿನ ವಿವರಗಳನ್ನು ಸಂಸ್ಥೆಯ ಕಛೇರಿಯ ಕೆಲಸದ ವೇಳೆ ಮತ್ತು ಕರ್ನಾಟಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ನಲ್ಲಿ ಪಡೆಯಬಹುದಾಗಿದೆ.

ವಾ.ಸಾ.ಸಂ.ಇ/ವಾ.ಪ್ರ/252/ಶಿರಡಿ ಸಾಯಿ/2022–23

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಭಾರತ ಸರ್ಕಾರ
ಬಾಹ್ಯಕಾಶ ಇಲಾಖೆ
ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ
ಇಸ್ರೋ ಟೆಲಿಮಿಟ್ರಿ ಟ್ರ್ಯಾಕಿಂಗ್ & ಕಮಾಂಡ್ ನೆಟ್‌ವರ್ಕ್ (ಐಎಸ್‌ಟಿಆರ್‌ಎಸಿ)
ನಿರ್ಮಾಣ & ನಿರ್ವಹಣ ಸಮೂಹ
ಪ್ಲಾಟ್ ನಂ. 12 & 13, 3ನೇ ಮುಖ್ಯ ರಸ್ತೆ, 2ನೇ ಫೇಸ್, ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು–58,
ಫ್ಯಾಕ್ಸ್: 080–28094180 ದೂರವಾಣಿ: 080–28094195, 080–28094183, 080–28094541

ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ

ತಿದ್ದುಪಡಿ–1 ದಿನಾಂಕ: 22.04.2022

ಭಾರತದ ರಾಷ್ಟ್ರಪತಿಯವರ ಪರವಾಗಿ, ಸಮೂಹ ಮುಖ್ಯಸ್ಥರು, ಐಎಸ್‌ಟಿಆರ್‌ಎಸಿ, ಇಸ್ರೋ, ಪೀಣ್ಯ, ಬೆಂಗಳೂರು–58, ಇವರು ಈ ಕೆಳಕಂಡ ಕಾಮಗಾರಿಗಳಿಗೆ ಸೂಕ್ತ ದರ್ಜೆಯ ಗುತ್ತಿಗೆದಾರರಿಂದ ಮೊಹರಾದ ಐಟಂ ದರದ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಎಸ್‌ಎಸ್‌ಎ ನಿಯಂತ್ರಣ ಕೇಂದ್ರ (ಎನ್‌ಇಟಿಆರ್‌ಎ), ಪೀಣ್ಯ, ಐಎಸ್‌ಟಿಆರ್‌ಎಸಿ, ಬೆಂಗಳೂರು ಇಲಿರುವ್ವ ವಿವಿಧ ಸಾಮರ್ಥ್ಯದ 52 ಒಳಾಂಗಣ ಘಟಕಗಳನ್ನು ಸಂಪರ್ಕಿಸುವ 94 ಹೆಚ್‌ಪಿ ಕ್ಯಾರಿಯರ್ ವಿಆರ್‌ಎಫ್ ಘಟಕಗಳು ಹಾಗೂ 2 ಟಿಆರ್ ಕ್ಯಾಸೆಟ್ ಸ್ಪ್ಲಿಟ್ ಎ/ಸಿಗಳ ಸಮಗ್ರ ವಾರ್ಷಿಕ ನಿರ್ವಹಣೆ ಗುತ್ತಿಗೆ
ಇ–ಟೆಂಡರ್ ನೋಟಿಸ್	ಐಎಸ್‌ಟಿಆರ್‌ಎಸಿ/ಸಿಎಂಜಿ/ಎಂಎಐಎನ್‌ಟಿ/ಎ.ಸಿ/ ಇ–ಟೆಂಡರ್–55/2022–23 ದಿ: 01.04.2022
ಟೆಂಡರ್‌ಗಿಟ್ಟ ಅಂದಾಜು ಮೊತ್ತ	ರೂ.10.03 ಲಕ್ಷಗಳು.
ಟೆಂಡರ್ ದಸ್ತಾವೇಜು ವಿವರಗಳು	ಇ–ಟೆಂಡರ್
ಪೂರ್ಣಗೊಳಿಸುವ ಕಾಲಾವಧಿ ತಿಂಗಳುಗಳಲ್ಲಿ (ಕೆಲಸದ ಆದೇಶವನ್ನು ನೀಡಿದ ದಿನಾಂಕದ 15ನೇ ದಿನದಿಂದ ಪರಿಗಣಿಸಲಾಗುತ್ತದೆ).	24 ತಿಂಗಳು (ಅದೇ ನಿಯಮ ಮತ್ತು ಷರತ್ತುಗಳೊಂದಿಗೆ ಗುತ್ತಿಗೆ ಅವಧಿಯನ್ನು ಒಂದು ವರ್ಷದ ಅವಧಿಗೆ ವಿಸ್ತರಿಸುವ ನಿಬಂಧನೆಯೊಂದಿಗೆ)
ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ	04.04.022 ರಿಂದ 17.04.2022, 16.00 ಗಂಟೆವರೆಗೆ. ಇರುವುದನ್ನು 29.04.2022, 16.00 ಗಂಟೆಯ ವರೆಗೆ ವಿಸ್ತರಿಸಲಾಗಿದೆ.
ಬಿಡ್ ವಿಚಾರಣೆ	05.04.2022 ರಿಂದ 18.04.2022, 16.00 ಗಂಟೆವರೆಗೆ. ಇರುವುದನ್ನು 30.04.2022, 16.00 ಗಂಟೆಯ ವರೆಗೆ ವಿಸ್ತರಿಸಲಾಗಿದೆ.
ಬಿಡ್ ವಿಚಾರಣೆಗೆ ಪ್ರತಿಕ್ರಿಯೆ ನೀಡಲು ಕೊನೆಯ ದಿನಾಂಕ	19.04.2022, 16.00 ಗಂಟೆವರೆಗೆ. ಇರುವುದನ್ನು 02.05.2022, 16.00 ಗಂಟೆಯ ವರೆಗೆ ವಿಸ್ತರಿಸಲಾಗಿದೆ.
ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ	20.04.2022, 16.00 ಗಂಟೆವರೆಗೆ. ಇರುವುದನ್ನು 04.05.2022, 16.00 ಗಂಟೆಯ ವರೆಗೆ ವಿಸ್ತರಿಸಲಾಗಿದೆ.
ಟೆಂಡರ್‌ಗಳನ್ನು ತೆರೆಯುವ ದಿನಾಂಕ	22.04.2022, 11.00 ಗಂಟೆಯ ನಂತರ ಇರುವುದನ್ನು 05.05.2022, ಬೆಳಿಗ್ಗೆ 11.00 ಗಂಟೆಗೆ ವಿಸ್ತರಿಸಲಾಗಿದೆ.
ಇಎಂಡಿ	ರೂ. 20,060/-

ಆಸಕ್ತಿಯುಳ್ಳ ಟೆಂಡರ್‌ದಾರರು ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳಿಗೆ ಟೆಂಡರ್ ಪ್ರಕಟಣೆಯನ್ನು ಪರಿವೀಕ್ಷಿಸಲು ವೆಬ್‌ಸೈಟ್: www.isro.gov.inಗೆ ಭೇಟಿನೀಡಿ ಮತ್ತು ಟೆಂಡರ್ ದಸ್ತಾವೇಜುಗಳನ್ನು www.tenderwizard.com/ISROರಿಂದ ಡೌನ್‌ಲೋಡ್ ಮಾಡಿಕೊಳ್ಳಿ.

ಸಹಿ/- ಸಮೂಹ ಮುಖ್ಯಸ್ಥರು, ಸಿಎಂಜಿ,

Walk in Interview

ರಿಲೇಷನ್‌ಶಿಪ್ ಎಗ್ಸಿಕ್ಯೂಟಿವ್ / ಡ್ಯ. ಅಸಿಸ್ಟೆಂಟ್ (ಪುರುಷರಿಗಾಗಿ)

ವಿದ್ಯಾರ್ಹತೆ: (ಪದವಿಧರರು ಕನಿಷ್ಠ ಸರಾಸರಿ 40% ಅಂಕಗಳು) / ಪ್ರಸ್ತುತವಾಗಿ ಪದವಿ ಯುವ್ಯಾಸ ಕ್ಷೇತ್ರದಲ್ಲಿ, ವಯಸ್ಸಿನ ಮಿತಿ: 25 ವರ್ಷಕ್ಕಿಂತ ಒಳಗಿನವರಾಗಿರಬೇಕು.

ದಯವಿಟ್ಟು ಪ್ರಮಾಣಪತ್ರ ತನ್ನಿ, 10 ನೇ ತರಗತಿಯಿಂದ ನಂತರದ ನಿಮ್ಮ ಎಲ್ಲ ವರ್ಷಾನುಕ್ರಮ/ಸೆಮಿಸ್ಟರ್ ಆಧರಿತ ಮೂಲ ಮತ್ತು ದೃಢೀಕರಿಸಿದ ಪ್ರತಿಗಳು, ಪಾನ್ ಕಾರ್ಡ್, 4 ಪಾಸ್‌ಪೋರ್ಟ್ ಸೈಜ್ ಫೋಟೋಗಳು.

ಸಂದರ್ಶನದ ಸ್ಥಳಗಳು
ಅಭ್ಯರ್ಥಿಗಳು ತಮ್ಮ ಸಮೀಪದ ಸ್ಥಳದಲ್ಲಿ (ಶಾಖೆ) ನೇರವಾಗಿ ಸಂದರ್ಶನಕ್ಕೆ ಬರಬಹುದು

Building No. New 24 (Old No. 2920/A) Chord Road, 150 Feet RPC Layout, Bangalore - 560 040.
Contact : 9072694557, 9072602581

Door No 11,11/1A,1st Floor, Beside Lakshmi Narasimha Swamy Temple, Vishwaaneedam P.O. Magadi Main Road, Sunkadakatte, Bangalore - 560 091.
Contact : 9742274336, 9072602580

Bangalore Madivala Ist Floor, Shaik Ali Complex, 3rd Cross, No. 3/6-5, 3/6-6, Nr. Ayyapa Temple, Opp. Cauvery Nursing Home, Koramangala, 2nd Block, Madivala (P.O), Bangalore Dt., Pin - 560 068.
Contact : 9048800071, 9353049405

KNV Complex Police Ground BH Road Tumkur
Contact : 8088760690, 8973178034

137/1 Ananda Complex Hesargatta
Contact : 9148300366, 9488402788

Krishnarajapuram Building Chandana Motors, Ist Floor, Old Madras Road, K R Puram Bangalore Dt.,
Contact : 9072690843, 8553666118

Marthahalli Ist Floor, Krishna Grand Building, Marthahalli Junction, Marthahalli, Bangalore Dt.,
Contact : 9072690809, 9080296635

Hoskote KR Road # 171, KMPS Complex, K. R. Road, Above Kempanna Nursing Home, Opp. Canara Bank, Hoskote, Bangalore Dt.,
Contact : 8073275621, 9886697701

Kolar Clock Tower Ist Floor, M M Building, MB Road, Near Clock Tower, Kolar Dt.,
Contact : 9072690152, 9072602603

Date : 24.04.2022 Sunday
ಸಮಯ : 9.30 ಮುಂಜಾನೆಯಿಂದ 4.00 ಸಾ.

ಆಕರ್ಷಕ ವೇತನ ಲಾಭಗಳು. ಹೊರ ಊರಿನ ಅಭ್ಯರ್ಥಿಗಳಿಗಾಗಿ ಉಚಿತ ಉಳಿದುಕೊಳ್ಳುವ ಹಾಸ್ಟೆಲ್ ವ್ಯವಸ್ಥೆ ಮಾಡಲಾಗುತ್ತದೆ.

ಮಣಪ್ಪುರಂ ಫೈನಾನ್ಸ್ ಲಿಮಿಟೆಡ್ Make Life Easy
Toll Free : 1800 420 22 33

ಗದಗ–ಬೆಟಗೇರಿ ನಗರಸಭೆ ಕಾರ್ಯಾಲಯ–582101

ಜಿಲ್ಲಾ: ಗದಗ ರಾಜ್ಯ : ಕರ್ನಾಟಕ
ದೂ:08372–259932 ಈ–ಮೇಲ್ : itstaff.ulb.gadag@gmail.com

ನಂ. ಗಬೆನಸ/ತಾಂ.ವಿ/ವಹಿ/ಟೆಂಡರ್/2022–23 ದಿನಾಂಕ: 22–04–2022

॥ಅಲ್ಪಾವಧಿ ಟೆಂಡರ ಪ್ರಕಟಣೆ॥

(ಕರ್ನಾಟಕ ಪಾರದರ್ಶಕ ಅಧಿನಿಯಮ 2000 ರನ್ವಯ)

ಗದಗ–ಬೆಟಗೇರಿ ನಗರಸಭೆ ಸನ್ 2020–21 ಹಾಗೂ ಸನ್ 2021–22 ನೇ ಸಾಲಿನ 15ನೇ ಹಣಕಾಸು ಅನುದಾನದಲ್ಲಿ ಸೇರಿ ಒಟ್ಟು **08 ಕಾಮಗಾರಿಗಳ ಅಂದಾಜು ಮೊತ್ತ ರೂ. 147.50 ಲಕ್ಷಗಳಿಗೆ** ಅಲ್ಪಾವಧಿ ಟೆಂಡರ್‌ನ್ನು **ಕೆಡಬ್ಲ್ಯೂ–1,2** ಪ್ರಕಾರ ಆಹ್ವಾನಿಸಿದ್ದು ಇಚ್ಚೆಯುಳ್ಳ ಗುತ್ತಿಗೆದಾರರು ಬಿಡ್ಡ್ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ತಾಂತ್ರಿಕ ಶಾಖೆಯಲ್ಲಿ ಕೇಳಿ ಪಡೆಯಬಹುದು.

ಪ್ಯಾ ನಂ.	ಕಾಮಗಾರಿ ಇಂಡೆಂಟ್ ನಂ.	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ	ಕಾಮಗಾರಿಯ ಕಾಲಾವಕಾಶ
	ಸಾಮಾನ್ಯ ವರ್ಗಕ್ಕೆ ಮೀಸಲಿಟ್ಟ ಕಾಮಗಾರಿಗಳು			
1	129431 call-2	5.00	12500.00	90 ದಿನ
2	125753 call-2	20.00	50000.00	90 ದಿನ
3	125762 call-2	25.10	62750.00	90 ದಿನ
4	125761 call-2	30.00	75000.00	90 ದಿನ
5	125690 call-2	10.00	25000.00	90 ದಿನ
	ಪರಿಶಿಷ್ಟ ಜಾತಿ ವರ್ಗಕ್ಕೆ ಮೀಸಲಿಟ್ಟ ಕಾಮಗಾರಿಗಳು			
6	125766 call-2	25.00	25000.00	90 ದಿನ
7	130384 call-2	25.75	25750.00	90 ದಿನ
	ಪರಿಶಿಷ್ಟ ಪಂಗಡ ವರ್ಗಕ್ಕೆ ಮೀಸಲಿಟ್ಟ ಕಾಮಗಾರಿಗಳು			
8	125769 call-2	6.65	8313.00	90 ದಿನ

1) ಟೆಂಡರ ಫಾರ್ಮ ವೆಬ್ ಸೈಟಿನಿಂದ ಡೌನ್ ಲೋಡ ಮಾಡಿಕೊಳ್ಳುವ ಪ್ರಾರಂಭದ **ದಿನಾಂಕ: 22–04–2022** 2) ಭರ್ತಿ ಮಾಡಿದ ಟೆಂಡರಗಳನ್ನು ಅಪಲೋಡ್ (Upload) ಮಾಡುವ ಕೊನೆಯ ದಿನಾಂಕ: **29–04–2022 ಸಾಯಂಕಾಲ: 4:00** ಘಂಟೆಯವರೆಗೆ 3)ಟೆಂಡರಗಳನ್ನು ತೆರೆಯುವ ದಿನಾಂಕ: **30–04–2022** ರ **ಮುಂಜಾನೆ 4:30** ಘಂಟೆಯ ನಂತರ ತೆರೆಯಲಾಗುವುದು. **ಹೆಚ್ಚಿನ ಮಾಹಿತಿಗಾಗಿ Website: www.eproc.karnataka.gov.in ವೆಬ್‌ಸೈಟನಲ್ಲಿ ನೋಡಬಹುದು**

ಸಹಿ/– (ಶ್ರೀಮತಿ ಉಷಾ ಎಮ್ ದಾಸರ)
ಅಧ್ಯಕ್ಷರು, ನಗರಸಭೆ.ಗದಗ–ಬೆಟಗೇರಿ

ಸಹಿ/–(ಶ್ರೀ ರಮೇಶ ಎಸ್ ಸುಣಗಾರ)
ಪೌರಾಯುಕ್ತರು, ನಗರಸಭೆ.ಗದಗ–ಬೆಟಗೇರಿ

ವಾ.ಸಾ.ಇ/ಗದಗ/37/2022–23/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಮೀನುಗಾರಿಕೆ ನಿರ್ದೇಶನಾಲಯ

3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ॥ ಬಿ. ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು–560001: ದೂ 080–22864681/4604, ಫ್ಯಾಕ್ಸ್ : 080–22864619
ಇಮೇಲ್: : dfkarnataka@rediffmail.com, Website: https://fisheries.karnataka.gov.in

ಪತ್ರ. ಸಂಖ್ಯೆ : DOF-TECHoFYP/79/2021E-598832 ದಿನಾಂಕ : 20.04.2022

ಇ–ಟೆಂಡರ್ ಪ್ರಕಟಣೆ

ವಿಷಯ: PPPಮೋಡ್‌ನಲ್ಲಿ ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿರುವ ಸರ್ಕಾರಿ ಅಕ್ವೇರಿಯಂನ ನವೀಕರಣ, ಆಧುನೀಕರಣ, ಕಾರ್ಯಾಚರಣೆಗಳು ಮತ್ತು ನಿರ್ವಹಣೆಯನ್ನು ಕೈಗೊಳ್ಳಲು ಸಂಸ್ಥೆಯ ಆಯ್ಕೆಗಾಗಿ ಟೆಂಡರ್ (NIT) ಆಹ್ವಾನಿಸುವ ಸೂಚನೆ.

ಕರ್ನಾಟಕ ಸರ್ಕಾರದ ಮೀನುಗಾರಿಕೆ ಇಲಾಖೆಯ ಅಧೀನದಲ್ಲಿ ಬರುವ ಸರ್ಕಾರಿ ಮತ್ಸ್ಯಾಲಯ, ಕಬ್ಬನ್ ಪಾರ್ಕ್, ಬೆಂಗಳೂರು ಅನ್ನು PPP ಮೋಡ್‌ನಲ್ಲಿ ನವೀಕರಣ, ಆಧುನೀಕರಣ, ಕಾರ್ಯಾಚರಣೆಗಳು ಮತ್ತು ನಿರ್ವಹಣೆಯನ್ನು ಕೈಗೊಳ್ಳಲು ಸಂಸ್ಥೆಯ ಆಯ್ಕೆಗಾಗಿ ಟೆಂಡರ್ (NIT) ಆಹ್ವಾನಿಸುವ ಸೂಚನೆಯನ್ನು ದ್ವಿ ಲಕೋಟೆ (TWO COVERS SYSTEM) ಪದ್ಧತಿಯಲ್ಲಿ ಇ–ಟೆಂಡರ್(Tender number:KFDC/2022-23/BD/WORK_INENT 5, e-Procurement Portal ಮುಖಾಂತರ) ಕರೆಯಲಾಗಿದೆ. **ಟೆಂಡರ್ ವಿವರಗಳು ಕಛೇರಿ:** ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು. ಇ.ಎಂ.ಡಿ **ಮೊತ್ತ: ರೂ.2.00 ಲಕ್ಷಗಳನ್ನು** (ಇ.ಎಂ.ಡಿ ಮೊತ್ತವನ್ನು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ರವರ ಹೆಸರಿಗೆ onlineನಲ್ಲಿ ಜಮಾ ಮಾಡುವುದು)

ಸೂಚನೆ: ಹೆಚ್ಚಿನ ಮಾಹಿತಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು.

(1) ಇ–ಟೆಂಡರ್ (e-Procurement) ಗೆ ಸಂಬಂಧಿಸಿದ ದಾಖಲೆಗಳನ್ನು ಅಂತರ್ಜಾಲಕ್ಕೆ ರವಾನಿಸಲು (Upload ಮಾಡಲು) ಕೊನೆಯ **ದಿನಾಂಕ: 16.05.2022 ಸಮಯ: 03.00 PM.** (2) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ ಮತ್ತು ವೇಳೆ (ಇ–ಪೋರ್ಟಲ್‌ನಲ್ಲಿ) **ದಿನಾಂಕ:18.05.2022 ಸಮಯ 12.00 PM ಗಂಟೆಗೆ** (3) ಆರ್ಥಿಕ ಲಕೋಟೆಯನ್ನು ತೆರೆಯುವ ದಿನಾಂಕ ಮತ್ತು ವೇಳೆ ತಾಂತ್ರಿಕ ಅನುಮೋದನೆಯಾದ ನಂತರ.

ವಾಸಾಸಂಇ/ವಾ.ಪ್ರ/253/ಶಿರಡಿ ಸಾಯಿ/2022–23

ಸಹಿ/–
ಮೀನುಗಾರಿಕೆ ನಿರ್ದೇಶಕರು

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ

ಆಡಳಿತ ಕಛೇರಿ: ನಂ.113, ಆರ್.ವಿ. ರಸ್ತೆ, ವಿ.ವಿ. ಪುರಂ, ಬೆಂಗಳೂರು – 560 004.
ದೂರವಾಣಿ: 080–26601152/153; 080–25401160/161
(Marathahalli Branch RBI License No: UBD.BG.BL.610, Dated 18.10.2012)
Website: www.sreenidhibank.com e-mail: sssbn3mrh@sreenidhibank.com

ಮಾರತ್ತಹಳ್ಳಿ ಶಾಖೆಯನ್ನು ಸ್ಥಳಾಂತರಿಸುವ ಕುರಿತು ನೋಟೀಸು

ಮಾನ್ಯ ಸದಸ್ಯರೇ ಮತ್ತು ಗ್ರಾಹಕರೇ,

ನಮ್ಮ ಬ್ಯಾಂಕಿನ ಮಾರತ್ತಹಳ್ಳಿ ಶಾಖೆಯನ್ನು ಸ್ಥಳಾಂತರಿಸಲು ಬ್ಯಾಂಕಿನ ಆಡಳಿತ ಮಂಡಳಿಯು ನಿರ್ಣಯ ತೆಗೆದುಕೊಂಡು ಇದಕ್ಕೆ ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿಯನ್ನು ಪಡೆಯಲಾಗಿದೆ. ಅದರಂತೆ "ನಂ.23, ಸರ್ವೀಸ್ ರಸ್ತೆ, ಔಟರ್ ರಿಂಗ್‌ರಸ್ತೆ, ಆನಂದ ನಗರ, ಮಾರತ್ತಹಳ್ಳಿ, ಬೆಂಗಳೂರು–560037" ಇಲ್ಲಿರುವ ಮಾರತ್ತಹಳ್ಳಿ ಶಾಖೆಯನ್ನು ಹತ್ತಿರದಲ್ಲಿರುವ "**ಮುನಿಸಿಪಲ್ ನಂ.95/3–474, ಮೊದಲನೇ ಮಹಡಿ, ಕೋಟೆ ಎನ್.ಸಿ.ಪಿ.ಆರ್ ಟವರ್ಸ್ ಬಿಲ್ಡಿಂಗ್, ಔಟರ್ ರಿಂಗ್ ರಸ್ತೆ, ಜೀವಿಕಾ ಆಸ್ಪತ್ರೆ ಎದುರು, ದೊಡ್ಡನೆಕ್ಕುಂದಿ, ಬೆಂಗಳೂರು–560037**" ಇಲ್ಲಿಗೆ ಸ್ಥಳಾಂತರಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ಸ್ಥಳಾಂತರಿತ ಶಾಖೆಯ ಪ್ರಾರಂಭದ ಉದ್ಘಾಟನೆಯನ್ನು **ದಿನಾಂಕ 24/04/2022 ರಂದು ಭಾನುವಾರ ಬೆಳಿಗ್ಗೆ 10:00 ಗಂಟೆಗೆ** ನಡೆಸಲು ತೀರ್ಮಾನಿಸಲಾಗಿದೆ. ಆದ್ದರಿಂದ ಮಾನ್ಯ ಸದಸ್ಯರು ಮತ್ತು ಗ್ರಾಹಕರಿಗೆ ಈಗಾಗಲೇ ಶಾಖೆಯ ಸ್ಥಳಾಂತರದ ಕುರಿತು ಸೂಚನಾ ಪತ್ರವನ್ನು ಮುಂಚಿತವಾಗಿ ಅಂಚೆಯ ಮುಖಾಂತರ ಕಳುಹಿಸಲಾಗಿದ್ದು, ಪತ್ರ ತಲುಪದ ಸದಸ್ಯರು ಮತ್ತು ಗ್ರಾಹಕರು ಈ ಪ್ರಕಟಣೆಯನ್ನೇ ಅಧಿಕೃತ ಸೂಚನೆ ಎಂದು ಪರಿಗಣಿಸಿ ಶಾಖೆಯ ಪ್ರಾರಂಭೋತ್ಸವದಲ್ಲಿ ಪಾಲ್ಗೊಳ್ಳಲು ಹಾಗೂ ಸದರಿ ಶಾಖೆಯಲ್ಲಿ ತಮ್ಮ ಎಲ್ಲಾ ವ್ಯವಹಾರಗಳನ್ನು ಮುಂದುವರೆಸಿ, ಬ್ಯಾಂಕಿನ ಅಭಿವೃದ್ಧಿಗೆ ಸಹಕರಿಸಲು ಮನವಿ.

ಮಾನ್ಯ ಸದಸ್ಯರು ಮತ್ತು ಗ್ರಾಹಕರ ದೈನಂದಿನ ವ್ಯವಹಾರಗಳಿಗೆ ಅಡಚಣೆಯಾಗದಂತೆ ಶಾಖೆಯ ಸ್ಥಳಾಂತರ ಪ್ರಕ್ರಿಯೆಯನ್ನು ನಡೆಸಲಾಗಿದ್ದು, ಸ್ಥಳಾಂತರಿತ ಶಾಖೆಯಲ್ಲಿ ದಿನಾಂಕ 25/04/2022 ರಿಂದಲೇ ಎಂದಿನಂತೆ ಕೋರ್ ಬ್ಯಾಂಕಿಂಗ್, ಲಾಕರ್, ಇ–ಸ್ಟಾಂಪಿಂಗ್, ಹಣ ವರ್ಗಾವಣೆ, ಡಿ.ಡಿ/ಪೇಆರ್ಡರ್ ಸೌಲಭ್ಯ ಮತ್ತಿತರ ಎಲ್ಲಾ ಸೇವೆಗಳನ್ನು ಒದಗಿಸಲು ವ್ಯವಸ್ಥೆ ಮಾಡಲಾಗಿದೆ.

ನಿರ್ದೇಶಕ ಮಂಡಳಿ ಮತ್ತು ಸಿಬ್ಬಂದಿ ವರ್ಗದ ಪರವಾಗಿ

ಸಹಿ/– (ಸದಾಶಿವ ರೆಡ್ಡಿ) ಅಧ್ಯಕ್ಷರು
ದಿನಾಂಕ: 23/04/2022

ಸಹಿ/– (ಎಲ್.ಬಾಬು ರೆಡ್ಡಿ) ಪ್ರಧಾನ ವ್ಯವಸ್ಥಾಪಕರು
ಸ್ಥಳ: ಬೆಂಗಳೂರು

ಸರಕು–ಸರಂಜಾಮುಗಳೊಂದಿಗೆ ಮಹಿಳೆಯರು, ಮಕ್ಕಳು, ಗರ್ಭಿಣಿಯರು ಕಣ್ಣೀರು • ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಎಎಪಿ ಮುಖಂಡರು

ಉತ್ತರಹಳ್ಳಿ: ಕೊಳೆಗೇರಿ ನಿವಾಸಿಗಳು ಬೀದಿಪಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿದ್ರೆಯಿಂದ ಎಚ್ಚರಗೊಳ್ಳುವಷ್ಟರಲ್ಲಿ ಮನೆಗಳ ಮುಂದೆ ಪೊಲೀಸರ ದಂಡು ನೆರೆದಿತ್ತು. ಅವರ ನೆರವಿನಲ್ಲಿ ಮನೆಗಳಿಗೆ ನುಗ್ಗಿದ ಅಧಿಕಾರಿಗಳು ಸರಕು- ಸರಂಜಾಮು, ಪಾತ್ರೆ-ಪಗಡೆ ಸಮೇತ ನಿವಾಸಿಗಳನ್ನು ಹೊರದಬ್ಬಿದರು. ಏನಾಗುತ್ತಿದೆ ಎಂದು ಗೊತ್ತಾಗುವಷ್ಟರಲ್ಲಿ ಬಾಗಿಲಿಗೆ ಬೀಗ ಬಿದ್ದಿತ್ತು. ಕೆಲವೇ ಕ್ಷಣಗಳಲ್ಲಿ ನಿವಾಸಿಗಳು ನಿರಾಶ್ರಿತರಾಗಿ ಬೀದಿಯಲ್ಲಿ ನಿಂತಿದ್ದರು.

ಇದೆಲ್ಲವೂ ನಡೆದಿದ್ದು ಉತ್ತರಹಳ್ಳಿ ಭುವನೇಶ್ವರಿನಗರದಲ್ಲಿ. ಕೊಳಗೇರಿ ಅಭಿವೃದ್ಧಿ ಮಂಡಳಿ ನಿರ್ಮಿಸಿರುವ ಮನೆಗಳಲ್ಲಿ ವಾಸವಿದ್ದ ನಿವಾಸಿಗಳ ಪಾಲಿಗೆ ಶುಕ್ರವಾರ ಕರಾಳವಾಗಿ ಕಾಡಿತು.

400ಕ್ಕೂ ಹೆಚ್ಚು ಪೊಲೀಸರೊಂದಿಗೆ ಬಂದ ಅಧಿಕಾರಿಗಳು, ಮನೆಗಳ ಸರಕು ಹೊರಹಾಕಲು 100ಕ್ಕೂ ಹೆಚ್ಚು ಕಾರ್ಮಿಕರನ್ನೂ ಜೊತೆಯಲ್ಲಿ ಕರೆ ತಂದಿದ್ದರು. ಏಕ ಕಾಲದಲ್ಲಿ ಕಾರ್ಯಾಚರಣೆ ಆರಂಭಿಸಿ ಕೆಲವೇ ಹೊತ್ತಿನಲ್ಲಿ 300ಕ್ಕೂ ಹೆಚ್ಚು ಕುಟುಂಬಗಳನ್ನು ಬೀದಿಗೆ ತಳ್ಳಲಾಯಿತು.

ಕೂಲಿ ಅರಸಿ ಹೋಗುವ ಪುರುಷರು ಮತ್ತು ಮನೆಗೆಲಸಕ್ಕೆ ಹೋಗುವ ಮಹಿಳೆಯರು ಬೆಳಗಿನ ಜಾವವೇ ಮನೆಯಿಂದ ಹೊರಟು ಹೋಗಿದ್ದರು. ಕೆಲವು ಮನೆಗಳಲ್ಲಿ ಗರ್ಭಿಣಿಯರು ಮತ್ತು ಮಕ್ಕಳು ಮಾತ್ರ ಇದ್ದರು. ಮನೆಯಿಂದ ಹೊರ ಹಾಕದಂತೆ ಗೋಗರೆದರೂ ಕನಿಕರ ತೋರದೆ ಅಧಿಕಾರಿಗಳು ಕೇಳಿಸಿಕೊಳ್ಳಲಿಲ್ಲ. ಬಿಸಾಡಿದ್ದ ಸರಕುಗಳ ಮುಂದೆ ಕುಳಿತ ಮಕ್ಕಳು, ಗರ್ಭಿಯರು ಕಣ್ಣೀರಿಟ್ಟರು.

ನಿವಾಸಿಗಳ ಪರ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುವ ವಕೀಲ ಮಂಜುನಾಥಸ್ವಾಮಿ ಮತ್ತು ಆಮ್ ಆದ್ಮಿ ಪಕ್ಷದ (ಎಎಪಿ) ಮುಖಂಡರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. 'ನಿವಾಸಿಗಳಿಗೆ ನೋಟಿಸ್ ನೀಡದೆ, ಪರ್ಯಾಯ ವ್ಯವಸ್ಥೆಯನ್ನೂ ಮಾಡದೆ ಬೀದಿಗೆ ತಳ್ಳುವುದು ಸರಿಯಲ್ಲ. ಕಾರ್ಯಾಚರಣೆಯನ್ನು ಕೂಡಲೇ ನಿಲ್ಲಿಸಬೇಕು' ಎಂದು ಎಎಪಿ ಮುಖಂಡ ಭಾಸ್ಕರ ರಾವ್ ಆಕ್ರೋಶ ವ್ಯಕ್ತಪಡಿಸಿದರು.

ಉತ್ತರಹಳ್ಳಿ ಭುವನೇಶ್ವರಿನಗರದಲ್ಲಿ ಮನೆಗಳಿಂದ ಹೊರ ಹಾಕಿದ ಸರಕು–ಸರಂಜಾಮುಗಳ ಜೊತೆಯಲ್ಲಿ ನಿವಾಸಿಗಳು (ಎಡಚಿತ್ರ) ಪೊಲೀಸ್ ಅಧಿಕಾರಿಗಳ ಜತೆ ವಾಗ್ವಾದ ನಡೆಸುತ್ತಿರುವ ಎಎಪಿ ಮುಖಂಡ ಭಾಸ್ಕರ ರಾವ್ – ಪ್ರಜಾವಾಣಿ ಚಿತ್ರಗಳು/ ರಂಜು ಪಿ.

ಪ್ರತಿಭಟನೆ: ಮತ್ತೆ ಮನೆ ಸೇರಿದ ನಿವಾಸಿಗಳು

ದಿಢೀರ್ ಕಾರ್ಯಾಚರಣೆ ಖಂಡಿಸಿ ಎಎಪಿ ನೇತೃತ್ವದಲ್ಲಿ ನಿವಾಸಿಗಳು ಸ್ಥಳದಲ್ಲೇ ಪ್ರತಿಭಟನೆ ನಡೆಸಿದರು.

ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ ಮತ್ತು ಸಂಸದ ಡಿ.ಕೆ. ಸುರೇಶ್ ವಿರುದ್ಧ ಫಲಕಗಳನ್ನು ಪ್ರದರ್ಶಿಸಿದರು. 'ಸ್ಥಳೀಯ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಸೇರಿ ಬಡವರನ್ನು ಬೀದಿಪಾಲು ಮಾಡಲು ಮುಂದಾಗಿದ್ದಾರೆ. ಬೇರೆಡೆ ವಾಸ ಇದ್ದವರನ್ನು ಕರೆಸಿ ₹2 ಲಕ್ಷದಿಂದ ₹3 ಲಕ್ಷದ ತನಕ ಲಂಚ ಪಡೆದು ಮನೆಗಳನ್ನು ಮಂಜೂರು ಮಾಡುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಸರ್ಕಾರ ಅಥವಾ ನ್ಯಾಯಾಲಯದ ಆದೇಶ ಇಲ್ಲದೆ ಮನೆ ಖಾಲಿ ಮಾಡಿಸಲಾಗುತ್ತಿದೆ. ಬಡವರ ಮೇಲೆ ಬುಲ್ಡೋಜರ್ ನುಗ್ಗಿಸಲು ಕರ್ನಾಟಕದಲ್ಲಿ ಅವಕಾಶ ನೀಡುವುದಿಲ್ಲ. ಅಧಿಕಾರಿಗಳು ಹಾಕಿರುವ ಬೀಗ ಒಡೆದು ತಮ್ಮ ಮನೆಗಳಿಗೆ ವಾಪಸ್ ಹೋಗಿ. ಯಾರ ಬೆದರಿಕೆಗೂ ಹೆದರಬೇಡಿ' ಎಂದು ನಿವಾಸಿಗಳಿಗೆ ಭಾಸ್ಕರ ರಾವ್ ಅಭಯ ನೀಡಿದರು. ಬಳಿಕ ನಿವಾಸಿಗಳು ಮನೆಗಳಿಗೆ ಮರಳಿದರು.

ಮನೆಯಿಂದ ಹೊರ ಹಾಕಿದ ಕೊಳಗೇರಿ ಅಭಿವೃದ್ಧಿ ಮಂಡಳಿ ಅಧಿಕಾರಿಗಳು ಮತ್ತು ಪೊಲೀಸರ ವಿರುದ್ಧ ಎಎಪಿ ನೇತೃತ್ವದಲ್ಲಿ ನಿವಾಸಿಗಳು ಪ್ರತಿಭಟನೆ ನಡೆಸಿದರು

ಕಾರ್ಯಾಚರಣೆ ವಿರುದ್ಧ ಕಾನೂನು ಸಮರ

'ಕಾನೂನು ಬಾಹಿರವಾಗಿ ಕಾರ್ಯಾಚರಣೆ ನಡೆಸಿ ಬಡವರ ಮನೆಯ ಸರಕುಗಳನ್ನು ಅಧಿಕಾರಿಗಳು ಹಾನಿ ಮಾಡಿದ್ದಾರೆ. ಈ ಹಾನಿಗೆ ಪರಿಹಾರ ಕೋರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಲಾಗುವುದು' ಎಂದು ನಿವಾಸಿಗಳ ಪರ ಹೋರಾಟ ನಡೆಸುತ್ತಿರುವ ವಕೀಲ ಮಂಜುನಾಥಸ್ವಾಮಿ ತಿಳಿಸಿದರು.

'ನಾಲ್ಕು ವರ್ಷಗಳಿಂದ ಹಕ್ಕುಪತ್ರ ನೀಡದೆ ಸತಾಯಿಸುತ್ತಿರುವ ಕೊಳೆಗೇರಿ ಮಂಡಳಿಯ ಕ್ರಮವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದೇವೆ. ವಿಚಾರಣೆ ನಡೆಯುತ್ತಿರುವಾಗಲೇ ಅಧಿಕಾರಿಗಳು ತೆರವು ಕಾರ್ಯಾಚರಣೆ ಆರಂಭಿಸಿದ್ದಾರೆ' ಎಂದು ದೂರಿದರು.

ವಿವಾದ ಏನು?

ಕೊಳೆಗೇರಿ ಅಭಿವೃದ್ಧಿ ಮಂಡಳಿಯಿಂದ ಮನೆ ಕಟ್ಟಿಕೊಡುವ ಪ್ರಕ್ರಿಯೆ 2011ರಿಂದ ಆರಂಭವಾಗಿದೆ. ಗುಡಿಸಲು, ಶೆಡ್‌ಗಳನ್ನು ನಿರ್ಮಿಸಿಕೊಂಡು ವಾಸವಿದ್ದ ಜನರನ್ನು ಬೇರೆಡೆ ಸ್ಥಳಾಂತರಿಸಿ ಅದೇ ಜಾಗದಲ್ಲಿ ನಾಲ್ಕು ಮತ್ತು ಐದು ಅಂತಸ್ತುಗಳ 47 ಕಟ್ಟಡಗಳನ್ನು ನಿರ್ಮಿಸಲಾಗಿದ್ದು, ಇದರಲ್ಲಿ ಒಟ್ಟು 880 ಮನೆಗಳಿವೆ.

'ಇವುಗಳಲ್ಲಿ 549 ಕುಟುಂಬಗಳಿಗೆ ಹಕ್ಕುಪತ್ರ ನೀಡಲಾಗಿದ್ದು, ಉಳಿದ ಖಾಲಿ ಮನೆಗಳಿಗೆ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಮನೆಗಳನ್ನು ಕಟ್ಟುವುದಕ್ಕೂ ಮುಂಚಿನಿಂದ ಇಲ್ಲೇ ವಾಸ ಇರುವ ಕುಟುಂಬಗಳನ್ನು ಬಿಟ್ಟು ಹೊರಗಿನವರನ್ನು ಆಯ್ಕೆ ಮಾಡಲಾಗಿದೆ. ನಮ್ಮನ್ನು ಅಕ್ರಮ ವಲಸಿಗರೆಂದು ಹೊರ ದಬ್ಬಲಾಗುತ್ತಿದೆ' ಎಂಬುದು ನಿವಾಸಿಗಳ ಆರೋಪ.

'ಅಕ್ರಮವಾಗಿ ವಾಸವಿದ್ದವರ ತೆರವು'

'ಮನೆಗಳಲ್ಲಿ ಅಕ್ರಮವಾಗಿ ನೆಲೆಸಿದ್ದವರನ್ನು ಮಾತ್ರ ಖಾಲಿ ಮಾಡಿಸಲಾಗಿದೆ' ಎಂದು ಕೊಳಗೇರಿ ಅಭಿವೃದ್ಧಿ ಮಂಡಳಿಯ ಯೋಜನಾ ನಿರ್ದೇಶಕ ಎನ್.ಪಿ. ಬಾಲರಾಜ್ ತಿಳಿಸಿದರು.

'ಬಹುಮಹಡಿ ಕಟ್ಟಡಗಳನ್ನು ನಿರ್ಮಿಸುವುದಕ್ಕೆ ಮೊದಲು ಈ ಜಾಗದಲ್ಲಿ ನಿವಾಸಿಗಳು ಗುಡಿಸಲು ಮತ್ತು ಶೆಡ್‌ಗಳಲ್ಲಿ ವಾಸವಿದ್ದರು. ಅವರ ಪಟ್ಟಿ ಸಿದ್ಧಪಡಿಸಿಕೊಂಡು ಅದೇ ಜಾಗದಲ್ಲಿ ಕಟ್ಟಡ ನಿರ್ಮಿಸಲಾಗಿದೆ. ಆ ಪಟ್ಟಿಯಲ್ಲಿದ್ದ 549 ಕುಟುಂಬಗಳಿಗೆ ಮನೆಗಳನ್ನು ಒದಗಿಸಲಾಗಿದೆ' ಎಂದು ಸ್ಪಷ್ಟಪಡಿಸಿದರು.

'ಪಕ್ಕದಲ್ಲೇ ಇರುವ ಆಶ್ರಯ ಕಾಲೊನಿಯಲ್ಲಿ 331 ಕುಟುಂಬಗಳು ನೆಲೆಸಿದ್ದು, ಇಲ್ಲಿರುವ ಉಳಿಕೆ ಮನೆಗಳನ್ನು ಅವರಿಗೆ ಹಂಚುವ ಉದ್ದೇಶ ಇತ್ತು. ಆದರೆ, ಆ ನಿವಾಸಿಗಳು ಈ ಕಟ್ಟಡಗಳಿಗೆ ಬರಲು ಒಪ್ಪಲಿಲ್ಲ. ಆದ್ದರಿಂದ ಮನೆ ಕೋರಿ ಅರ್ಜಿ ಸಲ್ಲಿಸಿದ್ದ ಇದೇ ವಾರ್ಡಿನ ಬೇರೆ ಬಡ ಕುಟುಂಬಗಳಿಗೆ 331 ಮನೆ ಹಂಚಿಕೆ ಮಾಡಲು ಮಂಡಳಿ ನಿರ್ಧರಿಸಿದೆ' ಎಂದು ಹೇಳಿದರು.

'ಮನೆ ನಿರ್ಮಿಸುವ ಮುನ್ನ 549 ಕುಟುಂಬಗಳಿದ್ದವು. ಆಗ ಮಕ್ಕಳಿದ್ದವರು ದೊಡ್ಡವರಾಗಿ ಪ್ರತ್ಯೇಕ ವಾಸ ಮಾಡುತ್ತಿದ್ದಾರೆ. ಅಂತವರು ಬಾಕಿ ಮನೆಗಳಲ್ಲಿ ಅನಧಿಕೃತ ಸೇರಿದ್ದಾರೆ. ಅವರನ್ನಷ್ಟೇ ಕಳುಹಿಸಲಾಗುತ್ತಿದೆ. ಬೀಗ ಒಡೆದು ಮತ್ತೆ ಒಳ ಹೋದರೆ ಕಾನೂನು ಕ್ರಮ ಎದುರಿಸುತ್ತಾರೆ' ಎಂದು ಅವರು ಸ್ಪಷ್ಟಪಡಿಸಿದರು.

'ಮನೆ ಖಾಲಿ ಮಾಡಿಸಿಕೊಡಿ'

'ವಾಸ ಇರುವವರು ನಮ್ಮನ್ನು ಇಲ್ಲೇ ಉಳಿಸಿ' ಎಂದು ಹೋರಾಟ ನಡೆಸುತ್ತಿದ್ದರೆ, ಆಯ್ಕೆ ಪಟ್ಟಿಯಲ್ಲಿ ಇರುವವರು 'ಮನೆ ಖಾಲಿ ಮಾಡಿಸಿಕೊಡಿ' ಎಂದು ಅಧಿಕಾರಿಗಳ ದುಂಬಾಲು ಬಿದ್ದಿದ್ದರು.

'ಮಂಡಳಿಗೆ ಹಣ ಪಾವತಿಸಿ 4 ವರ್ಷಗಳಿಂದ ಕಾಯುತ್ತಿದ್ದೇವೆ. ಮನೆಸಂಖ್ಯೆಯನ್ನೂ ನೀಡಿದ್ದಾರೆ. ಇಲ್ಲಿ ನೋಡಿದರೆ ಬೇರೆಯವರು ವಾಸವಿದ್ದಾರೆ. ಹಣವೂ ಇಲ್ಲ, ಮನೆಯೂ ಇಲ್ಲದಂತಾಗಿದೆ. ನಮಗೆ ಕೂಡಲೇ ಮನೆ ಬಿಡಿಸಿಕೊಡಿ' ಎಂದು ಅವರು ಕೋರಿದರು.

ನಗರಾಭಿವೃದ್ಧಿ ಇಲಾಖೆ ಉಪಕಾರ್ಯದರ್ಶಿ ಅಮಾನತು

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ನಗರಾಭಿವೃದ್ಧಿ ಇಲಾಖೆಯ ಉಪಕಾರ್ಯದರ್ಶಿ-3 ಆಗಿರುವ ಕೆಎಎಸ್ ಹಿರಿಯ ಶ್ರೇಣಿ ಅಧಿಕಾರಿ ಎಲಿಷ ಆ್ಯಂಡ್ರೂಸ್ ಅವರನ್ನು ರಾಜ್ಯ ಸರ್ಕಾರ ಗುರುವಾರ ಅಮಾನತು ಮಾಡಿದೆ.

ಕಡತ ವಿಲೇವಾರಿ ವೇಳೆ ವಿಳಂಬ ಧೋರಣೆ ಅನುಸರಿಸಿದ ಹಾಗೂ ಸರ್ಕಾರಿ ನೌಕರರ ತರವಲ್ಲದ ವರ್ತನೆ ತೋರಿದ ಆರೋಪವನ್ನು ಅವರು ಎದುರಿಸುತ್ತಿದ್ದರು. ಎಲಿಷ ಅವರು ಕೆಎಎಸ್ ಅಧಿಕಾರಿಗಳ ಸಂಘದ ಅಧ್ಯಕ್ಷರೂ ಆಗಿದ್ದಾರೆ.

ಎಲಿಷ ಆ್ಯಂಡ್ರೂಸ್

'ಕಡತಗಳನ್ನು ನಿಗದಿತ ಕಾಲಮಿತಿಯೊಳಗೆ ವಿಲೇವಾರಿ ಮಾಡುವಂತೆ ಸತತವಾಗಿ ನಿರ್ದೇಶನ ನೀಡಿದ್ದರೂ ಎಲಿಷ ಅವರು ನಿರ್ಲಕ್ಷಿಸಿದ್ದಾರೆ. 1966ರ ಕರ್ನಾಟಕ ನಾಗರಿಕ ಸೇವೆ (ನಡತೆ) ನಿಯಮ 3 (1) ಅನ್ನು ಉಲ್ಲಂಘಿಸಿ ಕರ್ತವ್ಯಲೋಪ ಎಸಗಿದ್ದಾರೆ. ಅವರನ್ನು ಅಮಾನತು ಮಾಡಿ, ಇಲಾಖಾ ವಿಚಾರಣೆ ಆರಂಭಿಬೇಕು' ಎಂದು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರು ಇತ್ತೀಚೆಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಕಾರ್ಯದರ್ಶಿಗೆ ಪತ್ರ ಬರೆದಿದ್ದರು.

'ಬಿಬಿಎಂಪಿ ಎಂಜಿನಿಯರ್‌ಗಳ ಬಡ್ತಿಗೆ ಮುಖ್ಯಮಂತ್ರಿ ಹೆಸರಿನಲ್ಲೇ ₹4.50 ಕೋಟಿ ಲಂಚ ಪಡೆಯಲಾಗಿದೆ. ಇದರಲ್ಲಿ ನಗರಾಭಿವೃದ್ಧಿ ಇಲಾಖೆಯ ಕೆಲವು ಅಧಿಕಾರಿಗಳು ಭಾಗಿಯಾಗಿದ್ದಾರೆ' ಎಂದು ಆರೋಪಿಸಿ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷವು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಇತ್ತೀಚೆಗೆ ದೂರು ನೀಡಿತ್ತು.

'ಎಂಜಿನಿಯರ್‌ಗಳ ಬಡ್ತಿಗೆ ₹4.5 ಕೋಟಿ ಲಂಚ; ಸಿ.ಎಂ.ಗೆ ದೂರು' ಎಂಬ ಶೀರ್ಷಿಕೆಯಲ್ಲಿ 'ಪ್ರಜಾವಾಣಿ'ಯ 2022ರ ಮಾರ್ಚ್ 30ರ ಸಂಚಿಕೆಯಲ್ಲಿ ಪ್ರಕಟವಾದ ವಿಶೇಷ ವರದಿಯನ್ನೂ ಪತ್ರದ ಜೊತೆಗೆ ರಾಕೇಶ್ ಸಿಂಗ್ ಲಗತ್ತಿಸಿದ್ದರು. ಇಲಾಖಾ ವಿಚಾರಣೆ ಬಾಕಿ ಇಟ್ಟು ಎಲಿಷ ಅವರನ್ನು ಅಮಾನತು ಮಾಡಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

'ಎಲ್ಲಾ ಕಾಯಿಲೆಗಳಿಗೂ ಖಾಸಗೀಕರಣ ಮದ್ದಲ್ಲ'

ಬೆಂಗಳೂರು: 'ದೇಶ ಎದುರಿಸುತ್ತಿರುವ ಎಲ್ಲಾ ಕಾಯಿಲೆಗಳಿಗೂ (ಸಮಸ್ಯೆ) ಖಾಸಗೀಕರಣವೇ ಮದ್ದಲ್ಲ. ಖಾಸಗಿ ಸಂಸ್ಥೆಯವರು ನಮ್ಮ ಬೀದಿಗಳನ್ನು ಸ್ವಚ್ಛಗೊಳಿಸುವುದಿಲ್ಲ. ಪೊಲೀಸ್ ಇಲಾಖೆಯಂತೆ ನಮಗೆ ಭದ್ರತೆ ಒದಗಿಸುವುದಿಲ್ಲ' ಎಂದು ಸಾರ್ವಜನಿಕ ವಲಯದ ತಜ್ಞ ವಿಕ್ರಂ ಕೆ.ಚಂದ್ ತಿಳಿಸಿದರು. ಬೆಂಗಳೂರು ರಾಜಕೀಯ ಕ್ರಿಯಾ ಸಮಿತಿಯು (ಬಿ.ಪ್ಯಾಕ್) ಲ್ಯಾಂಗ್‌ಫೋರ್ಡ್ ರಸ್ತೆಯಲ್ಲಿರುವ ಸೇಂಟ್ ಜೋಸೆಫ್ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಸಹಯೋಗದಲ್ಲಿ 'ಸಾರ್ವಜನಿಕರೆಡೆಗೆ ಸರ್ಕಾರಿ ಸೇವೆಗಳನ್ನು ಸಮರ್ಪಕವಾಗಿ ಕೊಂಡೊಯ್ಯುವ ವಿಧಾನಗಳು' ಕುರಿತ ಸಂವಾದದಲ್ಲಿ ಮಾತನಾಡಿದರು.

ಶ್ರೀ ಕಣ್ವ ಮಠ ಆಡಳಿತ ಮಂಡಳಿ ಟ್ರಸ್ಟ್, ಭಾರತೀಯ ರೆಡ್ ಕ್ರಾಸ್ ಸೊಸೈಟಿ ಮತ್ತು ಜಯದೇವ ಹೃದ್ರೋಗ ಸಂಸ್ಥೆಯ ರಕ್ತ ನಿಧಿ ವಿಭಾಗದ ಸಹಯೋಗದಲ್ಲಿ ವಿದ್ಯಾ ತಪೋನಿಧಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ 'ಕೋವಿಡ್–19 ಸಾಂದರ್ಭಿಕ ರಕ್ತದಾನ ಶಿಬಿರ'ದಲ್ಲಿ ಹಲವರು ಸ್ವಯಂಪ್ರೇರಿತವಾಗಿ ಶುಕ್ರವಾರ ರಕ್ತದಾನ ಮಾಡಿದರು. ಹೃದ್ರೋಗ ತಜ್ಞ ಡಾ.ಕೆ.ಎಸ್.ರವೀಂದ್ರನಾಥ್, ರಕ್ತಶಾಸ್ತ್ರಜ್ಞೆ ಡಾ.ಉಮಾದೇವಿ, ಚರ್ಮರೋಗ ತಜ್ಞ ಡಾ.ಮಹದೇಶ್ ಹಾಗೂ ಮಠದ ಆಡಳಿತ ಮಂಡಳಿ ಸದಸ್ಯರು ಇದ್ದರು. ಶಿಬಿರದಲ್ಲಿ ಒಟ್ಟು 166 ಬಾಟಲಿ ರಕ್ತ ಸಂಗ್ರಹಿಸಲಾಯಿತು.

ಎಂ.ಎಸ್.ರಾಮಯ್ಯ ಸ್ಮರಣಾರ್ಥ ಅಂಚೆ ಲಕೋಟೆ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ಮಯೋಗಿ ಎಂದೇ ಪ್ರಸಿದ್ಧರಾಗಿರುವ ಎಂ.ಎಸ್.ರಾಮಯ್ಯ ಅವರ ಪರಿಶ್ರಮದಿಂದ ಇಂದು ಶಿಕ್ಷಣ ಹೊಸ ರೂಪ ಪಡೆದುಕೊಂಡಿದೆ' ಎಂದು ಕರ್ನಾಟಕ ಅಂಚೆ ವಲಯದ ಪ್ರಧಾನ ಪೋಸ್ಟ್ ಮಾಸ್ಟರ್ ಜನರಲ್ ಎಸ್.ರಾಜೇಂದ್ರ ಕುಮಾರ್ ಹೇಳಿದರು.

ಎಂ.ಎಸ್.ರಾಮಯ್ಯ ಅವರ ಜನ್ಮ-ಶತಮಾನೋತ್ಸವದ ಅಂಗವಾಗಿ ಅಂಚೆ ಇಲಾಖೆ ಶುಕ್ರವಾರ ಆಯೋಜಿಸಿದ್ದ ಎಂ.ಎಸ್.ರಾಮಯ್ಯ ಅವರ ವಿಶೇಷ ಅಂಚೆ ಚೀಟಿ (ಸ್ಟಾಂಪ್) ಮತ್ತು ಲಕೋಟೆ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ರಾಮಯ್ಯ ಅವರು ದೇಶದಲ್ಲೇ ಕರ್ನಾಟಕವನ್ನು ಪ್ರತಿಬಿಂಬಿಸುವಂತಹ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸುವ ಮೂಲಕ ನಮ್ಮೆಲ್ಲರ ಹೆಮ್ಮೆಯನ್ನು ಹೆಚ್ಚಿಸಿದ್ದಾರೆ. ನವಕರ್ನಾಟಕ ನಿರ್ಮಾತೃಗಳ ಸಾಲಿನಲ್ಲಿ ಬರುವ ರಾಮಯ್ಯ ಅವರನ್ನು ಸದಾ ನೆನೆಯಬೇಕು. ಯಾವುದೇ ಕೆಲಸದ ಕುರಿತು ಅವರಿಗಿದ್ದ ಶ್ರದ್ಧೆಯನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು. ಇಂತಹ ವ್ಯಕ್ತಿಯ ಹೆಸರಿನಲ್ಲಿ ಅಂಚೆ ಲಕೋಟೆ ಹೊರತರುತ್ತಿರುವುದು ನಮ್ಮ ಹೆಮ್ಮೆ' ಎಂದರು.

ಗೋಕುಲ ಶಿಕ್ಷಣ ಪ್ರತಿಷ್ಠಾನದ ಉಪಾಧ್ಯಕ್ಷ ಎಂ.ಆರ್.ಸೀತಾರಾಂ, 'ತಂದೆ ರಾಮಯ್ಯ ಅವರು ದೇಶದ ಹಲವು ಅಣೆಕಟ್ಟು ಯೋಜನೆಗಳಲ್ಲಿ ಕೆಲಸ ಮಾಡಿದ್ದಾರೆ. ಅವರ ನೀರಾವರಿ ಯೋಜನೆಗಳಿಂದ ಸಾವಿರಾರು ರೈತರು ಇಂದಿಗೂ ಉಪಯೋಗ ಪಡೆದುಕೊಳ್ಳುತ್ತಿದ್ದಾರೆ' ಎಂದರು.

'ಕೈಗಾರಿಕಾ ಕ್ಷೇತ್ರದಿಂದ ಅವರು ಶಿಕ್ಷಣ ರಂಗಕ್ಕೆ ಧುಮುಕಿದರು. ರಾಮಯ್ಯ ಶಿಕ್ಷಣ ಸಂಸ್ಥೆಗಳು ಇಂದು ದೇಶದಾದ್ಯಂತ ಹೆಸರುವಾಸಿಯಾಗಿದ್ದು, ರಾಮಯ್ಯ ಅವರೇ ಇದಕ್ಕೆ ಮೂಲ ಕಾರಣಕರ್ತರು' ಎಂದು ಸ್ಮರಿಸಿದರು.

ಕಾರ್ಯಕ್ರಮದಲ್ಲಿ (ಎಡದಿಂದ ಎರಡನೆಯವರು) ಕರ್ನಾಟಕ ಅಂಚೆ ವಲಯದ ಪ್ರಧಾನ ಪೋಸ್ಟ್ ಮಾಸ್ಟರ್ ಜನರಲ್ ಎಸ್.ರಾಜೇಂದ್ರ ಕುಮಾರ್ ಅವರು ವಿಶೇಷ ಅಂಚೆ ಲಕೋಟೆ ಬಿಡುಗಡೆ ಮಾಡಿದರು. ಬೆಂಗಳೂರು ವಿಭಾಗದ ಪೋಸ್ಟ್ ಮಾಸ್ಟರ್ ಜನರಲ್ ಎಲ್.ಕೆ.ಡಾಶ್, ಗೋಕುಲ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಎಂ.ಆರ್. ಜಯರಾಂ ಹಾಗೂ ಉಪಾಧ್ಯಕ್ಷ ಎಂ.ಆರ್.ಸೀತಾರಾಂ ಇದ್ದಾರೆ –ಪ್ರಜಾವಾಣಿ ಚಿತ್ರ

ಜೆಸಿಬಿ ಅಡಿ ಸಿಲುಕಿದ್ದ ನಾಗರಹಾವು

ನಾಗರ ಹಾವಿನ ಸಂರಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಮಾಕ್ಯ ಚಿತ್ರಮಂದಿರ ಸಮೀಪ ನಿರ್ಮಾಣ ಕಾಮಗಾರಿ ಸಂದರ್ಭದಲ್ಲಿ ಜೆಸಿಬಿ ಅಡಿ ಸಿಲುಕಿದ್ದ ನಾಗರಹಾವನ್ನು ವನ್ಯಜೀವಿ ಸಂರಕ್ಷಕರು ರಕ್ಷಣೆ ಮಾಡಿದ್ದಾರೆ.

'ಕಾಮಾಕ್ಯ ಚಿತ್ರಮಂದಿರ ಸಮೀಪ ಜೆಸಿಬಿಯಿಂದ ನೆಲವನ್ನು ಸಮತಟ್ಟುಗೊಳಿಸುವಾಗ ನಾಗರಹಾವೊಂದು ಪ್ರತ್ಯಕ್ಷವಾಗಿರುವ ಬಗ್ಗೆ ಬುಧವಾರ ಕರೆ ಬಂದಿತ್ತು. ಬುಸುಗುಡುತ್ತಿದ್ದ ನಾಗರ ಹಾವು ಜೆಸಿಬಿ ಬಳಸಿ ಕೆಲಸ ಮುಂದುವರಿಸಲು ಅವಕಾಶ ನೀಡುತ್ತಿರಲಿಲ್ಲ. ಅದನ್ನು ಹಿಡಿದು ಸುರಕ್ಷಿತ ಆವಾಸ ಸ್ಥಾನದಲ್ಲಿ ಬಿಟ್ಟಿದ್ದೇವೆ. ಹಾವಿಗೆ ಯಾವುದೇ ಅಪಾಯ ಆಗಿಲ್ಲ' ಎಂದು ವನ್ಯಜೀವಿ ಕಾರ್ಯಕರ್ತ ವಲ್ಲೀಶ್ ಕೆ. ಕೌಶಿಕ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಈ ಪ್ರದೇಶದಲ್ಲಿ ಒತ್ತುವರಿ ತೆರವುಗೊಳಿಸಿ ಅಲ್ಲಿ ಉದ್ಯಾನ ನಿರ್ಮಿಸಲು ನೆಲವನ್ನು ಸಮತಟ್ಟುಗೊಳಿಸಲಾಗುತ್ತಿತ್ತು ಎಂದು ಅವರು ತಿಳಿಸಿದರು.

'ಆವಾಸ ಸ್ಥಾನಕ್ಕೆ ಧಕ್ಕೆ ಉಂಟಾಗುತ್ತಿರುವುದರಿಂದ ನಗರದಲ್ಲಿ ಹಾವಿನಂತಹ ಅನೇಕ ಸರಿಸೃಪಗಳು ನಾಶವಾಗುತ್ತಿವೆ. ನಗರದಲ್ಲಿ 28 ಪ್ರಭೇದಗಳ ಹಾವುಗಳು ಕಂಡುಬರುತ್ತವೆ. ಮನುಷ್ಯ ತನ್ನ ವಸತಿಗಾಗಿ ಅವುಗಳ ಆವಾಸ ಸ್ಥಾನವನ್ನು ಕಬಳಿಸುತ್ತಿದ್ದು, ಅವುಗಳಿಗೆ ನೆಲೆ ಇಲ್ಲದ ಸ್ಥಿತಿ ನಿರ್ಮಾಣವಾಗುತ್ತಿದೆ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಸಕಾಲದಲ್ಲಿ ಗುತ್ತಿಗೆ ಹಣ ಪಾವತಿಸಿ: ಹೈಕೋರ್ಟ್

ಒಂದನೇ ಪುಟದಿಂದ

'ಗುತ್ತಿಗೆ ಹಣ ಪಾವತಿಸುತ್ತಿಲ್ಲ ಎಂದು ಆಕ್ಷೇಪಿಸಿ ಗುತ್ತಿಗೆದಾರರು ನ್ಯಾಯಾಲಯದ ಮೆಟ್ಟಿಲೇರುತ್ತಿರುವ ಹಲವು ಪ್ರಕರಣಗಳು ಕೋರ್ಟ್ ಗಮನಕ್ಕೆ ಬಂದಿದೆ. ಇಂತಹ ಪ್ರಕರಣಗಳಲ್ಲಿ ಸರ್ಕಾರ ಮತ್ತು ಸರ್ಕಾರಿ ಸಂಸ್ಥೆಗಳು ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು. ಸಂವಿಧಾನದ ಹೊಣೆಗಾರಿಕೆ ನಿರ್ವಹಣೆಯಲ್ಲಿ ಸ್ಥಿರತೆ ಕಾಯ್ದುಕೊಳ್ಳಬೇಕು. ಗುತ್ತಿಗೆ ಹಣ ಪಾವತಿಸದೆ ಅಪ್ರಾಮಾಣಿಕತೆ ಮೆರೆಯಬಾರದು. ಸಾರ್ವಜನಿಕರ ತಪ್ಪು ಕಲ್ಪನೆಗೆ ಒಳಗಾಗಲು ಅವಕಾಶ ಮಾಡಿಕೊಡಬಾರದು' ಎಂದು ನ್ಯಾಯಪೀಠ ಹೇಳಿದೆ. 'ಗುತ್ತಿಗೆದಾರರು ಭಾರಿ ಮೊತ್ತದ ಹಣ ವ್ಯಯಿಸಿ ಕಾಮಗಾರಿ ಪೂರೈಸಿರುತ್ತಾರೆ. ಕೆಲವೊಮ್ಮೆ ಸಾಲ ಮಾಡಿಯೂ ಹಣ ಹೊಂದಿಸಿರುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಿ ಅದನ್ನು ದೃಢೀಕರಿಸಿದ ಪ್ರಮಾಣ ಪತ್ರ ನೀಡಿದ್ದರೂ ಹಣ ಬಿಡುಗಡೆಗೆ ವಿಳಂಬ ಮಾಡುವುದು ನ್ಯಾಯಸಮ್ಮತವಲ್ಲ. ಹಣಕ್ಕಾಗಿ ಗುತ್ತಿಗೆದಾರರು ಕೋರ್ಟ್ ಮೆಟ್ಟಿಲೇರಿ ಕಾನೂನು ಹೋರಾಟ ನಡೆಸುವ ಪರಿಸ್ಥಿತಿ ಸೃಷ್ಟಿಸಬಾರದು' ಎಂದು ನ್ಯಾಯಪೀಠ ಹೇಳಿದೆ.

ನಿರ್ದೇಶನ: 'ನ್ಯಾಯಾಲಯಕ್ಕೆ ನೀಡಿರುವ ಭರವಸೆಯಂತೆ ಅರ್ಜಿದಾರರಿಗೆ ಬಿಬಿಎಂಪಿ ಶೀಘ್ರವೇ ಹಣ ಬಿಡುಗಡೆ ಮಾಡಬೇಕು. ಒಂದೊಮ್ಮೆ ವಿಳಂಬವಾದರೆ ಗುತ್ತಿಗೆದಾರರಿಗೆ ಹಣ ಬಿಡುಗಡೆ ಮಾಡಬೇಕಿದ್ದ ದಿನದಿಂದ ಪ್ರತಿ ತಿಂಗಳಿಗೆ ಶೇ 2ರಷ್ಟು ಬಡ್ಡಿ ಪಾವತಿಸಬೇಕು. ಆ ಹಣವನ್ನು ಪ್ರಕರಣದಲ್ಲಿ ತಪ್ಪಿತಸ್ಥರಾಗಿರುವ ಅಧಿಕಾರಿಗಳಿಂದ ವಸೂಲಿ ಮಾಡಬೇಕು. ಈ ಆದೇಶ ಪಾಲಿಸಿದ ಬಗ್ಗೆ ಎರಡು ವಾರಗಳಲ್ಲಿ ರಿಜಿಸ್ಟ್ರಾರ್ ಜನರಲ್ ಅವರಿಗೆ ವರದಿ ಸಲ್ಲಿಸಬೇಕು' ಎಂದು ನ್ಯಾಯಪೀಠ ಬಿಬಿಎಂಪಿಗೆ ನಿರ್ದೇಶಿಸಿದೆ. 'ಒಂದು ವೇಳೆ ತಪ್ಪಿದರೆ ನ್ಯಾಯಾಂಗ ನಿಂದನೆಯಡಿ ಕ್ರಮ ಜರುಗಿಸಲಾಗುವುದು' ಎಂದು ಎಚ್ಚರಿಸಿದೆ.

ಗುತ್ತಿಗೆಗೆ ಲಂಚ: ನ್ಯಾಯಾಂಗ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗುತ್ತಿಗೆ ಕಾಮಗಾರಿಗಳಲ್ಲಿ ಶೇ 40 ಕಮಿಷನ್ ಮತ್ತು ಬಿಟ್‌ಕಾಯಿನ್ ಪ್ರಕರಣಗಳನ್ನು ಸರ್ಕಾರ ನ್ಯಾಯಾಂಗ ತನಿಖೆಗೆ ಒಳಪಡಿಸಬೇಕು' ಎಂದು ಸಿಪಿಐ (ಎಂ), ಎಸ್‌ಯುಸಿಐ (ಸಿ), ಆರ್‌ಪಿಐ, ಸ್ವರಾಜ್ ಇಂಡಿಯಾ ಸೇರಿದಂತೆ ವಿವಿಧ ಎಡಪಕ್ಷಗಳು ಆಗ್ರಹಿಸಿವೆ.

ಶುಕ್ರವಾರ ಇಲ್ಲಿ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿಪಿಐಎಂ ಕಾರ್ಯದರ್ಶಿ ಯು.ಬಸವರಾಜ, 'ಸಚಿವರು, ಶಾಸಕರು, ಅಧಿಕಾರಿಗಳು ಪ್ರತಿ ಗುತ್ತಿಗೆ ಕಾಮಗಾರಿಗಳಲ್ಲಿ ಶೇ 40ರಷ್ಟು ಕಮಿಷನ್ ಪಡೆಯುತ್ತಿರುವುದು ಬಹಿರಂಗವಾಗಿದೆ. ಸರ್ಕಾರದ ಪ್ರತಿ ಇಲಾಖೆಯಲ್ಲೂ ಇದೇ ರೀತಿಯಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿದೆ' ಎಂದು ದೂರಿದರು.

'ಬಹುತೇಕ ಶಾಸಕರ ಹಿಂಬಾಲಕರೇ ಫಲಾನುಭವಿಗಳಾಗಿದ್ದು, ನಿಜವಾದ ಫಲಾನುಭವಿಗಳು ಲಂಚ ನೀಡಲಾಗದೆ ಕಚೇರಿಗಳ ಸುತ್ತ ಅಲೆದಾಡಬೇಕಾಗಿದೆ. ಬಿಟ್ ಕಾಯಿನ್ ಪ್ರಕರಣದ ಆರೋಪಿ ಜತೆಗೆ ಹಲವು ರಾಜಕೀಯ ವ್ಯಕ್ತಿಗಳು ಶಾಮೀಲಾಗಿ, ಕೋಟಿಗಟ್ಟಲೆ ಹಗರಣ ನಡೆಸಿದ್ದಾರೆ' ಎಂದರು.

'ಈ ಎಲ್ಲ ಭ್ರಷ್ಟಾಚಾರಗಳಿಗೆ ಬಿಜೆಪಿ ಸರ್ಕಾರವೇ ನೇರ ಹೊಣೆ. ಎಲ್ಲ ಪ್ರಕರಣಗಳನ್ನು ನ್ಯಾಯಾಂಗದ ಸುಪರ್ದಿಯಲ್ಲಿ ತನಿಖೆ ನಡೆಸಲೇಬೇಕು. ಇಲ್ಲದಿದ್ದರೆ ಇಡೀ ಮಂತ್ರಿಮಂಡಲ ರಾಜೀನಾಮೆ ನೀಡಬೇಕು' ಎಂದು ಅವರು ಆಗ್ರಹಿಸಿದರು.

ರಿಪಬ್ಲಿಕ್ ಪಾರ್ಟಿ ಆಫ್ ಇಂಡಿಯಾ (ಆರ್‌ಪಿಐ) ರಾಜ್ಯ ಘಟಕದ ಅಧ್ಯಕ್ಷ ಮೋಹನ್ ರಾಜ್, 'ಇತ್ತೀಚೆಗೆ ಗಂಗಾ ಕಲ್ಯಾಣ ಯೋಜನೆಯಲ್ಲೂ ನಡೆದಿರುವ ಸಾವಿರಾರು ಕೋಟಿ ಭ್ರಷ್ಟಾಚಾರವನ್ನು ಸರ್ಕಾರ ರಚಿಸಿದ ಸದನ ಸಮಿತಿಯೇ ಬಹಿರಂಗಪಡಿಸಿದೆ. ವೃದ್ಧಾಪ್ಯ, ವಿಧವಾ ವೇತನ, ಅಂಗವಿಕಲ, ದೇವದಾಸಿಯರಿಗೆ ಸರ್ಕಾರದಿಂದ ಸಿಗುವ ಆರ್ಥಿಕ ನೆರವು ಹಾಗೂ ಇತರ ಸವಲತ್ತುಗಳಲ್ಲೂ ಭ್ರಷ್ಟಾಚಾರ ಅವ್ಯಾಹತವಾಗಿದೆ. ಇದರಿಂದಾಗಿ ಇಡೀ ರಾಜ್ಯವೇ ತಲೆ ತಗ್ಗಿಸುವಂತಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ರೈತ ಮುಖಂಡ ಜೆ.ಎಂ. ವೀರಸಂಗಯ್ಯ ಸೇರಿದಂತೆ ವಿವಿಧ ಪಕ್ಷಗಳ ಮುಖಂಡರು ಇದ್ದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೇರಿ ಮತ್ತೆ ಮೂವರ ಬಂಧನ

ಒಂದನೇ ಪುಟದಿಂದ

'ಅಫಜಲಪುರ ತಾಲ್ಲೂಕಿನ ಸೊನ್ನ ಗ್ರಾಮದ ಮುಖಂಡ ಆರ್.ಡಿ.ಪಾಟೀಲ (ರುದ್ರಗೌಡ) ಈ ಪ್ರಕರಣದಲ್ಲಿ ದೊಡ್ಡ ಪಾತ್ರ ವಹಿಸಿದ್ದಾರೆ. ಇವರ ಅಣ್ಣ, ಅಫಜಲಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಾಂತೇಶ ಪಾಟೀಲ ಕೂಡಾ ಶಾಮೀಲಾಗಿದ್ದಾರೆ. ಸದ್ಯ ರುದ್ರಗೌಡ ತಲೆಮರೆಸಿಕೊಂಡಿದ್ದು, ಮಹಾಂತೇಶ ಅವರನ್ನು ಬಂಧಿಸಲಾಗಿದೆ' ಎಂದು ಸಿಐಡಿ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಮಹಾಂತೇಶ ಬಂಧನದಿಂದ ಕಾಂಗ್ರೆಸ್ ನಾಯಕರು ಮುಜುಗರ ಅನುಭವಿಸುವಂತಾಗಿದೆ. 'ಹಗರಣದ ಮುಖ್ಯ ಆರೋಪಿ ದಿವ್ಯಾ ಹಾಗರಗಿ ಬಿಜೆಪಿ ನಾಯಕಿ. ಬಿಜೆಪಿಯ ಹಲವು ನಾಯಕರೇ ಇದರಲ್ಲಿ ಭಾಗಿಯಾಗಿದ್ದಾರೆ. ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ವಹಿಸಬೇಕು' ಎಂದು ಕೆಪಿಸಿಸಿ ಉಪಾಧ್ಯಕ್ಷ ಡಾ.ಶರಣಪ್ರಕಾಶ ಪಾಟೀಲ ಸೇರಿದಂತೆ ಹಲವು ಕಾಂಗ್ರೆಸ್ ಮುಖಂಡರು ಹೋರಾಟ ಮಾಡಿದ್ದರು.

ಬೆದರಿಸಲು ಯತ್ನ: ಅಫಜಲಪುರ ಪೊಲೀಸರು ಶುಕ್ರವಾರ ಬೆಳಿಗ್ಗೆ ಇಬ್ಬರೂ ಆರೋಪಿಗಳನ್ನು ಬಂಧಿಸಲು ಹೋದಾಗ ತೀವ್ರ ವಿರೋಧ ವ್ಯಕ್ತವಾಯಿತು. ನಂತರ ಸಿಐಡಿ ಅಧಿಕಾರಿಗಳೇ ಸ್ಥಳಕ್ಕೆ ತೆರಳಿದರು. ಮಹಾಂತೇಶ ಅವರನ್ನು ಬಂಧಿಸಿದಾಗ ರುದ್ರಗೌಡ ಅಣ್ಣನ ಮೊಬೈಲ್‌ಗೆ ಕರೆ ಮಾಡಿ, ಅಧಿಕಾರಿಗಳೊಂದಿಗೆ ಮಾತನಾಡಲು ಮುಂದಾದ. 'ನನ್ನ ಅಣ್ಣನನ್ನು ಬಂಧಿಸಿದರೆ ಹುಷಾರ್' ಎಂದು ಅಧಿಕಾರಿಗಳನ್ನೇ ಬೆದರಿಸಲು ಯತ್ನಿಸಿದ. ಕೊನೆಗೆ ಪೊಲೀಸರು ಮಹಾಂತೇಶ ಅವರನ್ನು ಅವರ ಕಾರಿನಲ್ಲೇ ಬಂಧಿಸಿ ಕರೆತಂದರು' ಎಂದೂ ಮೂಲಗಳು ತಿಳಿಸಿವೆ.

ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿನ ಅಕ್ರಮ ಆರೋಪದಡಿ ಶುಕ್ರವಾರ ಬಂಧಿಸಲಾದ ಆರೋಪಿ ಅಫಜಲಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಾಂತೇಶ ಪಾಟೀಲ ಅವರನ್ನು ಸಿಐಡಿ ಡಿವೈಎಸ್ಪಿ ಶಂಕರಗೌಡ ಪಾಟೀಲ ಅವರು ವಿಚಾರಣೆಗೆ ಎಳೆದೊಯ್ದರು

₹ 5 ಕೋಟಿ ಹಗರಣ: ನಾಲ್ಕು ವರ್ಷಗಳಿಂದ ಮಹಾಂತೇಶ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾರೆ. ಎರಡು ಬಾರಿ ಜಿಲ್ಲಾ ಪಂಚಾಯಿತಿಗೆ ಬಡದಾಳ ಕ್ಷೇತ್ರಕ್ಕೆ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಪರಾಭವಗೊಂಡಿದ್ದಾರೆ. ಆರ್.ಡಿ.ಪಾಟೀಲ ಕೂಡ ಗೌರ–ಬಿ ಗ್ರಾಮ ಪಂಚಾಯಿತಿಗೆ ಒಂದು ಅವಧಿಗೆ ಅಧ್ಯಕ್ಷರಾಗಿದ್ದರು. ಅವರ ಅವಧಿಯಲ್ಲಿ 2012–13ರಲ್ಲಿ ಒಂದೇ ರಾತ್ರಿ ₹ 5 ಕೋಟಿಯ ಬಿಲ್ ಎತ್ತುವ ಮೂಲಕ ಅಕ್ರಮದಲ್ಲಿ ಸಿಲುಕಿಕೊಂಡು, ಜಾಮೀನು ಪಡೆದಿದ್ದರು.

ಸಾಮೂಹಿಕ ವಿವಾಹಕ್ಕೆ ಅಡಚಣೆ: ಮಹಾಂತೇಶ ಪಾಟೀಲ ಹಾಗೂ ಆರ್.ಡಿ.ಪಾಟೀಲ ಶನಿವಾರ (ಏ.23) ಅಫಜಲಪುರದಲ್ಲಿ 101 ಉಚಿತ ಸಾಮೂಹಿಕ ವಿವಾಹ ಏರ್ಪಡಿಸಿದ್ದಾರೆ. ಮದುವೆಗೆ ಮುನ್ನಾದಿನವೇ ಅಣ್ಣ ಬಂಧಿತನಾಗಿದ್ದು, ತಮ್ಮ ಪರಾರಿಯಾಗಿದ್ದಾರೆ. ಇದರಿಂದ ಶನಿವಾರ ನಡೆಯಬೇಕಿದ್ದ ಸಾಮೂಹಿಕ ವಿವಾಹಕ್ಕೆ ಅಡಚಣೆ ಉಂಟಾಗಿದೆ. 'ಕಾರ್ಯಕ್ರಮ ಮುಗಿಯುವವರೆಗೆ ಸಮಯ ಕೊಡಿ. ಬಳಿಕ ವಿಚಾರಣೆಗೆ ಖುದ್ದಾಗಿ ಹಾಜರಾಗುತ್ತೇವೆ' ಎಂದು ಅಣ್ಣ– ತಮ್ಮ ಅಧಿಕಾರಿಗಳ ಬಳಿ ಕೇಳಿದರು.

'ಪ್ರಕರಣದಲ್ಲಿ ಅತ್ಯಂತ 'ದೊಡ್ಡ ಪಾತ್ರ' ವಹಿಸಿದ ಕಾರಣ ಇಬ್ಬರನ್ನೂ ಬಿಡುವ ಅಗತ್ಯವಿಲ್ಲ' ಎಂದು ಅಧಿಕಾರಿಗಳು ನಿರ್ಧರಿಸಿದರು.

ಪರೀಕ್ಷೆಯಲ್ಲಿ ಬ್ಲೂಟೂತ್ ಬಳಕೆ!

ಕಲಬುರಗಿ: ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಬ್ಲೂಟೂತ್ ಬಳಸಿದ ಆರೋಪದಡಿ ವಿಶಾಲ್ ಶಿರೂರನನ್ನು ಶುಕ್ರವಾರ ಬಂಧಿಸಲಾಗಿದೆ. ಹಗರಣದ ಕೇಂದ್ರವಾದ ಜ್ಞಾನಜ್ಯೋತಿ ಶಾಲೆಯಲ್ಲಿಯೇ ಈತನೂ ಪರೀಕ್ಷೆ ಬರೆದಿದ್ದಾನೆ.

ಇಷ್ಟು ದಿನ ಒಎಂಆರ್ ಶೀಟ್‌ನಲ್ಲಿ ಅಕ್ರಮ ನಡೆಸಿದ ಬಗ್ಗೆಯೇ ಅಧಿಕಾರಿಗಳು ಜಾಲಾಡುತ್ತಿದ್ದರು. ಈಗ ಪರೀಕ್ಷಾ ಕೇಂದ್ರದಲ್ಲಿ ಎಲೆಕ್ಟ್ರಾನಿಕ್ ಉಪಕರಣ ಬಳಸಿದ್ದು ಹೊರಬಿದ್ದ ತಕ್ಷಣ ತನಿಖೆ ಬೇರೆ ಆಯಾಮ ಪಡೆದುಕೊಂಡಿದೆ. ಪರೀಕ್ಷೆ ನಡೆದ ದಿನ (2021 ಅಕ್ಟೋಬರ್ 3) ಈ ಶಾಲೆಯ ಸುತ್ತಲಿನ ಪ್ರದೇಶದ ಮೊಬೈಲ್ ಕರೆಗಳನ್ನೂ ಜಾಲಾಡುತ್ತಿದ್ದಾರೆ.

ಅತ್ಯಾಧುನಿಕ ತಂತ್ರಜ್ಞಾನದ 40 ಕಿಮೊ ಥೆರಪಿ ಕುರ್ಚಿ ಅಳವಡಿಕೆ

'ಕಿದ್ವಾಯಿ ಅಭಿವೃದ್ಧಿಗೆ ರೋಟರಿ, ಇನ್ಫೊಸಿಸ್ ಕೊಡುಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಿದ್ವಾಯಿ ಸಂಸ್ಥೆಯು ವಿಶ್ವಮಟ್ಟದಲ್ಲಿ ಪ್ರಸಿದ್ಧಿ ಪಡೆಯಲು ಸರ್ಕಾರ, ಇನ್ಫೊಸಿಸ್ ಫೌಂಡೇಷನ್ ಮಹತ್ವದ ಕೊಡುಗೆ ನೀಡಿವೆ. ರೋಟರಿ ಸಂಸ್ಥೆ ಹಾಗೂ ದಾನಿಗಳ ನೆರವಿನಿಂದ ಸಂಸ್ಥೆಗೆ ಅತ್ಯಾಧುನಿಕತೆಯ ಸ್ಪರ್ಶ ಲಭಿಸಿದೆ' ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕ ಡಾ.ಸಿ. ರಾಮಚಂದ್ರ ತಿಳಿಸಿದರು.

ಸಂಸ್ಥೆಯ ಆವರಣದಲ್ಲಿರುವ ಡೇ ಕೇರ್ ವಾರ್ಡ್‌ನಲ್ಲಿ ಅತ್ಯಾಧುನಿಕ ತಂತ್ರಜ್ಞಾನದ 40 ಕಿಮೊ ಥೆರಪಿ ಕುರ್ಚಿಗಳನ್ನು ಅಳವಡಿಸಲಾಗಿದ್ದು, ಈ ಸೌಲಭ್ಯಕ್ಕೆ ಚಾಲನೆ ನೀಡಿ ಶುಕ್ರವಾರ ಅವರು ಮಾತನಾಡಿದರು.

'ರೋಟರಿ ಬೆಂಗಳೂರು ಪಾಮ್ ವಿಲ್ಲೆ ಹಾಗೂ ಎಲ್ ಆ್ಯಂಡ್ ಡಬ್ಲ್ಯು ಸಂಸ್ಥೆಗಳು ಕಿದ್ವಾಯಿಗೆ ಸಹಕಾರ ನೀಡುತ್ತಿರುವುದು ಪ್ರಶಂಸನೀಯ' ಎಂದರು.

ಎಲ್ ಆ್ಯಂಡ್ ಡಬ್ಲ್ಯು ಕಂಪನಿ ಪ್ರಧಾನ ವ್ಯವಸ್ಥಾಪಕ ಅಸೈತಂಬಿ ಮಾಣಿಕಂ, 'ಕ್ಯಾನ್ಸರ್, ಮಧುಮೇಹ, ಹೃದ್ರೋಗ ಮನುಷ್ಯರನ್ನು ದೀರ್ಘಕಾಲ ಕಾಡುವ ಕಾಯಿಲೆಗಳು. ಬಡ ರೋಗಿಗಳಿಗೆ ಕಿದ್ವಾಯಿಯಲ್ಲಿ ಗುಣಮಟ್ಟದ ಚಿಕಿತ್ಸೆ ಸಿಗಬೇಕು. ಹೀಗಾಗಿ ಅತ್ಯಾಧುನಿಕ ತಂತ್ರಜ್ಞಾನದ 40 ಕಿಮೊ ಥೆರಪಿ ಕುರ್ಚಿಗಳನ್ನು ಅಳವಡಿಸಲಾಗಿದೆ' ಎಂದು ಹೇಳಿದರು.

ರೋಟರಿ ಡಿಸ್ಟ್ರಿಕ್ಟ್ ಗವರ್ನರ್ ಫಜಲ್ ಮೊಹಮ್ಮದ್, 'ನಮ್ಮ ಸಂಸ್ಥೆ ವತಿಯಿಂದ ಡಯಾಲಿಸಿಸ್ ಯಂತ್ರ, 2 ಇಟಿಒ, 1 ಫೈಬರ್ ಇಂಟ್ಯುಬೇಷನ್ ಎಂಡೋಸ್ಕೋಪ್, 1 ವಿಡಿಯೊ ಕ್ಯಾರಿಯೋಜೋಸ್ಕೋಪಿಯನ್ನೂ ಕಿದ್ವಾಯಿ ಸಂಸ್ಥೆಗೆ ಹಸ್ತಾಂತರಿಸಿದ್ದೇವೆ' ಎಂದರು.

ಡೇ ಕೇರ್ ವಾರ್ಡ್‌ನಲ್ಲಿ ಅಳವಡಿಸಲಾಗಿರುವ 40 ಕಿಮೊ ಥೆರಪಿ ಕುರ್ಚಿಗಳ ಸೌಲಭ್ಯಕ್ಕೆ ಡಾ.ಸಿ.ರಾಮಚಂದ್ರ ಚಾಲನೆ ನೀಡಿದರು. ಅಸೈತಂಬಿ ಮಾಣಿಕಂ, ರೋಟರಿ ಸಂಸ್ಥೆ ಅಧ್ಯಕ್ಷೆ ಸಪ್ನ ಪಹಡೆ, ರೋಟರಿ ಸಂಸ್ಥೆಯ ಮಾಜಿ ಅಧ್ಯಕ್ಷೆ ಸುಮಿತ್ರಾ ಘೋಷ್, ಮುಖ್ಯ ಆಡಳಿತಾಧಿಕಾರಿ ಸೀಮಾ ನಾಯಕ್, ಆರ್ಥಿಕ ಸಲಹೆಗಾರ ವೇಣುಗೋಪಾಲ ರೆಡ್ಡಿ, ವೈದ್ಯಕೀಯ ಅಧೀಕ್ಷಕ ರಾಜಶೇಖರ್, ವೈದ್ಯಾಧಿಕಾರಿ ಡಾ.ಪ್ರಭಾ ಶೇಷಾಚಾರ್ ಇದ್ದರು

ಹೊರವರ್ತುಲ ರಸ್ತೆ, ನೈಸ್ ರಸ್ತೆಯಲ್ಲಿ ಹೆಚ್ಚು ● ದಂಡ ವಿಧಿಸಿದರೂ ಪಾಠ ಕಲಿಯದ ಯುವಕರು

ಜನರ ಸಂಚಾರಕ್ಕೆ 'ವ್ಹೀಲಿ' ಅಪಾಯ

● ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ದ್ವಿಚಕ್ರ ವಾಹನಗಳನ್ನು ಅಪಾಯಕಾರಿ ರೀತಿಯಲ್ಲಿ ಚಲಾಯಿಸಿ 'ವ್ಹೀಲಿ' ಮಾಡುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದ್ದು, ದಂಡ ವಿಧಿಸಿ ಪ್ರಕರಣ ದಾಖಲಿಸಿದರೂ ತಪ್ಪಿತಸ್ಥ ಸವಾರರು ಬುದ್ಧಿ ಕಲಿಯುತ್ತಿಲ್ಲ. ಪ್ರಮುಖ ರಸ್ತೆಗಳಲ್ಲೇ ರಾಜಾರೋಷವಾಗಿ 'ವ್ಹೀಲಿ' ಮಾಡುತ್ತಿರುವ ಕೆಲವರು, ಜನಸಾಮಾನ್ಯರಿಗೆ ಅಪಾಯವನ್ನುಂಟು ಮಾಡುತ್ತಿದ್ದಾರೆ ಎಂಬ ದೂರುಗಳಿವೆ.

ನಗರಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಗಳು, ಹೊರವರ್ತುಲ ರಸ್ತೆ, ನೈಸ್ ರಸ್ತೆ ಹಾಗೂ ಇತರ ರಸ್ತೆಗಳಲ್ಲಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ. ಇಂಥ ರಸ್ತೆಯಲ್ಲೇ ಕೆಲವರು ಅಪಾಯಕಾರಿ ವ್ಹೀಲಿ ಮಾಡುತ್ತಿದ್ದು, ಇದರಿಂದ ಅಪಘಾತಗಳೂ ಸಂಭವಿಸುತ್ತಿವೆ.

18 ವರ್ಷ ತುಂಬದ ಕೆಲ ಬಾಲಕರು ಹಾಗೂ ಕಾಲೇಜಿನ ಕೆಲ ವಿದ್ಯಾರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ವ್ಹೀಲಿ ಮಾಡುತ್ತಿದ್ದು, ಅಂಥವರನ್ನು ಪತ್ತೆ ಮಾಡಿ ಸಂಚಾರ ಪೊಲೀಸರು ದಂಡ ವಿಧಿಸುತ್ತಿದ್ದಾರೆ. ವಾಹನಗಳನ್ನು ಜಪ್ತಿ ಮಾಡಿ, ಅದರ ಮಾಲೀಕರ ವಿರುದ್ಧವೂ ಪ್ರಕರಣ ದಾಖಲಿಸಿಕೊಂಡು ಜೈಲಿಗೂ ಕಳುಹಿಸುತ್ತಿದ್ದಾರೆ. ಇಷ್ಟಾದರೂ 'ವ್ಹೀಲಿ' ಪ್ರಕರಣಗಳು ಹೆಚ್ಚುತ್ತಿದ್ದು, ಜನರ ಆತಂಕಕ್ಕೆ ಕಾರಣವಾಗಿದೆ.

ಪ್ರತಿ ಶನಿವಾರ, ಭಾನುವಾರ ಹಾಗೂ ರಜಾ ದಿನಗಳಂದು ರಸ್ತೆಗೆ ಇಳಿದು ವ್ಹೀಲಿ ಮಾಡುವುದನ್ನೇ ಕೆಲವರು ಹವ್ಯಾಸವಾಗಿ ಮಾಡಿಕೊಂಡಿದ್ದಾರೆ. ಬಾಲಕರು ಹಾಗೂ ಯುವಕರ ಗುಂಪು, ಜಿದ್ದಿಗೆ ಬಿದ್ದವರಂತೆ ನಾ ಮುಂದು ತಾ ಮುಂದು ಎಂದು ಪೈಪೋಟಿಗೆ ಬಿದ್ದು ವ್ಹೀಲಿ ಮಾಡುತ್ತಿದೆ.

ನಗರದ ಸಂಚಾರ ಸಮಸ್ಯೆಗಳನ್ನು ಆಲಿಸಲು ಕಮಿಷನರ್ ಕಮಲ್ ಪಂತ್, ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಹಾಗೂ ಆಯಾ ವಿಭಾಗದ ಡಿಸಿಪಿಗಳು ಪ್ರತಿ ಎರಡನೇ ಶನಿವಾರ 'ಸಂಚಾರ ಸಂಪರ್ಕ ದಿವಸ' ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದಾರೆ. ಪ್ರತಿ ಕಾರ್ಯಕ್ರಮದಲ್ಲೂ 'ವ್ಹೀಲಿ' ಬಗ್ಗೆ ಪ್ರಸ್ತಾಪಿಸುತ್ತಿರುವ ಜನ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸುತ್ತಿದ್ದಾರೆ.

'ಹೊರವರ್ತುಲ ರಸ್ತೆಯ ನಾಗವಾರ ಬಳಿ ಪ್ರತಿ ಭಾನುವಾರ ಯುವಕರ ಗುಂಪು ಕಟ್ಟಿಕೊಂಡು ಬರುತ್ತಾರೆ. ದ್ವಿಚಕ್ರ ವಾಹನಗಳನ್ನು ಒಂದೇ ಚಕ್ರದಲ್ಲಿ ಅಪಾಯಕಾರಿಯಾಗಿ ಚಲಾಯಿಸುತ್ತಾರೆ. ಕೆಲವೊಮ್ಮೆ, ಪಾದಚಾರಿಗಳು ಹಾಗೂ ಸಾರ್ವಜನಿಕರ ವಾಹನಗಳಿಗೆ ಡಿಕ್ಕಿ ಹೊಡೆಸಿ ಅಪಘಾತವನ್ನುಂಟು ಮಾಡಿದ್ದಾರೆ' ಎಂದು ಹೆಣ್ಣೂರು ನಿವಾಸಿ ರಾಜಶೇಖರ್ ಹೇಳಿದರು.

'ಮಾಹಿತಿ ನೀಡಿದಾಗಲೆಲ್ಲ ಪೊಲೀಸರು ರಸ್ತೆಗೆ ಬಂದು ಕಾಯುತ್ತಾರೆ. ಅವರು ಹೊರಟು ಹೋದ ನಂತರ, ಪುನಃ ಯುವಕರು ಸ್ಥಳಕ್ಕೆ ಬಂದು ವ್ಹೀಲಿ ಮುಂದುವರಿಸುತ್ತಾರೆ' ಎಂದೂ ತಿಳಿಸಿದರು.

ಗೋರಿಪಾಳ್ಯದಲ್ಲಿ ಮಹಿಳೆ ಗಾಯ: ಗೋರಿಪಾಳ್ಯದಲ್ಲಿ ಇತ್ತೀಚೆಗೆ ವ್ಹೀಲಿ ಮಾಡಿದ್ದ ಯುವಕರಿಬ್ಬರು, ತಮ್ಮ ದ್ವಿಚಕ್ರ ವಾಹನವನ್ನು ಮಹಿಳೆಗೆ ಗುದ್ದಿಸಿದ್ದರು. ಗಾಯಗೊಂಡಿರುವ ಮಹಿಳೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ.

'ಪಾದರಾಯನಪುರ, ಗೋರಿಪಾಳ್ಯ, ಜಗಜೀವನ್‌ರಾಮ್ ನಗರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಯುವಕರು ವ್ಹೀಲಿ ಮಾಡುತ್ತಿದ್ದಾರೆ. ಪೊಲೀಸರು ಎಷ್ಟೇ ಕಾರ್ಯಾಚರಣೆ ನಡೆಸಿದರೂ ಕೃತ್ಯಕ್ಕೆ ಕಡಿವಾಣ ಬಿದ್ದಿಲ್ಲ' ಎಂದು ಗೋರಿಪಾಳ್ಯದ ಟೀ ಅಂಗಡಿ ವ್ಯಾಪಾರಿ ಅಮ್ಜದ್ ಹೇಳಿದರು.

ನಗರದಲ್ಲಿ ಯುವಕರು ವ್ಹೀಲಿ ಮಾಡುತ್ತಿರುವುದು

ಕೈಯಲ್ಲಿ ಲಾಂಗ್ ಹಿಡಿದು ವ್ಹೀಲಿ

ಗುಟ್ಟಹಳ್ಳಿ ಬಳಿ ಯುವಕನೊಬ್ಬ ಕೈಯಲ್ಲಿ ಲಾಂಗ್ ಹಿಡಿದು ದ್ವಿಚಕ್ರ ವಾಹನದಲ್ಲಿ ವ್ಹೀಲಿ ಮಾಡಿದ್ದ. ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಪೊಲೀಸರು, ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದರು. ಆದರೆ, ಯುವಕನ ಬಗ್ಗೆ ಇದುವರೆಗೂ ಸುಳಿವು ಸಿಕ್ಕಿಲ್ಲ.

ಪ್ರಯಾಣ ಪ್ರಯಾಸ

'ಮಾಹಿತಿ ನೀಡಿದರೆ ತಕ್ಷಣ ಕ್ರಮ'

'ನಗರದಲ್ಲಿ ವ್ಹೀಲಿ ಮಾಡುವವರ ವಿರುದ್ಧ ನಿರಂತರವಾಗಿ ಕಾರ್ಯಾಚರಣೆ ನಡೆಸಲಾಗುತ್ತಿದ್ದು, ಅದಕ್ಕೆಂದೇ ವಿಶೇಷ ತಂಡಗಳನ್ನು ರಚಿಸಲಾಗಿದೆ' ಎಂದು ಸಂಚಾರ ವಿಭಾಗದ (ಪೂರ್ವ) ಡಿಸಿಪಿ ಕೆ.ಎಂ. ಶಾಂತರಾಜು ಹೇಳಿದರು.

'ಪ್ರಜಾವಾಣಿ' ಜೊತೆ ಮಾತನಾಡಿದ ಅವರು, 'ವ್ಹೀಲಿ ಮಾಡುವವರ ವಿಡಿಯೊ ಹಾಗೂ ಫೋಟೊಗಳಿದ್ದರೆ ಸಾರ್ವಜನಿಕರು ನಮಗೆ ನೀಡಬಹುದು. ಮಾಹಿತಿ ನೀಡಿದವರ ಹೆಸರು ಗೋಪ್ಯವಾಗಿರಿಸಿ, ತಪ್ಪಿತಸ್ಥ ಸವಾರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದರು.

'ವ್ಹೀಲಿ ಮಾಡಿ ಸಿಕ್ಕಿಬಿದ್ದವರ ವಿರುದ್ಧ ಕ್ರಿಮಿನಲ್ ಪ್ರಕರಣವನ್ನೂ ದಾಖಲಿಸಿಕೊಳ್ಳಲಾಗುತ್ತಿದೆ. ಆರೋಪಿಗಳು ಬಾಲಕರಾಗಿದ್ದರೆ, ಅವರಿಗೆ ದ್ವಿಚಕ್ರ ವಾಹನ ನೀಡಿದ್ದಕ್ಕಾಗಿ ಪೋಷಕರ ವಿರುದ್ಧವೂ ಕಾನೂನು ಕ್ರಮ ಜರುಗಿಸಲಾಗುತ್ತಿದೆ. ಪದೇ ಪದೇ ವ್ಹೀಲಿ ಮಾಡುವವರನ್ನು ಪತ್ತೆ ಮಾಡಿ, ಆಪ್ತ ಸಮಾಲೋಚನೆಯನ್ನೂ ಮಾಡಿಸಲಾಗುತ್ತಿದೆ' ಎಂದೂ ತಿಳಿಸಿದರು.

ಕದ್ದ ವಾಹನಗಳ ಬಳಕೆ: 'ಅಪರಾಧ ಹಿನ್ನೆಲೆಯುಳ್ಳ ಕೆಲವರು ದ್ವಿಚಕ್ರ ವಾಹನಗಳನ್ನು ಕದ್ದು ವ್ಹೀಲಿ ಮಾಡುತ್ತಿದ್ದಾರೆ. ನಂತರ ಮಾರಾಟ ಮಾಡಿ ಹಣ ಗಳಿಸುತ್ತಿದ್ದಾರೆ. ಕೆಲವರು, ವ್ಹೀಲಿ ಮಾಡಲೆಂದೇ ವಾಹನಗಳನ್ನು ಕದಿಯುತ್ತಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ವ್ಹೀಲಿ ವಿರುದ್ಧ ಪೊಲೀಸರ ಕಾರ್ಯಾಚರಣೆ: ದಾಖಲಾದ ಪ್ರಕರಣ

ವರ್ಷ	ಅಜಾಗರೂಕತೆ ಚಾಲನೆ	ಅತಿವೇಗದ ಚಾಲನೆ	ಜಿಗ್‌ಜಾಗ್ ಚಾಲನೆ
2020	12,388	59,071	814
2021	6,666	55,482	867
2022 (ಮಾರ್ಚ್‌ವರೆಗೆ)	1570	7,774	315

ನಗರದಲ್ಲಿ ಯುವಕರು ವ್ಹೀಲಿ ಮಾಡುತ್ತಿರುವುದು

ವ್ಹೀಲಿ ಪ್ರಶ್ನಿಸಿದ್ದಕ್ಕೆ ನಡೆದಿದ್ದ ಕೊಲೆ

'ಕೆ.ಪಿ. ಅಗ್ರಹಾರ ಠಾಣೆ ವ್ಯಾಪ್ತಿಯಲ್ಲಿ ವ್ಹೀಲಿ ಮಾಡುತ್ತಿದ್ದ ಯುವಕರ ತಂಡ, ಯುವತಿಯನ್ನು ಚುಡಾಯಿಸುತ್ತಿದ್ದರು. [illegible] ಥಾಮಸ್ ಪ್ರಶ್ನಿಸಿದ್ದರು. ಅಷ್ಟಕ್ಕೆ ಸಿಟ್ಟಾದ ಯುವಕರ ತಂಡ, ಥಾಮಸ್ ಅವರನ್ನೇ ಕೊಲೆ ಮಾಡಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ. 'ಕೊಲೆ ಪ್ರಕರಣ ಬೇಧಿಸಿ ಸೂರ್ಯ, ಚಂದನ್, ಪ್ರಮೋದ್, ಯಶವಂತ್ ಹಾಗೂ ಚೇತನ್ ಎಂಬುವವರನ್ನು ಬಂಧಿಸಲಾಗಿತ್ತು' ಎಂದೂ ತಿಳಿಸಿವೆ.

ವಿದ್ಯಾರ್ಥಿನಿ ಮೇಲೆ ಹಲ್ಲೆ ಆರೋಪ

ಎಫ್‌ಐಆರ್ ರದ್ದುಪಡಿಸಲು ಹೈಕೋರ್ಟ್ ನಕಾರ

ಬೆಂಗಳೂರು: 'ಕಾನೂನು ವಿದ್ಯಾರ್ಥಿನಿ ಮೇಲೆ ಹಲ್ಲೆ ಮಾಡಿದ ಆರೋಪದಡಿ ಪೊಲೀಸರು ದಾಖಲಿಸಿರುವ ಎಫ್‌ಐಆರ್ ರದ್ದುಗೊಳಿಸಬೇಕು' ಎಂದು ಕೋರಿದ್ದ ವಕೀಲರೊಬ್ಬರ ಮನವಿಯನ್ನು ಹೈಕೋರ್ಟ್ ತಿರಸ್ಕರಿಸಿದೆ.

'ನನ್ನ ವಿರುದ್ಧ ಹಲಸೂರು ಪೊಲೀಸ್ ಠಾಣೆಯಲ್ಲಿ ದಾಖಲಿಸಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ವಕೀಲ ಜಿ. ವಸಂತ್ ಆದಿತ್ಯ ಸಲ್ಲಿಸಿದ್ದ ಅರ್ಜಿಯನ್ನು, ನ್ಯಾಯಮೂರ್ತಿ ವಿ. ಶ್ರೀಶಾನಂದ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

'ಪ್ರಕರಣ ತನಿಖಾ ಹಂತದಲ್ಲಿರುವಾಗ ಸಿಆರ್‌ಪಿಸಿ ಕಲಂ 482ರ ಅಡಿಯಲ್ಲಿ ಪರಿಹಾರ ನೀಡಲಾಗದು' ಎಂದು ಅಭಿಪ್ರಾಯಪಟ್ಟಿರುವ ನ್ಯಾಯಪೀಠ, 'ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಈಗಾಗಲೇ ಅರ್ಜಿದಾರ ವಕೀಲರನ್ನು ಠಾಣೆಗೆ ಕರೆಸಿ ಹೇಳಿಕೆ ದಾಖಲಿಸಿಕೊಂಡಿದ್ದಾರೆ. ತನಿಖೆ ಪೂರ್ಣಗೊಳಿಸಿ ವರದಿ ಸಲ್ಲಿಸಲಿ' ಎಂದು ಹೇಳಿದೆ.

ಆರೋಪವೇನು: 'ಇಂಟರ್ನ್‌ಶಿಪ್ ಪೂರೈಸಿದ ಬಳಿಕ ಪ್ರಮಾಣಪತ್ರ ನೀಡುವಂತೆ ಕೇಳಿದಾಗ ವಸಂತ್ ಆದಿತ್ಯ ನನ್ನನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಮತ್ತು ವಾಟ್ಸ್‌ಆ್ಯಪ್‌ನಲ್ಲೂ ನಿಂದನೀಯ ಸಂದೇಶ ಕಳುಹಿಸಿದ್ದಾರೆ' ಎಂದು ದೂರುದಾರ ವಿದ್ಯಾರ್ಥಿನಿ ಆರೋಪಿಸಿದ್ದಾರೆ. ಈ ಕುರಿತಂತೆ ಹಲಸೂರು ಪೊಲೀಸರು, ಮಾಹಿತಿ ತಂತ್ರಜ್ಞಾನ ಕಾಯ್ದೆ-2000ರ ಕಲಂ 67 ಹಾಗೂ ಐಪಿಸಿ ಕಲಂ 324, 354, 341, 506, 509ರ ಅಡಿ ಎಫ್‌ಐಆರ್ ದಾಖಲಿಸಿದ್ದಾರೆ.

ಪ್ರತಿಭಟನೆ ಪ್ರಕರಣ: ಡಿ.ಕೆ. ಶಿವಕುಮಾರ್‌ಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಕಾಯ್ದೆಗಳ ತಿದ್ದುಪಡಿ ಕೈಬಿಡುವಂತೆ ಆಗ್ರಹಿಸಿ 2021ರ ಜನವರಿ 20ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿ ವಿಪತ್ತು ನಿರ್ವಹಣಾ ಕಾಯ್ದೆ ಉಲ್ಲಂಘನೆ ಮಾಡಿರುವ ಆರೋಪದಡಿ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಇತರರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಶಿವಕುಮಾರ್, 'ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿ ವಿರುದ್ಧ ಪ್ರತಿಭಟನೆ ನಡೆಸಿದ್ದೆವು. ಹತ್ತು ಸಾವಿರ ಮಂದಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ನನ್ನ ಹಾಗೂ ಸಲೀಂ ಅಹಮ್ಮದ್, ಈಶ್ವರ ಖಂಡ್ರೆ, ಮಂಜುನಾಥ್, ಶಫಿವುಲ್ಲಾ, ಬಸನಗೌಡ ಬಾದರ್ಲಿ ವಿರುದ್ಧ ದುರುದ್ದೇಶದಿಂದ ಪ್ರಕರಣ ದಾಖಲಿಸಲಾಗಿತ್ತು' ಎಂದರು.

'ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಈ ಪ್ರಕರಣದಲ್ಲಿ ವಾರೆಂಟ್ ಜಾರಿಗೆ ಆದೇಶಿಸಿತ್ತು. ಕಾನೂನನ್ನು ಗೌರವಿಸಿ, ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡಿದ್ದೇವೆ' ಎಂದು ಹೇಳಿದರು.

'ಬಿಜೆಪಿ ನೇತೃತ್ವದ ಸರ್ಕಾರ ದ್ವೇಷದ ರಾಜಕಾರಣ ಮಾಡುತ್ತಿದೆ. ನ್ಯಾಯಾಲಯಕ್ಕೆ ಅಲೆದಾಡಿಸಬೇಕೆಂಬ ದುರುದ್ದೇಶದಿಂದ ಪ್ರಕರಣ ದಾಖಲಿಸಲಾಗಿತ್ತು. ಶಿವಮೊಗ್ಗದಲ್ಲಿ ನಿಷೇಧಾಜ್ಞೆ ಉಲ್ಲಂಘಿಸಿ ಶವ ಮೆರವಣಿಗೆ ನಡೆಸಿದ್ದ ಕೆ.ಎಸ್. ಈಶ್ವರಪ್ಪ, ಬಿ.ವೈ. ರಾಘವೇಂದ್ರ ವಿರುದ್ಧ ಯಾವ ಪ್ರಕರಣವನ್ನೂ ದಾಖಲಿಸಿಲ್ಲ' ಎಂದರು.

ಆರ್ಯವೈಶ್ಯ ಮಹಾಸಭಾ ಚುನಾವಣೆ: ಅಭ್ಯರ್ಥಿಗಳ ಜಟಾಪಟಿ

ಬೆಂಗಳೂರು: ಕರ್ನಾಟಕ ಆರ್ಯವೈಶ್ಯ ಮಹಾಸಭಾ ಚುನಾವಣೆ ಮೇ 1ಕ್ಕೆ ನಿಗದಿಯಾಗಿದ್ದು, ನಾಮಪತ್ರ ಪರಿಶೀಲನೆ ವೇಳೆ ಎರಡು ಗುಂಪುಗಳ ನಡುವೆ ಗುರುವಾರ ಜಟಾಪಟಿ ನಡೆದಿದೆ. ಹಾಲಿ ಅಧ್ಯಕ್ಷ ಆರ್.ಪಿ.ರವಿಶಂಕರ್, ಗೂಂಡಾ ವರ್ತನೆ ತೋರಿದ್ದಾರೆ ಎಂದು ನಿರ್ದೇಶಕ ಸ್ಥಾನಕ್ಕೆ ಸ್ಪರ್ಧಿಸಿರುವ ಗೋವರ್ಧನ್ ಬಾಬು ದೂರಿದ್ದಾರೆ.

'ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದವರೆಲ್ಲಾ ಕಚೇರಿಯ ಹೊರಗೆ ಸೇರಿದ್ದರು. ಚುನಾವಣಾ ಅಧಿಕಾರಿ ಕರೆದಾಗ ಮಾತ್ರ ಅಭ್ಯರ್ಥಿಗಳು ಕಚೇರಿಯೊಳಗೆ ಪ್ರವೇಶಿಸಬೇಕು ಎಂಬ ಫಲಕವನ್ನು ಮುಖ್ಯ ದ್ವಾರದ ಮುಂದೆ ಹಾಕಲಾಗಿತ್ತು. ಹೀಗಿದ್ದರೂ ಅಧ್ಯಕ್ಷರ ಕೊಠಡಿಯಲ್ಲಿ ಕೆಲವರು ಕುಳಿತಿದ್ದರು. ಇದನ್ನು ನಾವು ಪ್ರಶ್ನಿಸಿದ್ದೆವು. ಹಾಸನ ಜಿಲ್ಲೆಯವರನ್ನು ಒಳಗೆ ಕರೆಯಲು ಸಿಬ್ಬಂದಿ ಬಂದಾಗ ಅಧ್ಯಕ್ಷರ ಕೊಠಡಿಯಲ್ಲಿ ಕುಳಿತವರನ್ನು ಆಚೆ ಕಳಿಸುವಂತೆ ಪಟ್ಟುಹಿಡಿದೆವು. ಈ ವೇಳೆ ಏಕಾಏಕಿ ನುಗ್ಗಿ ಬಂದ ರವಿಶಂಕರ್, ನಮ್ಮನ್ನು ತಳ್ಳಿದರು' ಎಂದು ಗೋವರ್ಧನ್ ಬಾಬು ಹೇಳಿದರು.

'ನಾಮಪತ್ರ ಹಿಂಪಡೆಯುವ ಪ್ರಕ್ರಿಯೆ ಇನ್ನೂ ಮುಗಿದಿಲ್ಲ. ಆಗಲೇ ಅಧ್ಯಕ್ಷ ಸ್ಥಾನಕ್ಕೆ ತಾವು ಅವಿರೋಧ ಆಯ್ಕೆಯಾಗಿರುವುದಾಗಿ ರವಿಶಂಕರ್ ಹೇಳಿಕೊಳ್ಳುತ್ತಿದ್ದಾರೆ. 15 ಅಭ್ಯರ್ಥಿಗಳ ವಿರುದ್ಧ ನಾವು ತಕರಾರು ಸಲ್ಲಿಸಲು ಮುಂದಾಗಿದ್ದೆವು. ಅದಕ್ಕೆ ಅವಕಾಶ ನೀಡದೆ ಅಷ್ಟೂ ಮಂದಿಯ ನಾಮಪತ್ರ ಅಧಿಕೃತಗೊಳಿಸಿದ್ದಾರೆ' ಎಂದರು.



ಆರ್.ಪಿ.ರವಿಶಂಕರ್ –ಗೋವರ್ಧನ್ ಬಾಬು ಜಟಾಪಟಿ ನಡೆಸಿದರು

ಆರ್.ಪಿ.ರವಿಶಂಕರ್, 'ಚುನಾವಣಾಧಿಕಾರಿಗೆ ಪ್ರತ್ಯೇಕ ಕೊಠಡಿ ಇದೆ. ಅದರ ಪಕ್ಕದಲ್ಲೇ ನನ್ನ ಕಚೇರಿ ಇದೆ. ಅಲ್ಲಿ ಕುಳಿತಿದ್ದಾಗ ಕೆಲವರು ಭೇಟಿಯಾಗಲು ಬಂದಿದ್ದರು. ಅವರ್‍ಯಾರು ಅಭ್ಯರ್ಥಿಗಳಲ್ಲ. ಚುನಾವಣಾಧಿಕಾರಿ ಕರೆದರಷ್ಟೇ ಒಳಗೆ ಹೋಗಬೇಕು ಎಂದು ಅಭ್ಯರ್ಥಿಗಳಿಗೆ ಸೂಚಿಸಲಾಗಿತ್ತು. ಗೋವರ್ಧನ್ ಬಾಬು, ರಮೇಶ್ ಹಾಗೂ ನರಸಿಂಹ ಮೂರ್ತಿ ಅವರು ತಮ್ಮ ಸರತಿಗೂ ಮುನ್ನವೇ ಕಚೇರಿಯೊಳಗೆ ಪ್ರವೇಶಿಸಲು ಮುಂದಾದರು. ಅದಕ್ಕೆ ಅವಕಾಶ ನಿರಾಕರಿಸಿದ ಸಿಬ್ಬಂದಿಯನ್ನು ತಳ್ಳಿದರು. ಹೀಗಾಗಿ ನಾನೇ ಕೊಠಡಿಯಿಂದ ಆಚೆ ಬಂದು ಅವರನ್ನು ಹೊರಹಾಕಲು ಪ್ರಯತ್ನಿಸಿದೆ' ಎಂದು ಸ್ಪಷ್ಟಪಡಿಸಿದ್ದಾರೆ.

ತನಿಖಾಧಿಕಾರಿಗಳ ಮುಂದೆ ಗಲಭೆ ಪ್ರಕರಣದ ವಿವರ ಬಿಚ್ಚಿಟ್ಟ ಆರೋಪಿ

ಜನರನ್ನು ಸೇರಿಸಿದ್ದು ನಾನೇ: ವಸೀಂ ಪಠಾಣ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಗಲಭೆ ನಡೆದ ದಿನ ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆ ಎದುರು ಜನರನ್ನು ಸೇರಿಸಿದ್ದು ನಾನೇ...' ಎಂದು ನಗರದಲ್ಲಿ ನಡೆದ ಗಲಭೆಗೆ ಪ್ರಚೋದನೆ ನೀಡಿದ ಆರೋಪ ಎದುರಿಸುತ್ತಿರುವ ವಸೀಂ ಪಠಾಣ್ ತನಿಖಾಧಿಕಾರಿಗಳ ವಿಚಾರಣೆಯಲ್ಲಿ ಬಾಯ್ಬಿಟ್ಟಿದ್ದಾನೆ.

ವಸೀಂ ಪಠಾಣ್

ಘಟನೆ ಕುರಿತು ಪೊಲೀಸರು ವಿಚಾರಣೆಯನ್ನು ತೀವ್ರಗೊಳಿಸಿರುವ ಬೆನ್ನಲ್ಲೇ, ಆರೋಪಿ ಹಲವು ವಿಷಯಗಳನ್ನು ಹಂಚಿಕೊಂಡಿದ್ದಾನೆ.

'ಮಸೀದಿ ಮೇಲೆ ಭಗವಾಧ್ವಜ ಹಾರಿಸುವ ಅನಿಮೆಟೆಡ್ ವಿಡಿಯೊ ಮನಕೆರಳಿಸಿತ್ತು. ಅದನ್ನು ಖಂಡಿಸಿ ಠಾಣೆ ಎದುರು ಪ್ರತಿಭಟನೆ ಮಾಡಲು ಸಹಚರ ತುಫೈಲ್ ಮುಲ್ಲಾ ಮತ್ತು ರೌಡಿ ಶೀಟರ್ ಅಬ್ದುಲ್ ಮಲಿಕ್ ಬೇಪಾರಿಯೊಂದಿಗೆ ವಾಟ್ಸ್‌ಆ್ಯಪ್ ಗ್ರೂಪ್ ರಚಿಸಿದ್ದೆ' ಎಂದು ತಿಳಿಸಿದ್ದಾನೆ.

'ಪೊಲೀಸರು ಪ್ರತಿಭಟನೆಗೆ ಬಗ್ಗದಿದ್ದರೆ, ಗಲಾಟೆ ಮಾಡೋಣ ಎಂದಿದ್ದೆ. ಗಲಭೆ ಮಾಡುವ ಉದ್ದೇಶವಿರಲಿಲ್ಲ. ಪ್ರಚೋದನೆ ನೀಡಿಲ್ಲ. ಅಷ್ಟೊಂದು ಪ್ರಮಾಣದ ಕಲ್ಲುಗಳನ್ನು ಯಾರು ತಂದರು ಎಂಬುದು ಗೊತ್ತಿಲ್ಲ. ಗಲಭೆಯ ಸೂತ್ರಧಾರ ಎಂದು ಬಿಂಬಿಸತೊಡಗಿದ್ದರಿಂದ, ಜೀವ ಭಯ ಇದೆ ಎಂದು ನಮ್ಮವರು ಹೇಳಿದ್ದರಿಂದ ತಪ್ಪಿಸಿಕೊಂಡು ಓಡಾಡಬೇಕಾಯಿತು' ಎಂದಿದ್ದಾಗಿ ಪೊಲೀಸ್ ಮೂಲಗಳು ತಿಳಿಸಿವೆ.

ಹಳೇ ಹುಬ್ಬಳ್ಳಿ ಗಲಭೆ ಪ್ರಕರಣದ ಪ್ರಮುಖ ಆರೋಪಿಗಳಿಗೆ ಮುಸ್ಲಿಂ ಮೂಲಭೂತ ಸಂಘಟನೆಗಳ ಜತೆಗೆ ನಂಟಿದೆಯೇ ಎಂಬ ದಿಕ್ಕಿನಲ್ಲಿಯೂ ಪೊಲೀಸ್ ಅಧಿಕಾರಿಗಳು ತನಿಖೆಯನ್ನು ತೀವ್ರಗೊಳಿಸಿದ್ದಾರೆ. ಆಕ್ಷೇಪಾರ್ಹ ಸ್ಟೇಟಸ್ ಹಾಕಿದ್ದ ಕೆಲವೇ ಗಂಟೆಗಳಲ್ಲಿ ಅಷ್ಟೊಂದು ಜನರು ಸೇರಿದ್ದು, ದೇವಸ್ಥಾನದ ಮೇಲೆ ದಾಳಿ ನಡೆಸಿದ್ದೆಲ್ಲವನ್ನೂ ಪರಿಗಣಿಸಿ ಮಾಹಿತಿ ಕಲೆ ಹಾಕಲಾಗುತ್ತಿದೆ.

'ವಸೀಂ ಪಠಾಣ್, ರಝಾ ಅಕಾಡೆಮಿ ಎಂಬ ಮುಸ್ಲಿಂ ಮೂಲಭೂತವಾದಿ ಸಂಘಟನೆಯವನಾಗಿದ್ದು, ರೀಬಿಲ್ಟ್ ಬಾಬ್ರಿ ಮಸೀದಿ ಸಂಘಟನೆ ಮಾಡಿಕೊಂಡಿದ್ದಾನೆ' ಎಂದು ಶ್ರೀರಾಮ ಸೇನೆ ಮುಖಂಡ ಪ್ರಮೋದ್ ಮುತಾಲಿಕ್ ಹುಬ್ಬಳ್ಳಿಯಲ್ಲಿ ಶುಕ್ರವಾರ ಆರೋಪಿಸಿದ್ದಾರೆ.

ಪೊಲೀಸ್ ವಶಕ್ಕೆ: ವಸೀಂ ಮತ್ತು ತುಫೈಲ್‌ನನ್ನು ಶುಕ್ರವಾರ 4ನೇ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ನ್ಯಾಯಾಲಯ, ಇಬ್ಬರನ್ನು ಐದು ದಿನ ಪೊಲೀಸ್ ವಶಕ್ಕೆ ನೀಡಿದೆ.

ಹುಬ್ಬಳ್ಳಿ–ಡಿ.ಜೆ.ಹಳ್ಳಿ ಗಲಭೆಗೆ ಸಾಮ್ಯತೆ: ಆರಗ

ಬೆಂಗಳೂರು: ಹುಬ್ಬಳ್ಳಿಯಲ್ಲಿ ನಡೆದ ಗಲಭೆಗೂ ಬೆಂಗಳೂರಿನ ಡಿ.ಜೆ.ಹಳ್ಳಿ, ಕೆ.ಜಿ.ಹಳ್ಳಿ ಗಲಭೆಗೂ ಸಾಮ್ಯತೆ ಇದೆ. ಪೊಲೀಸರು ಸ್ವಲ್ಪ ನಿರ್ಲಕ್ಷ್ಯ ತೋರಿದ್ದರೂ ಇಡೀ ಹುಬ್ಬಳ್ಳಿಯೇ ಹೊತ್ತಿ ಉರಿಯುತ್ತಿತ್ತು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದ್ದಾರೆ.

ವಿಧಾನಸೌಧದಲ್ಲಿ ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸಿದ್ದರಾಮಯ್ಯ ಸರ್ಕಾರದಲ್ಲಿ ಸಾಕಷ್ಟು ಜನರ ಮೇಲಿನ ಕೇಸ್ ವಾಪಸ್ ತೆಗೆದುಕೊಂಡ ಪರಿಣಾಮವನ್ನು ಇಂದು ನಾವು ಅನುಭವಿಸುತ್ತಿದ್ದೇವೆ. ಹಲವು 'ಕಾಣದ ಕೈ'ಗಳು ಗಲಭೆಯ ಹಿಂದಿವೆ. ತನಿಖೆಯಿಂದ ಬಯಲಿಗೆ ಬರಲಿದೆ' ಎಂದರು.

'ಹುಬ್ಬಳ್ಳಿ, ಡಿ.ಜೆ.ಹಳ್ಳಿ ಮಾದರಿಯ ಗಲಭೆ ದೇಶದ ಹಲವು ಕಡೆಗಳಲ್ಲಿ ನಡೆದಿವೆ. ಇವು ಇದಕ್ಕಿದ್ದಂತೆ ಆದ ಗಲಭೆಗಳಂತೂ ಅಲ್ಲ. ಆದರೆ, ಪೊಲೀಸರು ಹುಬ್ಬಳ್ಳಿಯಲ್ಲಿ ಭಾರಿ ಅನಾಹುತ ಆಗುವುದನ್ನು ತಪ್ಪಿಸಿರುವುದರಿಂದ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಇದರ ಹಿಂದಿರುವ ದೇಶದ್ರೋಹಿ ಸಂಘಟನೆಗಳು ಬಯಲಿಗೆ ಬರಲಿವೆ. ತಪ್ಪಿತಸ್ಥರನ್ನು ಮಾತ್ರ ಬಂಧಿಸಲಾಗುತ್ತಿದ್ದು, ತಪ್ಪು ಮಾಡದವರನ್ನು ಬಂಧಿಸುವುದಿಲ್ಲ' ಎಂದು ಜ್ಞಾನೇಂದ್ರ ಹೇಳಿದರು.

ಕಾಂಗ್ರೆಸ್ ಅಧಿಕಾರದ ಅವಧಿಯಲ್ಲಿ ಗಲಭೆಗಳು ನಡೆದಾಗ ಇಷ್ಟೆಲ್ಲ ಬಂಧನ ಆಗುತ್ತಿತ್ತೇ? ಕಟ್ಟುನಿಟ್ಟಾದ ತನಿಖೆ ನಡೆಯುತ್ತಿತ್ತೆ ಎಂದು ಪ್ರಶ್ನಿಸಿದ ಅವರು, ವಿಡಿಯೊ ದೃಶ್ಯಾವಳಿಗಳನ್ನು ಆಧರಿಸಿ ಅಪರಾಧ ಎಸಗಿದವರನ್ನು ಪತ್ತೆ ಮಾಡಿ ಬಂಧಿಸಲಾಗುತ್ತಿದೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ಪಿಎಸ್‌ಐ ನೇಮಕಾತಿ ಹಗರಣದ ಬಗ್ಗೆ ಸಣ್ಣ ದಾಖಲಾತಿ ಸಿಕ್ಕಿದ ಕೆಲವೇ ಗಂಟೆಗಳಲ್ಲಿ ಮುಖ್ಯಮಂತ್ರಿಯವರ ಅನುಮತಿ ಪಡೆದು ಸಿಐಡಿ ತಂಡವನ್ನು ರಚನೆ ಮಾಡಿದೆವು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿವ್ಯಾ ಹಾಗರಗಿಯನ್ನು ಬಂಧಿಸಲಾಗುವುದು. ಬಂಧಿಸದೇ ಬಿಟ್ಟರೆ ಅದು ವೈಫಲ್ಯವಾಗುತ್ತದೆ. ನಮ್ಮ ಆಡಳಿತದಲ್ಲಿ ಎಲ್ಲರಿಗೂ ಒಂದೇ ಕಾನೂನು' ಎಂದು ಹೇಳಿದರು.

ಗ್ರಾಮಸಹಾಯಕರ ವೇತನ ಹೆಚ್ಚಳಕ್ಕೆ ಒತ್ತಾಯ

ಬೆಂಗಳೂರು: ಕಂದಾಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಸಹಾಯಕರ ಕನಿಷ್ಠ ವೇತನವನ್ನು ₹ 21 ಸಾವಿರಕ್ಕೆ ಹೆಚ್ಚಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ರಾಜ್ಯ ಕಂದಾಯ ಇಲಾಖಾ ನೌಕರರ ಸಂಘದ ಅಧ್ಯಕ್ಷ ಎಸ್. ಕೃಷ್ಣಮೂರ್ತಿ ಒತ್ತಾಯಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, 'ದಿನಬಳಕೆ ವಸ್ತುಗಳ ದರ ಏರಿಕೆಯಿಂದ ಗ್ರಾಮಸಹಾಯಕರ ಜೀವನ ನಿರ್ವಹಣೆ ಕಷ್ಟಕರವಾಗಿದೆ. ಮನೆಯಲ್ಲಿರುವ ಹಿರಿಯರ ಪಾಲನೆ ಹಾಗೂ ವೈದ್ಯಕೀಯ ಚಿಕಿತ್ಸೆ ವೆಚ್ಚ ಭರಿಸಲೂ ಕಷ್ಟಪಡಬೇಕಾದ ಸ್ಥಿತಿ ಎದುರಾಗಿದೆ' ಎಂದು ಪರಿಸ್ಥಿತಿ ವಿವರಿಸಿದರು.

'ರಾಜ್ಯದಲ್ಲಿ 10,450 ಗ್ರಾಮಸಹಾಯಕರಲ್ಲಿ 3 ಸಾವಿರದಷ್ಟು ಮಂದಿ ಮಹಿಳೆಯರಿದ್ದಾರೆ. ಅವರಿಗೆ ಹೆರಿಗೆ ರಜೆ ನೀಡಬೇಕು. ತಿಂಗಳಿಗೆ ಒಂದರಂತೆ ವರ್ಷದಲ್ಲಿ 12 ದಿನ ವೇತನಸಹಿತ ರಜೆ ನೀಡಬೇಕು' ಎಂದು ಅವರು ಒತ್ತಾಯಿಸಿದರು.

'ಗ್ರಾಮಸೇವಕರು ಕೋವಿಡ್ ಸಂದರ್ಭದಲ್ಲಿ ಜೀವದ ಹಂಗು ತೊರೆದು ಕಾರ್ಯನಿರ್ವಹಿಸಿದ್ದಾರೆ. ಕೋವಿಡ್‌ನಿಂದ ಮೃತಪಟ್ಟ ಗ್ರಾಮಸಹಾಯಕರ ಕುಟುಂಬಗಳಿಗೆ ಸರ್ಕಾರ ಪರಿಹಾರ ನೀಡಬೇಕು. ಚುನಾವಣಾ ಸಂದರ್ಭದಲ್ಲಿ ಕಾರ್ಯನಿರ್ವಹಿಸುವ ಗ್ರಾಮ ಸಹಾಯಕರಿಗೆ ಚುನಾವಣಾ ಭತ್ಯೆ ನೀಡಬೇಕು. ರಾತ್ರಿಪಾಳಿ ಕೆಲಸವನ್ನು ರದ್ದುಪಡಿಸಬೇಕು' ಎಂದು ಆಗ್ರಹಿಸಿದರು.

'2022–23ನೇ ಸಾಲಿನ ಬಜೆಟ್‌ನಲ್ಲಿ ಗ್ರಾಮ ಸಹಾಯಕರ ವೇತನವನ್ನು ₹ 1000ದಷ್ಟು ಹೆಚ್ಚಳ ಮಾಡಲಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಈ ಕ್ರಮ ಅಭಿನಂದನೀಯ. ಆದರೆ ಈಗಿನ ಪರಿಸ್ಥಿತಿಗೆ ಇದು ಏನೇನೂ ಸಾಲದು. ನಮ್ಮ ನ್ಯಾಯಯುತ ಬೇಡಿಕೆ ಈಡೇರಿಸಲು ಸರ್ಕಾರ ಮುಂದಾಗಬೇಕು' ಎಂದರು.

ಸಂಘದ ಅಧ್ಯಕ್ಷ ಎಚ್.ಎನ್. ದೇವರಾಜು, ಪ್ರಮುಖರಾದ ಕೆ.ವಿ. ಶ್ರೀನಿವಾಸಮೂರ್ತಿ, ಎಂ.ಟಿ. ಕೆಂಪೇಗೌಡ, ಬಿ.ಆರ್. ರಾಜಶೇಖರಮೂರ್ತಿ ಇದ್ದರು.

ಡಿಕೆಶಿಗೆ ನಿಂದನೆ: ಗಿರಿಧರ್ ರೈ ಶಿಕ್ಷೆಗೆ ತಡೆಯಾಜ್ಞೆ

ಪುತ್ತೂರು: ಡಿ.ಕೆ. ಶಿವಕುಮಾರ್ ಅವರು ಇಂಧನ ಸಚಿವರಾಗಿದ್ದಾಗ, ಅವರಿಗೆ ಫೋನ್ ಕರೆ ಮಾಡಿ ನಿಂದಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಳ್ಳಾರೆಯ ಸಾಯಿ ಗಿರಿಧರ್ ರೈ ಅವರಿಗೆ ಸುಳ್ಯ ನ್ಯಾಯಾಲಯ ಪ್ರಕಟಿಸಿದ ಜೈಲು ಶಿಕ್ಷೆ ಆದೇಶಕ್ಕೆ ಪುತ್ತೂರಿನ ಐದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ತಡೆಯಾಜ್ಞೆ ನೀಡಿದೆ.

ಸುಳ್ಯ ನ್ಯಾಯಾಲಯದ ಆದೇಶದ ವಿರುದ್ಧ ಸಾಯಿ ಗಿರಿಧರ್ ರೈ ಅವರು ಪುತ್ತೂರಿನ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದರು.

'ಸರ್ಕಾರಿ ಅಧಿಕಾರಿಗಳು, ಸಾರ್ವಜನಿಕ ಸೇವೆಯಲ್ಲಿರುವವರನ್ನು ಪ್ರಶ್ನೆ ಮಾಡುವುದು ಅಪರಾಧವಲ್ಲ' ಎಂಬ ಕಕ್ಷಿದಾರರ ಪರ ವಕೀಲರ ವಾದವನ್ನು ಪುರಸ್ಕರಿಸಿದ ನ್ಯಾಯಾಲಯವು ಆದೇಶಕ್ಕೆ ತಡೆ ನೀಡಿದೆ. ಸಾಯಿ ಗಿರಿಧರ್ ರೈ ಅವರ ಪರವಾಗಿ ವಕೀಲ ಬಿ. ನರಸಿಂಹ ಪ್ರಸಾದ್ ವಾದ ಮಂಡಿಸಿದ್ದರು.

ಸುಳ್ಯ ತಾಲ್ಲೂಕಿನ ವಿದ್ಯುತ್ ಸಮಸ್ಯೆ ಕುರಿತಂತೆ ಗಿರಿಧರ ರೈ ಅವರು 2016ರ ಫೆ.28ರಂದು ಅಂದಿನ ಇಂಧನ ಸಚಿವ ಡಿ.ಕೆ. ಶಿವಕುಮಾರ್ ಅವರಿಗೆ ಫೋನ್ ಮಾಡಿ ತರಾಟೆಗೆ ತೆಗೆದುಕೊಂಡಿದ್ದರು. ಈ ಸಂದರ್ಭ ಅವರು ಅವಾಚ್ಯ ಶಬ್ದಗಳನ್ನು ಬಳಸಿದ್ದರು ಎಂದು ಆಪಾದಿಸಲಾಗಿತ್ತು. ಇದಕ್ಕೆ ಸಂಬಂಧಿಸಿ ಸಚಿವರ ಪರವಾಗಿ ಮೆಸ್ಕಾಂ ಅಧಿಕಾರಿಗಳು ಬೆಳ್ಳಾರೆ ಠಾಣೆಗೆ ದೂರು ನೀಡಿದ್ದರು. ನಿಂದನೆ, ಜೀವ ಬೆದರಿಕೆ, ಮಾನಹಾನಿ, ಕರ್ತವ್ಯಕ್ಕೆ ಅಡ್ಡಿ ಆರೋಪದಡಿಯಲ್ಲಿ ಪ್ರಕರಣ ದಾಖಲಾಗಿತ್ತು.

ಸುಳ್ಯ ನ್ಯಾಯಾಲಯ, ಏ.18ರಂದು ಆದೇಶಪ್ರಕಟಿಸಿ, ಸಾಯಿ ಗಿರಿಧರ್‌ರೈ ಅವರಿಗೆ 4 ಪ್ರಕರಣಗಳಲ್ಲಿ ತಲಾ 2 ವರ್ಷಗಳ ಜೈಲು ಶಿಕ್ಷೆ ವಿಧಿಸಿ ಆದೇಶಿಸಿತ್ತು.

ಪ್ರತ್ಯೇಕ ಪ್ರಕರಣ: ಸಂಜಯನಗರ ಪೊಲೀಸರಿಂದ ಮೂವರ ಬಂಧನ

ಕಳ್ಳತನ: ₹1.10 ಕೋಟಿ ಮೌಲ್ಯದ ವಸ್ತುಗಳು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮನೆಗಳಲ್ಲಿ ಕಳ್ಳತನ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಸಂಜಯನಗರ ಪೊಲೀಸರು ಬಂಧಿಸಿದ್ದು, ₹ 1.10 ಕೋಟಿ ಮೌಲ್ಯದ ಚಿನ್ನಾಭರಣ ಹಾಗೂ ಇತರೆ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ.

'ತೆಲಂಗಾಣದ ವಿನೋದ್ ಕುಮಾರ್, ಪಶ್ಚಿಮ ಬಂಗಾಳದ ರೋಹಿತ್ ಮಂಡಲ್ ಹಾಗೂ ತಮಿಳುನಾಡಿನ ಇಸಯ್ ರಾಜ್ ಬಂಧಿತರು. ಎರಡು ಪ್ರತ್ಯೇಕ ಕಳ್ಳತನ ಪ್ರಕರಣಗಳಲ್ಲಿ ಈ ಮೂವರನ್ನು ಬಂಧಿಸಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಹೇಳಿದರು.

'ವಿನೋದ್ ಹಾಗೂ ರೋಹಿತ್ ಇಬ್ಬರೂ ಸೇರಿ ಕಳ್ಳತನ ಮಾಡುತ್ತಿದ್ದರು. ಆರೋಪಿ ಇಸಯ್ ರಾಜ್, ಒಬ್ಬನೇ ಕಳ್ಳತನ ಎಸಗುತ್ತಿದ್ದ' ಎಂದೂ ತಿಳಿಸಿದರು.

ಯೂಟ್ಯೂಬ್ ವಿಡಿಯೊ ನೋಡಿ ಸಂಚು: '2015ರಲ್ಲಿ ಕಳ್ಳತನ ಪ್ರಕರಣದಲ್ಲಿ ವಿನೋದ್ ಜೈಲು ಸೇರಿದ್ದ. ಜಾಮೀನು ಮೇಲೆ ಹೊರಬಂದಿದ್ದ ಆತ, ಯಾವೆಲ್ಲ ಆಧುನಿಕ ವಸ್ತುಗಳನ್ನು ಬಳಸಿ ಕಳ್ಳತನ ಮಾಡಬಹುದೆಂದು ಯೂಟ್ಯೂಬ್‌ನಲ್ಲಿ ವಿಡಿಯೊ ನೋಡಿ ತಿಳಿದುಕೊಂಡಿದ್ದ' ಎಂದು ಪೊಲೀಸರು ಹೇಳಿದರು.

'ಆರೋಪಿ ವಿನೋದ್, ಬಾಂಗ್ಲಾದೇಶದ ಯುವತಿಯನ್ನು ಪ್ರೀತಿಸಿ ಮದುವೆಯಾಗಿದ್ದ. ಹೆಸರು ಬದಲಾಯಿಸಿಕೊಂಡು ಆರು ತಿಂಗಳು ಯುವತಿ ಜೊತೆ ಬಾಂಗ್ಲಾದಲ್ಲಿ ವಾಸವಿದ್ದ. ಅಲ್ಲಿ ಕೆಲಸ ಸಿಗದಿದ್ದರಿಂದ ಜೀವನ ನಡೆಸುವುದು ಕಷ್ಟವಾಗಿತ್ತು. ಹೀಗಾಗಿ, ಪಶ್ಚಿಮ ಬಂಗಾಳಕ್ಕೆ ವಾಪಸು ಬಂದು ವಾಸವಿದ್ದ. ಅದೇ ವೇಳೆ ಆತನಿಗೆ ರೋಹಿತ್ ಪರಿಚಯವಾಗಿತ್ತು' ಎಂದೂ ತಿಳಿಸಿದರು.

'15 ದಿನಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ನಗರಕ್ಕೆ ಬರುತ್ತಿದ್ದ ಆರೋಪಿಗಳು, ಬೈಕ್ ಕಳ್ಳತನ ಮಾಡಿ ಅದರಲ್ಲೇ ಸುತ್ತಾಡುತ್ತಿದ್ದರು. ಬೀಗ ಹಾಕಿರುತ್ತಿದ್ದ ಮನೆಗಳನ್ನು ಗುರುತಿಸಿ ಕಳ್ಳತನ ಎಸಗುತ್ತಿದ್ದರು' ಎಂದರು.

'ಇತ್ತೀಚೆಗೆ ಸಂಜಯನಗರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಆರೋಪಿಗಳು ಕಳ್ಳತನ ಮಾಡಿದ್ದರು. ಪ್ರಕರಣದ ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ. ಇಬ್ಬರಿಂದಲೂ ₹ 79.64 ಲಕ್ಷ ಮೌಲ್ಯದ 792 ಗ್ರಾಂ ಚಿನ್ನಾಭರಣ, ಮೊಬೈಲ್, ಲ್ಯಾಪ್‌ಟಾಪ್ ಹಾಗೂ ಇತರೆ ವಸ್ತುಗಳನ್ನು ಜಪ್ತಿ ಮಾಡಲಾಗಿದೆ' ಎಂದೂ ತಿಳಿಸಿದರು.

ಕಾರ್ಮಿಕನ ಸೋಗಿನಲ್ಲಿ ಕಳ್ಳತನ: 'ಇನ್ನೊಂದು ಪ್ರಕರಣದ ಆರೋಪಿ ಇಸಯ್ ರಾಜ್, ಎಲೆಕ್ಟ್ರಿಷಿಯನ್ ಹಾಗೂ ಸ್ವಚ್ಛತಾ ಕಾರ್ಮಿಕನ ಸೋಗಿನಲ್ಲಿ ಮನೆಗಳಿಗೆ ಹೋಗುತ್ತಿದ್ದ. ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ತಿಳಿದುಕೊಂಡು ಕಳ್ಳತನ ಎಸಗುತ್ತಿದ್ದ. ಆತನಿಂದ ₹ 30.87 ಲಕ್ಷ ಮೌಲ್ಯದ 475 ಗ್ರಾಂ ಚಿನ್ನಾಭರಣ, 900 ಗ್ರಾಂ ಬೆಳ್ಳಿ ಸಾಮಗ್ರಿ ಹಾಗೂ ಇತರೆ ವಸ್ತುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಮಾದಕ ವ್ಯಸನಿ ಆಗಿದ್ದ ಇಸಯ್‌ರಾಜ್‌ನನ್ನು ಕುಟುಂಬಸ್ಥರು ಪುನರ್ವಸತಿ ಕೇಂದ್ರಕ್ಕೆ ಸೇರಿಸಿದ್ದರು. ಎರಡು ವರ್ಷ ಚಿಕಿತ್ಸೆ ಪಡೆದು ಹೊರಬಂದಿದ್ದ ಆತನಿಗೆ ಯಾವುದೇ ಕೆಲಸ ಸಿಕ್ಕಿರಲಿಲ್ಲ. ಹಣ ಹೊಂದಿಸಲು ಕಳ್ಳತನಕ್ಕೆ ಇಳಿದಿದ್ದ. ಇದುವರೆಗೂ 13 ಕಡೆ ಕಳ್ಳತನ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದೂ ತಿಳಿಸಿದರು.

ಅಪರಾಧ ಸುದ್ದಿ

ಆರೋಪಿಗಳಿಂದ ಜಪ್ತಿ ಮಾಡಲಾದ ಚಿನ್ನಾಭರಣ, ಬೆಳ್ಳಿ ಸಾಮಗ್ರಿ ಹಾಗೂ ಇತರೆ ವಸ್ತುಗಳು

ಬೈಕ್‌ನಲ್ಲಿ ಮುದ್ದಾಟ; ಸವಾರನ ಬಂಧನ

ಚಾಮರಾಜನಗರ: ಬೈಕ್‌ನ ಟ್ಯಾಂಕ್ ಮೇಲೆ ಹುಡುಗಿಯನ್ನು ಕೂರಿಸಿಕೊಂಡು, ಮುದ್ದಾಡುತ್ತಾ ದ್ವಿಚಕ್ರ ವಾಹನ ಚಲಾಯಿಸಿ ಸಂಚಾರ ನಿಯಮ ಉಲ್ಲಂಘಿಸಿದ ಸವಾರನನ್ನು ನಗರ ಸಂಚಾರ ಠಾಣೆ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಎಚ್.ಡಿ.ಕೋಟೆ ತಾಲ್ಲೂಕಿನ ಶಿವಪುರದ ಸ್ವಾಮಿ.ಎಸ್.ಸಿ., ಬಂಧಿತ ಆರೋಪಿ. ಬೈಕ್ ಅನ್ನೂ ವಶಕ್ಕೆ ಪಡೆಯಲಾಗಿದೆ.

ಚಾಮರಾಜನಗರ–ಗುಂಡ್ಲುಪೇಟೆ ರಸ್ತೆಯಲ್ಲಿ ಯಡಬೆಟ್ಟದ ಬಳಿ ಆರೋಪಿಯು ಬೈಕ್‌ನ ಟ್ಯಾಂಕ್ ಮೇಲೆ ಹುಡುಗಿಯನ್ನು ಕೂರಿಸಿಕೊಂಡು ಅಪಾಯಕಾರಿಯಾಗಿ ದ್ವಿಚಕ್ರ ವಾಹನ ಚಲಾಯಿಸುತ್ತಿದ್ದ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು.

ಹುಡುಗಿಯು ಸವಾರನಿಗೆ ಎದುರಾಗಿ ಕುಳಿತು, ಸವಾರನನ್ನು ತಬ್ಬಿಕೊಂಡಿರುವ, ಇಬ್ಬರೂ ಚುಂಬಿಸುವ ದೃಶ್ಯಗಳ ತುಣುಕುಗಳು ವೈರಲ್ ಆಗಿದ್ದವು.

ವೈರಲ್ ಆಗಿರುವ ವಿಡಿಯೊದ ಚಿತ್ರ

ಹಲ್ಲೆಗೆ ಯತ್ನ: ಗಸ್ತಿನಲ್ಲಿದ್ದ ಇನ್‌ಸ್ಪೆಕ್ಟರ್ ನೋಡಿ ಪರಾರಿ

ಬೆಂಗಳೂರು: ಬಳ್ಳಾರಿ ರಸ್ತೆಯ ಹೆಬ್ಬಾಳ ಮೇಲ್ಸೇತುವೆಯಲ್ಲಿ ಮಾಹಿತಿ ಹಕ್ಕು ಕಾರ್ಯಕರ್ತ ಎಚ್.ಎಂ. ವೆಂಕಟೇಶ್ ಎಂಬುವವರ ಮೇಲೆ ದುಷ್ಕರ್ಮಿಗಳು ಹಲ್ಲೆಗೆ ಯತ್ನಿಸಿದ್ದಾರೆ. ಗಸ್ತಿನಲ್ಲಿದ್ದ ಯಲಹಂಕ ಇನ್‌ಸ್ಪೆಕ್ಟರ್ ಸತ್ಯನಾರಾಯಣ ಅವರು ಸ್ಥಳಕ್ಕೆ ಬರುತ್ತಿದ್ದಂತೆ ಆರೋಪಿಗಳು ಪರಾರಿಯಾಗಿದ್ದಾರೆ.

'ವೆಂಕಟೇಶ್ ಅವರನ್ನು ದುಷ್ಕರ್ಮಿಗಳು ಕಾರಿನಲ್ಲಿ ಹಿಂಬಾಲಿಸಿದ್ದರು. ಮೇಲ್ಸೇತುವೆಯಲ್ಲಿ ಅಡ್ಡಗಟ್ಟಿ ಹಲ್ಲೆಗೆ ಮುಂದಾಗಿದ್ದರು. ಅದೇ ಮಾರ್ಗದಲ್ಲಿ ಹೊರಟಿದ್ದ ಇನ್‌ಸ್ಪೆಕ್ಟರ್, ವೆಂಕಟೇಶ್ ರಕ್ಷಣೆಗೆ ಹೋಗಿದ್ದರು. ಅಷ್ಟರಲ್ಲೇ ಆರೋಪಿಗಳು ಕಾರು ಸಮೇತ ಪರಾರಿಯಾಗಿದ್ದಾರೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ನಗರದಲ್ಲಿ ಶುಕ್ರವಾರ 'ಬೆಂಗಳೂರು ವಕೀಲರ ಸಂಘ' ಆಯೋಜಿಸಿದ್ದ ವಾರ್ಷಿಕೋತ್ಸವ ಸಮಾರಂಭದಲ್ಲಿ ಶುಕ್ರವಾರ ನಿವೃತ್ತಿ ಹೊಂದಿದ ಹೈಕೋರ್ಟ್ ನ್ಯಾಯಮೂರ್ತಿ ಎಸ್.ಸುಜಾತ ಅವರನ್ನು ಗೌರವಿಸಲಾಯಿತು. (ಎಡದಿಂದ) ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಜಿ ರವಿ, ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಬೆಂಗಳೂರು ನಗರ ಜಿಲ್ಲಾ ಪ್ರಧಾನ ನ್ಯಾಯಾಧೀಶ ಅನಿಲ್ ಬಿ. ಕಟ್ಟಿ ಮತ್ತು ಖಜಾಂಜಿ ಎಂ.ಟಿ. ಹರೀಶ್ ಇದ್ದರು –ಪ್ರಜಾವಾಣಿ ಚಿತ್ರ

ಹೈಕೋರ್ಟ್ ನ್ಯಾಯಮೂರ್ತಿ ಎಸ್. ಸುಜಾತಗೆ ಬೀಳ್ಕೊಡುಗೆ

ಬೆಂಗಳೂರು: ನಿವೃತ್ತಿ ಹೊಂದುತ್ತಿರುವ ಹೈಕೋರ್ಟ್ ನ್ಯಾಯಮೂರ್ತಿ ಎಸ್. ಸುಜಾತ ಅವರಿಗೆ ಕರ್ನಾಟಕ ವಕೀಲರ ಪರಿಷತ್ ಮತ್ತು ಬೆಂಗಳೂರು ವಕೀಲರ ಸಂಘದಿಂದ ಆತ್ಮೀಯ ಬೀಳ್ಕೊಡುಗೆ ನೀಡಲಾಯಿತು.

ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳ ಕೋರ್ಟ್ ಹಾಲ್ ಸಂಖ್ಯೆ 1ರಲ್ಲಿ ನಡೆದ ಸರಳ ಸಮಾರಂಭದಲ್ಲಿ ಅವರಿಗೆ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಸಮ್ಮುಖದಲ್ಲಿ ಬೀಳ್ಕೊಡುಗೆ ನೀಡಿ, ನಿವೃತ್ತ ಜೀವನಕ್ಕೆ ಶುಭ ಹಾರೈಸಲಾಯಿತು.

ಸುಜಾತ ಅವರು 1960ರ ಮೇ 20ರಂದು ಜನಿಸಿದ್ದರು. ಬೆಂಗಳೂರಿನ ಶ್ರೀಜಗದ್ಗುರು ರೇಣುಕಾ ಕಾನೂನು ಕಾಲೇಜಿನಿಂದ ಪದವಿ ಪಡೆದ ಅವರು, ಹೈಕೋರ್ಟ್ ವಕೀಲರಾಗಿ ವೃತ್ತಿ ಆರಂಭಿಸಿದರು. ತೆರಿಗೆ, ಅಬಕಾರಿ, ಸಿವಿಲ್, ಸಾಂವಿಧಾನಿಕ, ಶಿಕ್ಷಣ, ಸೇವಾ ಮತ್ತು ಕಾರ್ಮಿಕ ಕಾನೂನಿನಲ್ಲಿ ಪರಿಣತರಾಗಿದ್ದರು. 1995ರಿಂದ 2000 ಮತ್ತು 2005ರಿಂದ 2014ರವರೆಗೂ ಸರ್ಕಾರಿ ವಕೀಲರಾಗಿ ಸೇವೆ ಸಲ್ಲಿಸಿದ್ದರು.

2015ರ ಜನವರಿ 2ರಂದು ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು. 2022ರ ಮೇ 19ರಂದು ಸೇವೆಯಿಂದ ನಿವೃತ್ತರಾಗಲಿದ್ದಾರೆ. ಶನಿವಾರದಿಂದ (ಏ.23) ಹೈಕೋರ್ಟ್‌ಗೆ ಬೇಸಿಗೆ ರಜೆ ಆರಂಭವಾಗಲಿರುವ ಹಿನ್ನೆಲೆಯಲ್ಲಿ ಶುಕ್ರವಾರವೇ ಬೀಳ್ಕೊಡುಗೆ ನೀಡಲಾಯಿತು.

25ರಿಂದ ದೊಡ್ಡಗುಬ್ಬಿ ಜಾತ್ರಾ ಮಹೋತ್ಸವ

ಬೆಂಗಳೂರು: ಬಿದರಹಳ್ಳಿ ಹೋಬಳಿಯ ದೊಡ್ಡಗುಬ್ಬಿಯಲ್ಲಿ ಇದೇ 25ರಿಂದ 30ರವರೆಗೆ 'ದೊಡ್ಡಗುಬ್ಬಿ ಜಾತ್ರಾ ಮಹೋತ್ಸವ' ನಡೆಯಲಿದೆ.

ಜಾತ್ರೆಯಲ್ಲಿ ಸಿಡಿ ಉತ್ಸವ, ಕರಗ, ಕೆಂಡ ಹಾಯುವುದು, ಬಾಯಿ ಬೀಗ ಹರಕೆ, ಮುತ್ತಿನ ಪಲ್ಲಕ್ಕಿ ಹಾಗೂ ಮೆರವಣಿಗೆ ನಡೆಯಲಿವೆ. ಗ್ರಾಮದಲ್ಲಿರುವ ಐತಿಹಾಸಿಕ ಪ್ರಸಿದ್ಧ ಶ್ರೀಸೋಮೇಶ್ವರ ಸ್ವಾಮಿ, ವೇಣುಗೋಪಾಲ ಸ್ವಾಮಿ ಮತ್ತು ಅಂಜನೇಯ ಸ್ವಾಮಿ ದೇವರಿಗೆ ವಿಶೇಷ ಪೂಜೆ ನೆರವೇರಲಿದೆ ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕ: 8197224971

ಮುಕ್ತ ವಿ.ವಿ: ಮೂವರಿಗೆ ಗೌರವ ಡಾಕ್ಟರೇಟ್

ಮೈಸೂರು: ಬೆಂಗಳೂರಿನ ಆರ್‌.ವಿ.ವಿಶ್ವವಿದ್ಯಾಲಯದ ಪ್ರೊ ಚಾನ್ಸಲರ್ ಎ.ವಿ.ಎಸ್‌.ಮೂರ್ತಿ, ಟಿಸಿಎಸ್ ಉಪಾಧ್ಯಕ್ಷ ಇ.ಎಸ್‌.ಚಕ್ರವರ್ತಿ ಹಾಗೂ ವಿಆರ್‌ಎಲ್ ಸಮೂಹ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಆನಂದ ಸಂಕೇಶ್ವರ ಅವರಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪ್ರಕಟಿಸಿದೆ.

ಎ.25ರಂದು ನಡೆಯುವ 17ನೇ ಘಟಿಕೋತ್ಸವದಲ್ಲಿ ರಾಜ್ಯಪಾಲರು ಪದವಿ ಪ್ರದಾನ ಮಾಡುವರು.

ಮೆರವಣಿಗೆ ಬೆಂಗಳೂರಿನ ವಿಧಾನಸೌಧದ ಮುಂಭಾಗದಲ್ಲಿ ವಿಶ್ವ ಭೂ ದಿನದ ಅಂಗವಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ವಿವಿಧ ಸಂಘಟನೆಗಳು ಶುಕ್ರವಾರ ಹಮ್ಮಿಕೊಂಡಿದ್ದ ಮೆರವಣಿಗೆಯಲ್ಲಿ ಕಾಲೇಜು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ದ್ವೇಷ ಭಾಷಣ: ಸರಿಯಾದ ಅಫಿಡವಿಟ್ ಸಲ್ಲಿಸಲು ಸೂಚನೆ

ದೆಹಲಿ ಪೊಲೀಸರ ನಿಲುವು ಪ್ರಶ್ನಿಸಿದ 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕಳೆದ ಡಿಸೆಂಬರ್‌ನಲ್ಲಿ ಇಲ್ಲಿ ನಡೆದ ಧರ್ಮ ಸಂಸತ್ ಕಾರ್ಯಕ್ರಮದಲ್ಲಿ ಜನರು 'ಸಮುದಾಯಗಳ ನೈತಿಕತೆ ಉಳಿಸಲು' ಒಟ್ಟುಗೂಡಿದ್ದರು' ಎಂದು ದೆಹಲಿ ಪೊಲೀಸರ ನಿಲುವಿನ ವರದಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ಪ್ರಶ್ನಿಸಿದೆ.

ದ್ವೇಷ ಭಾಷಣ ಆರೋಪದ ಪ್ರಕರಣದಲ್ಲಿ ಸರಿಯಾದ ಅಫಿಡವಿಟ್ ಸಲ್ಲಿಸಲು ತನಿಖಾ ಸಂಸ್ಥೆಗೂ ಸೂಚಿಸಿದೆ.

ಅರ್ಜಿದಾರರಾದ ಪತ್ರಕರ್ತ ಕುರ್ಬಾನ್ ಅಲಿ ಮತ್ತು ನಿವೃತ್ತ ನ್ಯಾಯಾಧೀಶೆ ಅಂಜನಾ ಪ್ರಕಾಶ್ ಪರ ಹಾಜರಾದ ಹಿರಿಯ ವಕೀಲ ಕಪಿಲ್ ಸಿಬಲ್, ದ್ವೇಷ ಭಾಷಣದ ಆರೋಪದ ಪ್ರಕರಣ ಸಂಬಂಧ ಪೊಲೀಸರು ಸಲ್ಲಿಸಿರುವ ತನಿಖಾ ವರದಿಯನ್ನು ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ಅವರ ನೇತೃತ್ವದ ಪೀಠದ ಗಮನಕ್ಕೆ ತಂದರು.

ತನಿಖಾಧಿಕಾರಿಯ ವರದಿ ಉಲ್ಲೇಖಿಸಿ, 'ಸಾಂವಿಧಾನಿಕವಾಗಿ ನೈತಿಕತೆ ಅಂದರೆ ಏನೆಂಬುದನ್ನು ನ್ಯಾಯಾಲಯ ನಿರ್ಧರಿಸಬೇಕಾಗಬಹುದು' ಎಂದು ವಾದಿಸಿದರು.

'ಈ ವರದಿಯನ್ನು ಯಾರಾದರೂ ಉನ್ನತ ಅಧಿಕಾರಿ ಪರಿಶೀಲಿಸಿದ್ದಾರೆಯೇ? ಇಲ್ಲ, ಸಬ್ ಇನ್‌ಸ್ಪೆಕ್ಟರ್ ಮಟ್ಟದ ಅಧಿಕಾರಿಯ ವಿಚಾರಣಾ ವರದಿಯನ್ನು ಯಥಾವತ್ ಸಲ್ಲಿಸಲಾಗಿದೆಯೇ ಅಥವಾ ಅವರ ಮನಸ್ಸಿನಲ್ಲಿ ಇದ್ದಿದ್ದನ್ನು ಹೊರಹಾಕಲಾಗಿದೆಯೇ? ಇದು ಸಹ ನಿಮ್ಮ ನಿಲುವೇ' ಎಂದು ನ್ಯಾಯಪೀಠವು ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ. ನಟರಾಜ್ ಅವರನ್ನು ಪ್ರಶ್ನಿಸಿತು.

'ಇದು ದೆಹಲಿ ಪೊಲೀಸ್ ಕಮಿಷನರ್ ಅವರ ನಿಲುವೇ? ಅಥವಾ ಇಡೀ ಪ್ರಕರಣ ಮರುಪರಿಶೀಲಿಸಲು ಬಯಸುವಿರಾ' ಎಂದು ಪೀಠವು ನಟರಾಜ್ ಅವರನ್ನು ಪ್ರಶ್ನಿಸಿತು. ಆಗ ನಟರಾಜ್ ಅವರು, 'ಇಡೀ ಪ್ರಕರಣ ಮರುಪರಿಶೀಲಿಸಿ ಸರಿಯಾದ ಅಫಿಡವಿಟ್ ಸಲ್ಲಿಸಲಾಗುವುದು' ಎಂದು ಪೀಠದ ಗಮನಕ್ಕೆ ತಂದರು. ಮೇ 4 ಅಥವಾ ಅದಕ್ಕೂ ಮೊದಲೇ ಹೊಸ ಅಫಿಡವಿಟ್ ಸಲ್ಲಿಸಲು ದೆಹಲಿ ಪೊಲೀಸರಿಗೆ ಪೀಠ ಸಮಯ ನೀಡಿದೆ. ಮುಂದಿನ ವಿಚಾರಣೆಯನ್ನು ಮೇ 9ಕ್ಕೆ ನಿಗದಿಪಡಿಸಿದೆ.

'ಧರ್ಮ ಸಂಸದ್' ಕಾರ್ಯಕ್ರಮದ ವಿಡಿಯೊ ಪರಿಶೀಲಿಸಲಾಗಿದೆ. ನಿರ್ದಿಷ್ಟ ಸಮುದಾಯದ ವಿರುದ್ಧ ಯಾವುದೇ ದ್ವೇಷದ ಪದಗಳು ಬಳಕೆಯಾಗಿಲ್ಲ. ಹಾಗಾಗಿ ದೂರುಗಳನ್ನು ಕೈಬಿಡಲಾಗುತ್ತಿದೆ' ಎಂದು ದೆಹಲಿ ಪೊಲೀಸರು ನ್ಯಾಯಾಲಯಕ್ಕೆ ಅಫಿಡವಿಟ್ ಸಲ್ಲಿಸಿದ್ದರು.

ಪ್ರತಿಕ್ರಿಯಿಸಲು ಕೇಂದ್ರಕ್ಕೆ ಸೂಚನೆ

ನವದೆಹಲಿ (ಪಿಟಿಐ): ದೇಶದಲ್ಲಿ ದ್ವೇಷ ಭಾಷಣ ಮತ್ತು ವದಂತಿ ಹರಡುವುದನ್ನು ನಿಯಂತ್ರಿಸಲು ಅಂತರರಾಷ್ಟ್ರೀಯ ಕಾನೂನುಗಳನ್ನು ಪರಿಶೀಲಿಸಿ ಪರಿಣಾಮಕಾರಿ ಮತ್ತು ಕಠಿಣ ಕ್ರಮ ಜಾರಿಗೆ ತರಲು ಕೇಂದ್ರಕ್ಕೆ ನಿರ್ದೇಶನ ನೀಡಲು ಕೋರಿ ಸಲ್ಲಿಸಿರುವ ಮನವಿಗೆ ಪ್ರತಿಕ್ರಿಯಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ಸೂಚಿಸಿದೆ.

ನ್ಯಾಯಮೂರ್ತಿಗಳಾದ ಎ.ಎಂ. ಖಾನ್ವಿಲ್ಕರ್ ಮತ್ತು ಅಭಯ್ ಎಸ್. ಓಕಾ ಅವರಿದ್ದ ಪೀಠವು, ಈ ಬಗ್ಗೆ ಪರಿಶೀಲಿಸಲು ಮತ್ತು ಸಂಬಂಧಪಟ್ಟ ಇಲಾಖೆಗಳಿಂದ ಸೂಕ್ತ ಪ್ರತಿಕ್ರಿಯೆ ಸಲ್ಲಿಸುವಂತೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ಸೂಚಿಸಿತು.

ಹಿರಿಯ ವಕೀಲ ವಿಕಾಸ್ ಸಿಂಗ್ ಅರ್ಜಿದಾರರ ಪರ ಹಾಜರಾಗಿದ್ದರು. ವಕೀಲ ಹಾಗೂ ಬಿಜೆಪಿ ಮುಖಂಡ ಅಶ್ವಿನಿ ಕುಮಾರ್ ಉಪಾಧ್ಯಾಯ, ವಕೀಲ ಅಶ್ವಿನಿ ದುಬೆ ಅವರ ಮೂಲಕ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿಯ ರಿಟ್ ಅರ್ಜಿ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಆರಂಭಿಸಿದೆ.

ದಾಖಲೆಗಳ ಪರಿಶೀಲನೆ ಬಳಿಕ ಪ್ರಕರಣ ಇತ್ಯರ್ಥ: ತಹಶೀಲ್ದಾರ್ ಭರವಸೆ

ಮಸೀದಿ ನವೀಕರಣ ತಾತ್ಕಾಲಿಕ ಸ್ಥಗಿತ

ಪ್ರಜಾವಾಣಿ ವಾರ್ತೆ

ಮಂಗಳೂರು: ಗಂಜಿಮಠ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಳಲಿ ಮಸೀದಿಗೆ ಸಂಬಂಧಿಸಿದಂತೆ ಗೊಂದಲ ಮೂಡಿರುವುದರಿಂದ ಯಥಾಸ್ಥಿತಿ ಕಾಪಾಡಲು ಜಿಲ್ಲಾಧಿಕಾರಿ ಸೂಚನೆ ನೀಡಿದ್ದು, ಕಾಮಗಾರಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್, 'ಮಳಲಿ ಮಸೀದಿಯ ನವೀಕರಣದ ವೇಳೆ ಉಂಟಾಗಿರುವ ಗೊಂದಲ ಪರಿಹಾರ ಆಗುವವರೆಗೆ ಮುಂಜಾಗ್ರತೆಯಾಗಿ ಬಂದೋಬಸ್ತ್ ಮಾಡಲಾಗಿದೆ' ಎಂದು ತಿಳಿಸಿದ್ದಾರೆ.

'ಹಳೆಯ ಕಟ್ಟಡ ಕೆಡವಿದಾಗ ಮರದ ರಚನೆ ಕಂಡುಬಂದಿದೆ. ನೋಡಲು ದೇವಸ್ಥಾನದಂತಿದೆ ಎಂದು ಕೆಲವರು ಮಸೀದಿ ಮುಖ್ಯಸ್ಥರ ಜತೆ ಚರ್ಚಿಸಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿದ್ದ ತಹಶೀಲ್ದಾರ್ ದಾಖಲೆ ಪರಿಶೀಲಿಸಿ ಸೌಹಾರ್ದವಾಗಿ ಪ್ರಕರಣ ಬಗೆಹರಿಸುವುದಾಗಿ ಹೇಳಿದ್ದಾರೆ' ಎಂದರು.

'ಈ ಮಸೀದಿಗೆ 900 ವರ್ಷದ ಇತಿಹಾಸವಿದೆ. ನವೀಕರಣಕ್ಕಾಗಿ ಹೊರಗಿನ ಭಾಗವನ್ನು ಕೆಡವಲಾಗಿತ್ತು.



ಮಳಲಿ ಮಸೀದಿಯ ಒಳಭಾಗ

ಮಸೀದಿಯ ಒಳಭಾಗದ ಚಿತ್ರವನ್ನು ದೇವಸ್ಥಾನ ಎಂಬಂತೆ ಸಾಮಾಜಿಕ ಜಾಲತಾಣದಲ್ಲಿ ಸಂದೇಶ ಹರಡಿರುವುದೇ ಗೊಂದಲಕ್ಕೆ ಕಾರಣ. ಅಧಿಕಾರಿಗಳು ದಾಖಲೆಗಳನ್ನು ವಶಕ್ಕೆ ಪಡೆದಿದ್ದು, ವಾರದಲ್ಲಿ ಸಮಸ್ಯೆ ಪರಿಹರಿಸುವ ಭರವಸೆ ನೀಡಿದ್ದಾರೆ' ಎಂದು ಮಸೀದಿಯ ಅಧ್ಯಕ್ಷ ಮುಹಮ್ಮದ್ ಮಾಮು ತಿಳಿಸಿದ್ದಾರೆ.

ಸಂಶಯವಿದೆ: 'ಇಲ್ಲಿ ಯಾವುದೋ ಕಾಲದಲ್ಲಿ ದೇವಸ್ಥಾನವನ್ನು ಕೆಡವಿ ಮಸೀದಿ ನಿರ್ಮಿಸಿರಬಹುದು ಎನ್ನುವ ಸಂದೇಹ ನಮಗಿದೆ' ಎಂದು ವಿಶ್ವ ಹಿಂದೂ ಪರಿಷತ್ ವಿಭಾಗೀಯ ಕಾರ್ಯದರ್ಶಿ ಶರಣ್ ಪಂಪ್‌ವೆಲ್ ಹೇಳಿದ್ದಾರೆ.

'ಪುರಾತತ್ವ ಇಲಾಖೆಯ ಮೂಲಕ ಇಲ್ಲಿ ಸ್ಥಳ ಹಾಗೂ ದಾಖಲೆಗಳನ್ನು ಪರಿಶೀಲಿಸಬೇಕು. ಮಸೀದಿ ಇದ್ದದ್ದೇ ನಿಜವಾಗಿದ್ದರೆ, ನವೀಕರಣ ಮಾಡಲು ನಮ್ಮದೇನೂ ಅಭ್ಯಂತರವಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

ಮಧ್ಯಂತರ ತಡೆಯಾಜ್ಞೆ

ಮಳಲಿ ಮಸೀದಿಯಲ್ಲಿ ನವೀಕರಣ ಕಾಮಗಾರಿಗೆ ಇಲ್ಲಿನ ಮೂರನೇ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಲಯ ಮಧ್ಯಂತರ ತಡೆಯಾಜ್ಞೆ ನೀಡಿದೆ.

ಗಂಜಿಮಠ ನಿವಾಸಿ ಧನಂಜಯ ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಂಡ ಕೋರ್ಟ್, ಕಾಮಗಾರಿ ನಡೆಸದಂತೆ ಮತ್ತು ದೇವಸ್ಥಾನವನ್ನು ಹೋಲುವ ಕಟ್ಟಡದ ಭಾಗಕ್ಕೆ ಹಾನಿ ಉಂಟುಮಾಡುವುದಕ್ಕೆ ತಡೆಯಾಜ್ಞೆ ನೀಡಿದೆ. ಮುಂದಿನ ವಿಚಾರಣೆಯವರೆಗೆ ಕಟ್ಟಡದ ಒಳಗೆ ಮಸೀದಿ ಕಮಿಟಿಯವರಿಗೆ, ಅನುಯಾಯಿಗಳಿಗೆ ಪ್ರವೇಶ ನಿಷೇಧಿಸಿದೆ.

ಶರಣ್‌ಗೆ ಏನು ಕೆಲಸ: ಕಾಟಿಪಳ್ಳ ಪ್ರಶ್ನೆ

'ಜಾತ್ರೆ ಸಂದರ್ಭದಲ್ಲಿ ದೇವಸ್ಥಾನದ ಆವರಣಗಳಲ್ಲಿ ಮುಸ್ಲಿಮರು ವ್ಯಾಪಾರ ಮಾಡಬಾರದು ಎಂದು ಗಲಾಟೆ ಎಬ್ಬಿಸುವ ಶರಣ್ ಪಂಪ್‌ವೆಲ್‌ಗೆ ಮಸೀದಿಯ ಒಳಗೆ ಏನು ಕೆಲಸ' ಎಂದು ಡಿವೈಎಫ್‌ಐ ರಾಜ್ಯ ಘಟಕದ ಅಧ್ಯಕ್ಷ ಮುನೀರ್ ಕಾಟಿಪಳ್ಳ ಪ್ರಶ್ನಿಸಿದ್ದಾರೆ. 'ಮಸೀದಿಗೆ ಅಕ್ರಮ ಪ್ರವೇಶ ಮಾಡಿ, ಸೌಹಾರ್ದಕ್ಕೆ ಧಕ್ಕೆ ತರುವ ರೀತಿ ವರ್ತಿಸಿದ ಶರಣ್ ಪಂಪ್‌ವೆಲ್ ಮತ್ತು ಅವರ ತಂಡದ ಮೇಲೆ ಪ್ರಕರಣ ದಾಖಲಿಸಿ ಜೈಲಿಗೆ ಹಾಕಬೇಕಿತ್ತು. ಜಿಲ್ಲಾಧಿಕಾರಿ ಹಾಗೂ ಪೊಲೀಸ್ ಕಮಿಷನರ್ ಕಾನೂನುಭಂಜಕರ ಮುಂದೆ ತಲೆ ತಗ್ಗಿಸುವುದು, ರಾಜಕೀಯ ಬಲವುಳ್ಳ, ಬಹುಸಂಖ್ಯಾತ ಮತೀಯವಾದದ ಎದುರು ಮೌನಕ್ಕೆ ಶರಣಾಗುವುದು ಖಂಡನೀಯ' ಎಂದಿದ್ದಾರೆ.

ನಾಳೆ ಅಂಬೇಡ್ಕರ್ ಪ್ರತಿಮೆ ಲೋಕಾರ್ಪಣೆ

ಆನೇಕಲ್: ಡಾ.ಬಿ.ಆರ್.ಅಂಬೇಡ್ಕರ್ ಸೇವಾ ಟ್ರಸ್ಟ್, ದಲಿತ ಮತ್ತು ಪ್ರಗತಿಪರ ಚಳವಳಿಗಳ ಒಕ್ಕೂಟದ ವತಿಯಿಂದ ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಕಂಚಿನ ಪ್ರತಿಮೆ ಲೋಕಾರ್ಪಣೆ ಭಾನುವಾರ (ಏ.24) ಸರ್ಜಾಪುರದಲ್ಲಿ ನಡೆಯಲಿದೆ ಎಂದು ಟ್ರಸ್ಟ್‌ನ ಅಧ್ಯಕ್ಷ ವೈ.ಶ್ರೀರಾಮುಲು ತಿಳಿಸಿದರು.

ಸಂದೇಹ ಇದ್ದರೂ ರೌಡಿ ಪಟ್ಟಿಗೆ ಸೇರ್ಪಡೆ : ಹೈಕೋರ್ಟ್

ಬೆಂಗಳೂರು: 'ಒಬ್ಬ ವ್ಯಕ್ತಿಯ ವಿರುದ್ಧ ಎಫ್‌ಐಆರ್ ದಾಖಲಾಗದಿದ್ದರೂ ಮತ್ತು ನ್ಯಾಯಾಲಯದಿಂದ ಯಾವುದೇ ಶಿಕ್ಷೆಗೆ ಗುರಿಯಾಗಿಲ್ಲ ಎಂದರೂ ಸಂದೇಹಿತ ವ್ಯಕ್ತಿಯನ್ನು ರೌಡಿ ಪಟ್ಟಿಗೆ ಸೇರಿಸಬಹುದು' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

'ಅಪರಾಧ ಪ್ರಕರಣಗಳಿಗೆ ಸಂಬಂಧಿಸಿದ ಆರೋಪಗಳಿಂದ ಮುಕ್ತನಾಗಿದ್ದರೂ ಪೊಲೀಸರು ನನ್ನ ವಿರುದ್ಧ ರೌಡಿಶೀಟ್ ತೆರೆದಿದ್ದಾರೆ. ಖುಲಾಸೆಯಾದ ನಂತರವೂ ರೌಡಿಶೀಟ್ ತೆರೆಯುವುದು ಮೂಲಭೂತ ಹಕ್ಕಿಗೆ ಚ್ಯುತಿ ಉಂಟುಮಾಡಿದಂತೆ' ಎಂದು ಆಕ್ಷೇಪಿಸಿ ರೌಡಿ ಶೀಟರ್‌ಗಳಾದ ನಾಗರಾಜು ಅಲಿಯಾಸ್ ಬಾಂಬ್ ನಾಗ ಮತ್ತು ಅವರ ಮೂವರು ಪುತ್ರರು, ರಾಕೇಶ್ ಮಲ್ಲಿ, ಬಿ.ಎಸ್. ಪ್ರಕಾಶ್ ಸೇರಿದಂತೆ ಒಟ್ಟು 19 ಜನರು ಸಲ್ಲಿಸಿದ್ದ ಪ್ರತ್ಯೇಕ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ತಿರಸ್ಕರಿಸಿದೆ.

'ನಾಗರಿಕ ಸಮಾಜದಲ್ಲಿ ರೌಡಿ ಚಟುವಟಿಕೆಗಳಿಗೆ ಅವಕಾಶ ವಿರಬಾರದು. ಅದನ್ನು ನಿಯಂತ್ರಿಸಲು ಪೊಲೀಸರು ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ನಿರ್ದೇಶಿಸಿರುವ ನ್ಯಾಯಪೀಠ, ಬ್ರಿಟಿಷ್ ಮುತ್ಸದ್ದಿ ಲಾರ್ಡ್ ವಿಲಿಯಂ ಬೆಂಟಿಕ್ ಸುಧಾರಣೆಗಳನ್ನು ಉದಾಹರಿಸಿದೆ. ಅಂತೆಯೇ ಅಮೆರಿಕ, ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ಕಾನೂನುಗಳನ್ನೂ ಸೋದಾಹರಣವಾಗಿ ಉಲ್ಲೇಖಿಸಿದೆ.

'ಒಬ್ಬ ಅಪರಾಧಿಕ ವ್ಯಕ್ತಿಯನ್ನು ರೌಡಿ ಶೀಟರ್ ಎಂದು ಹೆಸರಿಸುವ ಹಾಗೂ ಅಂತಹ ಇತಿಹಾಸ ಹೊಂದಿರುವವರನ್ನು ರೌಡಿ ಪಟ್ಟಿಯಿಂದ ಕೈಬಿಡಬೇಕು ಎಂಬ ಕೋರಿಕೆಗಳ ಬಗ್ಗೆ ಶಾಸಕಾಂಗ ವಿಸ್ತೃತ ಕಾನೂನು ರಚಿಸಬೇಕು' ಎಂದೂ ನ್ಯಾಯಪೀಠ ಇದೇ ವೇಳೆ ಅಭಿಪ್ರಾಯಪಟ್ಟಿದೆ.

'ಹತ್ತಿಪ್ಪತ್ತು ವರ್ಷಗಳ ಹಿಂದೆಯೇ ರೌಡಿ ಶೀಟರ್‌ನಿಂದ ಖುಲಾಸೆ ಆಗಿದ್ದಾನೆ ಎಂದ ಮಾತ್ರಕ್ಕೆ ಅಂತಹ ವ್ಯಕ್ತಿಯನ್ನು ರೌಡಿ ಪಟ್ಟಿಯಿಂದ ಕೈಬಿಡಲು ಆಗುವುದಿಲ್ಲ. ಈ ವಿಷಯದಲ್ಲಿ ಪೊಲೀಸರು ಸೂಕ್ಷ್ಮ ಮಾಹಿತಿ ಆಧರಿಸಿಯೇ ತೀರ್ಮಾನಕ್ಕೆ ಬಂದಿರುತ್ತಾರೆ. ಹಾಗಾಗಿ ಪೊಲೀಸರಿಗೆ ಅನುಮಾನ ಇದ್ದರೆ ಅಂತಹವರನ್ನು ರೌಡಿ ಶೀಟರ್‌ನಿಂದ ತೆಗೆಯಲು ಆಗುವುದಿಲ್ಲ' ಎಂದು ನ್ಯಾಯಪೀಠ ಈ ಕುರಿತಂತೆ ಮಾರ್ಗಸೂಚಿ ರಚಿಸಿದೆ.

ಅರ್ಜಿದಾರರ ಪರ ಹಿರಿಯ ವಕೀಲ ಸಂದೇಶ್ ಚೌಟ, ಪಿ. ಪ್ರಸನ್ನಕುಮಾರ್, ಅಮಿಕಸ್ ಕ್ಯೂರಿ ಆಗಿ ಶ್ರೀಧರ ಪ್ರಭು, ಸರ್ಕಾರದ ಪರ ವಿನೋದ ಕುಮಾರ್ ವಾದ ಮಂಡಿಸಿದ್ದರು.

ಪರಿಶಿಷ್ಟ ಯುವಕರ ಕೊಲೆ

ತುಮಕೂರು: ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಪೆದ್ದನಹಳ್ಳಿಯಲ್ಲಿ ಗುರುವಾರ ರಾತ್ರಿ ಪರಿಶಿಷ್ಟ ಸಮುದಾಯಕ್ಕೆ ಸೇರಿದ ಇಬ್ಬರು ಯುವಕರನ್ನು ಕೊಲೆ ಮಾಡಲಾಗಿದ್ದು, ಗ್ರಾಮದಲ್ಲಿ ಬಿಗುವಿನ ವಾತಾವರಣ ತಲೆದೋರಿದೆ.

ಪೆದ್ದನಹಳ್ಳಿಯ ಪರಿಶಿಷ್ಟ ಜಾತಿಗೆ ಸೇರಿದ ಪಿ.ಎಂ.ಗಿರೀಶ್ (32), ಮಂಚಲದೊರೆ ಗ್ರಾಮದ ಪರಿಶಿಷ್ಟ ಪಂಗಡಕ್ಕೆ ಸೇರಿದ ಗಿರೀಶ್ (33) ಕೊಲೆಯಾದವರು. ಈ ಬಗ್ಗೆ ಅದೇ ಗ್ರಾಮದ ಲಿಂಗಾಯತ ಸಮುದಾಯಕ್ಕೆ ಸೇರಿದ ನಂದೀಶ್, ಇತರರ ವಿರುದ್ಧ ಪ್ರಕರಣ ದಾಖಲಾಗಿದೆ.

ಮನೆಗೆ ರಾತ್ರಿ ಬಂದಿದ್ದ ಆರೋಪಿ ನಂದೀಶ್ ಎಂಬುವರು ಪಿ.ಎಂ.ಗಿರೀಶ್ ಅವರನ್ನು ಕರೆದುಕೊಂಡು ಹೋಗಿದ್ದಾರೆ. ಶುಕ್ರವಾರ ಬೆಳಿಗ್ಗೆ ಗ್ರಾಮದ ನೀರಿನ ಕಟ್ಟೆಯಲ್ಲಿ ಅವರ ಶವ ತೇಲುತ್ತಿರುವುದು ಪತ್ತೆಯಾಗಿದ್ದು, ದಾರಿಹೋಕರು ಕುಟುಂಬಸ್ಥರಿಗೆ ಮಾಹಿತಿ ನೀಡಿದ್ದಾರೆ. ಅನತಿ ದೂರದಲ್ಲಿ ಮತ್ತೊಬ್ಬ ಯುವಕ ಗಿರೀಶ್ ಮೃತದೇಹ ದೊರೆತಿದೆ. ಇಬ್ಬರ ದೇಹದ ಮೇಲೆ ತೀವ್ರ ಗಾಯದ ಗುರುತುಗಳಿವೆ.

'ನಂದೀಶ್ ಹಾಗೂ ಇತರರು ಸೇರಿಕೊಂಡು ಇಬ್ಬರನ್ನು ಕೊಲೆ ಮಾಡಿದ್ದಾರೆ' ಎಂದು ಗಿರೀಶ್ ಸಹೋದರ ಪಿ.ಎಂ.ಶ್ರೀಧರ್ ಪೊಲೀಸರಿಗೆ ದೂರು ನೀಡಿದ್ದಾರೆ.

ಸ್ಥಳಕ್ಕೆ ಶ್ವಾನದಳ ಕರೆಸಲಾಗಿತ್ತು. ಶ್ವಾನಗಳು ಹಲವು ಮನೆಗಳ ಬಳಿಗೆ ಹೋಗಿದ್ದವು. ಇದರಿಂದ ಆತಂಕಗೊಂಡ ಪೆದ್ದನಹಳ್ಳಿ ಯ ಪುರುಷರು ಮನೆಗಳನ್ನು ತೊರೆದಿದ್ದು, ಗ್ರಾಮದಲ್ಲಿ ಮೌನ ಆವರಿಸಿದೆ.

ಕೃಷಿ ಪಂಪ್‌ಸೆಟ್ ಕೇಬಲ್ ಕಳವು ಮಾಡಲು ಹೋಗಿದ್ದ ಸಮಯದಲ್ಲಿ ಜನರ ಕೈಗೆ ಸಿಕ್ಕಿಬಿದ್ದಿದ್ದು ಆ ಸಮಯದಲ್ಲಿ ಕೊಲೆ ನಡೆದಿರಬಹುದು. ಜತೆಯಲ್ಲಿ ಕಳ್ಳತನಕ್ಕೆ ಹೋಗಿದ್ದ ಮತ್ತಿಬ್ಬರು ಪರಾರಿಯಾಗಿದ್ದಾರೆ ಎಂಬ ಅನುಮಾನವೂ ವ್ಯಕ್ತವಾಗಿದೆ. ಮೃತರ ವಿರುದ್ಧ ಗುಬ್ಬಿ, ಚೇಳೂರು ಠಾಣೆಯಲ್ಲಿ ಕಳವು ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಬೃ.ನೀ.ಕಾ–ಪಶ್ಚಿಮ ವಲಯ ಬೃ.ಬೆಂ.ಮ.ಪಾ, 9ನೇ ಮಹಡಿ, 4ನೇ ಬ್ಲಾಕ್, ಜಯನಗರ, ಬೆಂಗಳೂರು – 560 011.
ಸಂಖ್ಯೆ: ಕಾಪಾಅ/ಬೃನೀಕಾ/ಪವ/ಟೆಂಡರ್/01/2022–23 ದಿನಾಂಕ: 22.04.2022

ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ) – 2ನೇ ಕರೆ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬೃ.ನೀ.ಕಾ, ಪಶ್ಚಿಮ ವಲಯ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಇವರು ಬೃ.ಬೆಂ.ಮ.ಪಾಲಿಕೆಯಲ್ಲಿ ಅಥವಾ ಸಮನಾಂತರವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಕೆಳಗೆ ತಿಳಿಸಿರುವ ಕಾಮಗಾರಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (ಸ್ಟ್ಯಾ.ಟೆಂ.ದಾ–ಕೆಡಬ್ಲ್ಯೂ–2, 3)

ಕ್ರ ಸಂ.	ಕಾಮಗಾರಿಗಳ ಹೆಸರು	ಟೆಂಡರ್‌ಗಿಟ್ಟ ಅಂದಾಜು ಮೊತ್ತ (₹. ಲಕ್ಷಗಳಲ್ಲಿ)	ಇಎಂಡಿ (₹.ಗಳಲ್ಲಿ)
1	ವಾರ್ಡ್ ಸಂಖ್ಯೆ–100 ಬಸವೇಶ್ವರನಗರದ 3ನೇ ಹಂತ, 9ನೇ ಮುಖ್ಯರಸ್ತೆಯಲ್ಲಿ ಹಾನಿಯಾದ ಕಲ್ವರ್ಟ್‌ಗೆ ರಿಮಾಡಲಿಂಗ್ ಮಾಡುವುದು. (2ನೇ ಕರೆ)	30.00	60,000
2	ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಯು ಆಕಾರದ ಚರಂಡಿ ನಿರ್ಮಾಣ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು. (2ನೇ ಕರೆ)	100.00	2,00,000

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: 25.04.2022ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: 07.05.2022ರ ಸಂಜೆ 4:00 ಗಂಟೆಯೊಳಗಾಗಿ ಅಥವಾ ಮುಂಚಿತವಾಗಿ. (3) ಬಿಡ್ ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ (ಬೃ.ನೀ.ಕಾ–ಪಶ್ಚಿಮ ವಿಭಾಗ) ಇಲ್ಲಿ ದಿನಾಂಕ 28.04.2022ರ ಸಂಜೆ 4:30 ಗಂಟೆಗೆ ನಡೆಸಲಾಗುವುದು. (4) ಬಿಡ್‌ಗಳನ್ನು ತೆರೆಯುವ ದಿನಾಂಕ: 09.05.2022 ರ ಸಂಜೆ 4:30 ಗಂಟೆಯ ನಂತರ. (5) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ತಾಂತ್ರಿಕ ಬಿಡ್‌ಗಳಿಗೆ ಅನುಮೋದನೆ ದೊರೆತ ನಂತರ ತಿಳಿಸಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಬೃ.ನೀ.ಕಾಲುವೆ (ಪಶ್ಚಿಮ ವಲಯ)

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

GOVERNMENT OF KARNATAKA
Rural Drinking Water & Sanitation Department
Office of the Executive Engineer, Rural Drinking Water & Sanitation Division, Karwar. Po:Habbuwada, Karwar, Uttara Kannada Dist.-581 306.
Phone: 08382-229735 E-mail: eerdwsd.uk@gmail.com
NO.: EE/RDWSD/KWR/KERWADI&GOTEGALI-MVS/DBOT/2022-23/124 DATE: 21.04.2022

TENDER NOTIFICATION

On behalf of Governor of Karnataka Executive Engineer, Rural Drinking Water & Sanitation Division, Karwar has invited tenders from the eligible bidders through E-procurement for the following work in Two cover system under DBOT. The tender procedure as per rule 28 of the KTTP Act and Standard Tender Document KW-IV shall be followed. The tenders are required to submit through E-procurement portal https://www.eproc.karnataka.gov.in as follows:
(1) Downloading of document through e-proc portal starts from: 23.04.2022 (2) Time & date of Pre-Bid Conference: **02.05.2022** Time: 11.30 Hrs. Venue: Office of The Chief Engineer, Rural Drinking Water & Sanitation Dept. 1st Floor, E Block, KHB, Complex, Cauveri Bhavan, K. G. Road, Bangalore -560 009. (3) Last Date & Time for Receipt of Bids: **23.05.2022, Time: 17.30 Hrs.** (4) Date & Time of Technical Bid Opening: **25.05.2022, Time: 11:30 Hrs.** (5) Date & Time of Financial Bid Opening: Will be opened after approval of Technical Bid.
Name of the work: (1) PART-A: DESIGN AND BUILD OF THE WORK OF Augmentation to Combined Multi Village Water Supply Scheme to Gotegali & other 42 Habitations and Kerwadi & other 41 Habitations in Karwar Taluk of Uttara Kannada District, Karnataka through Design, Build, Operate and Transfer (DBOT) mode under Jal Jeevan Mission, **EMD:** Rs. 71.50 Lakhs*, **Tender processing fee**: As per e-procurement portal, **Time for Completion** (including Rainy season): **18 Months**, **Class of Contractor:** Class-I (KPWD/CPWD or any other Government organization) And foreign companies having office in India -having requisite qualification
(2) PART-B: OPERATION AND MAINTENANCE: OPERATION AND MAINTENANCE OF THE WORK CONSTRUCTED ABOVE UNDER PART – A FOR A PERIOD OF 5 YEARS AND TRANSFER AT THE END OF 5 YEARS IN WORKING CONDITION, **Time for Completion** (including Rainy season): 60 months after completion of Part A
The Tenders must be accompanied by Earnest Money Deposit (EMD) of Rs.71,50,000 (Rupees Seventy One Lakh Fifty Thousand only), out of which Rs.7,00,000 (Rupees Seven Lakh only) shall be paid online through e - Procurement Portal using any of the Payment Modes viz., Credit Card, Direct Debit, National Electronic Fund Transfer (NEFT), Over the Counter (OTC) and the balance amount of Rs.64,50,000 (Rupees Sixty Four Lakh Fifty Thousand only) in the form of unconditional Bank Guarantee (BG)
More details can be had from the office of the undersigned **(Phone: 08382-229735 E-mail: eerdwsd.uk@gmail.com)** and also through website **https://www.eproc.karnataka.gov.in** by clicking list of Tenders which will link to all dept works list.

Sd/- Executive Engineer, RDW&S Division, Karwar, Uttara Kannada District

ಕರ್ನಾಟಕ ಸರ್ಕಾರ
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ
(ಕರ್ನಾಟಕ ಸರಕಾರ ಸ್ವಾಯತ್ತ ಸಂಸ್ಥೆ)
ಇ–ಮೇಲ್ directorgimsgulbarga@gmail.com ದೂ.: 08472-260252
ವಿರೇಶ ನಗರ, ಸೇಡಂ ರಸ್ತೆ, ಕಲಬುರಗಿ
ಸಂಖ್ಯೆ:ಜಿಮ್ಸ್/ಕೆಎಲ್‌ಬಿ/ಟೆಂಡರ/ಸಿಆರ್–3/OBG & OPTHALPG/2022–23/105 ದಿನಾಂಕ:20/04/2022

ಟೆಂಡರ ಪ್ರಕಟಣೆ

ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿಯ ಓ.ಬಿ.ಜಿ. ಮತ್ತು ನೇತ್ರಶಾಸ್ತ್ರ (OBG Schedule-A & OPHTHALMOLOGY DEPARTMENT Schedule-B) ಯಂತೆ ಸದರಿ ವಿಭಾಗಗಳಿಗೆ ಅವಶ್ಯಕವಿರುವ ಸ್ನಾತಕೋತ್ತರ ವೈದ್ಯಕೀಯ ಉಪಕರಣ ಹಾಗೂ ಸಲಕರಣೆಗಳನ್ನು ಖರೀದಿಸಲು ಅಧೀಕೃತ ಏಜೇನ್ಸಿ (ಸಂಸ್ಥೆ) ಯವರಿಂದ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರ್‌ಮೆಂಟ ಮೂಲಕ ಟೆಂಡರ ಕರೆಯುಲಾಗಿದೆ. ಎಲ್ಲಾ ವಿವರಗಳು www.eproc.karnataka.gov.in ಜಾಲತಾಣದಲ್ಲಿ ನೋಡಬಹುದಾಗಿದೆ.
1) ಟೆಂಡರ ಪ್ರಕಟಣೆ ಸಂಖ್ಯೆ: ಸಂಖ್ಯೆ:GIMS/KLB/TENDER/CR-4/ OBG & OPTHALPG/2022-23: ದಿನಾಂಕ 20/04/2022 ME/2022-23/IND4431, 2) ಟೆಂಡರ ಪ್ರಕಟಣೆ: ದಿನಾಂಕ 20/04/2022, 3) ಆನ್‌ಲೈನ್ ಟೆಂಡರ ಫಾರಂಗಳನ್ನು ಡೌನಲೋಡ್ ಮಾಡಿಕೊಂಡು, ಟೆಂಡರ ಅನ್ನು E-Procurment portal ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ: **20/05/2022** ರ ಸಾಯಂಕಾಲ **4:30pm** ಕ್ಕೆ, 4) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: **21/05/2022** ರ ಸಾಯಂಕಾಲ : **05:00pm** ಕ್ಕೆ, 5) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ: **23/05/2022** ರ ಬೆಳಿಗ್ಗೆ : **11:30am** ಕ್ಕೆ, 6) ಪೂರ್ವ ಬಿಡ್ ಸಭೆ: **05/05/2022** ರ ಬೆಳಿಗ್ಗೆ **12:30 pm** ಕ್ಕೆ, 7) ಟೆಂಡರ ಅಂದಾಜು ಮೊತ್ತ: ರೂ. **1,17,00,000=00,** 8) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ.ವೊತ್ತ : Variable EMD ಕನಿಷ್ಠ Rs. 1250/- ಗರಿಷ್ಟ 1,00,000/-, 9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ ರಜಾ ದಿನಗಳನ್ನು ಹೊರತುಪಡಿಸಿ: ನಿರ್ದೇಶಕರು, ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ. ದೂರವಾಣಿ ಸಂಖ್ಯೆ: 08472–260252 ಮೊ. 9448712914.

ಸಹಿ/– ನಿರ್ದೇಶಕರು
ವಾ.ಸಾ.ಸಂ.ಇ/ಕಲಬುರಗಿ/74/ಎಂ.ಸಿ&ಎ/2022–23 ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಕಲಬುರಗಿ.

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ವಿಭಾಗ: ಯಾದಗಿರಿ.
ಸಂ.ಕಾನಿಅ/ಲೋಇ/ಯಾವಿ/ತಾಶಾ–1&2/ಇ–ಟೆಂಡರ್ ಪ್ರಕಟಣೆ/2022–23/103 ದಿನಾಂಕ: 20.04.2022

ಅಲ್ಪಾವಧಿ ಇ –ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ : ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–1, 2 ಮತ್ತು 3 ರಂತೆ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2020–21 ಹಾಗೂ 2021–22ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಯೋಜನೆ ಹಾಗೂ ಇತರೆ ವಿವಿದ ಲೆಕ್ಕಶೀರ್ಷಿಕೆಗಳ ಅಡಿಯಲ್ಲಿ ಒಟ್ಟು 10 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ವರ್ಕ ಇಂಡೆಂಟ್ ಸಂಖ್ಯೆ: (1) 151673, (2) 151401, (3) 150658 (4) 148762, (5) 151727 (6) 151726 (7) 151728, ಎಸ್.ಸಿ.ಮೀಸಲಾತಿ: 1) 151672, (2)151394 ಎಸ್.ಟಿ.ಮೀಸಲಾತಿ: 1) 148758, 2) ಕಾಮಗಾರಿ ಅಂದಾಜು ಮೊತ್ತ: ಕನಿಷ್ಠ ರೂ.2.91 ಲಕ್ಷಗಳು ಹಾಗೂ ಗರಿಷ್ಠ ರೂ: 85.00 ಲಕ್ಷಗಳು, 3) ಗುತ್ತಿಗೆದಾರರ ಅರ್ಹತೆ ವಿವರ : 4ನೇ ದರ್ಜೆ ಹಾಗೂ ಮೇಲ್ಪಟ್ಟು, 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ: ಅರ್ಜಿ ಬೆಲೆ ಮತ್ತು ಕಾಲಾವಧಿ e-procurement ನಂತೆ, ಇ.ಎಮ್.ಡಿ. ಕನಿಷ್ಠ ರೂ: 7300.00, ಗರಿಷ್ಠ ರೂ:170000.00, 6) ಟೆಂಡರ ಬಗ್ಗೆ ಮಾಹಿತಿ ಹಾಗು ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: 27.04.2022 (17.30 ಗಂಟೆವರೆಗೆ), 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 30.04.2022 (16.00 ಗಂಟೆವರೆಗೆ), 8) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್: 02.05.2022 (11.30 ಗಂಟೆ)(ಕೆಡಬ್ಲ್ಯೂ– 1 & 2ರ ಕಾಮಗಾರಿಗಳಿಗೆ ಮಾತ್ರ), 9) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್: 02.05.2022 (11.30 ಗಂಟೆ) (ಕೆಡಬ್ಲ್ಯೂ– 3 ರ ಕಾಮಗಾರಿಗಳಿಗೆ ಮಾತ್ರ), 10) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್: 05.05.2022 (11.30 ಗಂಟೆ)(ಕೆಡಬ್ಲ್ಯೂ– 3 ರ ಕಾಮಗಾರಿಗಳಿಗೆ ಮಾತ್ರ), 11) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ, 12) ಅಂತರ್ಜಾಲ ತಾಣದ ವಿಳಾಸ: www.e-proc.karnataka.gov.in

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ. ವಿಭಾಗ: ಯಾದಗಿರಿ
ವಾ.ಸಾ.ಸಂ.ಇ/ಯಾದಗಿರಿ/26/ಎಂಸಿಎ/2022–23

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಒಂದು ಉದ್ಯಮ)
ಕಾರ್ಯಾಲಯ : ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿ(ನಿ), ಶಶಾಕಾ,ಪಾ & ಪೋ, ವಿಭಾಗ, ಭೀಮರಾಯನಗುಡಿ
ಈಮೇಲ್ ಐಡಿ: kbjnleesbc@gmail.com
ಸಂ:ಕೃಭಾಜನಿನಿ/ಶಶಾಕಾ/ಪಾ&ಪೋ/ಭೀಗುಡಿ/ಪಿಬಿ/ಟೆಂಡರ/2022–23/33 ದಿನಾಂಕ: 18–04–2022

ಟೆಂಡರ್ ತಿದ್ದುಪಡಿ ಪ್ರಕಟಣೆ–2 (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಉಲ್ಲೇಖ:– 1) ಈ ಕಛೇರಿಯ ಟೆಂಡರ್ ಪ್ರಕಟಣೆ ಸಂ. 884, ದಿನಾಂಕ: 29.03.2022
2) ಈ ಕಛೇರಿಯ ಟೆಂಡರ್ ತಿದ್ದುಪಡಿ ಪ್ರಕಟಣೆ ಸಂ. 931, ದಿನಾಂಕ: 31.03.2022
ಅನಿವಾರ್ಯ ಕಾರಣಗಳಿಂದಾಗಿ ಉಲ್ಲೇಖ(1)&(2) ಪತ್ರದಲ್ಲಿನ ಟೆಂಡರ್ ಪ್ರಕಟಣೆಯಲ್ಲಿನ ಇಂಡೆಂಟ್ ಸಂ.22007 ರ ವೇಳಾಪಟ್ಟಿಯನ್ನು ಈ ಕೆಳಗಿನಂತೆ ಮೂಂದೂಡಲಾಗಿದೆ ಹಾಗೂ ಉಳಿದಂತೆ ಟೆಂಡರ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.
1) ಇ–ಟೆಂಡರಿಂಗ ಕೊನೆಯ ದಿನಾಂಕ: **28.04.2022 ಸಾಯಂಕಾಲ 05.00 ಘಂಟೆ ವರೆಗೆ,** 2) ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ: **30.04.2022 ಮುಂಜಾನೆ 11.30 ಗಂಟೆಗೆ, ಸದರಿ ವಿಭಾಗ ಕಛೇರಿಯಲ್ಲಿ,** 3) ಆರ್ಥಿಕ ಟೆಂಡರ್ ತೆರೆಯುವ ದಿನಾಂಕ: **16.05.2022 ಮುಂಜಾನೆ 11.30 ಗಂಟೆಗೆ ಅಥವಾ ಆರ್ಥಿಕ ಟೆಂಡರ್ ಅನುಮೋದನೆಗೊಂಡ ನಂತರ**
ಮೇಲೆ ನೀಡಲಾದ ಟೆಂಡರ್‌ನ ಹೆಚ್ಚಿನ ಮಾಹಿತಿಯನ್ನು ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಕಛೇರಿ ಸಮಯದಲ್ಲಿ ಮತ್ತು ಇ–ಟೆಂಡರ್ ವೆಬ್‌ಸೈಟ್ www.eproc.karnataka.gov.in ನಲ್ಲಿ ಸಹ ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿ(ನಿ), ಶಶಾಕಾ ನಿಮಪೋ ವಿಭಾಗ ಭೀಮರಾಯನಗುಡಿ.
ವಾ.ಸಾ.ಸಂ.ಇ/ಯಾದಗಿರಿ/25/ಎಂಸಿಎ/2022–23

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಬೆಳಗಾವಿ
ಪಂಚಾಯತ ರಾಜ ಇಂಜಿನಿಯರಿಂಗ್ ವಿಭಾಗ ಚಿಕ್ಕೋಡಿ
ಕಚೇರಿ ದೂರವಾಣಿ / ಫ್ಯಾಕ್ಸ್ ಸಂಖ್ಯೆ: 08338–272131, ಇ–ಮೇಲ್ : preckdee@gmail.com
ಕ್ರ.ಸಂ. ಪಂರಾಇಂ/ಚಿವಿ/ಡಿವಿ/ಡಿಬಿ/ಇ–ಪ್ರೋ/2022–23/250 ದಿನಾಂಕ: 20–04–2022

ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಚಿಕ್ಕೋಡಿ ಇವರು KW-1, KW-2, KW-3, KW-4, (Standard Tender Document) ನಿಬಂಧನೆಗಳೊಪಟ್ಟಂತೆ ಪಂಚಾಯತ ರಾಜ್ ಇಂಜಿನೀಯರಿಂಗ್ / ಲೋಕೋಪಯೋಗಿ ಇಲಾಖೆಯಲ್ಲಿ ಸಿವ್ಹಿಲ್ ನೊಂದಾಯಿತ ಹಾಗೂ ಇ–ಗುತ್ತಿಗೆ ಕುರಿತು ಇ–ಪ್ರೊಕ್ಯೂರ್‌ಮೆಂಟ್ ಇವರಿಂದ ನೊಂದಾಯಿಸಿದ ಅರ್ಹ ಗುತ್ತಿಗೆದಾರರುಗಳಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ವಿವಿಧ ಯೋಜನೆ ಅಡಿಯಲ್ಲಿಯ ಕಾಮಗಾರಿಗಳಿಗೆ ಐಟಂವಾರು ಟರ್ನಕೀ ಆಧಾರದ ಮೇಲೆ ಇ–ಟೆಂಡರ್ ಆಹ್ವಾನಿಸಲಾಗಿದೆ.

1	Last date of request for issue of blank E-bid document trhough e-procurement date other works	20-04-2022 to 09-05-2022
2	Bid Closing & Submission date: other works	09-05-2022 at 4:00 PM
3	Financial Bid Opening date	02-05-2022 at 11:00 AM
4	Pre-Bid Meeting date (KW-3 & 4 only)	11-05-2022 at 11:00 AM
5	Technical Bid Opening DAte (KW-3 & 4 only)	11-05-2022 at 11:00 AM
6	Financial Bid opening date (KW-3 & 4 only)	13-05-2022 at 11:00 PM
General Works Indent No"s		89935, 89936, 89937, 89939, 89940, 89941, 89942, 89943, 89944, 89945, 89946, 89922, 89923, 89925, 89926, 89927, 89911, 89912, 89914, 89915, 89917, 89918, 89919, 89920, 89881, 89081, 89982, 89883, 89886, 89888, 89889, 89891, 89892, 89893, 89894, 89895, 89896, 89897, 89898, 89899, 89900, 89901, 89902, 89903, 89904, 89906, 89907, 89909, 89910, 89950, 89951, 87528, 87530, 89969, 89957, 89958, 89959, 89961, 89962, 89948, 89967, 89956, 89954, 89955, 89953, 89952.
SC Works Indent No's		89921, 89924, 89928, 89913, 89884, 89885, 89908, 89960
ST Works Indent No's		89929, 89890, 89968, 89949,

ಕಾಮಗಾರಿಗಳ ವಿವಿರ, ಷರತ್ತು ನಿಬಂಧನೆಗಳಿಗಾಗಿ ಈ ಕಚೇರಿಗೆ ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್‌ಸೈಟ್ www.eproc.karnatakat.gov.in ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾಜ್. ಇಂ. ವಿಭಾಗ, ಚಿಕ್ಕೋಡಿ.
DIPO/RO No. 102/2022-23

ದ್ವಿತೀಯ ಪಿಯು ಪರೀಕ್ಷೆ– ಮೊದಲ ದಿನ ಬಹುತೇಕ ಸುಸೂತ್ರ

ಹಿಜಾಬ್: ಮೂವರು ವಿದ್ಯಾರ್ಥಿನಿಯರು ಗೈರು

ಪ್ರಜಾವಾಣಿ ವಾರ್ತೆ

ಉಡುಪಿ: ಹಿಜಾಬ್ ಧರಿಸಿ ಪರೀಕ್ಷೆ ಬರೆಯಲು ಅವಕಾಶ ನಿರಾಕರಿಸಿದ ಕಾರಣಕ್ಕೆ ಹಿಜಾಬ್‌ಗಾಗಿ ಹೋರಾಟ ನಡೆಸುತ್ತಿರುವ ವಿದ್ಯಾರ್ಥಿನಿಯರಾದ ಅಲಿಯಾ ಅಸಾದಿ ಹಾಗೂ ರೇಶಮ್ ಶುಕ್ರವಾರ ದ್ವಿತೀಯ ಪಿಯುಸಿ ಪರೀಕ್ಷೆ ಬರೆಯದೆ ಮನೆಗೆ ವಾಪಸಾದರು.

ಚಿಕ್ಕಬಳ್ಳಾಪುರದ ಸರ್ ಎಂ. ವಿಶ್ವೇಶ್ವರಯ್ಯ ಪದವಿಪೂರ್ವ ಕಾಲೇಜಿನ ಪರೀಕ್ಷಾ ಕೇಂದ್ರದಿಂದಲೂ, ಹಿಜಾಬ್ ತೆರೆಯಲು ನಿರಾಕರಿಸಿದ ವಿದ್ಯಾರ್ಥಿನಿ ನೂರ್ ಮಿಸ್ಬಾ ಕ್ವಾನೈನ್ ಅವರು ಪರೀಕ್ಷಾ ಕೇಂದ್ರದಿಂದ ಹೊರನಡೆದಿದ್ದಾರೆ.

ಉಡುಪಿಯಲ್ಲಿ ತಹಶೀಲ್ದಾರ್ ಅರ್ಚನಾ ಭಟ್ ಮತ್ತು ಕಾಲೇಜು ಪ್ರಾಂಶುಪಾಲರು ಮನವೊಲಿಸಲು ಯತ್ನಿಸಿದರೂ ವಿದ್ಯಾರ್ಥಿನಿಯರು ಒಪ್ಪಲಿಲ್ಲ. ಕೊಠಡಿಗೆ ತೆರಳುವ ಗಡುವು ಮುಗಿದಿದ್ದರಿಂದ ಹೊರಗೆ ಕಳಿಸಲಾಯಿತು. ಈ ಬಗ್ಗೆ ಪ್ರತಿಕ್ರಿಯಿಸಲು ವಿದ್ಯಾರ್ಥಿಗಳು ನಿರಾಕರಿಸಿದರು.

ಹಿಜಾಬ್‌ಗಾಗಿ ಕಾನೂನು ಹೋರಾಟ ನಡೆಸುತ್ತಿರುವವರಲ್ಲಿ ಇಬ್ಬರು ವಾಣಿಜ್ಯ ವಿಭಾಗ, ನಾಲ್ವರು ವಿಜ್ಞಾನ ವಿಭಾಗದ ವಿದ್ಯಾರ್ಥಿನಿಯರು. ಹಿಂದೆ ಆಂತರಿಕ ಪರೀಕ್ಷೆಗಳಿಗೆ ಎಲ್ಲರೂ ಗೈರಾಗಿದ್ದರು. ಈಗ ವಾರ್ಷಿಕ ಪರೀಕ್ಷೆಯ ಮೊದಲ ದಿನವೇ ಅಲಿಯಾ ಅಸಾದಿ, ರೇಶಮ್ ಗೈರಾಗಿದ್ದಾರೆ.

ದ.ಕ. ಜಿಲ್ಲೆಯಲ್ಲಿ ಗೊಂದಲವಿಲ್ಲ: ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಯಾವುದೇ ಗೊಂದಲಗಳು ಆಗಿಲ್ಲ. ಹಿಜಾಬ್, ಬುರ್ಖಾ ಧರಿಸಿಕೊಂಡು ಬಂದಿದ್ದವರೂ ಅದನ್ನು ತೆಗೆದು ಪರೀಕ್ಷೆಗೆ ಹಾಜರಾದರು.

ಮಂಗಳೂರಿನ ರಥಬೀದಿಯ ಸರ್ಕಾರಿ ಪದವಿಪೂರ್ವ ಕಾಲೇಜಿನ ಬಳಿ ವಿದ್ಯಾರ್ಥಿನಿಯೊಬ್ಬರು ರಸ್ತೆ ಬದಿಯಲ್ಲಿಯೇ ಬುರ್ಖಾ ತೆಗೆಯುತ್ತಿರುವುದು ಕಂಡು ಬಂದಿದೆ. ವಿದ್ಯಾರ್ಥಿನಿಯರಿಗೆ ಬುರ್ಖಾ, ಹಿಜಾಬ್ ತೆಗೆಯಲು ಕೊಠಡಿ ವ್ಯವಸ್ಥೆ ಮಾಡದಿರುವುದಕ್ಕೆ ಆಕ್ರೋಶ ವ್ಯಕ್ತವಾಗಿದೆ.

ಶಾಸಕ ರಘುಪತಿ ಭಟ್ ಖಂಡನೆ: 'ಪರೀಕ್ಷೆಗೆ ಗೈರಾಗಿರುವ ವಿದ್ಯಾರ್ಥಿನಿಯರು ಹೈಕೋರ್ಟ್‌ಗಿಂತ ದೊಡ್ಡವರಲ್ಲ. ನ್ಯಾಯಾಂಗ ನಿಂದನೆ ಆರೋಪದಡಿ ವಿದ್ಯಾರ್ಥಿನಿಯರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಬೇಕು' ಎಂದು ಶಾಸಕ ರಘುಪತಿ ಭಟ್ ಒತ್ತಾಯಿಸಿದರು.

ಉಡುಪಿಯಲ್ಲಿ ಹಿಜಾಬ್ ಧರಿಸಿ ಪರೀಕ್ಷೆ ಬರೆಯಲು ಅವಕಾಶ ನಿರಾಕರಿಸಿದ ಕಾರಣಕ್ಕೆ ವಿದ್ಯಾರ್ಥಿನಿಯರಾದ ಅಲಿಯಾ ಅಸಾದಿ ಹಾಗೂ ರೇಶಮ್ ಶುಕ್ರವಾರ ದ್ವಿತೀಯ ಪಿಯುಸಿ ಪರೀಕ್ಷೆ ಬರೆಯದೆ ಮನೆಗೆ ವಾಪಸಾದರು (ಎಡಚಿತ್ರ), ಬೆಂಗಳೂರಿನ ಬಸವನಗುಡಿಯ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ಶುಕ್ರವಾರ ವಿದ್ಯಾರ್ಥಿನಿಯರು ಪರೀಕ್ಷೆಗೆ ಮುನ್ನ ತಮ್ಮ ನೋಂದಣಿ ಸಂಖ್ಯೆ ಮತ್ತು ಕೊಠಡಿಗಳ ಸಂಖ್ಯೆಯನ್ನು ಪರಿಶೀಲಿಸಿದರು – ಪ್ರಜಾವಾಣಿ ಚಿತ್ರ

10,830 ವಿದ್ಯಾರ್ಥಿಗಳು ಗೈರು

ಬೆಂಗಳೂರು: ಕೋವಿಡ್-19 ಕಾರಣಕ್ಕೆ ಒಂದು ವರ್ಷದ ಅಂತರದ ಬಳಿಕ ಪೂರ್ಣ ಪ್ರಮಾಣದಲ್ಲಿ ನಡೆಯುತ್ತಿರುವ ದ್ವಿತೀಯ ಪಿಯುಸಿ ಪರೀಕ್ಷೆ ಬಹುತೇಕ ಸುಸೂತ್ರವಾಗಿ ಆರಂಭವಾಗಿದೆ.

ಕೋವಿಡ್ ಕಾರಣ ಕಳೆದ ವರ್ಷ ದ್ವಿತೀಯ ಪಿಯುಸಿ ಪರೀಕ್ಷೆ ನಡೆದಿರಲಿಲ್ಲ. ಈ ಸಾಲಿನಲ್ಲಿ ಕೋವಿಡ್ ಭೀತಿ ಕಡಿಮೆಯಾಗಿರುವ ಕಾರಣ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ.

ಮೊದಲ ದಿನವಾದ ಶುಕ್ರವಾರ, ತರ್ಕಶಾಸ್ತ್ರ ಮತ್ತು ವ್ಯವಹಾರ ಅಧ್ಯಯನ ಪರೀಕ್ಷೆಗಳು ನಡೆದವು. ಈ ವಿಷಯಗಳಿಗೆ ನೋಂದಾಯಿಸಿಕೊಂಡಿದ್ದ ಒಟ್ಟು 2.36 ಲಕ್ಷ ವಿದ್ಯಾರ್ಥಿಗಳಲ್ಲಿ 10,830 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ.

ವ್ಯವಹಾರಗಳ ಅಧ್ಯಯನ ವಿಷಯಕ್ಕೆ 2,35,498 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದು, 10,762 ಮಂದಿ ಗೈರು ಹಾಜರಾಗಿದ್ದರು. ಇವರಲ್ಲಿ 7,795 ಹೊಸ ವಿದ್ಯಾರ್ಥಿಗಳಾಗಿದ್ದು, 475 ವಿದ್ಯಾರ್ಥಿಗಳು ಖಾಸಗಿ ಮತ್ತು 2,492 ಪುನರಾವರ್ತಿತರು ಸೇರಿದ್ದಾರೆ.

ತರ್ಕಶಾಸ್ತ್ರ ಪರೀಕ್ಷೆಗೆ ನೋಂದಾಯಿಸಿದ್ದ 621 ವಿದ್ಯಾರ್ಥಿಗಳಲ್ಲಿ 68 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು. ಇವರಲ್ಲಿ 61 ವಿದ್ಯಾರ್ಥಿಗಳು ಹೊಸಬರು, 6 ಪುನರಾ ವರ್ತಿತ ಅಭ್ಯರ್ಥಿಗಳು, ಇಬ್ಬರು ಖಾಸಗಿಯವರು ಸೇರಿದ್ದಾರೆ.

ಬೆಂಗಳೂರು ಉತ್ತರ ಶೈಕ್ಷಣಿಕ ಜಿಲ್ಲೆಯಲ್ಲಿ ಅತಿ ಹೆಚ್ಚಿನ 1,220 ವಿದ್ಯಾರ್ಥಿಗಳು ಗೈರುಹಾಜರಾಗಿದ್ದಾರೆ. ಬೆಂಗಳೂರು ದಕ್ಷಿಣ ಶೈಕ್ಷಣಿಕ ಜಿಲ್ಲೆಯಲ್ಲಿ 1,204 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ.

'ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗುವುದನ್ನು ಕಡ್ಡಾಯಗೊಳಿಸಿರಲಿಲ್ಲ. ಇದರಿಂದ, ಹಲವು ವಿದ್ಯಾರ್ಥಿಗಳು ತರಗತಿಗಳಿಗೆ ಸರಿಯಾಗಿ ಹಾಜರಾಗಿಲ್ಲ. ಇದು ಸಹ ಒಂದು ಕಾರಣವಾಗಿದೆ' ಎಂದು ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ಶಿಕ್ಷಕರ ಸಂಘದ ಅಧ್ಯಕ್ಷ ನಿಂಗೇಗೌಡ ಅಭಿಪ್ರಾಯಪಟ್ಟಿದ್ದಾರೆ.

ಈ ಬಾರಿ ಪ್ರಶ್ನೆಪತ್ರಿಕೆ ಸುಲಭವಾಗಿತ್ತು ಎಂದು ಹಲವು ವಿದ್ಯಾರ್ಥಿಗಳು ಅಭಿಪ್ರಾಯಪಟ್ಟಿದ್ದಾರೆ.

'ಎಳೆದು ತರಲು ಸಾಧ್ಯವಿಲ್ಲ'

ಚಿಕ್ಕಮಗಳೂರು: 'ಉಡುಪಿಯ ಆರು ವಿದ್ಯಾರ್ಥಿನಿಯರು ಹಿಜಾಬ್‌ಗಾಗಿ ಪಟ್ಟುಹಿಡಿದಿದ್ದಾರೆ. ಪರೀಕ್ಷೆಗೆ ಹಾಜರಾಗುವುದು, ಬಿಡುವುದು ಅವರಿಗೆ ಬಿಟ್ಟಿದ್ದು, ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಎಳೆದು ತರಲು ಸಾಧ್ಯವಿಲ್ಲ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಮುಸ್ಲಿಂ ಸಮುದಾಯದ ಬಹುತೇಕ ವಿದ್ಯಾರ್ಥಿನಿಯರು ಪರೀಕ್ಷೆಗೆ ಹಾಜರಾಗುತ್ತಿದ್ದಾರೆ. ಈ ಆರು ವಿದ್ಯಾರ್ಥಿಗಳು ಯಾರಿಂದಲೋ ಪ್ರೇರಿತವಾಗಿ ಹೀಗೆ ಮಾಡುತ್ತಿದ್ದಾರೆ. ಇದರಲ್ಲಿ ಹೊರಗಿನ ಶಕ್ತಿಯ ಕೈವಾಡ ಇದೆ' ಎಂದು ಪ್ರತಿಕ್ರಿಯಿಸಿದರು.

ಹಿಜಾಬ್: ಉಪನ್ಯಾಸಕಿಗೆ ನಿರ್ಬಂಧ

ಮಡಿಕೇರಿ: ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಧೈರ್ಯ ಹೇಳಲು ಹಿಜಾಬ್ ಧರಿಸಿ ಬಂದಿದ್ದ ನಗರದ ಮಡಿಕೇರಿಯ ರಾಜೇಶ್ವರಿ ಕಾಲೇಜಿನ ಉಪನ್ಯಾಸಕಿ ಅನಿಷತ್ ಅವರನ್ನು ಪರೀಕ್ಷಾ ಕೇಂದ್ರದೊಳಕ್ಕೆ ಬಿಡದೆ ವಾಪಸು ಕಳಿಸಲಾಯಿತು.

ಕಿರಿಯ ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ಬಂದಿದ್ದ ಅವರು, 'ಭಯ, ಆತಂಕವಿಲ್ಲದೇ ಪರೀಕ್ಷೆ ಬರೆಯಿರಿ' ಎಂದು ತಮ್ಮ ವಿದ್ಯಾರ್ಥಿಗಳಿಗೆ ಹೇಳುತ್ತಿದ್ದರು. ಕೇಂದ್ರ ಪ್ರವೇಶಿಸದಂತೆ ತಡೆದ ಸಿಬ್ಬಂದಿ ಹೊರಕ್ಕೆ ಕಳುಹಿಸಿದರು.

'ಅಪ್ಪ ಬುದ್ಧಿ ಹೇಳಿದ್ರೂ ಕೇಳಲಿಲ್ಲ...'

ಚಿಕ್ಕಬಳ್ಳಾಪುರ: ಹಿಜಾಬ್ ತೆಗೆಯಲು ನಿರಾಕರಿಸಿದ ವಿದ್ಯಾರ್ಥಿನಿ ನೂರ್ ಮಿಸ್ಬಾ ಕ್ವಾನೈನ್ ಪ್ರಾಂಶುಪಾಲರು, ಪೋಷಕರ ಮನವೊಲಿಕೆಗೂ ಸ್ಪಂದಿಸದೇ ಸರ್ ಎಂ.ವಿಶ್ವೇಶ್ವರಯ್ಯ ಪಿಯು ಕಾಲೇಜು ಕೇಂದ್ರದಿಂದ ಹೊರನಡೆದರು.

ಚಿಕ್ಕಬಳ್ಳಾಪುರದ ಬ್ಲೂಮ್ಸ್ ಕಾಲೇಜಿನ ವಿದ್ಯಾರ್ಥಿನಿಯಾದ ಇವರು ಇಬ್ಬರು ಗೆಳತಿಯರ ಜತೆ ಬಂದಿದ್ದರು.

ಸಿಬ್ಬಂದಿಯ ಮಾತು ಕೇಳಿ ಸ್ನೇಹಿತೆಯರು ಹಿಜಾಬ್ ತೆಗೆರಿಸಿದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

'ನಾನು ಹಿಜಾಬ್ ತೆಗೆಯುವುದಿಲ್ಲ. ಹಿಜಾಬ್ ತೆಗೆದರೆ ಪರೀಕ್ಷೆ ಬರೆಯಲು ಆಗುವುದಿಲ್ಲ' ಎಂದು ವಿದ್ಯಾರ್ಥಿನಿ ಹೇಳಿದಳು.

ಪ್ರಾಂಶುಪಾಲರು, ಡಿಡಿಪಿಯು ಅಲ್ಲದೆ ಆಕೆಯ ಅಪ್ಪ ಹೇಳಿದರೂ ಕೇಳಲಿಲ್ಲ' ಎಂದು ಕೇಂದ್ರದ ಸಿಬ್ಬಂದಿ ತಿಳಿಸಿದರು.

ಹುಬ್ಬಳ್ಳಿ: ಭದ್ರತೆಯಲ್ಲಿ ಆರೋಪಿ ಪರೀಕ್ಷೆಗೆ ಹಾಜರ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಆಕ್ಷೇಪಾರ್ಹ ಅನಿಮೆಟೆಡ್ ವಿಡಿಯೊವನ್ನು ವಾಟ್ಸ್‌ಆ್ಯಪ್ ಸ್ಟೇಟಸ್ ಹಾಕಿಕೊಂಡಿದ್ದ ಆರೋಪದಡಿ ಬಂಧಿತನಾಗಿರುವ ಅಭಿಷೇಕ ಹಿರೇಮಠ ಶುಕ್ರವಾರ ಪೊಲೀಸ್ ಭದ್ರತೆಯಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ ಬರೆದಿದ್ದಾನೆ. ಆತನಿಗೆ ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡಲಾಗಿತ್ತು.

ಬಿಗಿ ಬಂದೋಬಸ್ತ್‌ನಲ್ಲಿ ಪೊಲೀಸರು ವಾಹನದಲ್ಲಿ ಬೆಳಿಗ್ಗೆ 9.15ಕ್ಕೆ ಆತನನ್ನು ಉಪ ಕಾರಾಗೃಹದಿಂದ ನಗರದ ಮಹೇಶ ಪಿ.ಯು.ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ಕರೆತಂದರು. ಪರೀಕ್ಷೆ ಬಳಿಕ ವಾಪಸ್ ಕಾರಾಗೃಹಕ್ಕೆ ಕರೆದುಕೊಂಡು ಹೋದರು.

ಅಭಿಷೇಕ ಪರ ವಕೀಲರು ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ನ್ಯಾಯಾಲಯ ವಜಾಗೊಳಿಸಿದೆ.

ಮತ್ತೊಬ್ಬನಿಗೆ ಪರೀಕ್ಷೆಗೆ ಅವಕಾಶ: ಬಂಧಿತನಾಗಿರುವ ಮತ್ತೊಬ್ಬ ಆರೋಪಿ ದ್ವಿತೀಯ ಪಿಯುಸಿ ವಿದ್ಯಾರ್ಥಿ, ಆನಂದ ನಗರದ ಮಹ್ಮದ ಸಾದಿಕ್ ಕಂಚಗಾರ ಎಂಬಾತನಿಗೆ ಪರೀಕ್ಷೆ ಬರೆಯಲು ಕೋರ್ಟ್ ಶುಕ್ರವಾರ ಅನುಮತಿ ನೀಡಿದೆ.

'ಪುತ್ರ ಒಂದು ವಿಷಯದ ಪರೀಕ್ಷೆ ತಪ್ಪಿಸಿಕೊಂಡಿದ್ದಾನೆ. ಉಳಿದ ಐದು ವಿಷಯಗಳ ಪರೀಕ್ಷೆ ಬರೆಯಲು ಅನು ಮತಿ ನೀಡಬೇಕು' ಎಂದು ಪೋಷಕರು ವಕೀಲರ ಮೂಲಕ ಕೋರ್ಟ್‌ಗೆ ಮನವಿ ಮಾಡಿದರು. ಅದಕ್ಕೆ ಕೋರ್ಟ್ ಸಮ್ಮತಿಸಿ ಆದೇಶಿಸಿತು.

ಈ ಪ್ರಕರಣದಲ್ಲಿ 124ನೇ ಆರೋಪಿಯಾಗಿರುವ ವಿದ್ಯಾರ್ಥಿ ಸದ್ಯ ಧಾರವಾಡ ಕೇಂದ್ರ ಕಾರಾಗೃಹದಲ್ಲಿದ್ದಾನೆ.

'ಕೋಕಾ ಕಾಯ್ದೆ ಬಳಸಿ'

ಹುಬ್ಬಳ್ಳಿ: 'ಗಲಭೆ ಸಂಬಂಧ ಬಂಧಿತರಾಗಿರುವವರ ವಿರುದ್ಧ ಕೋಕಾ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕು. ಘಟನೆಗೆ ಕುಮ್ಮಕ್ಕು ನೀಡಿ ನಾಟಕವಾಡುತ್ತಿರುವ ಮಹಾನಗರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಲ್ತಾಫ್ ಹಳ್ಳೂರು ಮತ್ತು ಮುಖಂಡ ಅಲ್ತಾಫ್ ಕಿತ್ತೂರ ಅವರನ್ನು ಬಂಧಿಸಬೇಕು' ಎಂದು ಶ್ರೀರಾಮ ಸೇನೆ ಅಧ್ಯಕ್ಷ ಪ್ರಮೋದ ಮುತಾಲಿಕ್ ಒತ್ತಾಯಿಸಿದರು.

ಹಳೇ ಹುಬ್ಬಳ್ಳಿ ಗಲಭೆ ಪ್ರದೇಶ ಹಾಗೂ ದಿಡ್ಡಿ ಹನುಮಂತ ದೇವಸ್ಥಾನಕ್ಕೆ ಶುಕ್ರವಾರ ಭೇಟಿ ನೀಡಿದ್ದ ಅವರು, ಇದು ಪೂರ್ವ ನಿಯೋಜಿತ ಕೃತ್ಯ. ದೇವಸ್ಥಾನಕ್ಕೆ ಕಲ್ಲು ತೂರಾಟ ಘಜ್ನಿ ಮನಸ್ಥಿತಿ ತೋರುತ್ತದೆ' ಎಂದು ಆರೋಪಿಸಿದರು.

ಧಮ್ ಇದ್ದರೆ ಸಂಘಟನೆಗಳನ್ನು ನಿಷೇಧಿಸಲಿ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಗಲಭೆಗಳ ಹಿಂದೆ ಸಂಘಟನೆಗಳ ಕೈವಾಡವಿದ್ದರೆ ಅವುಗಳ ಮೇಲೆ ರಾಜ್ಯ ಸರ್ಕಾರ ನಿಷೇಧ ಹೇರಲಿ, ಬೇಡ ಎಂದವರು ಯಾರು?' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದರು.

ಶುಕ್ರವಾರ ಇಲ್ಲಿ ಮಾತನಾಡಿ, 'ಸರ್ಕಾರಕ್ಕೆ ಧಮ್ ಇದ್ದರೆ ಶಾಂತಿ ಕದಡುವ ಸಂಘಟನೆಗಳನ್ನು ನಿಷೇಧಿಸಬೇಕು. ಎಸ್‌ಡಿಪಿಐ, ಆರ್‌ಎಸ್‌ಎಸ್, ಬಜರಂಗದಳ, ಎಐಎಂಐಎಂಗಳನ್ನು ನಿಷೇಧ ಮಾಡಿ' ಎಂದರು.

ರಾಜೀನಾಮೆ ಕೊಡಲಿ: ಜವಾಬ್ದಾರಿಯುತ ಸ್ಥಾನದಲ್ಲಿರುವ ಗೃಹಸಚಿವ ಆರಗ ಜ್ಞಾನೇಂದ್ರ ಬೇಜವಾಬ್ದಾರಿಯುತ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಶಾಂತಿ, ಸೌಹಾರ್ದತೆ ಕಾಪಾಡುವುದು ಗೃಹ ಇಲಾಖೆಯ ಕೆಲಸ. ಆದರೆ, ಆ ಇಲಾಖೆ ಸಚಿವರೇ ಸಮಾಜದ ಶಾಂತಿ ಭಂಗ ಮಾಡುತ್ತಿದ್ದಾರೆ. ರಾಜೀನಾಮೆ ಕೊಟ್ಟು ಹೋಗಲಿ ಎಂದು ಒತ್ತಾಯಿಸಿದರು.

ಕರ್ನಾಟಕದಲ್ಲಿಯೂ ಸರ್ಕಾರ ರಚಿಸುವ ಕುರಿತು ಅರವಿಂದ ಕೇಜ್ರಿವಾಲ್ ಹೇಳಿಕೆಗೆ ಪ್ರತಿಕ್ರಿಯಿಸಿ 'ಆಮ್ ಆದ್ಮಿ ಕೂಡ ರಾಜಕೀಯ ಪಕ್ಷ. ಯಾರಿಗೆ ಅಧಿಕಾರ ಕೊಡಬೇಕು ಎನ್ನುವುದನ್ನು ಜನರು ತೀರ್ಮಾನಿಸುತ್ತಾರೆ' ಎಂದರು. ಪ್ರಶಾಂತ ಕಿಶೋರ ಕಾಂಗ್ರೆಸ್‌ಗೆ ಬರುತ್ತಿರುವ ವಿಷಯ ಗೊತ್ತಿಲ್ಲ ಎಂದರು.

ಪಿಎಸ್‌ಐ ಅಕ್ರಮ: 8 ಮಂದಿಗೆ ಜಾಮೀನು ನಿರಾಕರಣೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್‌ಐ ಪರೀಕ್ಷೆ ಅಕ್ರಮದ ಮೊದಲ ಎಂಟು ಆರೋಪಿಗಳಿಗೆ ಇಲ್ಲಿನ ಮೂರನೇ ಜೆಎಂಎಫ್‌ಸಿ ನ್ಯಾಯಾಧೀಶರು ಜಾಮೀನು ನಿರಾಕರಿಸಿದರು.

1ರಿಂದ 8ರವರೆಗಿನ ಆರೋಪಿಗಳಾದ ವೀರೇಶ ನಿಡಗುಂದಾ, ಕೆ. ಪ್ರವೀಣಕುಮಾರ, ಅರುಣ ಪಾಟೀಲ, ಚೇತನ ನಂದಗಾಂವ, ಪರೀಕ್ಷಾ ಮೇಲ್ವಿಚಾರಣೆಗೆ ನಿಯೋಜನೆಗೊಂಡಿದ್ದ ಶಿಕ್ಷಕಿಯರಾದ ಸುಮಾ, ಸಿದ್ದಮ್ಮ, ಸಾವಿತ್ರಿ, ಶಾಲೆಯ ಮುಖ್ಯಸ್ಥೆ ದಿವ್ಯಾ ಹಾಗರಗಿ ಅವರ ಪತಿ ರಾಜೇಶ್ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು.

ನ್ಯಾಯಾಧೀಶ ಬಸವರಾಜ ನೇಸರ್ಗಿ ಅವರು, 'ಪ್ರಕರಣದ ತನಿಖೆ ಇನ್ನೂ ಪೂರ್ಣಗೊಳ್ಳದ ಕಾರಣ ಜಾಮೀನು ನೀಡಲು ಆಗದು' ಎಂದು ಆದೇಶಿಸಿದರು.

ನಾಲ್ವರು ಪೊಲೀಸ್ ಕಸ್ಟಡಿಗೆ: ಗನ್‌ಮ್ಯಾನ್ ಹಯ್ಯಾಳಿ ದೇಸಾಯಿ, ಸಿಎಆರ್ ಪೊಲೀಸ್ ಕಾನ್‌ಸ್ಟೆಬಲ್ ರುದ್ರಗೌಡ ಪಾಟೀಲ, ವಿಶಾಲ್, ಶರಣಬಸಪ್ಪ ಅವರನ್ನು ಏ. 29ರವರೆಗೆ ಪೊಲೀಸ್ ಕಸ್ಟಡಿಗೆ ನೀಡಲಾಗಿದೆ.

ತನಿಖೆ ದಿಕ್ಕು ತಪ್ಪಿಸುವ ಯತ್ನ: ಆರೋಪ 'ಬಿಜೆಪಿ ಸರ್ಕಾರವು ಉದ್ದೇಶಪೂರ್ವಕವಾಗಿ ತನಿಖೆಯನ್ನು ಬೇರೆ ದಿಕ್ಕಿನಲ್ಲಿ ಒಯ್ಯುತ್ತಿದೆ. ಬಿಜೆಪಿ ನಾಯಕಿ ದಿವ್ಯಾ ಹಾಗರಗಿಯನ್ನು ಬಂಧಿಸುವ ಬದಲು ಅಫಜಲಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಾಂತೇಶ ಪಾಟೀಲ ಅವರನ್ನು ಬಂಧಿಸಲಾಗಿದೆ. ಇದು ಖಂಡನೀಯ' ಎಂದು ಕಾಂಗ್ರೆಸ್ ಮುಖಂಡ ಅಲ್ಲಮಪ್ರಭು ಪಾಟೀಲ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮುಂದುವರಿದ ದಾಖಲೆ ಪರಿಶೀಲನೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳು, ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ದಾಖಲೆಗಳನ್ನು ಶುಕ್ರವಾರವೂ ಪರಿಶೀಲಿಸಿದರು.

545 ಪಿಎಸ್‌ಐ ಹುದ್ದೆಗಳ ನೇಮಕಾತಿಗಾಗಿ ಪ್ರಕ್ರಿಯೆ ನಡೆದಿತ್ತು. ದೈಹಿಕ, ಲಿಖಿತ ಹಾಗೂ ವೈದ್ಯಕೀಯ ಪರೀಕ್ಷೆಯಲ್ಲಿ ತೇರ್ಗಡೆಯಾದವರನ್ನು ಆಯ್ಕೆ ಮಾಡಿ, ತಾತ್ಕಾಲಿಕ ಪಟ್ಟಿ ಬಿಡುಗಡೆ ಮಾಡಲಾಗಿತ್ತು.

ಪಟ್ಟಿಯಲ್ಲಿ ಹೆಸರಿದ್ದ ನಾಲ್ವರನ್ನು ಅಕ್ರಮ ಆರೋಪದಡಿ ಈಗಾಗಲೇ ಸಿಐಡಿ ಅಧಿಕಾರಿಗಳು ಬಂಧಿಸಿದ್ದಾರೆ. ಉಳಿದ 541 ಅಭ್ಯರ್ಥಿಗಳ ದಾಖಲೆ ಪರಿಶೀಲನೆ ಮಾಡಲಾಗುತ್ತಿದೆ.

ಸಿಐಡಿ ಅಧಿಕಾರಿಗಳ ಸೂಚನೆಯಂತೆ ಅಭ್ಯರ್ಥಿಗಳು ವಿಚಾರಣೆಗೆ ಹಾಜರಾಗುತ್ತಿದ್ದಾರೆ. ಅವರ ಜೊತೆಯಲ್ಲಿ ಕುಟುಂಬಸ್ಥರು ಬರುತ್ತಿದ್ದು, ಸಿಐಡಿ ಕಟ್ಟಡದ ಬಳಿ ಜನಸಂದಣಿ ಹೆಚ್ಚಾಗಿದೆ. ಹೀಗಾಗಿ, ಕಾರ್ಲ್‌ಟನ್ ಕಟ್ಟಡದ ಪ್ರವೇಶ ದ್ವಾರವನ್ನು ಬಂದ್ ಮಾಡಲಾಗಿದೆ. ಅಭ್ಯರ್ಥಿಗಳು ಹಾಗೂ ಕಚೇರಿ ಸಿಬ್ಬಂದಿಗೆ ಮಾತ್ರ ಪ್ರವೇಶ ನೀಡಲಾಗುತ್ತಿದೆ.

'ತನಿಖೆ ಭಾಗವಾಗಿ ಅಭ್ಯರ್ಥಿಗಳ ದಾಖಲೆ ಪರಿಶೀಲನೆ ನಡೆದಿದೆ. ಬಹುತೇಕ ಅಭ್ಯರ್ಥಿಗಳ ದಾಖಲೆಗಳಲ್ಲಿ ಯಾವುದೇ ಅನುಮಾನ ಇಲ್ಲ. ಕೆಲ ಅಭ್ಯರ್ಥಿಗಳ ದಾಖಲೆಯಲ್ಲಿ ವ್ಯತ್ಯಾಸ ಕಂಡುಬಂದಿದೆ. ಅಂಥವರ ವೈಯಕ್ತಿಕ ವಿವರ ಹಾಗೂ ಇತರೆ ಮಾಹಿತಿಗಳನ್ನು ಕಲೆಹಾಕಲಾಗುತ್ತಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ಇದೊಂದು ಸಂಘಟಿತ ಅಪರಾಧವೆಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಎಲ್ಲ ಆಯಾಮಗಳಲ್ಲೂ ವಿಶೇಷ ತಂಡಗಳು ಮಾಹಿತಿ ಕಲೆಹಾಕುತ್ತಿವೆ. ಸದ್ಯದಲ್ಲೇ ಪ್ರಾಥಮಿಕ ವರದಿಯೊಂದನ್ನು ಸಿದ್ಧಪಡಿಸಿ, ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು' ಎಂದೂ ಮೂಲಗಳು ತಿಳಿಸಿವೆ.

'ಶೀಘ್ರದಲ್ಲೇ ದಿವ್ಯಾ ಬಂಧನ'

ಕಲಬುರಗಿ: 'ಹಗರಣದ ಆರೋಪ ಎದುರಿಸುತ್ತಿರುವ ಜ್ಞಾನಜ್ಯೋತಿ ಆಂಗ್ಲಮಾಧ್ಯಮ ಶಾಲೆಯ ಮುಖ್ಯಸ್ಥೆ ದಿವ್ಯಾ ಹಾಗರಗಿ ಅವರನ್ನು ಶೀಘ್ರ ಬಂಧಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'ದಿವ್ಯಾ ಅವರು ಕರ್ನಾಟಕ ನರ್ಸಿಂಗ್ ಕೌನ್ಸಿಲ್ ಹಾಗೂ ದಿಶಾ ಸಮಿತಿ ಸದಸ್ಯೆ. ಎರಡೂ ಸ್ಥಾನದಿಂದ ಪದಚ್ಯುತಿಗೊಳಿಸಲಾಗುವುದು. ನಾವು ತನಿಖೆ ಸಡಿಲಗೊಳಿಸುವ ಪ್ರಶ್ನೆಯೇ ಇಲ್ಲ' ಎಂದರು.

'ಕಾಂಗ್ರೆಸ್ ಶಾಸಕರ ಗನ್ ಮ್ಯಾನ್ ಕೂಡ ಬಂಧಿತನಾ ಗಿದ್ದಾನೆ. ಇಂಥವರೇ ಗನ್‌ಮ್ಯಾನ್ ಬೇಕು ಎಂದು ಶಾಸಕರೇ ಕೇಳಿದ್ದಾರೆ. ಆದರೆ, ಅಕ್ರಮಕ್ಕೆ ಸರ್ಕಾರವೇ ಜವಾಬ್ದಾರಿ, ನನಗೇನೂ ಗೊತ್ತಿಲ್ಲ ಎಂದು ನುಸುಳಿಕೊಳ್ಳುವುದು ಏಕೆ?' ಎಂದೂ ಖಾರವಾಗಿ ಪ್ರಶ್ನಿಸಿದರು.

ಬ್ರಹ್ಮರಥೋತ್ಸವ... ವಿಷು ಜಾತ್ರೆ ಪ್ರಯುಕ್ತ ಗುರುವಾರ ರಾತ್ರಿ ಧರ್ಮಸ್ಥಳದಲ್ಲಿ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅವರ ಉಪಸ್ಥಿತಿಯಲ್ಲಿ ಬ್ರಹ್ಮರಥೋತ್ಸವ ನಡೆಯಿತು.

ಕಾಂಗ್ರೆಸ್‌ಗೆ ಸುನೀಲ್ ಚುನಾವಣಾ ತಂತ್ರಗಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ, ಡಿಎಂಕೆ, ಶಿರೋಮಣಿ ಅಕಾಲಿದಳ ಸೇರಿದಂತೆ ವಿವಿಧ ಪಕ್ಷಗಳಿಗೆ ಚುನಾವಣಾ ತಂತ್ರ ಗಾರಿಕೆ ರೂಪಿಸಲು ನೆರವು ನೀಡುತ್ತಿದ್ದ ಬಳ್ಳಾರಿ ಜಿಲ್ಲೆಯ ಸುನೀಲ್ ಕನುಗೋಲು ಅವರನ್ನು ಕರ್ನಾಟಕ ಕಾಂಗ್ರೆಸ್ ರಾಜಕೀಯ ತಂತ್ರಗಾರಿಕೆ ಸಲಹೆಗಾರರನ್ನಾಗಿ ನೇಮಿಸಿಕೊಂಡಿದೆ.

ಎಐಸಿಸಿ ಮುಖಂಡ ರಾಹುಲ್ ಗಾಂಧಿ ಅವರೇ ಸುನೀಲ್ ಅವರನ್ನು ಸಲಹೆಗಾರರನ್ನಾಗಿ ನಿಯೋಜಿಸಿದ್ದಾರೆ. ಅವರ ನೇತೃತ್ವದ ಮೈಂಡ್ ಶೇರ್ ಅನಾಲಿಟಿಕ್ಸ್ ಕಂಪನಿ ಬೆಂಗಳೂರಿನಲ್ಲಿ ಕಚೇರಿ ತೆರೆದಿದ್ದು, ಕಾಂಗ್ರೆಸ್ ಪಕ್ಷವನ್ನು ಮುಂದಿನ ವಿಧಾನಸಭಾ ಚುನಾವಣೆಗೆ ಸಜ್ಜುಗೊಳಿಸುವ ದಿಸೆಯಲ್ಲಿ ಕೆಲಸ ಆರಂಭಿಸಿದೆ. ಸದ್ಯದ ಸ್ಥಿತಿಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್‌ನ ಸ್ಥಿತಿ ಕುರಿತು ಸಮೀಕ್ಷೆಯನ್ನೂ ಆರಂಭಿಸಿದ್ದು, ಮೇ ಮೊದಲ ವಾರದ ವೇಳೆಗೆ ವರದಿ ಸಲ್ಲಿಸುವ ಸಾಧ್ಯತೆ ಇದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಬಳ್ಳಾರಿ ಜಿಲ್ಲೆಯವರಾದ ಸುನೀಲ್ ಕನುಗೋಲು, ಅಮೆರಿಕದಲ್ಲಿ ಶಿಕ್ಷಣ ಪಡೆದಿದ್ದಾರೆ.

ಮೆಕಿನ್ಸೆ ಕಂಪನಿಯ ಸಲಹೆಗಾರರಾಗಿ ಕೆಲಕಾಲ ಕೆಲಸ ಮಾಡಿದ್ದ ಅವರು, ನಂತರ ಚುನಾವಣಾ ತಂತ್ರಗಾರಿಕೆ ಕ್ಷೇತ್ರದತ್ತ ಹೊರಳಿದ್ದರು. 2014ರಲ್ಲಿ ನರೇಂದ್ರ ಮೋದಿ ಅವರ ಗೆಲುವಿಗಾಗಿ ಕೆಲಸ ಮಾಡಿದ್ದ ಪ್ರಶಾಂತ್ ಕಿಶೋರ್ ನೇತೃತ್ವದ ಚುನಾವಣಾ ತಂತ್ರಗಾರಿಕೆ ತಂಡದಲ್ಲಿದ್ದರು.

ಬಳಿಕ ಸ್ವತಂತ್ರವಾಗಿ ಕೆಲಸ ಆರಂಭಿಸಿದ್ದ ಸುನೀಲ್, 2016ರಲ್ಲಿ ಬಿಜೆಪಿಯ 'ವಾರ್ ರೂಂ' ನೇತೃತ್ವ ವಹಿಸಿದ್ದರು.

2017ರಲ್ಲಿ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಗೆಲುವಿಗೂ ಕೆಲಸ ಮಾಡಿದ್ದರು. ಡಿಎಂಕೆ, ಎಐಎಡಿಎಂಕೆ, ಶಿರೋಮಣಿ ಅಕಾಲಿದಳ, ತೆಲಂಗಾಣ ರಾಷ್ಟ್ರ ಸಮಿತಿ ಸೇರಿದಂತೆ ಹಲವು ರಾಜಕೀಯ ಪಕ್ಷಗಳಿಗೆ ಚುನಾವಣಾ ತಂತ್ರಗಾರಿಕೆಯ ಸಲಹೆಗಾರರಾಗಿ ಕಾರ್ಯನಿರ್ವಹಿಸಿದ್ದರು.

'ರಾಹುಲ್ ಗಾಂಧಿ ಖುದ್ದಾಗಿ ಆಸಕ್ತಿ ವಹಿಸಿ ಸುನೀಲ್ ಕನುಗೋಲು ಅವರನ್ನು ನಿಯೋಜಿಸಿದ್ದಾರೆ. ಇತ್ತೀಚೆಗೆ ದೆಹಲಿಯಲ್ಲಿ ನಡೆದ ಪಕ್ಷದ ಪ್ರಮುಖರ ಸಭೆಯಲ್ಲಿ ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತಿತರರಿಗೆ ಪರಿಚಯವನ್ನೂ ಮಾಡಿಕೊಟ್ಟಿದ್ದರು. ಆ ಬಳಿಕ ಸುನೀಲ್ ಅವರ ತಂಡ ರಾಜ್ಯಕ್ಕೆ ಬಂದು ಕೆಲಸ ಪ್ರಾರಂಭಿಸಿದೆ' ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ರಾಜ್ಯ ಕಾಂಗ್ರೆಸ್‌ನ ವಿವಿಧ ನಾಯಕರನ್ನು ಭೇಟಿಮಾಡಿರುವ ಸುನೀಲ್, ಎಲ್ಲರ ಅಭಿಪ್ರಾಯ ಸಂಗ್ರಹಿಸುತ್ತಿದ್ದಾರೆ. ಹಿಂದಿನ ಚುನಾವಣೆಗಳ ಫಲಿತಾಂಶಗಳು, ಕಾಂಗ್ರೆಸ್ ಪಕ್ಷದ ಏರಿಳಿತಗಳ ಕುರಿತು ಪಕ್ಷದ ಮುಖಂಡರಿಂದಲೇ ಮಾಹಿತಿ ಪಡೆಯುವ ಕೆಲಸ ಮಾಡುತ್ತಿದ್ದಾರೆ.

ಸಂಕ್ಷಿಪ್ತ ಸುದ್ದಿ

ಈಜಲು ಹೋದ ಮೂವರು ಮಕ್ಕಳು ನೀರುಪಾಲು

ತುಮಕೂರು: ನಗರ ಹೊರವಲಯದ ತಿಮ್ಮಾಲಾಪುರ ಕೆರೆಯಲ್ಲಿ ಶುಕ್ರವಾರ ಈಜಲು ಹೋದ ಮೂವರು ಮಕ್ಕಳು ನೀರು ಪಾಲಾಗಿದ್ದಾರೆ. ಯಲ್ಲಾಪುರ ಗ್ರಾಮದ ಭರತ್ (12), ಆನಂದ್ (10) ಹಾಗೂ ವಿಶ್ವಾಸ್(11) ಮೃತಪಟ್ಟವರು.

ಎಲ್ಲರೂ ಅಕ್ಕಪಕ್ಕದ ಮನೆಯವರು. ಸಂಜೆಯಾದರೂ ಮಕ್ಕಳು ಹಿಂದಿರುಗದ ಹಿನ್ನೆಲೆಯಲ್ಲಿ ಕುಟುಂಬದ ಸದಸ್ಯರು ಹುಡುಕಾಟ ನಡೆಸಿದ್ದಾರೆ. ಕೆರೆಯ ದಡದಲ್ಲಿ ಬಟ್ಟೆ, ಚಪ್ಪಲಿ ಸಿಕ್ಕಿದಾಗ ನೀರಿನಲ್ಲಿ ಮುಳುಗಿ ಮೃತಪಟ್ಟಿರುವುದು ದೃಢಪಟ್ಟಿದೆ. ಸ್ಥಳೀಯ ಈಜುಗಾರರ ನೆರವಿನಲ್ಲಿ ಮೃತದೇಹಗಳನ್ನು ಪೊಲೀಸರು ಹೊರ ತೆಗೆದರು. ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೋರಿ ತಿವಿದು ಯುವಕ ಸಾವು

ಷಣ್ಮುಖ ಹುಡೇದ

ಹಾವೇರಿ: ಹಿರೇಕೆರೂರು ತಾಲ್ಲೂಕಿನ ಬೆಟಕೆರೂರು ಗ್ರಾಮದಲ್ಲಿ ಶುಕ್ರವಾರ ಕೊಬ್ಬರಿ ಹೋರಿ ತಿವಿದು ರಾಣೆಬೆನ್ನೂರು ತಾಲ್ಲೂಕು ಗುಡ್ಡದ-ಹೊಸಳ್ಳಿ ಗ್ರಾಮದ ಯುವಕ ಷಣ್ಮುಖ ಹುಡೇದ (22) ಮೃತಪಟ್ಟರು.

ಬೆಟಕೆರೂರು ಗ್ರಾಮದ ಭೂತಪ್ಪನ ಗುಡ್ಡದ ಇಳಿಜಾರಿನಲ್ಲಿ ಹೋರಿ ಬೆದರಿಸುವ ಸ್ಪರ್ಧೆ ನಡೆದಿತ್ತು. ನೋಡುತ್ತಿದ್ದ ಯುವಕನ ಹೊಟ್ಟೆ ಭಾಗಕ್ಕೆ ಹೋರಿಯೊಂದು ತಿವಿದಿದೆ.

ಹಿರೇಕೆರೂರು ಆಸ್ಪತ್ರೆಗೆ ಕರೆದೊಯ್ಯುವ ವೇಳೆಗೆ ತೀವ್ರ ರಕ್ತಸ್ರಾವವಾಗಿ ಮೃತಪಟ್ಟಿದ್ದಾರೆ.

'ಕಮಿಷನ್: ಕಠಿಣ ಕ್ರಮ ಕೈಗೊಳ್ಳಲಿ'

ಮಧು ಬಂಗಾರಪ್ಪ

ಸೊರಬ: 'ಶೇ 40 ಕಮಿಷನ್ ಆರೋಪದಲ್ಲಿ ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಅವರ ಮೇಲಷ್ಟೆ ಕ್ರಮ-ಜರುಗಿಸಿದರೆ ಸಾಲದು, ಕಮಿಷನ್ ದಂಧೆಯಲ್ಲಿ ತೊಡಗಿರುವ ಎಲ್ಲ ಶಾಸಕರು, ಸಚಿವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಕೆಪಿಸಿಸಿ ರಾಜ್ಯ ಉಪಾಧ್ಯಕ್ಷ ಮಧು ಬಂಗಾರಪ್ಪ ಆಗ್ರಹಿಸಿದರು.

ಶುಕ್ರವಾರ ಪಟ್ಟಣದ ಬಂಗಾರ ಧಾಮದಲ್ಲಿ ಎಸ್.ಬಂಗಾರಪ್ಪ ಹಾಗೂ ಶಕುಂತಲಾ ಬಂಗಾರಪ್ಪ ಅವರ ಸಮಾಧಿಗೆ ಪೂಜೆ ಸಲ್ಲಿಸಿದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ರಾಜ್ಯದಲ್ಲಿ ಆಡಳಿತ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಸರ್ಕಾರ ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಜಾತಿ, ಧರ್ಮಗಳ ನಡುವೆ ಒಡಕು ಮೂಡಿಸುವ ಕೆಲಸದಲ್ಲಿ ತೊಡಗಿದೆ. ಇದಕ್ಕೆ ಪುಷ್ಟಿ ನೀಡುವಂತೆ ಶೇ 40 ಕಮಿಷನ್ ಆರೋಪ ಸರ್ಕಾರದ ಮೇಲೆ ಬರುತ್ತಿದ್ದಂತೆ ಹುಬ್ಬಳ್ಳಿಯ ಗಲಭೆಯನ್ನು ಮುನ್ನೆಲೆಗೆ ತಂದು ರಾಜ್ಯ ಮಟ್ಟದಲ್ಲಿ ಬಿಂಬಿಸಿತು' ಎಂದು ಅವರು ಆರೋಪಿಸಿದರು.

'ಎಸ್‌ಡಿಪಿಐಗೆ ಆರ್‌ಎಸ್‌ಎಸ್ ಹೋಲಿಕೆ ಸಲ್ಲ'

ಪ್ರಲ್ಹಾದ ಜೋಶಿ

ರಾಯಚೂರು: 'ಎಸ್‌ಡಿಪಿಐಗೆ ಆರ್‌ಎಸ್‌ಎಸ್ ಹೋಲಿಕೆ ಮಾಡುವ ಮೂಲಕ ಸಿದ್ದರಾಮಯ್ಯ ಅವರು ಬೌದ್ಧಿಕ ದಿವಾಳಿತನ ತೋರಿದ್ದಾರೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಶುಕ್ರವಾರ ಹೇಳಿದರು.

ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, 'ಜವಾಹರಲಾಲ್ ನೆಹರು ಕಾಲದಿಂದಲೂ ಆರ್‌ಎಸ್‌ಎಸ್ ಅತಿದೊಡ್ಡ ಸ್ವಯಂ ಸೇವಾ ಸಂಘ. ಇದನ್ನು ನಿಷೇಧಿಸಬೇಕು ಎಂದರೆ ಹೇಗೆ? ಯಾವುದೇ ಸಂಘಟನೆ ಜತೆ ಹೋಲಿಕೆ ಸರಿಯಲ್ಲ' ಎಂದರು.

'ದಮ್ಮು-ಗಿಮ್ಮು ಎಂದೆಲ್ಲ ಮಾತನಾಡುವ ಸಿದ್ದರಾಮಯ್ಯನವರು ರಾಜ್ಯದ ಮಾಜಿ ಮುಖ್ಯಮಂತ್ರಿಗಳು. ಈ ರೀತಿ ಮಾತು ಸರಿಯಲ್ಲ' ಎಂದರು.

'ಸಮಾಜದ ಶಾಂತಿಗೆ ಧಕ್ಕೆ ತಂದರೆ ಕಠಿಣ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಮಾಜಿಕ ಮಾಧ್ಯಮಗಳನ್ನು ಬಹಳ ಎಚ್ಚರಿಕೆಯಿಂದ ಬಳಸಬೇಕು. ಧರ್ಮಗಳ ಹೆಸರಿನಲ್ಲಿ ಅನಾವಶ್ಯಕ ಬರಹ ಹಾಗೂ ಪೋಸ್ಟ್‌ಗಳನ್ನು ಪ್ರಕಟಿಸಿ ಸಮಾಜದ ಶಾಂತಿಗೆ ಧಕ್ಕೆ ತಂದರೆ, ಅಂಥವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು' ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಎಚ್ಚರಿಕೆ ನೀಡಿದರು.

ಕೋರಮಂಗಲದಲ್ಲಿರುವ ರಾಜ್ಯ ಪೊಲೀಸ್ ಮೀಸಲು ಪಡೆಯ (ಕೆಎಸ್ ಆರ್‌ಪಿ) ಮೈದಾನದಲ್ಲಿ ಶುಕ್ರವಾರ ಆಯೋಜಿಸಿದ್ದ 'ಸೇವಾ ಕವಾಯತು' ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಅವರು ಸುದ್ದಿಗಾರರ ಜೊತೆ ಮಾತನಾಡಿದರು.

'ಹುಬ್ಬಳ್ಳಿ ಗಲಭೆ ಬಗ್ಗೆ ತನಿಖೆ ನಡೆದಿದೆ. ಪ್ರತ್ಯಕ್ಷವಾಗಿ ಭಾಗಿಯಾಗಿದ್ದವರನ್ನು ಬಂಧಿಸಲಾಗಿದೆ. ಪರೋಕ್ಷವಾಗಿ ಯಾರೆಲ್ಲ ಭಾಗಿಯಾಗಿದ್ದಾರೆಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದರು.

ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಅಕ್ರಮ ವಿಚಾರ ಗಮನಕ್ಕೆ ಬರುತ್ತಿದ್ದಂತೆ ಎಫ್‌ಐಆರ್ ದಾಖಲಿಸಲಾಗಿದೆ. ಅಕ್ರಮದಲ್ಲಿ ಭಾಗಿಯಾದವರನ್ನು ಬಂಧಿಸಲಾಗುತ್ತಿದೆ. ಪ್ರಾಮಾಣಿಕವಾಗಿ ಪರೀಕ್ಷೆ ಬರೆದು ಆಯ್ಕೆಯಾದ ಅಭ್ಯರ್ಥಿಗಳಿಗೆ ಯಾವುದೇ ತೊಂದರೆಯಾಗುವುದಿಲ್ಲ' ಎಂದರು.

ಅವ್ಯವಹಾರ ಆರೋಪ: ಎಸ್‌.ಮೂರ್ತಿಗೆ ಹಿಂಬಡ್ತಿ

ಪ್ರಜಾವಾಣಿ ವಾರ್ತೆ

ಎಸ್. ಮೂರ್ತಿ

ಬೆಂಗಳೂರು: 2016 ಮತ್ತು 2017ರಲ್ಲಿ ಬೆಳಗಾವಿಯ ಸುವರ್ಣ ವಿಧಾನ ಸೌಧದಲ್ಲಿ ನಡೆದ ವಿಧಾನಮಂಡಲ ಅಧಿವೇಶನದ ಸಿದ್ಧತೆ ಮತ್ತು ನಿರ್ವಹಣೆಯಲ್ಲಿ ಅವ್ಯವಹಾರ ನಡೆಸಿರುವ ಆರೋಪ ಎದುರಿಸುತ್ತಿರುವ ವಿಧಾನಸಭೆಯ ಹಿಂದಿನ ಕಾರ್ಯದರ್ಶಿ ಎಸ್. ಮೂರ್ತಿ ಅವರಿಗೆ ಅಧೀನ ಕಾರ್ಯದರ್ಶಿ ಹುದ್ದೆಗೆ ಹಿಂಬಡ್ತಿ ನೀಡಿ ಗುರುವಾರ ಆದೇಶ ಹೊರಡಿಸಲಾಗಿದೆ.

'ಮೂರ್ತಿ ಅವರಿಗೆ ವಿಧಾನಸಭೆಯ ಅಧೀನ ಕಾರ್ಯದರ್ಶಿಗಳ ಜ್ಯೇಷ್ಠತಾ ಪಟ್ಟಿಯಲ್ಲಿರುವ ಎಲ್ಲ ಅಧಿಕಾರಿಗಳಿಗಿಂತ ಕಿರಿಯರು ಎಂಬುದಾಗಿ ಪರಿಗಣಿಸಬೇಕು ಹಾಗೂ ಅವರ ವೇತನವನ್ನು ಅಧೀನ ಕಾರ್ಯದರ್ಶಿಗಳ ವೇತನ ಶ್ರೇಣಿಯ ಮೂಲ ವೇತನದಲ್ಲಿ ನಿಗದಿಪಡಿಸಬೇಕು' ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಬೆಳಗಾವಿ ಅಧಿವೇಶನದ ತಯಾರಿಯಲ್ಲಿ ಅವ್ಯವಹಾರ ನಡೆಸಿದ ಆರೋಪದ ಮೇಲೆ ಮೂರ್ತಿ ಅವರನ್ನು 2018ರಲ್ಲಿ ಅಮಾನತು ಮಾಡಲಾಗಿತ್ತು. ಶಿಸ್ತು ಪ್ರಾಧಿಕಾರವಾಗಿರುವ ವಿಧಾನ ಸಭೆಯ ವಿಶೇಷ ಮಂಡಳಿಯು, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಜಯ್ ಸೇಠ್ ನೇತೃತ್ವದಲ್ಲಿ ಇಲಾಖಾ ವಿಚಾರಣೆಗೆ ಆದೇಶಿಸಿತ್ತು. ಸೇಠ್ ಅವರು ಬೆಂಗಳೂರು ಮೆಟ್ರೊ ರೈಲು ನಿಗಮದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ವರ್ಗಾವಣೆಗೊಂಡ ಬಳಿಕ ಇಲಾಖಾ ವಿಚಾರಣೆ ನೇತೃತ್ವವನ್ನು ಬದಲಿಸುವಂತೆ ಕೋರಿದ್ದರು. ಐಎಂಎ ಸಕ್ಷಮ ಪ್ರಾಧಿಕಾರದ ವಿಶೇಷಾಧಿಕಾರಿ ಹುದ್ದೆಯಲ್ಲಿದ್ದ ಹರ್ಷ ಗುಪ್ತ ಅವರಿಗೆ ಈ ಹೊಣೆಯನ್ನು ವಹಿಸಿ 2021ರ ಜೂನ್‌ನಲ್ಲಿ ಆದೇಶ ಹೊರಡಿಸಲಾಗಿತ್ತು.

ಇಲಾಖಾ ವಿಚಾರಣೆ ಪೂರ್ಣಗೊಳಿಸಿ 2021ರ ಡಿ. 18ರಂದು ವರದಿ ಸಲ್ಲಿಸಿದ್ದ ಹರ್ಷ ಗುಪ್ತ, 'ಮೂರ್ತಿ ವಿರುದ್ಧದ ಎಲ್ಲ ಆರೋಪಗಳು ಸಾಬೀತಾಗಿವೆ' ಎಂದು ತಿಳಿಸಿದ್ದರು. 'ಆಪಾದಿತರಿಗೆ ದಂಡನೆ ವಿಧಿಸಿ, ಕಾರ್ಯದರ್ಶಿ ಹುದ್ದೆಯಿಂದ ಕೆಳಗಿರುವ ಮೂರನೇ ದರ್ಜೆಯ ಹುದ್ದೆಗೆ ಹಿಂಬಡ್ತಿ ನೀಡಬೇಕು. ಹಿಂಬಡ್ತಿ ಹೊಂದಿದ ಹುದ್ದೆಯಲ್ಲಿ ಜ್ಯೇಷ್ಠತೆಯಲ್ಲಿ ಕೊನೆಯ ಸ್ಥಾನ ನೀಡಬೇಕು ಮತ್ತು ಆ ಹುದ್ದೆಯ ಮೂಲ ವೇತನವನ್ನೇ ನಿಗದಿಪಡಿಸಬೇಕು' ಎಂದು ಶಿಫಾರಸು ಮಾಡಲಾಗಿತ್ತು.

ವಿಚಾರಣಾ ವರದಿಗೆ ಸಂಬಂಧಿಸಿದಂತೆ ಮೂರ್ತಿ ಅವರಿಗೆ ನೋಟಿಸ್ ಜಾರಿಗೊಳಿಸಿದ್ದ ವಿಶೇಷ ಮಂಡಳಿ, ಸಮಜಾಯಿಷಿ ನೀಡುವಂತೆ ಸೂಚಿಸಿತ್ತು. ಆದರೆ, ತಮ್ಮ ವಿರುದ್ಧದ ಆರೋಪ ಅಲ್ಲಗಳೆಯುವಂತಹ ಸಮರ್ಥನೀಯ ಹೇಳಿಕೆ, ಸಾಕ್ಷ್ಯ ಅವರು ಸಲ್ಲಿಸಿಲ್ಲ. ಇದನ್ನು ಪರಿಗಣಿಸಿ ದಂಡನೆ ವಿಧಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

'ಕಲ್ಲಿದ್ದಲು ಕೊರತೆ ಇಲ್ಲ'

ಮಂಗಳೂರು: 'ರಾಜ್ಯದಲ್ಲಿ ಕಲ್ಲಿದ್ದಲು ಕೊರತೆ ಇಲ್ಲ. ಬೇಸಿಗೆ ಹಿನ್ನೆಲೆಯಲ್ಲಿ ನಾಲ್ಕು ತಿಂಗಳುಗಳ ಹಿಂದೆಯೇ ಪೂರ್ವ ತಯಾರಿ ಮಾಡಿ ಕೊಂಡಿದ್ದೇವೆ. ಹೊರ-ರಾಜ್ಯಗಳಿಗೆ ವಿದ್ಯುತ್ ಮಾರುವಷ್ಟು ಸಾಮರ್ಥ್ಯ ನಮ್ಮಲ್ಲಿದೆ' ಎಂದು ಇಂಧನ ಸಚಿವ ವಿ.ಸುನಿಲ್ ಕುಮಾರ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜ್ಯಕ್ಕೆ ಪ್ರತಿನಿತ್ಯ 13ರಿಂದ 15 ರೇಕ್ ಕಲ್ಲಿದ್ದಲು ಸರಬರಾಜಾಗುತ್ತಿದೆ. ಬೇಡಿಕೆಗೆ ತಕ್ಕಂತೆ ವಿದ್ಯುತ್ ಉತ್ಪಾದನೆ ಆಗುತ್ತಿದೆ' ಎಂದರು.

'ಕೇಂದ್ರದ ಜತೆ ನಿರಂತರ ಸಂಪರ್ಕದಲ್ಲಿದ್ದು, ಕಲ್ಲಿದ್ದಲು ಕೊರತೆಯಾಗದಂತೆ ಎಲ್ಲ ಮುನ್ನೆಚ್ಚರಿಕೆ ವಹಿಸಲಾಗಿದೆ. ಪ್ರಸ್ತುತ 100 ದಿನಕ್ಕೆ ಬೇಕಾಗುವಷ್ಟು ಕಲ್ಲಿದ್ದಲು ಸಂಗ್ರಹವಿದೆ' ಎಂದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

❦ ಸುಭಾಷಿತ ❦

ಪ್ರತಿಭೆಗೆ ಶಾಸ್ತ್ರ ಜ್ಞಾನ ಇದ್ದರೆ ವಜ್ರಕ್ಕೆ ಕುಂದಣವಿಟ್ಟಂತೆ.
-ತ.ರಾ.ಸು.

ಸ್ವಾವಲಂಬಿ ಆ್ಯಪ್ ಜನಹಿತ ಕಾಯಲಿ ಲಂಚಗುಳಿತನ ತಡೆಗೆ ದಾರಿಯಾಗಲಿ

ತಲೆಮಾರುಗಳಿಂದ ತಮ್ಮ ಸುಪರ್ದಿಯಲ್ಲಿರುವ ಜಮೀನು ದಾಖಲೆಗಳನ್ನು ಸರಿಪಡಿಸಿಕೊಳ್ಳಲು, ವಂಶಪಾರಂಪರ್ಯವಾಗಿ ಬಂದ ಆಸ್ತಿಗಳನ್ನು ಹಿಸ್ಸೆ ಮಾಡಿಕೊಂಡ ಬಳಿಕ ಏಕಪಹಣಿಯಾಗಿ ಬದಲಾಯಿಸಿಕೊಳ್ಳಲು ನಾಗರಿಕರು ನರಕಯಾತನೆ ಪಡುವ ಪರಿಸ್ಥಿತಿ ಇದೆ. ಅಧಿಕಾರಿ, ಸಿಬ್ಬಂದಿಯ ಲಂಚಗುಳಿತನ, ದಾಖಲೆಗಳಲ್ಲಿ ಇರುವ ದೋಷ, ಯಾವುದೇ ದಾಖಲೆ ತಿದ್ದಬೇಕಾದರೆ ತಳಹಂತದಿಂದ ಮೇಲಧಿಕಾರಿಗಳವರೆಗೆ ಟಿಪ್ಪಣಿ ಹೆಸರಿನಲ್ಲಿರುವ ಜೇಡರ ಬಲೆಯ ಹಿಡಿತಗಳು ಜನರನ್ನು ಹೈರಾಣಾಗಿಸಿವೆ. ಭೂಮಿ, ಕಾವೇರಿಯಂತಹ ಅನೇಕ ತಂತ್ರಾಂಶಗಳನ್ನು ಸರ್ಕಾರ ಅಭಿವೃದ್ಧಿಪಡಿಸಿ, ಕರ್ನಾಟಕದ ಈ ಸುಧಾರಣೆ ದೇಶದಲ್ಲೇ ಮಾದರಿ ಎಂದು ಹೇಳಿಕೊಳ್ಳುವುದುಂಟು. ಇಂತಹ ಪ್ರಚಾರದ ಯೋಜನೆಗಳು ತಂತ್ರಾಂಶ ಅಭಿವೃದ್ಧಿಪಡಿಸಿದ ಸಂಸ್ಥೆ ಹಾಗೂ ಅದಕ್ಕೆ ಅವಕಾಶ ಕೊಟ್ಟ ಅಧಿಕಾರಿಗಳ ಜೇಬು ತುಂಬಿಸಿದ್ದೇ ಹೆಚ್ಚು. ಅದರಿಂದ ನಾಗರಿಕರಿಗೆ ಆದ ಅನುಕೂಲ ಅಷ್ಟಕ್ಕಷ್ಟೇ. ಹಾಗಲ್ಲದೇ ಹೋಗಿದ್ದರೆ, ಪೋಡಿ, ಭೂಪರಿವರ್ತನೆ, ಹಿಸ್ಸೆ, ಪಹಣಿ ದುರಸ್ತಿ, ಹದ್ದುಬಸ್ತು, ಇಂಡೀಕರಣದಂತಹ ಪ್ರಕ್ರಿಯೆಗಳು ಸಲೀಸಾಗಿ, ಜನರ ಪರಿತಾಪ ತಪ್ಪಬೇಕಿತ್ತು. ಭ್ರಷ್ಟಾಚಾರವೂ ಕಣ್ಮರೆಯಾಗಬೇಕಿತ್ತು. ಆದರೆ, ಅದ್ಯಾವುದೂ ಆಗಿಲ್ಲ. 11-ಇ ನಕ್ಷೆ, ಪೋಡಿ, ಭೂ ಪರಿವರ್ತನೆ ನಕ್ಷೆಗಳನ್ನು ಭೂ ಒಡೆಯರೇ ಮಾಡಿಕೊಳ್ಳಬಹುದಾದ ವ್ಯವಸ್ಥೆಯೊಂದನ್ನು ಜಾರಿಗೆ ತರುವುದಾಗಿ ಕಂದಾಯ ಸಚಿವ ಆರ್. ಅಶೋಕ ಹೇಳಿದ್ದಾರೆ. ಈ ಸಂಬಂಧ ಆದೇಶವೂ ಹೊರಬಿದ್ದಿದೆ. ಇಲಾಖೆ ಸಿದ್ಧಪಡಿಸಿರುವ 'ಸ್ವಾವಲಂಬಿ' ಆ್ಯಪ್ ಇದಕ್ಕೆ ಪೂರಕ ಎಂದೂ ಸಚಿವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಸಚಿವರು ಹೊಂದಿರುವ ವಿಶ್ವಾಸ ಜನರಲ್ಲಿಯೂ ಮೂಡತೊಡಗುವ ಮಟ್ಟಿಗೆ ಅನುಷ್ಠಾನ ಫಲಕೊಟ್ಟರೆ ಯೋಜನೆ ಸಾರ್ಥಕವಾದೀತು. ಅಧಿಕಾರಿಗಳ ಕೈಬಿಸಿ ಮಾಡದೇ ಅಥವಾ ಕಂದಾಯ- ಉಪ ನೋಂದಣಿ ಕಚೇರಿಗಳ ಆಸುಪಾಸು ಮೇಜು-ಕುರ್ಚಿ ಹಾಕಿಕೊಂಡು ಕುಳಿತಿರುವ ದಸ್ತಾವೇಜು ಬರಹಗಾರರು ಹಾಗೂ ದಲ್ಲಾಳಿಗಳ ಮುಖೇನ ಹೋಗದೇ ಇದ್ದರೆ ದಾಖಲೆ ತಿದ್ದುಪಡಿ ಹೋಗಲಿ; ದಾಖಲೆಯನ್ನೇ ಪಡೆಯಲಾಗದ ದುಃಸ್ಥಿತಿ ರಾಜ್ಯದಲ್ಲಿದೆ. ಭ್ರಷ್ಟಾಚಾರ ಎಂಬುದು ಪ್ರತಿಹಂತದಲ್ಲೂ ರಾಕ್ಷಸರೂಪದಲ್ಲಿ ಜನಸಾಮಾನ್ಯರ ಮೇಲೆ ದಾಳಿ ಮಾಡುತ್ತಲೇ ಇರುತ್ತದೆ. ಅಂತಹ ಹೊತ್ತಿನೊಳಗೆ 'ಸ್ವಾವಲಂಬಿ' ಆ್ಯಪ್ ರೂಪಿಸಿರುವ ಸರ್ಕಾರದ ನಡೆ ಸ್ವಾಗತಾರ್ಹ.

ಅನುಮೋದನೆಯ ಹೆಸರಿನಲ್ಲಿ ಮತ್ತೆ ಲಂಚಕ್ಕೆ ದಾರಿ ಮಾಡಿಕೊಡದಂತೆ ಸರ್ಕಾರ ನಿಗಾ ವಹಿಸಬೇಕಾಗಿದೆ

ಒಂದು ಕುಟುಂಬದವರು ಆಸ್ತಿ ಹಿಸ್ಸೆ ಮಾಡಿಕೊಂಡು ಸರ್ವೆ ನಡೆಸಿ, ಹದ್ದುಬಸ್ತು (ಗಡಿ) ಗುರುತಿಸಿ ಪ್ರತ್ಯೇಕ ಖಾತೆಯ ಮೂಲಕ ಏಕಪಹಣಿ ಹೊಂದುವುದು ಇವತ್ತಿನ ದಿನಗಳಲ್ಲಿ ಕಷ್ಟಸಾಧ್ಯ. ಒಂದೇ ಸರ್ವೆ ನಂಬರ್‌ನಲ್ಲಿ ಹಲವು ಹೆಸರುಗಳಿದ್ದು, ಅವುಗಳನ್ನು ಪ್ರತ್ಯೇಕಗೊಳಿಸಿ ಒಬ್ಬೊಬ್ಬರ ಹೆಸರಿಗೆ ಏಕಪಹಣಿ ಹೊಂದುವುದಕ್ಕಾಗಿ ನಡೆಸುವ ಪಕ್ಕಾ ಪೋಡಿ ಪ್ರಕ್ರಿಯೆಯಂತೂ ತಲೆನೋವಿನ ಕೆಲಸ. ದಶಕಗಳ ಹಿಂದೆ ಬೇರೆ ಬೇರೆ ಉದ್ದೇಶದಡಿ ಭೂ ಮಂಜೂರಾತಿ ಪಡೆದವರೂ ಪೋಡಿಗಾಗಿ ಅಲೆದಾಟ ನಡೆಸಲೇಬೇಕಾಗಿದೆ. ಪೋಡಿಗಾಗಿ ಅರ್ಜಿ ಸಲ್ಲಿಸುವವರ ಸಂಖ್ಯೆ ಹೆಚ್ಚುವ ಪ್ರಮಾಣಕ್ಕೆ ತಕ್ಕಂತೆ ಸರ್ವೇಯರ್‌ಗಳು ಅಷ್ಟೇ ಸಂಖ್ಯೆಯಲ್ಲಿ ಇಲ್ಲದಿರುವುದು ಸಮಸ್ಯೆ. ಅರ್ಜಿ ಸಲ್ಲಿಕೆಯ ಹಿರಿತನದ ಆಧಾರದ ಮೇಲೆ ಪೋಡಿ ಮಾಡಿಕೊಡಬೇಕು ಎಂದು ಸರ್ಕಾರವೇನೋ ಆದೇಶ ಹೊರಡಿಸಿದೆ. ಆದರೆ, ದುಡ್ಡು ಜಾಸ್ತಿ ಕೊಡುವವರಿಗೆ ಬೇಗ ಪೋಡಿ ಮಾಡಿಕೊಡುವುದು ರೂಢಿಯಾಗಿದೆ. ದುಡ್ಡು ಹಾಗೂ ಪ್ರಭಾವ ಇಲ್ಲದವರು ವರ್ಷಗಟ್ಟಲೆ ಕಾದರೂ ಪೋಡಿಯಾಗುವುದೇ ಇಲ್ಲ. ನಿವೇಶನ ಮಾರಲು 11- ಇ ನಕ್ಷೆ ಕೂಡ ಅತ್ಯಗತ್ಯ. ಪೋಡಿಯಾಗದೇ ಇದ್ದರೆ ಕೃಷಿಗೆ ಪೂರಕವಾಗಿ ಸರ್ಕಾರ ನೀಡುವ ಯಾವುದೇ ಸೌಲಭ್ಯವನ್ನೂ ಪಡೆಯಲು ಸಾಧ್ಯವಾಗದು. ಸ್ವಾಧೀನದಲ್ಲಿರುವ ಜಮೀನನ್ನು ಅಡಮಾನ ಇರಿಸಿ ಯಾವುದೇ ಉದ್ದೇಶಕ್ಕಾಗಿ ಸಾಲ ಪಡೆಯಬೇಕಾದರೂ ಪೋಡಿ ಹಾಗೂ 11- ಇ ನಕ್ಷೆ ಅನಿವಾರ್ಯ. ಅದಾಗದೇ ಇದಾಗದು ಎಂಬ ಪರಿಸ್ಥಿತಿಯನ್ನು ದುರ್ಬಳಕೆ ಮಾಡಿಕೊಳ್ಳುವ ಅಧಿಕಾರಿಗಳು- ದಲ್ಲಾಳಿಗಳು ಇದನ್ನು ಬಳಸಿಕೊಂಡು ಜನರನ್ನು ಸುಲಿಯುತ್ತಿರುವುದು ರಹಸ್ಯವಲ್ಲ. ಈ ಎಲ್ಲ ಆಯಾಮಗಳನ್ನು ಗಮನದಲ್ಲಿಟ್ಟುಕೊಂಡು ನೋಡಿದರೆ 'ಸ್ವಾವಲಂಬಿ' ಆ್ಯಪ್ ಸರ್ವಜನೋಪಕಾರಿಯಾಗುವ ಎಲ್ಲ ಸಾಧ್ಯತೆಗಳನ್ನೂ ಒಳಗೊಂಡಿದೆ. ಭೂ ಒಡೆಯರು ನಕ್ಷೆಗಳನ್ನು ಆ್ಯಪ್‌ನಲ್ಲಿ ಅಪ್‌ಲೋಡ್ ಮಾಡಿದರೂ ಅದನ್ನು ಅನುಮೋದಿಸಬೇಕಾದುದು ಕಂದಾಯ ಇಲಾಖೆಯ ಸಿಬ್ಬಂದಿಯೇ. ಮನುಷ್ಯರ ಸ್ಪರ್ಶ ಇಲ್ಲದೇ ಆ್ಯಪ್ ಕೆಲಸ ಮಾಡಲಾಗದು. ಅನುಮೋದನೆಯ ಹೆಸರಿನಲ್ಲಿ ಮತ್ತೆ ಲಂಚಕ್ಕೆ ದಾರಿ ಮಾಡಿಕೊಡದಂತೆ ಸರ್ಕಾರ ನಿಗಾ ವಹಿಸಬೇಕಾಗಿದೆ. ಜಮೀನಿನ ಗಡಿ ತುಸು ವ್ಯತ್ಯಾಸವಾದರೂ ಕುಟುಂಬದವರ ಮಧ್ಯೆ ಅಥವಾ ಒಂದೇ ಸರ್ವೆ ನಂಬರ್‌ನಲ್ಲಿ ಜಮೀನು ಹೊಂದಿದವರ ಮಧ್ಯೆ ಸಂಘರ್ಷ, ಕಾನೂನು ಸಮರಕ್ಕೆ ದಾರಿ ಮಾಡುವುದು ಮಾಮೂಲು. ಅದನ್ನು ತಪ್ಪಿಸಿ, ಸರ್ವಸಮ್ಮತವಾಗಿ ಪೋಡಿ ಮಾಡಿಕೊಳ್ಳಬಹುದಾದ ರೂಪದಲ್ಲಿ ಆ್ಯಪ್ ಹಾಗೂ ಸಿಬ್ಬಂದಿಯನ್ನು ಸಜ್ಜುಗೊಳಿಸಬೇಕಿದೆ. ಇಂತಹ ಹೊಸ ಆವಿಷ್ಕಾರಗಳು ನಡೆದಾಗ ಅದರ ಮಾಹಿತಿ ಜನರಿಗೆ ಇರುವುದಿಲ್ಲ. ಸರ್ಕಾರವೇ ಪ್ರಚಾರ ಮಾಡಿ, ಇದರ ಅನುಕೂಲವನ್ನು ಮನದಟ್ಟು ಮಾಡಬೇಕು. ತಂತ್ರಜ್ಞಾನ ಬಳಕೆ ಗೊತ್ತಿಲ್ಲದೇ ಇರುವವರಿಗೆ ನೆರವಾಗಲು ವೃತ್ತಿಪರರು ಸಹಾಯ ಮಾಡಬಹುದಾದ ದಾರಿಯನ್ನೇನೊ ಸರ್ಕಾರ ತೋರಿಸಿದೆ. ಒಂದು ಕೆಲಸಕ್ಕೆ ನಿಗದಿತ ಮೊತ್ತದ ಸೇವಾಶುಲ್ಕವನ್ನಷ್ಟೇ ಪಡೆಯಬೇಕು ಎಂಬ ಮಿತಿಯನ್ನೂ ಹಾಕಿ, ಅದು ಕಾರ್ಯರೂಪಕ್ಕೆ ಬರುವಂತೆ ನೋಡಿಕೊಳ್ಳುವ ಕೆಲಸವೂ ಆಗಬೇಕಿದೆ. ಆಗಮಾತ್ರ, ಸರ್ಕಾರದ ಆಶಯ ಜನಹಿತಕಾರಿಯಾಗಿ, ಜನಕಲ್ಯಾಣವೂ ಸಾಕಾರವಾದೀತು.

ದಿನದ ಟ್ವೀಟ್

ರಾಜ್ಯಗಳಿಗೆ ಸ್ವಾತಂತ್ರ್ಯವಿದೆ

ರಾಜ್ಯಗಳು ತಮ್ಮ ವಿದ್ಯುತ್ ಸ್ಥಾವರಗಳ ಅಗತ್ಯಕ್ಕೆ ಅನುಗುಣವಾಗಿ ಕಲ್ಲಿದ್ದಲನ್ನು ನೇರವಾಗಿ ಆಮದು ಮಾಡಿಕೊಳ್ಳಲು ಸ್ವತಂತ್ರವಾಗಿರುತ್ತವೆ. ಅನೇಕ ರಾಜ್ಯಗಳು ವಿದ್ಯುತ್ ಕಡಿತ ಎದುರಿಸುತ್ತಿವೆ ಎಂದು ಹೇಳುವವರೆಲ್ಲರೂ ದಯವಿಟ್ಟು ಇದನ್ನು ನೆನಪಿನಲ್ಲಿ ಇಡಬೇಕು.

ಸುಮಂತ್ ರಾಮನ್, ಸುದ್ದಿ ವಿಶ್ಲೇಷಕ

ಕಿಡಿನುಡಿ

ಹೊಸ ರೂಪಾಂತರಿ ತಳಿಯ ಬಗ್ಗೆ ಎಚ್ಚರ ವಹಿಸಿ. ಇದು ವಿಪರೀತ ಅಪಾಯಕಾರಿ! ಶ್ವಾಸನಾಳದ ಮೂಲಕ ಹರಡುವ ಬದಲು ಇದು ಸುದ್ದಿ ವಾಹಿನಿಗಳ ಮೂಲಕ ಹರಡುತ್ತದೆ.

ಹರ್ಷ್ ಗೋಯೆಂಕಾ, ಉದ್ಯಮಿ

25 ವರ್ಷಗಳ ಹಿಂದೆ

ಬುಧವಾರ, 23-4-1997

● **ಗುಜ್ರಾಲ್ ನೇತೃತ್ವದ ಸಂಪುಟಕ್ಕೆ ವಿಶ್ವಾಸಮತ**

ನವದೆಹಲಿ, ಏ. 22- ಪ್ರಧಾನಿ ಐ.ಕೆ. ಗುಜ್ರಾಲ್ ನೇತೃತ್ವದ ಸಂಯುಕ್ತ ರಂಗ ಸರ್ಕಾರಕ್ಕೆ ಇಂದು ಲೋಕಸಭೆಯಲ್ಲಿ ವಿಶ್ವಾಸಮತ ಪ್ರಾಪ್ತವಾಯಿತು.

ವಿಶ್ವಾಸಮತ ನಿರ್ಣಯದ ಮೇಲೆ ಸುಮಾರು ಒಂಬತ್ತು ಗಂಟೆಗಳ ಅವಧಿಯ ಸುದೀರ್ಘ ಚರ್ಚೆಯ ನಂತರ ಪ್ರಧಾನಿ ಅವರು ಉತ್ತರ ನೀಡಿದರು.

ಲೋಕಸಭಾಧ್ಯಕ್ಷ ಪಿ.ಎ. ಸಂಗ್ಮಾ ಅವರು ರಾತ್ರಿ 9.20ಕ್ಕೆ ವಿಶ್ವಾಸಮತ ನಿರ್ಣಯವನ್ನು ಮತಕ್ಕೆ ಹಾಕಿದಾಗ ಸದನ ಧ್ವನಿಮತದಿಂದ ಅಂಗೀಕಾರ ನೀಡಿತು.

ಬಿಜೆಪಿ ಮಾತ್ರ ವಿಶ್ವಾಸಮತಕ್ಕೆ ತನ್ನ ವಿರೋಧವನ್ನು ವ್ಯಕ್ತಪಡಿಸಿತಾದರೂ ಪರ ಮತ್ತು ವಿರೋಧದ ಬಲಾಬಲವನ್ನು ಪರೀಕ್ಷಿಸಬೇಕೆಂದು ಒತ್ತಾಯಿಸಲಿಲ್ಲ.

● **ಗೌಡರು ಬಲಿಪಶು- ವಾಜಪೇಯಿ ಶಂಕೆ**

ನವದೆಹಲಿ, ಏ. 22 (ಯುಎನ್‌ಐ)- ಬಿಹಾರದ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್ ಅವರು ಭಾಗಿಯಾಗಿದ್ದಾರೆ ಎಂದು ಆಪಾದಿಸಲಾಗಿರುವ ಮೇವು ಹಗರಣದಲ್ಲಿ ಮಧ್ಯೆ ಪ್ರವೇಶಿಸಲು ಎಚ್.ಡಿ. ದೇವೇಗೌಡ ಅವರು ನಿರಾಕರಿಸಿದ್ದು ಅವರ ಸ್ಥಾನಕ್ಕೆ ಮುಳುವಾಯಿತೇ ಎಂದು ವಿರೋಧಪಕ್ಷದ ನಾಯಕ ಹಾಗೂ ಮಾಜಿ ಪ್ರಧಾನಿ ಎ.ಬಿ. ವಾಜಪೇಯಿ ಅವರು ಇಂದು ಲೋಕಸಭೆಯಲ್ಲಿ ಶಂಕೆಯನ್ನು ವ್ಯಕ್ತಪಡಿಸಿದರು.

ವಿಶ್ವಾಸ ಗೊತ್ತುವಳಿಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

50 ವರ್ಷಗಳ ಹಿಂದೆ

ಭಾನುವಾರ, 23-4-1972

● **ಗೇಣಿದಾರರಿಗೆ ರಕ್ಷಣೆ ನೀಡಿ ಶೀಘ್ರದಲ್ಲೇ ಸುಗ್ರೀವಾಜ್ಞೆ ಸಂಭವ**

ಬೆಂಗಳೂರು, ಏ. 22- ಎರಡು ವರ್ಷದ ಬಾಕಿ ಗೇಣಿಯ ಮೊತ್ತವನ್ನು ನೀಡಿದಲ್ಲಿ ಒಕ್ಕಲೆಬ್ಬಿಸುವುದರ ವಿರುದ್ಧ ಗೇಣಿದಾರರಿಗೆ ರಕ್ಷಣೆ ನೀಡಲು ಸರ್ಕಾರ ಜರೂರು ಶಾಸನವೊಂದನ್ನು ಜಾರಿಗೆ ತರಲಿದೆಯೆಂದು ಗೊತ್ತಾಗಿದೆ.

ಇಂದು ನಡೆದ ಮಂತ್ರಿಮಂಡಲದ ಸಭೆ ಈ ಕುರಿತು ಪರಿಶೀಲಿಸಿತು. ಈ ಸಂಬಂಧದ ವಿಧೇಯಕವು ವಿಧಾನಪರಿಷತ್ತಿನ ಒಪ್ಪಿಗೆ ಪಡೆದು ಹೊರಬರಲು ಸಾಧ್ಯವಾಗದಿದ್ದ ಕಾರಣ, ಸರ್ಕಾರ ತಾನು ಉದ್ದೇಶಿಸಿದ್ದ ರಕ್ಷಣೆಯನ್ನು ಗೇಣಿದಾರರಿಗೆ ಒದಗಿಸಲು ಸುಗ್ರೀವಾಜ್ಞೆಯ ಕ್ರಮ ಅನುಸರಿಸಲು ನಿರ್ಧರಿಸಿದೆಯೆಂದು ತಿಳಿದುಬಂದಿದೆ.

● **ಭದ್ರಾವತಿ ಉಕ್ಕು ಕಾರ್ಖಾನೆ: ಈ ಬಾರಿ 1 ಕೋಟಿ ರೂ.ಗೂ ಹೆಚ್ಚು ಲಾಭ ಗಳಿಕೆ ನಿರೀಕ್ಷೆ**

ಬೆಂಗಳೂರು, ಏ. 22- ಕಳೆದ ವರ್ಷ ಶೇಕಡ 50ರಷ್ಟು ಹೆಚ್ಚು ಮಾರಾಟ ಮಾಡಿರುವ ಭದ್ರಾವತಿ ಕಬ್ಬಿಣ ಹಾಗೂ ಉಕ್ಕು ಕಾರ್ಖಾನೆ, 1 ಕೋಟಿ ರೂಪಾಯಿಗಿಂತ ಹೆಚ್ಚು ಲಾಭವನ್ನು ನಿರೀಕ್ಷಿಸಿದೆ. 70- 71ರಲ್ಲಿ 1.75 ಕೋಟಿ ನಷ್ಟ ಅನುಭವಿಸಿದ್ದ ಈ ಕಾರ್ಖಾನೆ, 71- 72ರಲ್ಲಿ ತನ್ನ ಮಾರಾಟ ಪ್ರಮಾಣವನ್ನು 20 ಕೋಟಿಯಿಂದ 30 ಕೋಟಿಗೇರಿಸಿ ಲಾಭ ಗಳಿಸುವ ಸ್ಥಿತಿಯನ್ನು ಮುಟ್ಟಿದೆ.

ಆರ್ಥಿಕ ಪುನಶ್ಚೇತನದ ಜೊತೆಗೆ ಹಣದುಬ್ಬರ ನಿಯಂತ್ರಿಸುವ ಹೊಣೆ ಆರ್‌ಬಿಐ ಮೇಲಿದೆ

'ದೋಸೆ ಅರ್ಥಶಾಸ್ತ್ರ' ಮತ್ತು ಹಣದುಬ್ಬರ

ವಿಶ್ಲೇಷಣೆ

ಟಿ.ಎಸ್.ವೇಣುಗೋಪಾಲ್

ಮನಮೋಹನ್ ಸಿಂಗ್ ಅವರು ಹಣಕಾಸು ಸಚಿವರಾಗಿದ್ದಾಗ ಆರ್‌ಬಿಐ ಗವರ್ನರ್ ಆಗಿದ್ದ ಎಂ.ನರಸಿಂಹಂ ಅವರ ಮನೆಗೆ ಹೋಗಿದ್ದರಂತೆ. ಸ್ವತಃ ಆರ್ಥಿಕ ತಜ್ಞರಾಗಿದ್ದ ನರಸಿಂಹಂ, ಸಿಂಗ್ ಅವರನ್ನು ಉದ್ದೇಶಿಸಿ 'ನೀವು ಹಣದುಬ್ಬರ ಕಡಿಮೆಯಾಗಿದೆ ಅನ್ನುತ್ತೀರಿ. ಆದರೆ ನಾನು ತರಕಾರಿ ಕೊಳ್ಳುವಾಗ ಮೊದಲಿಗಿಂತ ಹೆಚ್ಚು ಹಣ ಕೊಡುತ್ತಿದ್ದೇನೆ' ಎಂದು ಕೇಳಿದರಂತೆ. ಅದಕ್ಕೆ ಸಿಂಗ್, 'ಹೌದು, ನನ್ನ ಹೆಂಡತಿಯೂ ಇದೇ ಪ್ರಶ್ನೆ ಕೇಳುತ್ತಾಳೆ. ನನಗೆ ವಿವರಿಸೋದಕ್ಕೆ ಕಷ್ಟವಾಗುತ್ತೆ ಅಂತ ಅವಳಿಗೆ ಹೇಳಿದೆ' ಅಂದರಂತೆ. ಇಬ್ಬರೂ ತಜ್ಞರು. ಅವರೇ ಹಣದುಬ್ಬರವನ್ನು ವಿವರಿಸುವುದು ಕಷ್ಟ ಅನ್ನುತ್ತಾರೆ.

ಹಾಗೆಯೇ ರಿಸರ್ವ್ ಬ್ಯಾಂಕಿನ ಗವರ್ನರ್ ಆಗಿದ್ದ ವೈ.ವಿ.ರೆಡ್ಡಿ ಅವರ ತಾಯಿ, 'ವೇಣು, ಬ್ಯಾಂಕಿನವರು ಹೋದ ವರ್ಷ ಕೊಡುತ್ತಾ ಇದ್ದುದಕ್ಕಿಂತ ಈಗ ಕಡಿಮೆ ಬಡ್ಡಿ ಹಣ ಕೊಡುತ್ತಿದ್ದಾರೆ. ಯಾಕೆ ಅಂತ ಕೇಳಿದರೆ, ರಿಸರ್ವ್ ಬ್ಯಾಂಕಿನ ನೀತಿ ಹಾಗಿದೆ ಅಂತಾರೆ' ಎಂದು ಮಗನನ್ನು ಕೇಳಿದರಂತೆ. ಅದಕ್ಕೆ ರೆಡ್ಡಿ ಅವರು, 'ಇಲ್ಲ, ನಿನಗೆ ಸಿಗುತ್ತಿರುವ ನೈಜ ಬಡ್ಡಿ ದರ ಹೆಚ್ಚಾಗಿದೆ' ಎಂದು ಏನೋ ಹೇಳಿದರಂತೆ. 'ಹೋಗೋ, ಬಡ್ಡಿ ದರದಲ್ಲಿ ನಿಜ, ಸುಳ್ಳು ಅಂತ ಬೇರೆ ಇರುತ್ತೇನೋ' ಅಂತ ಲೇವಡಿ ಮಾಡಿದರಂತೆ ಅವರ ಅಮ್ಮ.

ಈ ಹಣದುಬ್ಬರದ ಒಗಟನ್ನು ಅಮ್ಮನಿಗೆ ಅರ್ಥ ಮಾಡಿಸಲಿಕ್ಕೆ ರೆಡ್ಡಿಯವರಿಗೂ ಸಾಧ್ಯವಾದಂತಿಲ್ಲ. ರಘುರಾಂ ರಾಜನ್ ಅವರಿಗೂ ಇಂತಹುದೇ ಅನುಭವ ಆಗಿದೆ. ತಮ್ಮಲ್ಲಿದ್ದ ಹಣವನ್ನು ಬ್ಯಾಂಕಿನಲ್ಲಿ ಇಟ್ಟು, ಬಡ್ಡಿಯಿಂದ ಬದುಕುತ್ತಿದ್ದ ಪಿಂಚಣಿದಾರರೊಬ್ಬರು 'ನನಗೆ ಮೊದಲು ಠೇವಣಿಗೆ ಶೇಕಡ 10ರಷ್ಟು ಬಡ್ಡಿ ಬರುತ್ತಿತ್ತು. ಈಗ ಕೇವಲ ಶೇ 8ರಷ್ಟು ಬರುತ್ತದೆ. ದಯವಿಟ್ಟು ನನಗೆ ಹೆಚ್ಚು ಬಡ್ಡಿ ಕೊಡಲು ಬ್ಯಾಂಕಿನವರಿಗೆ ತಿಳಿಸಿ. ಇಲ್ಲದಿದ್ದರೆ ನನಗೆ ಜೀವನ ನಡೆಸೋದು ಕಷ್ಟ' ಅಂತ ಪತ್ರ ಬರೆದಿದ್ದರು.

ಈ ಎಲ್ಲ ಅರ್ಥಶಾಸ್ತ್ರಜ್ಞರು ಆಗ ಹೇಳುತ್ತ ಇದ್ದದ್ದು, ಹಣದುಬ್ಬರದ ದರ ಕಡಿಮೆಯಾಗಿದೆ, ಅದರಿಂದ ಠೇವಣಿದಾರರಿಗೆ ಮೊದಲಿಗಿಂತಲೂ ನೈಜ ಬಡ್ಡಿ ಹೆಚ್ಚು ಸಿಗುತ್ತಿದೆ ಎಂಬ ಮಾತನ್ನು. ಆದರೆ ಯಾರಾದರೂ 'ಹೇಗೆ' ಅಂತ ಕೇಳಿದರೆ ಅದನ್ನು ವಿವರಿಸುವುದಕ್ಕೆ ಕಷ್ಟಪಡುತ್ತಿದ್ದರು. ರಘುರಾಂ ರಾಜನ್ ದೋಸೆಯ ಉದಾಹರಣೆ ಕೊಟ್ಟು, ಅದನ್ನು ವಿವರಿಸಲು ಪ್ರಯತ್ನಿಸಿದರು. ಅದನ್ನು ಆಗ 'ದೋಸೆ ಅರ್ಥಶಾಸ್ತ್ರ' ಎಂದು ಕರೆಯುತ್ತಿದ್ದರು. ಅವರ ವಿವರಣೆ ಹೀಗಿದೆ:

ಪಿಂಚಣಿದಾರ ಒಂದು ಲಕ್ಷ ರೂಪಾಯಿ ಠೇವಣಿ ಇಟ್ಟದ್ದಾನೆ ಅಂತ ಭಾವಿಸಿಕೊಳ್ಳಿ. ಆಗ ದೋಸೆಯ ಬೆಲೆ ₹ 50 ಇತ್ತು ಅಂತ ಇಟ್ಟುಕೊಳ್ಳಿ. ಅವನು ಅಷ್ಟೂ ಹಣ ಖರ್ಚು ಮಾಡಿ ದೋಸೆಗಳನ್ನು ಕೊಂಡಿದ್ದರೆ ಅವನಿಗೆ ಒಟ್ಟು 2,000 ದೋಸೆಗಳು ಬರುತ್ತಿದ್ದವು. ಆದರೆ ಅವನಿಗೆ ಹಾಗೆ ಮಾಡುವುದು ಇಷ್ಟವಿರಲಿಲ್ಲ. ಇನ್ನೊಂದಿಷ್ಟು ದುಡ್ಡು ದುಡಿಯಬೇಕು ಎಂಬ ಆಸೆಯಿಂದ ಅವನು ಆ ಒಂದು ಲಕ್ಷವನ್ನು ಬ್ಯಾಂಕಿನಲ್ಲಿ ಠೇವಣಿ ಇಡುತ್ತಾನೆಂದು ಭಾವಿಸಿಕೊಳ್ಳಿ. ಆಗ ಬಡ್ಡಿ ದರ ಶೇ 10ರಷ್ಟು ಇತ್ತು. ಹಾಗಾಗಿ ವರ್ಷಕ್ಕೆ ₹ 10,000ದಷ್ಟು ಬಡ್ಡಿ ಬರುತ್ತಿತ್ತು. ಆಗ ಹಣದುಬ್ಬರದ ದರವೂ ಶೇ 10ರಷ್ಟು ಇತ್ತು. ಅಂದರೆ ದೋಸೆಯ ಬೆಲೆಯೂ ಶೇ 10ರಷ್ಟು ಜಾಸ್ತಿಯಾಗಿರಬೇಕು. ಅಂದರೆ $50 + 5 = 55$ ರೂಪಾಯಿ ಆಗುತ್ತದೆ. ಅಂದರೆ ಅವನಿಗೆ ಸಿಕ್ಕ ₹ 10,000 ಬಡ್ಡಿಯಲ್ಲಿ 182 ದೋಸೆಗಳನ್ನು ಕೊಳ್ಳಬಹುದಿತ್ತು.

ರಾಜನ್ ಅವರ ಹಣಕಾಸಿನ ನೀತಿಯಿಂದ ಎರಡು ವರ್ಷಗಳಲ್ಲಿ ಹಣದುಬ್ಬರದ ದರ ಶೇ 5.5ಕ್ಕೆ ಇಳಿಯಿತು. ಹಾಗೆಯೇ ಬಡ್ಡಿ ದರವನ್ನು ಶೇ 8ಕ್ಕೆ ಇಳಿಸಲಾಯಿತು. ಶೇ 8ರಷ್ಟು ಬಡ್ಡಿ ದರದಲ್ಲಿ ಠೇವಣಿದಾರನಿಗೆ ₹ 8,000 ಬಡ್ಡಿ ಸಿಗುತ್ತದೆ. ಆದರೆ ಹಣದುಬ್ಬರದ ದರ ಶೇ 5.5 ಆಗಿರುವುದರಿಂದ ದೋಸೆಯ ಬೆಲೆ ಕಡಿಮೆಯಾಗಿ ₹ 52.75 ಆಗುತ್ತದೆ. ಅವನು ಈಗ 8,000 ರೂಪಾಯಿಯಲ್ಲಿ 152 ದೋಸೆಗಳನ್ನು ಪಡೆಯಬಹುದು. ಅಂದರೆ ಅವನಿಗೆ ಸಿಗುತ್ತಿದ್ದ ದೋಸೆಗಳ ಸಂಖ್ಯೆಯಲ್ಲಿ 30 ಕಡಿಮೆಯಾಯಿತು. ಇಷ್ಟೇ ಆದರೆ ಪಿಂಚಣಿದಾರನ ಅಳಲು ಸರಿ. ಆದರೆ ಲೆಕ್ಕ ಇಲ್ಲಿಗೇ ಮುಗಿಯುವುದಿಲ್ಲ. ಅಸಲನ್ನೂ ಲೆಕ್ಕಕ್ಕೆ ತೆಗೆದುಕೊಳ್ಳಬೇಕು ಅಲ್ಲವೇ?

ಹಣದುಬ್ಬರ ದರ ಶೇ 10 ಇದ್ದಾಗ, ಅಂದರೆ ದೋಸೆಯ ಬೆಲೆ ₹ 55 ಇದ್ದಾಗ ಠೇವಣಿ ಇಟ್ಟಿದ್ದ 1 ಲಕ್ಷ ರೂಪಾಯಿಯಲ್ಲಿ 1,818 ದೋಸೆಗಳನ್ನು ಕೊಳ್ಳಬಹುದಿತ್ತು. ಹಣದುಬ್ಬರ ಕಡಿಮೆಯಾದ ಮೇಲೆ, ಅಂದರೆ ದೋಸೆಯ ಬೆಲೆ ₹ 52.75 ಆದಾಗ ಒಂದು ಲಕ್ಷ ರೂಪಾಯಿಗೆ 1,896 ದೋಸೆಗಳು ಸಿಗುತ್ತವೆ. ಅಂದರೆ ಹಣದುಬ್ಬರ ಹೆಚ್ಚಿದ್ದಾಗ, ಅಸಲು ಹಾಗೂ ಬಡ್ಡಿ ದರ ಒಟ್ಟಿಗೆ ಸೇರಿ $1818 + 182 = 2{,}000$ ದೋಸೆಗಳು ಸಿಗುತ್ತಿದ್ದವು. ಆದರೆ ಹಣದುಬ್ಬರ ಕಡಿಮೆ ಆದಾಗ ಠೇವಣಿದಾರ $1896 + 152 = 2{,}048$ ದೋಸೆಗಳನ್ನು ಕೊಳ್ಳಬಹುದಿತ್ತು. ಅಂದರೆ ಈಗ 48 ದೋಸೆಗಳು ಹೆಚ್ಚು ಸಿಗುತ್ತವೆ. ಹಾಗಾಗಿ ರಘುರಾಂ ರಾಜನ್ ಅವರಿಗೆ 'ನಾನು ಪಿಂಚಣಿದಾರನ ಹಿತಾಸಕ್ತಿಯನ್ನು ಕಾಪಾಡಿದ್ದೇನೆ. ಅವನ ಸ್ಥಿತಿ ಸುಧಾರಿಸಿದೆ' ಅನ್ನುವುದಕ್ಕೆ ಸಾಧ್ಯವಾಗಿತ್ತು. ಅದನ್ನೇ ಮನಮೋಹನ್ ಸಿಂಗ್, ರೆಡ್ಡಿ ಇವರೆಲ್ಲಾ ಹೇಳಲು ಪ್ರಯತ್ನಿಸಿದ್ದು. ಅವರೆಲ್ಲರೂ ತಮ್ಮ ಕಾಲದಲ್ಲಿ ಬಡ್ಡಿ ದರಕ್ಕಿಂತ ಹಣದುಬ್ಬರದ ದರ ಕಡಿಮೆ ಇರುವಂತೆ ನೋಡಿಕೊಂಡಿದ್ದರು. ಹಾಗಾಗಿ ಅವರಿಗೆ ಇದನ್ನು ಹೇಳಿಕೊಳ್ಳುವುದಕ್ಕೆ ಸಾಧ್ಯವಿತ್ತು. ಆದರೆ ಈಗಿನ ಪರಿಸ್ಥಿತಿ ಬೇರೆ.

ಈಗಿನ ಪರಿಸ್ಥಿತಿಗೆ ದೋಸೆ ಲೆಕ್ಕಾಚಾರವನ್ನು ಮುಂದುವರಿಸೋಣ. ಅಂದರೆ ಈಗಿನ ಬಡ್ಡಿ ದರ ಶೇ 5 ಹಾಗೂ ಹಣದುಬ್ಬರದ ದರ ಶೇ 7.5 ಅಂತ ಇಟ್ಟುಕೊಂಡು ಲೆಕ್ಕ ಹಾಕೋಣ. ಹಣದುಬ್ಬರದ ದರ ಶೇ 7.5 ಇರುವುದರಿಂದ ₹ 50 ದೋಸೆಯ ಬೆಲೆ ₹ 53.75 ಆಗುತ್ತದೆ. ಈಗ ಸಿಗುವ ಬಡ್ಡಿ ₹ 5,000. ಈ ಬಡ್ಡಿಯಲ್ಲಿ 94 ದೋಸೆಗಳನ್ನು ಕೊಂಡುಕೊಳ್ಳಬಹುದು. ಇನ್ನು ಅಸಲಿಗೆ ಬರೋಣ. ಅಂದರೆ ಒಂದು ಲಕ್ಷದಲ್ಲಿ ದೋಸೆಯೊಂದಕ್ಕೆ ₹ 53.75ರಂತೆ 1,860 ದೋಸೆಗಳನ್ನು ಕೊಳ್ಳಬಹುದು. ಅಸಲು ಮತ್ತು ಬಡ್ಡಿ ಎರಡೂ ಸೇರಿದರೆ $1860 + 94 = 1954$ ದೋಸೆಗಳನ್ನು ಕೊಳ್ಳಬಹುದು. ಅಂದರೆ ಮೊದಲಿಗೆ ಹೋಲಿಸಿದರೆ ಅವನು ಕೊಳ್ಳಬಹುದಾದ ದೋಸೆಗಳ ಸಂಖ್ಯೆ $2{,}048 - 1{,}954 = 94$ರಷ್ಟು ಕಡಿಮೆಯಾಗುತ್ತದೆ. ಹಾಗಾಗಿ ಈಗಿನ ರಿಸರ್ವ್ ಬ್ಯಾಂಕಿನ ಗವರ್ನರ್‌ಗೆ 'ನಾನು ಠೇವಣಿದಾರನ ಹಿತಾಸಕ್ತಿಯನ್ನು ಕಾಪಾಡುತ್ತಿದ್ದೇನೆ' ಅಂತ ಹೇಳುವುದಕ್ಕೆ ಸಾಧ್ಯವಿಲ್ಲ. ಪ್ರತಿಯೊಬ್ಬ ಪಿಂಚಣಿದಾರ ಬ್ಯಾಂಕಿನಲ್ಲಿಟ್ಟ ಒಂದು ಲಕ್ಷ ರೂಪಾಯಿ ಠೇವಣಿಯ ಮೌಲ್ಯ ಪ್ರತಿವರ್ಷ 94 ದೋಸೆಗಳಷ್ಟು ಕಡಿಮೆಯಾಗುತ್ತಿದೆ.

ಎಲ್ಲಿಯವರೆಗೆ ಬಡ್ಡಿ ದರಕ್ಕಿಂತ ಹಣದುಬ್ಬರದ ದರ ಹೆಚ್ಚಿಗೆ ಇರುತ್ತದೋ ಅಲ್ಲಿಯವರೆಗೆ ಠೇವಣಿದಾರನ ಠೇವಣಿಯ ಮೌಲ್ಯ ಕಡಿಮೆಯಾಗುತ್ತಲೇ ಹೋಗುತ್ತದೆ. ಈಗ ಸಗಟು ಹಣದುಬ್ಬರದ ದರ ಶೇ 14.55ರಷ್ಟಾಗಿದೆ. ಹಾಗೆಯೇ ಚಿಲ್ಲರೆ ಹಣದುಬ್ಬರ ದರ ಶೇ 6.95. ಇವು ಹಣದುಬ್ಬರವನ್ನು ಅಳತೆ ಮಾಡುವ ಎರಡು ಕ್ರಮಗಳು. ಜನಸಾಮಾನ್ಯರನ್ನು ಕಾಡುವುದು ಚಿಲ್ಲರೆ ಹಣದುಬ್ಬರ ಅಥವಾ ಗ್ರಾಹಕರ ಬೆಲೆ ಸೂಚಿ. ಇದನ್ನು ನಿಯಂತ್ರಣದಲ್ಲಿ ಇಡುವುದು ಅಂದರೆ ಶೇ 4ರ ಆಸುಪಾಸಿನಲ್ಲಿ ಇಡುವುದು ರಿಸರ್ವ್ ಬ್ಯಾಂಕಿನ ಕೆಲಸ. ಮೊದಲು ಕೇಂದ್ರ ಬ್ಯಾಂಕು ಸಗಟು ಹಣದುಬ್ಬರದ ದರವನ್ನು ಅಳತೆಗೋಲಾಗಿ ಪರಿಗಣಿಸಿತ್ತು. ರಘುರಾಂ ರಾಜನ್ ಕಾಲದಲ್ಲಿ ಚಿಲ್ಲರೆ ಹಣದುಬ್ಬರ ದರವನ್ನು ಮಾಪನವನ್ನಾಗಿ ಪರಿಗಣಿಸಿ ಅದನ್ನು ನಿಯಂತ್ರಿಸುವ ಕಡೆ ಗಮನ ಹರಿಸಲಾಯಿತು.

ಹಣದುಬ್ಬರವನ್ನು ನಿಯಂತ್ರಿಸುವುದಕ್ಕೆ ರೆಪೊ ದರವನ್ನು ಹೆಚ್ಚಿಸುವುದು ರಿಸರ್ವ್ ಬ್ಯಾಂಕಿನ ಒಂದು ಕ್ರಮ. ಕೆಲವು ವರ್ಷಗಳಿಂದ ರಿಸರ್ವ್ ಬ್ಯಾಂಕ್ ಆರ್ಥಿಕ ಬೆಳವಣಿಗೆಯನ್ನು ಸುಧಾರಿಸುವುದಕ್ಕೆ ಆದ್ಯತೆ ನೀಡಿತ್ತು. ಹಾಗಾಗಿ ರೆಪೊ ದರವನ್ನು ನಿರಂತರವಾಗಿ ಇಳಿಸುತ್ತಾ ಬಂದಿತ್ತು. ಆದರೆ ಈಗ ಹಣದುಬ್ಬರದ ದರ ಹೆಚ್ಚುತ್ತಲೇ ಇರುವುದರಿಂದ ಅದರ ನಿಯಂತ್ರಣ ರಿಸರ್ವ್ ಬ್ಯಾಂಕಿಗೆ ಆದ್ಯತೆಯ ವಿಷಯವಾಗಿದೆ. ಸಹಜವಾಗಿಯೇ ಬರುವ ದಿನಗಳಲ್ಲಿ ರೆಪೊ ದರ ಹೆಚ್ಚುವುದನ್ನು ನಿರೀಕ್ಷಿಸಬಹುದು. ಆದರೆ ಆರ್ಥಿಕ ಬೆಳವಣಿಗೆಯೂ ಸ್ಥಗಿತವಾಗಿರುವುದರಿಂದ ಬೆಳವಣಿಗೆಯನ್ನು ಪುನಶ್ಚೇತನಗೊಳಿಸುತ್ತಲೇ ಹಣದುಬ್ಬರವನ್ನು ನಿಯಂತ್ರಿಸುವ ಹೊಣೆಗಾರಿಕೆ ಕೇಂದ್ರ ಬ್ಯಾಂಕಿನ ಮೇಲಿದೆ.

ಲೇಖಕ: ಸಂಖ್ಯಾಶಾಸ್ತ್ರ ನಿವೃತ್ತ ಪ್ರಾಧ್ಯಾಪಕ, ಮೈಸೂರು

ಚುರುಮುರಿ



ಲಿಂಬೂ ಛೂಮಂತರ್!

● ಆನಂದ

'ಏನಮ್ಮಾ, ಈ ಸಲ ಏನು ಕಳ್ಳತನ ಮಾಡಿಸಿದ್ದೀಯಾ?' ಎಂದು ಹೆಂಡತಿಯನ್ನು ಕೇಳಿದೆ. ಕೆಲವು ದಿನಗಳ ಹಿಂದಷ್ಟೇ ಬಿಹಾರದಲ್ಲಿ ನದಿಗೆ ಕಟ್ಟಿದ್ದ ಉಕ್ಕಿನ ಸೇತುವೆ ಕಳುವಾದ ಸುದ್ದಿ ಹೇಳಿದ್ದಳು.

'ಉತ್ತರಪ್ರದೇಶದಲ್ಲಿ ನಿಂಬೆಹಣ್ಣು ಕಳ್ಳತನವಾಗಿದೆ' ಎಂದಾಗ ನಾನು 'ವ್ಹಾಟ್! ಲೈಮ್?' ಎಂದು ಉದ್ಗರಿಸಿದೆ.

'ಹೌದ್ರೀ, ಅಲ್ಲೊಂದು ಊರಿನಲ್ಲಿ 60 ಕಿಲೊ ನಿಂಬೆಹಣ್ಣು ಕಳ್ಳತನ ಆಗಿದೆ'.

'ಬಟ್ ವೈ ಯಃಕಶ್ಚಿತ್ ನಿಂಬೆ?'

'ನಿಂಬೆಹಣ್ಣಿನ ಬೆಲೆ ಕಿಲೊ 300ವರೆಗೆ ಮುಟ್ಟಿದೆ, ಅದಕ್ಕೆ ಕಳ್ಳತನ' ಎಂದು ವಿವರಿಸಿದಳು.

'ಸೊ, ಡಿಮ್ಯಾಂಡ್ ಇರೋದು ಬರೀ ಪೆಟ್ರೋಲ್, ಡೀಸೆಲ್, ಖಾದ್ಯ ಎಣ್ಣೆ ಮುಂತಾದವುಗಳಿಗೆ ಅಷ್ಟೇ ಅಲ್ಲ ಎಂದಾಯಿತು' ಎಂದೆ.

'ಆದರೂ ನಿಂಬೆಹಣ್ಣನ್ನೂ ಕಳ್ಳತನ ಮಾಡ್ತಾರೆ ಅಂದ್ರೆ ಅದಕ್ಕೆಷ್ಟು ಬೇಡಿಕೆ ಇರಬೇಕು...?'

'ಈ ಕಳ್ಳಮಾಲನ್ನು ಮಾರುವ ವಿಶ್ವಾಸಾನೂ ಇರಬೇಕು ಕಳ್ಳರಿಗೆ'.

'ಕೆಲಸ ಯಶಸ್ವಿಯಾಗಬೇಕಾದರೆ ಮೊದಲು ವಿಶ್ವಾಸ ಇರಬೇಕು ಆ ಕೆಲಸದಲ್ಲಿ ಎಂದೆ' ನಾನು ಪರ್ಸನಾಲಿಟಿ ಡೆವಲಪ್‌ಮೆಂಟ್ ಕೋರ್ಸಿನಲ್ಲಿ ಹೇಳುವಂತೆ.

'ಈಗೀಗ ಕಳ್ಳರು ಮಾತ್ರ ಡೈವರ್ಸಿಫೈ ಆಗ್ತಿಲ್ಲ, ಉಡುಗೊರೆಗಳಲ್ಲೂ ವೈವಿಧ್ಯ ಕಾಣ್ತಿದೇರಿ. ಮೊನ್ನೆ ತಮಿಳುನಾಡಿನ ಮದುವೆಯೊಂದರಲ್ಲಿ ವರನಿಗೆ ಒಂದು ಲೀಟರ್ ಪೆಟ್ರೋಲ್ ಉಡುಗೊರೆ ಕೊಟ್ಟರಂತೆ'.

'ಅದ್ಸರಿ, 100 ರೂಪಾಯಿಗೆ ಇನ್ನೇನು ಸಿಗುತ್ತೆ? ಮೊನ್ನೆ ಕ್ಯಾರೆಟ್ಟೇ ಕಿಲೊಗೆ 120ರಂತೆ ಮಾರಾಟವಾಯಿತು. ಈಗ ಒಂದು ಕಿಲೊ ಸೇಬು ಬೇಕಾದರೆ 200 ರೂಪಾಯಿ ಬೇಕು'.

'ಈಗೇನ್ರಿ ನೀರು- ಹಾಲು ಎರಡಕ್ಕೂ ಒಂದೇ ಬೆಲೆ. ಒಂದು ಬಾಟಲಿ ನೀರಿಗೂ 20, ಒಂದು ಪ್ಯಾಕೆಟ್ ಹಾಲಿಗೂ 20'.

'ಅದಕ್ಕೇ ಅಂತ ಕಾಣುತ್ತೆ ಈಗೀಗ ಹಾಲಿಗೆ ನೀರು ಬೆರೆಸೋ ದೂರುಗಳು ಕೇಳಿಬರ್ತಿಲ್ಲ ಅಂತೀಯ?'

'ಹೋಗಲಿ ಬಿಡಿ, ಸೇತುವೇನ ಆನ್‌ಲೈನ್‌ನಲ್ಲಿ ಆರ್ಡರ್ ಮಾಡೋಕ್ಕಾಗಲ್ಲ. ಆದರೆ ನಿಂಬೆಹಣ್ಣು ಆರ್ಡರ್ ಮಾಡಬಹುದು'.

ಸಂಗತ

ನೀತಿ: ಯಾರಿಂದ ಯಾರು ಕಲಿಯಬೇಕು?

ಎಲ್ಲ ಬಗೆಯ ವಿಕೃತಿಗಳಿಂದ, ವಿಸ್ಮೃತಿಗಳಿಂದ ಶಾಲೆಗಳನ್ನು ದೂರ ಇರಿಸಬೇಕಿದೆ

● ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ

ಮಕ್ಕಳು, ಮೋಡ ಕರಗಿ ಹನಿಗಟ್ಟಿ ನೆಲದತ್ತ ಸುರಿದ ಶುಭ್ರವಾದ ನೀರಿನಂತೆ. ನೆಲಕ್ಕೆ ಬಿದ್ದ ನಂತರವೇ ನೀರ ಹನಿ ಆಯಾ ನೆಲದ ಗುಣವನ್ನು ಪಡೆದು ಅಶುದ್ಧವಾಗುತ್ತದೆ. ಹಾಗೇ ಹುಟ್ಟುವಾಗ ಅಪ್ಪಟ ವಿಶ್ವಮಾನವ ಮರಿಯಾಗಿ ಹುಟ್ಟಿದ ಮಗುವಿಗೆ, ಅದಷ್ಟು ಬೇಗ ಒಂದು ಜಾತಿಗೆ ಸೇರಿದ ಹೆಸರನ್ನು ಕೊಟ್ಟು, ಅದನ್ನು ಒಂದು ಧರ್ಮಕ್ಕೆ ಸೇರಿಸಿಕೊಳ್ಳಲಾಗುತ್ತದೆ. ಅದಕ್ಕೆ ಆ ಮಗುವಿನ ಸಹಮತಿಯನ್ನೂ ತೆಗೆದುಕೊಳ್ಳಲಾಗದು. ಇದು ಮನುಷ್ಯನ ಮೇಲೆ ವಿಧಿವತ್ತಾಗಿ ಆಗುವ ಮೊದಲ ಮಾನವ ಹಕ್ಕುಗಳ ಉಲ್ಲಂಘನೆ.

ಮನೆ, ಮೊಹಲ್ಲಾ, ಕೇರಿಯನ್ನು ಬಿಟ್ಟು ಮೊದಲ ಬಾರಿಗೆ ಶಾಲೆಗೆ ಬಂದಾಗಷ್ಟೇ ಅದಕ್ಕೆ ತಾನಿರುವ ಸಮಾಜದಲ್ಲಿ ಹಲವು ನಂಬಿಕೆ, ಆಚರಣೆಗಳುಳ್ಳ ಸಹಜೀವಿಗಳಿದ್ದಾರೆ ಎಂಬ ಅರಿವು ಮೂಡುತ್ತದೆ. ಮನೆಯಲ್ಲಿ ಬೆಳೆದ ಸಂಕುಚಿತ ಮನೋಭಾವದಿಂದ ಹೊರಬಂದು ಮತ್ತೊಮ್ಮೆ ಮಗು ಸಹಜವಾದ ಸೌಹಾರ್ದವನ್ನು ರೂಢಿಸಿಕೊಳ್ಳುತ್ತದೆ. ಇಂಥ ಮುಗ್ಧ ಮಕ್ಕಳಿಗೆ ಈಗ ಸರ್ಕಾರವು ಶಾಲೆಗಳಲ್ಲಿ 'ನೀತಿ'ಯನ್ನು ಕಲಿಸಲು ಹೊರಟಿದೆ. ಈ ಮಕ್ಕಳಿಗೆ ನೀತಿ ಕಲಿಸುವವರು ಯಾರು? ಸಮಾಜದ ಭ್ರಷ್ಟತೆ, ಕೋಮುವಾದ, ಲಾಭಕೋರತನದಲ್ಲಿ ಮುಳುಗಿ ಎದ್ದಿರುವ ವಿವಿಧ ಬಗೆಯ ಹಿರಿಯರು. ಮಕ್ಕಳು ಸಾಮಾನ್ಯವಾಗಿ ಏನನ್ನಾದರೂ ಕಲಿಯುವುದು ಮೊದಲು ಅನುಕರಣೆಯಿಂದ. ಈಗ ಸಮಾಜದಲ್ಲಿ ಅವರ ಸುತ್ತ ಇರುವ ಮಾದರಿಗಳನ್ನು ಗಮನಿಸಿದರೆ, ಭಾವಿ ನಾಗರಿಕರಾಗಿ ಅರಳಲಿರುವ ಮಕ್ಕಳನ್ನು ಈ ಮಾದರಿಗಳಿಂದ ದೂರ ಇಡುವುದು ಹೇಗೆ ಎಂದು ಜವಾಬ್ದಾರಿಯುತ ಸರ್ಕಾರ ಯೋಚಿಸಬೇಕಾಗಿತ್ತು.

ಈಗಾಗಲೇ ಶಾಲಾ ಪಠ್ಯದಲ್ಲಿ ಮೂರು ಭಾಷೆ, ನಾಲ್ಕು ವಿಷಯಗಳ ಹೊರೆ. ಆಟೋಟ, ಸಂಗೀತ, ನಾಟಕ, ಸಂವಹನದಂಥ ಕಲೆ ಕೌಶಲಗಳನ್ನು ಕಲಿಯಲು ಹೆಚ್ಚಿನ ಅವಕಾಶವಿಲ್ಲ. ಇರುವುದನ್ನೇ ಕಲಿಸಲು ಶಿಕ್ಷಕರ ಕೊರತೆ, ಗೌರವಯುತವಾಗಿ ಶೌಚಕ್ಕೂ ಹೋಗಲು ಸಾಧ್ಯವಾಗದಂಥ ಸ್ಥಿತಿ ಸಾವಿರಾರು ಶಾಲೆಗಳಲ್ಲಿ ಇದೆ. ಇದಕ್ಕೆ ಪರಿಹಾರ ಹುಡುಕುವುದಕ್ಕಿಂತ ನೀತಿಯನ್ನು ಕಲಿಸುವುದು ಸರ್ಕಾರದ ಆದ್ಯತೆಯಾದಂತೆ ತೋರುತ್ತದೆ.

ಅವಷ್ಟಕ್ಕೇ ಬಿಟ್ಟರೆ ಮಕ್ಕಳು ಮನುಷ್ಯಸಹಜವಾದ ನೀತಿಯಿಂದ ಸೌಹಾರ್ದ ಹೊಂದಿರುತ್ತವೆ. ಸರ್ಕಾರವು ಪಟ್ಟಿ ಮಾಡಲು ನೋಡುವ ಎಲ್ಲಾ ಗ್ರಂಥಗಳ ಸಾರವನ್ನು ಹಿಂಡಿ ಕಲಿಸಲು ಹೊರಟಿರುವ 'ನೀತಿ'ಗಳು ಯಾವುವು ಎಂದು ಶಿಕ್ಷಣ ಸಚಿವರು ಸ್ಪಷ್ಟಪಡಿಸಿಲ್ಲ. ಹೇಳಿದ್ದರೆ, ಅವು ಈಗ ಮಕ್ಕಳಲ್ಲಿ ಇಲ್ಲವೇ ಎಂಬ ವಿಮರ್ಶೆಯನ್ನು ಮಾಡಬಹುದಿತ್ತು. ಇದರ ಮೇಲೆ, ಶಾಲೆಗಳಲ್ಲಿ ಯಾವ ಧರ್ಮದ ಮಕ್ಕಳು ಶೇ 90ಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಾರೋ ಆ ಧರ್ಮದ ನೀತಿಗಳನ್ನು ಕಲಿಸಲಾಗುವುದು ಎಂದಿದ್ದಾರೆ. ಎಂದಾಗ ಇವರು ಏನನ್ನು ಕಲಿಸಲು ಹೊರಟಿದ್ದಾರೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಆಳವಾದ ಸಂಶೋಧನೆಯೇನೂ ಬೇಕಾಗಿಲ್ಲ.

ನಮ್ಮ ಧರ್ಮಗ್ರಂಥಗಳು ಆಯಾ ಕಾಲ, ದೇಶ, ಸಾಮಾಜಿಕ, ರಾಜಕೀಯ ಪರಿಸ್ಥಿತಿಗೆ ಅನುಗುಣವಾಗಿ ಮೌಲ್ಯಗಳನ್ನು ಪ್ರತಿಪಾದಿಸುತ್ತವೆ. ತಮ್ಮ ಧರ್ಮವೇ ಶ್ರೇಷ್ಠ, ಅದನ್ನು ಅನುಸರಿಸುವುದೇ ಪರಮಕರ್ತವ್ಯವೆಂದು ಬೋಧಿಸುತ್ತವೆ. ಕೆಲವು ತಿಂಗಳಿಂದ ಶಿಕ್ಷಣ ಸಂಸ್ಥೆಯಿಂದಲೇ ಶುರುವಾದ ಧಾರ್ಮಿಕ ಅಸಹಿಷ್ಣುತೆಯ ಕಿಡಿ ಇಡೀ ರಾಜ್ಯವನ್ನು ಹೇಗೆ ಕಾಳ್ಗಿಚ್ಚಿನಂತೆ ಸುಡುತ್ತಿದೆ ಎಂಬುದು ನಮಗೆ ತಿಳಿದಿಲ್ಲವೇ?

ಇದ್ದವರನ್ನು ನೋಡಿ ಇಲ್ಲದವರು ಕಲಿಯಬೇಕು. ಎಲ್ಲರೊಂದಿಗೆ ಒಡನಾಡಿ ಸಂತೋಷವಾಗಿ ಆಡುವ, ನಲಿಯುವ, ಓದುವ ಮಕ್ಕಳನ್ನು ನೋಡಿ ಶಿಕ್ಷಕರು, ಶಿಕ್ಷಣ ಇಲಾಖೆಯ ಅಧಿಕಾರಿಗಳು, ಸರ್ಕಾರ ನೀತಿಯನ್ನು ಕಲಿಯುವುದು ಒಳ್ಳೆಯದು.

ನಮ್ಮದು ಮತಧರ್ಮ ನಿರಪೇಕ್ಷ ದೇಶ. ಸರ್ಕಾರ ಧಾರ್ಮಿಕ ನೀತಿಗಳ ಉಸಾಬರಿಗೆ ಹೋಗಬಾರದು. ಅದೇನಿದ್ದರೂ ಆಯಾ ಧರ್ಮದ ಸಮುದಾಯಗಳಿಗೆ ಬಿಟ್ಟದ್ದು, ಅವರು ಬೇಕಾದರೆ ಮಾಡಿಕೊಳ್ಳಲಿ. ಶಾಲೆಗಳನ್ನಾದರೂ ಇವೆಲ್ಲ ವಿಕೃತಿಗಳಿಂದ, ವಿಸ್ಮೃತಿಗಳಿಂದ ದೂರವಿರಿಸಬೇಕಿದೆ.



ಒಮ್ಮೆ ಭಾರತ ಸಂವಿಧಾನದ ಪ್ರಸ್ತಾವನೆಯನ್ನು ಓದಿ ನೋಡಿ. ನಾವು ಹೇಗೆ ಬದುಕಬೇಕು ಎಂಬುದಕ್ಕೆ ಅದು ದಾರಿದೀಪವಾಗಿದೆ. ಈ ಉತ್ಕೃಷ್ಟ ಪ್ರಸ್ತಾವನೆಯ ಭಿತ್ತಿಚಿತ್ರವನ್ನು ಎಲ್ಲಾ ಶಾಲೆಗಳಲ್ಲಿ ಪ್ರದರ್ಶಿಸಬೇಕು; ಪ್ರಸ್ತಾವನೆಯನ್ನು ಬೆಳಗಿನ ಸಮಾವೇಶದಲ್ಲಿ ಮಕ್ಕಳ ಕೈಲಿ ಹೇಳಿಸಬೇಕು ಎಂಬ ಪ್ರಗತಿಪರ ಹೆಜ್ಜೆಯನ್ನಿಟ್ಟ ಬಿಜೆಪಿ ನೇತೃತ್ವದ ಸರ್ಕಾರವೇ ತನ್ನದೇ ನೀತಿಯನ್ನು ಅವಹೇಳನ ಮಾಡುವುದು ಬೇಡ. ಮಕ್ಕಳು ಇದನ್ನು ಸಂಸ್ಕೃತ ಶ್ಲೋಕದಂತೆಯೋ ಅರಬ್ಬಿಯ ಆಯಾದಂತೆಯೋ ಅರ್ಥವಾಗದೆ ಯಾಂತ್ರಿಕ ಮಂತ್ರದಂತೆ ಹೇಳುವುದರ ಬದಲಿಗೆ ಅದರ ಅರಿವನ್ನು ಮೂಡಿಸಿಕೊಳ್ಳುವ ಪ್ರಯತ್ನವಾಗಬೇಕು. ಅದಕ್ಕೆ ಪೂರಕವಾಗಿ ಶಾಲೆಗಳಲ್ಲಿ ಸಾಂವಿಧಾನಿಕ ಮೌಲ್ಯಗಳು ಜೀವಂತವಾಗಿರಬೇಕು. ಸಂವಿಧಾನದ ಮೌಲ್ಯಗಳನ್ನು ಅರ್ಥ ಮಾಡಿಸುವ ಹಲವಾರು ಬಗೆಯ ಯೋಜನೆಗಳನ್ನು ಜನಸಂಘಟನೆಗಳ ಸಹಯೋಗದೊಂದಿಗೆ ಮಾಡಬಹುದು.

ಈಗ ಸಮಾಜದಲ್ಲಿ ಹಬ್ಬಿರುವ ಕೋಮುದ್ವೇಷ, ಅಸಹಿಷ್ಣುತೆಯನ್ನು ನೋಡುವಾಗ, ಸಂವಿಧಾನ ಸಾಕ್ಷರತೆಯ ಆಂದೋಲನದಲ್ಲಿ ತೊಡಗಿರುವ ನಮ್ಮಂಥವರಿಗೆ 'ಮಕ್ಕಳಿಗೆ, ಅವರ ಪೋಷಕರಿಗೆ, ಯುವಜನರಿಗೆ ಸಂವಿಧಾನದ ಮೂಲಭೂತ ಮೌಲ್ಯಗಳನ್ನು ಹೇಳಿಕೊಡುವುದರಲ್ಲಿ ತುಂಬ ತಡ ಮಾಡಿಬಿಟ್ಟೆವೇನೋ' ಎಂಬ ಪಶ್ಚಾತ್ತಾಪವಾಗುತ್ತದೆ. ಇದೇ ಪ್ರಾಮಾಣಿಕ ಪಶ್ಚಾತ್ತಾಪ ಶಿಕ್ಷಣ ಇಲಾಖೆಗೆ ಆಗಿದ್ದರೆ ಎಷ್ಟು ಚೆನ್ನಾಗಿತ್ತು?!

ವಾಚಕರ ವಾಣಿ

ವಾಹನ ವಿಮೆ: ಸೂಕ್ತ ಅರಿವಿರಲಿ

ಸ್ವಂತ ವಾಹನ ಹೊಂದಿರುವವರಲ್ಲಿ ಹಲವರು ಅದಕ್ಕೆ ಮಾಡಿಸುವ ವಿಮೆಯನ್ನು ಆರ್‌ಟಿಒ ಕೆಲಸಗಳಿಗೆ, ಪೊಲೀಸರಿಗೆ ತೋರಿಸುವುದಕ್ಕೆ ಮಾತ್ರ ಅಂದುಕೊಂಡಿದ್ದಾರೆ. ಇದೊಂದು ತಪ್ಪುಕಲ್ಪನೆಯಾಗಿದೆ. ಎರಡು ರೀತಿಯ ವಾಹನ ವಿಮೆಗಳು ಇರುತ್ತವೆ. ಪ್ಯಾಕೇಜ್ ಪಾಲಿಸಿಯಲ್ಲಿ ವಾಹನ ಮತ್ತು ಚಾಲಕ ಇಬ್ಬರಿಗೂ ವಿಮೆ ಇರುತ್ತದೆ. ವ್ಯಕ್ತಿಗೆ ಮಾತ್ರ ಅನ್ವಯವಾಗುವ ಮತ್ತೊಂದು ವಿಮೆ ಇರುತ್ತದೆ. ಈ ಎರಡೂ ಬಗೆಯ ವಿಮೆಗಳಲ್ಲಿ, ಒಂದುವೇಳೆ ಆ ವ್ಯಕ್ತಿಯು ಅಪಘಾತದಲ್ಲಿ ಮೃತಪಟ್ಟರೆ ಆತನ ಕುಟುಂಬಕ್ಕೆ ಆರ್ಥಿಕ ಭದ್ರತೆ ಒದಗಿಸುವ ಸೌಲಭ್ಯವೂ ಇದೆಯೇ ಎಂಬುದು ಮುಖ್ಯ. ಕೆಲವು ಆನ್‌ಲೈನ್ ಪಾಲಿಸಿಗಳು ಈ ಸೌಲಭ್ಯ ಹೊಂದಿರುವುದಿಲ್ಲ. ಹೀಗಾಗಿ ಎಚ್ಚರಿಕೆಯಿಂದ ವಿಮೆ ಮಾಡಿಸುವುದು ಒಳ್ಳೆಯದು.

ಬಸವರಾಜಪ್ಪ ಎಚ್., ಹಾದ್ಯ, ಕೆ.ಆರ್‌.ನಗರ

ವಿಮಾನ ನಿಲ್ದಾಣ ನಾಮಕರಣ: ನಿಯಮವೇಕಿಲ್ಲ?

ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಬಿಜೆಪಿ ಮುಖಂಡ ಬಿ.ಎಸ್.ಯಡಿಯೂರಪ್ಪ ಅವರ ಹೆಸರನ್ನು ಅಂತಿಮಗೊಳಿಸಿರುವ ರಾಜ್ಯ ಸರ್ಕಾರವು ಜನಾಭಿಪ್ರಾಯಕ್ಕೂ ಅವಕಾಶ ಕೊಡಬೇಕಿತ್ತಲ್ಲವೇ? ಸಾರ್ವಜನಿಕ ಯೋಜನೆಗಳಿಗೆ ರಾಜಕೀಯ ವ್ಯಕ್ತಿಗಳ ಹೆಸರು ಇಡುವುದಕ್ಕೆ ವಿರೋಧ ವ್ಯಕ್ತಪಡಿಸುತ್ತಾ ಬಂದಿರುವ ಬಿಜೆಪಿಯು ಇಂಥ ನಾಮಕರಣಕ್ಕೆ ಸೂಕ್ತವಾದ ನಿಯಮ ರೂಪಿಸುವ ಬಗ್ಗೆ ಚಿಂತನೆ ಮಾಡಿದ್ದರೆ ಅದು ಬದಲಾವಣೆಗೆ ನಾಂದಿಯಾಗುತ್ತಿತ್ತು. ಆದರೆ, ಯಡಿಯೂರಪ್ಪ ಅವರು ಶಿವಮೊಗ್ಗ ವಿಮಾನ ನಿಲ್ದಾಣ ಯೋಜನೆಗೆ ಶ್ರಮವಹಿಸಿದ್ದಾರೆ, ಆ ಕಾರಣಕ್ಕೆ ಅವರ ಹೆಸರನ್ನು ನಾಮಕರಣ ಮಾಡುತ್ತೇವೆ ಎನ್ನುವುದು ಸಕಾರಣವಲ್ಲ.

ಸರ್ಕಾರದ ಯೋಜನೆಗಳು ಜನರ ತೆರಿಗೆ ಹಣದಿಂದ ನಡೆಯುತ್ತವೆಯೇ ವಿನಾ ರಾಜಕೀಯ ನಾಯಕರ ಸ್ವಂತ ಖರ್ಚಿನಲ್ಲಿ ಅಲ್ಲ. ಬದಲಾಗಿ, ಸ್ವಂತ ಖರ್ಚಿನಲ್ಲಿ ಸಾರ್ವಜನಿಕ ಕೆಲಸ ಮಾಡುತ್ತಿರುವ ಅನೇಕ ಸಹೃದಯಿಗಳು ನಮ್ಮೊಡನೆ ಇದ್ದಾರೆ. ಅಂಥವರನ್ನು ಗುರುತಿಸಿ ಅವರ ಹೆಸರನ್ನು ಇಡುವುದಾದರೆ ಅದು ಆದರ್ಶ ನಡೆಯಾಗುತ್ತದೆ.

ಡಾ. ಜಿ.ಬೈರೇಗೌಡ, ಬೆಂಗಳೂರು

ಶಾಲಾ ಶುಲ್ಕ: ಒತ್ತಡ ಬೇಡ

ಶೈಕ್ಷಣಿಕ ಚಟುವಟಿಕೆಗಳು ಮತ್ತೆ ಗರಿಗೆದರುತ್ತಿವೆ. ಇದೇವೇಳೆ ಪೋಷಕರಿಗೆ ಖಾಸಗಿ ಶಾಲೆಗಳ ಶುಲ್ಕದ ಬಿಸಿಯೂ ತಟ್ಟಿ, ಅವರ ಹುರುಪು, ಉತ್ಸಾಹ ಸಣ್ಣಗೆ ಕರಗಲೂಬಹುದು. ಎರಡು ವರ್ಷಗಳ ಕೊರೊನಾ ಸಂಕಷ್ಟವನ್ನು ಮೆಟ್ಟಿ ನಿಲ್ಲಲು ಪ್ರಯತ್ನಿಸುತ್ತಿರುವಾಗಲೇ ದೈನಂದಿನ ಜೀವನದ ಅಗತ್ಯ ವಸ್ತುಗಳ ಬೆಲೆ ಹೆಚ್ಚಾಗಿದೆ. ಇಂಥ ಹೊತ್ತಲ್ಲಿ ಶಾಲೆಗಳು ಶುಲ್ಕಕ್ಕೆ ಸಂಬಂಧಿಸಿದಂತೆ ಪೋಷಕರ ಮೇಲೆ ಹೆಚ್ಚು ಒತ್ತಡ ಹಾಕದೇ ಸರಾಗ ಜೀವನಕ್ಕೆ ಅನುಕೂಲ ಮಾಡಿಕೊಟ್ಟರೆ ಈ ಬಾರಿಯ 'ಕಲಿಕಾ ಚೇತರಿಕಾ ವರ್ಷ'ಕ್ಕೆ ಅರ್ಥ ಬಂದೀತು.

ಅಶ್ವತ್ಥ ಕಲ್ಲೇದೇವರಹಳ್ಳಿ, ಕುಂಕಾನಾಡು, ಕಡೂರು

ಆಳುತ್ತಿರುವುದು ಸರ್ಕಾರಗಳೋ? ಸಂಘಟನೆಗಳೋ?

ದೆಹಲಿಯ ಜಹಾಂಗೀರ್‌ಪುರಿ ಮಸೀದಿಯ ಆವರಣ ಗೋಡೆ ಮತ್ತು ಸುತ್ತಲಿನ ಕಟ್ಟಡಗಳನ್ನು ಉತ್ತರ ದೆಹಲಿ ಮಹಾನಗರ ಪಾಲಿಕೆಯು ನೆಲಸಮ ಮಾಡಿದ ಪ್ರಕರಣ ಹಲವಾರು ಅನುಮಾನಗಳಿಗೆ ಎಡೆಮಾಡಿಕೊಡುತ್ತದೆ. ಈ ಕಟ್ಟಡಗಳು ಅಕ್ರಮವಾಗಿದ್ದರೆ ಹಿಂದೆಯೇ ಅವನ್ನು ತೆರವುಗೊಳಿಸಬಹುದಿತ್ತು. ಹನುಮ ಜಯಂತಿ ಸಮಯದಲ್ಲಿ ಹಿಂಸಾಚಾರ ನಡೆದಿದ್ದ ಸಂದರ್ಭದಲ್ಲೇ ಇದಕ್ಕೆ ಮುಹೂರ್ತ ನಿಗದಿಯಾಗಿದ್ದೇಕೆ? ಒತ್ತುವರಿ ತೆರವು ಕಾರ್ಯಾಚರಣೆಗೆ ಮೊದಲು ನೋಟಿಸ್ ನೀಡಬೇಕೆಂಬ ನಿಯಮವನ್ನು ಗಾಳಿಗೆ ತೂರಿದ್ದೇಕೆ? ಆ ಪ್ರದೇಶದಲ್ಲಿ ಯಥಾಸ್ಥಿತಿ ಕಾಪಾಡುವಂತೆ ಸುಪ್ರೀಂ ಕೋರ್ಟ್ ಆದೇಶ ನೀಡಿದ ನಂತರವೂ 90 ನಿಮಿಷಗಳ ಕಾಲ ಕಾರ್ಯಾಚರಣೆ ನಡೆಸಿದ್ದರ ಔಚಿತ್ಯವೇನು? ಇದನ್ನೆಲ್ಲಾ ನೋಡಿದಾಗ, ಇಂದು ನಮ್ಮನ್ನು ಆಳುತ್ತಿರುವುದು ಸಂವಿಧಾನದತ್ತವಾಗಿ ರಚನೆಯಾಗಿರುವ ಸರ್ಕಾರಗಳೋ ಅಥವಾ ಕೆಲವು ಮತೀಯ ಸಂಘಟನೆಗಳೋ ಎಂಬ ಅನುಮಾನ ದಟ್ಟವಾಗುತ್ತದೆ!

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ವಿದ್ಯಾರ್ಥಿಗಳು ಸ್ವಾಭಿಮಾನಿಗಳಾಗಲಿ

ದ್ವಿತೀಯ ಪಿ.ಯು. ಪರೀಕ್ಷೆಯಲ್ಲಿ ಕೆಲವು ವಿದ್ಯಾರ್ಥಿಗಳು ಸಾಮೂಹಿಕ ತೇರ್ಗಡೆಗಾಗಿ ಮನವಿ ಮಾಡಿರುವ ಬಗ್ಗೆ ಯೋಗಾನಂದ ಅವರು ತಮ್ಮ ಲೇಖನದಲ್ಲಿ (ಸಂಗತ, ಏ. 22) ಬೇಸರ ವ್ಯಕ್ತಪಡಿಸಿರುವುದು ಸಹಜವೇ ಆಗಿದೆ. ಒಂದನೇ ತರಗತಿಯಿಂದಲೂ ವಿದ್ಯಾರ್ಥಿಗಳನ್ನು ಅನುತ್ತೀರ್ಣಗೊಳಿಸದೆ ಮುಂದಕ್ಕೆ ತಳ್ಳುವ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ದ್ವಿತೀಯ ಪಿ.ಯು. ವಿದ್ಯಾರ್ಥಿಗಳು ಅದನ್ನೇ ಬಯಸುವುದು ಸಹಜವೇ ಆಗಿದೆ. ಪ್ರೌಢಶಾಲಾ ಶಿಕ್ಷಣದ ಕೊನೆಯ ವರ್ಷದಲ್ಲಿ ನಡೆಯುವ ಪರೀಕ್ಷೆ ಒಟ್ಟಾರೆ ಪಾರದರ್ಶಕವಾಗಿ ನಡೆಯದಿರುವುದು ಪಿ.ಯು. ವಿದ್ಯಾರ್ಥಿಗಳ ಬೇಡಿಕೆಗೆ ಪೂರಕವಾಗಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಅವಾಂತರಗಳು ಅಗಣಿತ. ಶಿಕ್ಷಣ ಸಚಿವರಿಂದ ಹಿಡಿದು ಪ್ರೌಢಶಾಲಾ ಮುಖ್ಯ ಶಿಕ್ಷಕರವರೆಗೂ 'ಹೇಗಾದರೂ ಮಾಡಿ ಈ ವರ್ಷದ ಫಲಿತಾಂಶ ಹಿಂದಿನ ವರ್ಷಕ್ಕಿಂತ ಉತ್ತಮವಾಗಿರಬೇಕು' ಎಂಬ ಅಲಿಖಿತ ಆದೇಶಗಳಿರುವುದು ನಿಜವಾದ ಸಂಗತಿ. ರಾಜ್ಯದ ಕೆಲವು ಪರೀಕ್ಷಾ ಕೇಂದ್ರಗಳಲ್ಲಿ ಸುಮಾರು ಶೇ 40ರಷ್ಟು ಪ್ರಶ್ನೆಗಳಿಗೆ ಪರೀಕ್ಷಾ ಕೊಠಡಿಯಲ್ಲಿಯೇ ಉತ್ತರ ಹೇಳಿಕೊಡುವ ವ್ಯವಸ್ಥೆ ಇರುತ್ತದೆ. ಇಷ್ಟಾದರೂ ತೃಪ್ತಿ ಇಲ್ಲದ ಕೆಲ ಪೋಷಕರು ಪರೀಕ್ಷಾ ಕೇಂದ್ರದ ಸುತ್ತ ಅತೃಪ್ತ ಪ್ರೇತಾತ್ಮಗಳಂತೆ ಸುತ್ತುತ್ತಾ ತಮ್ಮ ಮಕ್ಕಳಿಗೆ ಚೀಟಿ ತಲುಪಿಸುವ ಹೀನ ಕೆಲಸವನ್ನು ಯಾವ ಮುಜುಗರವೂ ಇಲ್ಲದೆ ಮಾಡುತ್ತಾರೆ. ಇಂತಹ ಹೀನರಲ್ಲಿ ಕೆಲವು ಶಿಕ್ಷಕರೂ ಇರುವುದಂತೂ ನಾಚಿಕೆಗೇಡಿನ ಸಂಗತಿಯಾಗಿದೆ. ಉತ್ತಮ ಫಲಿತಾಂಶ ಬಾರದಿದ್ದಾಗ ಆ ಶಾಲೆಯ ಮುಖ್ಯ ಶಿಕ್ಷಕರು ಮತ್ತು ಇತರ ಶಿಕ್ಷಕರು ಅನುಭವಿಸುವ ಇಲಾಖಾ ಕಿರುಕುಳಗಳನ್ನು ನೆನೆದು ಕೆಲವು ಶಿಕ್ಷಕರು ನಕಲಿಗೆ ನೆರವು ನೀಡಿ ಧನ್ಯರಾಗುತ್ತಾರೆ. ಇದರಿಂದ ಪ್ರೇರಿತರಾಗಿ ತೇರ್ಗಡೆಯಾದ ವಿದ್ಯಾರ್ಥಿಗಳು ಮುಂದಿನ ಪರೀಕ್ಷೆಗಳಲ್ಲೂ ಇದನ್ನೇ ಬಯಸುತ್ತಾರೆ. ಕೇವಲ ಪಹರೆಯೊಂದೇ ಪರೀಕ್ಷೆಯ ಪಾವಿತ್ರ್ಯವನ್ನು ಹೆಚ್ಚಿಸಲಾರದು. ವಿದ್ಯಾರ್ಥಿಗಳನ್ನು ಸ್ವಾಭಿಮಾನಿಗಳನ್ನಾಗಿ ರೂಪಿಸುವ ಹೊಣೆ ಇಲಾಖೆ, ಗುರುವೃಂದ ಮತ್ತು ಪೋಷಕರದ್ದಾಗಿರುತ್ತದೆ.

ಮೋದೂರು ಮಹೇಶಾರಾಧ್ಯ, ಹುಣಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಏಕಕಾಲದಲ್ಲಿ ಎರಡು ಪದವಿ ಓದುವ ಅವಕಾಶ ವಿದ್ಯಾರ್ಥಿಗಳಿಗೆ ಉಪಯುಕ್ತವೇ?

ಸ್ವಾವಲಂಬನೆಗೆ ಬಹುಶಿಸ್ತೀಯ ಶಿಕ್ಷಣ ಅಗತ್ಯ

• ಎಂ.ಕೆ.ಶ್ರೀಧರ್

ಒಬ್ಬ ವಿದ್ಯಾರ್ಥಿ ಯಾವುದೋ ಒಂದು ವಿಷಯದಲ್ಲಿ ಮಾತ್ರ ಕೌಶಲವನ್ನು ಪಡೆದುಕೊಂಡಿದ್ದರೆ ಸಾಕಾಗುವುದಿಲ್ಲ. ಈಗಿನ ಪರಿಸ್ಥಿತಿ ಹೇಗಿದೆಯೆಂದರೆ, ಎಲ್ಲಾ ರೀತಿಯ ವಿಷಯಗಳ ದೃಷ್ಟಿಕೋನ ವಿದ್ಯಾರ್ಥಿಗಳಿಗೆ ಬೇಕಾಗಿದೆ. ವಿಶಾಲವಾದ ದೃಷ್ಟಿಕೋನ ಮತ್ತು ಹೆಚ್ಚಿನ ಕೌಶಲಗಳು ಇಲ್ಲದೇ ಹೋದರೆ ಒಬ್ಬ ವಿದ್ಯಾರ್ಥಿ ಇವತ್ತಿನ ಸನ್ನಿವೇಶದಲ್ಲಿ ತನ್ನ ಜೀವನವನ್ನು ಮುಂದುವರಿಸಲಿಕ್ಕೆ ಕಷ್ಟ

ದೇಶದ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಈವರೆಗೂ, ಒಂದು ಸರ್ಟಿಫಿಕೇಟ್ ಡಿಪ್ಲೊಮಾ ಅಥವಾ ಪದವಿಯನ್ನು ಅಧ್ಯಯನ ಮಾಡುತ್ತಿದ್ದವರು ಇನ್ನೊಂದು ಸರ್ಟಿಫಿಕೇಟ್ ಡಿಪ್ಲೊಮಾ ಅಥವಾ ಪದವಿ ಮಾಡುವ ಅವಕಾಶ ಇರಲಿಲ್ಲ. ಉನ್ನತ ಶಿಕ್ಷಣ ಮತ್ತು ವಿದ್ಯಾರ್ಥಿಗಳ ಅಗತ್ಯಗಳು ಬದಲಾಗುತ್ತಿರುವ ಈ ಕಾಲದಲ್ಲಿ, ಸುಮಾರು 2012ರಿಂದ ವಿಶ್ವವಿದ್ಯಾಲಯ ಅನುದಾನ ಆಯೋಗದಲ್ಲಿ ಒಂದು ಚರ್ಚೆ ನಡೆಯುತ್ತಿತ್ತು. ಒಬ್ಬ ವಿದ್ಯಾರ್ಥಿ ಏಕಕಾಲದಲ್ಲಿ ಎರಡು ಪದವಿಗಳನ್ನು ಮಾಡಬಹುದೇ ಎಂಬುದೇ ಈ ಚರ್ಚೆ. ಇದಕ್ಕಾಗಿ ಬೇರೆ ಬೇರೆ ಸಮಿತಿಗಳು ರಚನೆಯಾಗಿ, ಮಾನವ ಸಂಪನ್ಮೂಲ ಸಚಿವಾಲಯ ಸೇರಿ ಹಲವು ಹಂತಗಳಲ್ಲಿ ಚರ್ಚೆಯಾಗುತ್ತಾ ಹತ್ತು ವರ್ಷಗಳಲ್ಲಿ ಇದು ನನೆಗುದಿಗೆ ಬಿದ್ದಿತ್ತು.

ಆದರೆ, ಈಗ ಯುಜಿಸಿ ಈ ಬಗ್ಗೆ ಒಂದು ದೃಢವಾದ ನಿರ್ಧಾರವನ್ನು ತೆಗೆದುಕೊಂಡಿದೆ. ಉನ್ನತ ಶಿಕ್ಷಣದಲ್ಲಿ ಸರ್ಟಿಫಿಕೇಟ್ ಡಿಪ್ಲೊಮಾ ಅಥವಾ ಪದವಿ ಕೋರ್ಸ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಯು, ಆ ಶೈಕ್ಷಣಿಕ ಕಾರ್ಯಕ್ರಮದ ಜತೆಯಲ್ಲಿಯೇ ಏಕಕಾಲದಲ್ಲಿ ಮತ್ತೊಂದು ಶೈಕ್ಷಣಿಕ ಕಾರ್ಯಕ್ರಮ ಮಾಡುವ ಬಾಗಿಲನ್ನು ಯುಜಿಸಿ ತರೆದಿಟ್ಟಿದೆ. ಇದು ಹಲವು ರೀತಿಯಲ್ಲಿ ಸಾಧ್ಯವಾಗುತ್ತದೆ. ಉದಾಹರಣೆಗೆ, ಒಂದು ಶೈಕ್ಷಣಿಕ ಕಾರ್ಯಕ್ರಮ ಭೌತಿಕವಾಗಿದ್ದರೆ ಮತ್ತೊಂದು ಆನ್‌ಲೈನ್ ಕಾರ್ಯಕ್ರಮವಾಗಿರಬಹುದು. ಅಥವಾ ಎರಡೂ ಶೈಕ್ಷಣಿಕ ಕಾರ್ಯಕ್ರಮಗಳು ಆನ್‌ಲೈನ್‌ನಲ್ಲಿ ಇರಬಹುದು. ಅಥವಾ ಎರಡೂ ಶೈಕ್ಷಣಿಕ ಕಾರ್ಯಕ್ರಮಗಳು ಭೌತಿಕವಾಗಿಯೇ ನಡೆಯಬಹುದು. ಇದು ಹೇಗೆ ಸಾಧ್ಯ? ಉದಾಹರಣೆಗೆ ಪೂರ್ಣಾವಧಿಯಲ್ಲಿ ಬೆಳಿಗ್ಗೆ ಒಂದು ಪದವಿ ಕಾರ್ಯಕ್ರಮ, ಸಂಜೆ ಒಂದು ಪದವಿ ಕಾರ್ಯಕ್ರಮ... ಈ ರೀತಿ ಕೂಡ ಮಾಡಲು ಅವಕಾಶವಿದೆ.

ಇದರಿಂದಾಗುವ ಉಪಯೋಗಗಳೇನು ಎಂಬ ಪ್ರಶ್ನೆ ಇದೆ. ಒಬ್ಬ ವಿದ್ಯಾರ್ಥಿಯು ಒಂದು ಪದವಿ ಕೋರ್ಸ್ ಅನ್ನು ಅಧ್ಯಯನ ಮಾಡುತ್ತಿರುತ್ತಾನೆ. ಆತ ಇನ್ನೊಂದು ಕ್ಷೇತ್ರದಲ್ಲಿ ಅಥವಾ ಇನ್ನೊಂದು ವಿಷಯದಲ್ಲಿ ಅಧ್ಯಯನವನ್ನು ಮಾಡಬೇಕು ಅಂದರೆ, ಈಗ ಮಾಡುತ್ತಿರುವ ಪದವಿ ಕೋರ್ಸ್ ಮುಗಿಸಿದ ಮೇಲೆ ಬೇರೆ ಕೋರ್ಸ್‌ಗೆ ಸೇರಬೇಕಿತ್ತು.

ಆತನ ಅಗತ್ಯಗಳು ಬದಲಾಗಬಹುದು, ಆತನ ಆಸಕ್ತಿ ಬದಲಾಗಬಹುದು. ಅಷ್ಟೇ ಅಲ್ಲ, ಬೇರೊಂದರಲ್ಲೂ ಆತನಿಗೆ ಪ್ರಾವೀಣ್ಯತೆ ಬೇಕು ಅಂತ ಆದರೆ, ಅದನ್ನು ಗಳಿಸಿಕೊಳ್ಳಲು ಅವಕಾಶವಿರಲಿಲ್ಲ. ಈ ನಿರ್ಧಾರದಿಂದ ಅದು ಸಾಧ್ಯವಾಗುತ್ತದೆ.

ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಬಹುಶಿಸ್ತೀಯ ಅಧ್ಯಯನಗಳ ಮೂಲಕ ನೀಡಬೇಕು ಎಂದು ರಾಷ್ಟ್ರೀಯ ಶಿಕ್ಷಣ ನೀತಿಯು ಒಂದು ಶಿಫಾರಸನ್ನು ಮಾಡಿದೆ. ಒಬ್ಬ ವಿದ್ಯಾರ್ಥಿ ಬಿಎಸ್‌.ಸಿ ಪದವಿ ಮಾಡುತ್ತಿದ್ದಾನೆ ಎಂದಿಟ್ಟುಕೊಳ್ಳಿ. ಆತನಿಗೆ ಸಂಗೀತದಲ್ಲಿ ಆಸಕ್ತಿ ಇದೆ. ಈ ಮೊದಲು ಬಿಎಸ್‌.ಸಿ ಕೋರ್ಸ್ ಮುಗಿದ ನಂತರ ಸಂಗೀತದ ಕೋರ್ಸ್ ಮಾಡಬೇಕಿತ್ತು. ಈಗ, ಎರಡನ್ನೂ ಏಕಕಾಲದಲ್ಲಿ ಮಾಡಬಹುದು. ಈ ರೀತಿ ಮಾಡುವುದರಿಂದ ಆತನಿಗೆ ಅವಕಾಶಗಳು ಹೆಚ್ಚಾಗುತ್ತವೆ. ಆತ ಈ ಎರಡರಲ್ಲಿ ಯಾವ ಕ್ಷೇತ್ರದಲ್ಲಾದರೂ ಮುಂದುವರಿಯಬಹುದು. ಯಾವುದರಲ್ಲಿ ಹೆಚ್ಚು ಅವಕಾಶಗಳು ಇರುತ್ತವೆಯೋ, ಯಾವುದರಲ್ಲಿ ಅಭಿರುಚಿ ಇರುತ್ತದೆಯೋ, ಯಾವುದರಲ್ಲಿ ಆತನಿಗೆ ಸಾಮರ್ಥ್ಯ ಮತ್ತು ಕೌಶಲ ಇರುತ್ತದೆಯೋ ಅದರಲ್ಲಿ ಆತ ಮುಂದುವರಿಯುತ್ತಾನೆ. ಇದು ಈ ನಿರ್ಧಾರದಿಂದಾಗುವ ಮಹತ್ವದ ಉಪಯೋಗ.

ಇದರಿಂದಾಗುವ ಮತ್ತೊಂದು ಉಪಯೋಗವೂ ಇದೆ. ಏಕಕಾಲದಲ್ಲಿ ಎರಡು ಶೈಕ್ಷಣಿಕ ಕಾರ್ಯಕ್ರಮಗಳನ್ನು ಮಾಡುವ ಅವಕಾಶ ಕೊಡುವುದರಿಂದ ವಿದ್ಯಾರ್ಥಿಗಳು ತಮ್ಮ ಅಗತ್ಯಗಳ ಬಗ್ಗೆ ಹೆಚ್ಚು ಯೋಚನೆ ಮಾಡಲು ಸಾಧ್ಯವಾಗುತ್ತದೆ. ಶಿಕ್ಷಣ ಮತ್ತು ಕಲಿಕೆಯ ಬಗ್ಗೆ ಅಭಿರುಚಿ ಹಾಗೂ ಆಸಕ್ತಿ ಹೆಚ್ಚಾಗುತ್ತದೆ.

ಈ ನೀತಿಯಿಂದ, ಎಲ್ಲರಿಗೆ ಲಭ್ಯವಿರುವ ಶೈಕ್ಷಣಿಕ ಅವಕಾಶಗಳು ಕಡಿಮೆಯಾಗುತ್ತವೆಯೇ ಎಂಬ ಶಂಕೆ ವ್ಯಕ್ತವಾಗಿದೆ. ಆದರೆ, ಆ ರೀತಿಯ ಸಾಧ್ಯತೆ ಇಲ್ಲ. ಅಲ್ಲದೆ, ಈ ರೀತಿ ಆಗದಂತೆ ಮಾಡುವುದು ಹೇಗೆ ಎಂಬುದನ್ನು ಮುಂದಿನ ದಿನಗಳಲ್ಲಿ ಪರಿಹಾರ ಮಾಡಿಕೊಳ್ಳಬೇಕು. ಈ ನೀತಿಯಿಂದ ಗುಣಮಟ್ಟ ಕಡಿಮೆಯಾಗುತ್ತದೆಯೇ ಎಂಬ ಶಂಕೆಯೂ ಇದೆ. ಗುಣಮಟ್ಟ ಕಡಿಮೆಯಾಗುವ ಸಾಧ್ಯತೆ ಇಲ್ಲ. ಏಕೆಂದರೆ ಒಂದು ಪದವಿಯನ್ನು ಮಾಡೋದಕ್ಕೆ ಏನೇನು ಅರ್ಹತೆಗಳು ಇರಬೇಕು ಅಥವಾ ಎಷ್ಟು ಗಂಟೆಗಳ ಕಾಲ ಓದಬೇಕು ಅಥವಾ ಎಷ್ಟು ಕ್ರೆಡಿಟ್ ಬೇಕಾಗಿದೆ ಎಂಬುದರಲ್ಲಿ ಯಾವುದೇ ವ್ಯತ್ಯಾಸ ಆಗುವುದಿಲ್ಲ. ಹೀಗಾಗಿ ಗುಣಮಟ್ಟದಲ್ಲಿ ವ್ಯತ್ಯಾಸವಾಗುವುದಿಲ್ಲ. ಬದಲಿಗೆ ಆಯ್ಕೆ ಹೆಚ್ಚಾಗುತ್ತದೆ. ಕೌಶಲ, ಬಹುಶಿಸ್ತೀಯ ಶಿಕ್ಷಣವನ್ನು ಮುಂದುವರಿಸಲಿಕ್ಕೆ ಅವಕಾಶ ಇದೆ. ಹೀಗಾಗಿ ಈ ಒಂದು ಅವಕಾಶವನ್ನು ಉನ್ನತ ಶಿಕ್ಷಣದ ಸುಧಾರಣೆಗೆ ಹಾಕುವಂತಹ ಒಂದು ಒಳ್ಳೆಯ ದಾಪುಗಾಲು ಎಂದು ನಾನು ಹೇಳುತ್ತೇನೆ.

ಪ್ರಜಾವಾಣಿ ಚರ್ಚೆ

ಈ ರೀತಿಯ ಬದಲಾವಣೆ ಏಕೆ ಬೇಕು ಎಂಬ ಪ್ರಶ್ನೆಯೂ ಇದೆ. ವಿದ್ಯಾರ್ಥಿಗಳ ಅಗತ್ಯಗಳು ಮತ್ತು ಅವರ ಅಭಿರುಚಿಗಳು ಹೇಗೆ ಬದಲಾಗಿವೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಆಗ ಈ ಸುಧಾರಣೆಯನ್ನು ಏಕೆ ಮಾಡಲಾಗಿದೆ ಎಂಬುದು ಅರ್ಥವಾಗುತ್ತದೆ. ಶಿಕ್ಷಣ ಜೀವನಕ್ಕೆ ಬಹಳ ಅಗತ್ಯವಾದ ವಿಚಾರ ಎಂಬ ಭಾವನೆ ಸಮಾಜದಲ್ಲಿ, ಕುಟುಂಬದಲ್ಲಿ ಮತ್ತು ವ್ಯಕ್ತಿಗಳಲ್ಲಿ ಹೆಚ್ಚಾಗುತ್ತಿದೆ. ಕಲಿಕೆ ಎಂಬುದು ಜೀವನದಲ್ಲಿ ಯಾವುದೋ ಒಂದಷ್ಟು ವರ್ಷಗಳ ಕಾಲ ಮಾತ್ರ ಮಾಡಬೇಕು, ನಂತರ ಕಲಿಕೆ ಬೇಕಿಲ್ಲ ಎಂಬಂತಹ ಸ್ಥಿತಿ ಈಗ ಇಲ್ಲ. ಈಗ ಕಲಿಕೆ ನಿರಂತರವಾಗಿ ಬೇಕು.

ಒಬ್ಬ ವಿದ್ಯಾರ್ಥಿ ಒಂದು ವಿಷಯದಲ್ಲಿ ಮಾತ್ರ ಕೌಶಲವನ್ನು ಪಡೆದುಕೊಂಡಿದ್ದರೆ ಸಾಕಾಗುವುದಿಲ್ಲ. ಈಗಿನ ಪರಿಸ್ಥಿತಿ ಹೇಗಿದೆಯೆಂದರೆ, ಎಲ್ಲಾ ರೀತಿಯ ವಿಷಯಗಳ ದೃಷ್ಟಿಕೋನ ವಿದ್ಯಾರ್ಥಿಗಳಿಗೆ ಬೇಕಾಗಿದೆ. ವಿಶಾಲವಾದ ದೃಷ್ಟಿಕೋನ ಮತ್ತು ಹೆಚ್ಚಿನ ಕೌಶಲಗಳು ಇಲ್ಲದೇ ಹೋದರೆ ಒಬ್ಬ ವಿದ್ಯಾರ್ಥಿ ಇವತ್ತಿನ ಸನ್ನಿವೇಶದಲ್ಲಿ ತನ್ನ ಜೀವನವನ್ನು ಮುಂದುವರಿಸಲಿಕ್ಕೆ ಕಷ್ಟ. ಹೀಗಾಗಿ ಈ ಬದಲಾಗುತ್ತಿರುವ ಸನ್ನಿವೇಶದಲ್ಲಿ ವೈವಿಧ್ಯಮಯವಾದ ಶಿಕ್ಷಣ ಕಾರ್ಯಕ್ರಮಗಳ ಅಗತ್ಯ ಇದೆ.

ಈಗ ವೈವಿಧ್ಯಮಯವಾದ ಮತ್ತು ಸೃಜನಾತ್ಮಕವಾದ ಕಾರ್ಯಕ್ರಮಗಳನ್ನು ಹಲವು ಸಂಸ್ಥೆಗಳು ನೀಡುತ್ತಿವೆ. ವಿಧವಿಧವಾದ ವಿಷಯಗಳಲ್ಲಿ ಹಲವು ಕೋರ್ಸ್‌ಗಳು ದೊರೆಯುತ್ತಿವೆ. ಹೀಗೆ ಕೋರ್ಸ್‌ಗಳು ಲಭ್ಯವಿದ್ದಾಗ ಮತ್ತು ಏಕಕಾಲದಲ್ಲಿ ಎರಡು ಶೈಕ್ಷಣಿಕ ಕಾರ್ಯಕ್ರಮ ಮಾಡುವ ಅವಕಾಶ ದೊರೆತಾಗ ಅದನ್ನು ಬಳಸಿಕೊಂಡರೆ ವಿದ್ಯಾರ್ಥಿ ತನ್ನ ಅಭಿರುಚಿಯನ್ನು ಮುಂದುವರಿಸಬಹುದು. ತನ್ನ ಕೌಶಲವನ್ನು ಸುಧಾರಿಸಿಕೊಳ್ಳಬಹುದು.

ಹೀಗಾಗಿ, ಯುಜಿಸಿ ಮಾಡಿರುವಂತಹ ನಿರ್ಧಾರ ಹೆಚ್ಚು ಸಂಸ್ಥೆಗಳಿಗೆ ಪ್ರಚಾರವಾಗಿ ಮತ್ತು ಹೆಚ್ಚು ವಿದ್ಯಾರ್ಥಿಗಳಿಗೆ ಇದು ತಲುಪಿ, ಅವರು ಇದರ ಉಪಯೋಗವನ್ನು ಪಡೆಯುವಂತಹ ಜಾಗೃತಿ ಆಗಬೇಕಿದೆ. ಇದನ್ನು ಮುಂದಿನ ದಿನಗಳಲ್ಲಿ ಒಂದು ವಿಶೇಷವಾದಂತಹ ರೀತಿಯಲ್ಲಿ ನಾವೆಲ್ಲಾ ಉಪಯೋಗಿಸಿಕೊಂಡರೆ, ಶಿಕ್ಷಣಕ್ಕೆ ಅವಕಾಶಗಳು ಹೆಚ್ಚಾಗುತ್ತವೆ. ಶಿಕ್ಷಣದ ಮೂಲಕವಾಗಿ ನಾವು ನಮ್ಮ ಕಾಲಮೇಲೆ ಸ್ವಾವಲಂಬಿಯಾಗಿ ನಿಲ್ಲುವುದಕ್ಕೆ ಅವಕಾಶವಾಗುತ್ತದೆ. ಈ ಎಲ್ಲಾ ಕಾರಣಗಳಿಂದ, ಯುಜಿಸಿಯ ಈ ನಿರ್ಧಾರವನ್ನು ನಾನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ.

ಲೇಖಕ: ಶಿಕ್ಷಣ ತಜ್ಞ, ರಾಷ್ಟ್ರೀಯ ಶಿಕ್ಷಣ ನೀತಿ ಕರಡು ರಚನಾ ಸಮಿತಿ ಸದಸ್ಯ

ನಿರೂಪಣೆ: ಜಯಸಿಂಹ ಆರ್.

ಏಕಕಾಲದಲ್ಲಿ ಎರಡು ಪದವಿ ಎಡಬಿಡಂಗಿ ನಿರ್ಧಾರ

• ನಿರಂಜನಾರಾಧ್ಯ ವಿ.ಪಿ.

ಒಂದೆಡೆ, ಕಳೆದ ಒಂದು ದಶಕದಿಂದ ಉದ್ಯೋಗದ ಅವಕಾಶಗಳು ಗಣನೀಯವಾಗಿ ಕಡಿಮೆಯಾಗಿವೆ. ಇದ್ದ ಉದ್ಯೋಗವನ್ನು ಕಳೆದುಕೊಂಡಿದ್ದೇವೆ. ಎರಡು ಮೂರು ಪದವಿಗಳನ್ನು ಹೊಂದಿರುವ ಹಾಗೂ ಅದರ ಜೊತೆಗೆ ಡಾಕ್ಟರೇಟ್ ಪದವಿಯನ್ನು ಗಳಿಸಿರುವ ಹಲವು ವಿದ್ಯಾವಂತ ಯುವಕರು ನಿರಂತರವಾಗಿ ಗಂಭೀರ ಪ್ರಶ್ನೆಗಳನ್ನು ಎತ್ತುತ್ತಿದ್ದಾರೆ. ಮತ್ತೊಂದೆಡೆ, ಕೇಂದ್ರ ಸರ್ಕಾರವು ವಿಶ್ವ ವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಮೂಲಕ ಏಕಕಾಲಕ್ಕೆ ಎರಡು ಪದವಿ ಓದುವ ಅವಕಾಶವನ್ನು ಒದಗಿಸುವ ಹೊಸ ಬಗೆಯ ಶಿಕ್ಷಣ ನೀತಿಯನ್ನು ಜಾರಿಗೆ ತರಲು ಮುಂದಾಗಿದೆ. ಇದು ಒಂದು ಬಗೆಯ ದ್ವಂಧ ಹಾಗು ವೈರುಧ್ಯ.

ಒಂದೆಡೆ, ನಿರುದ್ಯೋಗ ಹಾಗೂ ಮತ್ತೊಂದಡೆ ಏಕಕಾಲಕ್ಕೆ ಎರಡು ಪದವಿ ಓದುವ ನೀತಿ ಕುರಿತಂತೆ ಮೇಲಿನ ಪ್ರಶ್ನೆಗಳನ್ನು ಎತ್ತಲು ಹಲವು ಮುಖ್ಯ ಕಾರಣಗಳಿವೆ. ನಮಗೆಲ್ಲಾ ಗೊತ್ತಿರುವಂತೆ ದೇಶದಲ್ಲಿ ಲಕ್ಷಾಂತರ ಯುವಕರು ಈಗಾಗಲೇ ಎರಡು–ಮೂರು–ನಾಲ್ಕು ಪದವಿಗಳನ್ನು ಮಾಡಿಕೊಂಡಿದ್ದಾರೆ. ವೃತ್ತಿಪರ ಕೋರ್ಸ್‌ಗಳನ್ನೂ (ಡಿ.ಇಡಿ, ಬಿ.ಇಡ್, ಎಂ.ಇಡ್, ವೈದ್ಯಕೀಯ, ಇಂಜಿನಿಯರಿಂಗ್, ಇತ್ಯಾದಿ) ಮಾಡಿಕೊಂಡಿದ್ದಾರೆ. ಕೆಲವರು ಬಿ.ಎ ಮತ್ತು ಬಿ.ಕಾಂ, ಕೆಲವರು ಸ್ನಾತಕೋತ್ತರ ವಿಭಾಗದಲ್ಲಿ ಇತಿಹಾಸ, ರಾಜಕೀಯಶಾಸ್ತ್ರ , ಸಮಾಜ ಶಾಸ್ತ್ರ ಗಳಲ್ಲಿ ಎರಡೆರಡು ಪದವಿ ಪಡೆದು ಈಗಾಗಲೇ ನಿರುದ್ಯೋಗಿಗಳಾಗಿದ್ದಾರೆ. ಅಂದರೆ, ಈಗಾಗಲೇ ಎರಡೆರಡು-ಮೂರು ಪದವಿಗಳನ್ನು ಓದುಕೊಂಡಿದ್ದರೂ ಅವರಿಗೆ ಉದ್ಯೋಗವಾಗಲಿ ಅಥವಾ ನಿರುದ್ಯೋಗ ಭತ್ಯೆಯಾಗಲೀ ಸಿಗುತ್ತಿಲ್ಲ. ಹತ್ತಿರದ ಭವಿಷ್ಯದಲ್ಲಿ ಅವರಿಗೆ ಉದ್ಯೋಗ ಖಾತರಿಯ ಯಾವುದೇ ಭರವಸೆಯಿಲ್ಲ. ಸಂದರ್ಭ ಹೀಗಿರುವಾಗ, ಏಕಕಾಲದಲ್ಲಿ ಎರಡೆರಡು ಪದವಿಗೆ ಅವಕಾಶ ಕಲ್ಪಿಸುವ ತೀರ್ಮಾನದ ಹಿಂದೆ ಯಾವ ವೈಚಾರಿಕತೆ ಅಥವಾ ವೈಜ್ಞಾನಿಕತೆ ಇದೆ ಎಂಬುದು ತಿಳಿಯುತ್ತಿಲ್ಲ.

ಶಿಕ್ಷಣ ಕ್ಷೇತ್ರದಲ್ಲಿ ಬಹಳ ದೊಡ್ಡ ಪ್ರಮಾಣದ ಅಸಮಾನತೆ, ತಾರತಮ್ಯ ಮತ್ತು ಪ್ರತ್ಯೇಕತೆ ಇದೆ. ಒಂದು ಕಡೆ ಪ್ರತಿಷ್ಠಿತ ಖಾಸಗಿ ಕಾಲೇಜುಗಳು ಹಾಗೂ ಪ್ರತಿಷ್ಠಿತ ಡೀಮ್ಡ್ ವಿಶ್ವವಿದ್ಯಾಲಯಗಳು. ಸರ್ಕಾರಿ ಪದವಿ-ಪೂರ್ವ ಕಾಲೇಜು, ಪದವಿ ಕಾಲೇಜು ಅಥವಾ ವಿಶ್ವವಿದ್ಯಾಲಯಗಳಲ್ಲಿ ಅರ್ಧಕ್ಕೆ ಅರ್ಧದಷ್ಟು ಬೋಧಕ ಹಾಗೂ ಬೋಧಕೇತರ ಹುದ್ದೆಗಳು ಖಾಲಿ ಇವೆ. ಇಲ್ಲಿರುವ ಬಡ -ಮಧ್ಯಮ ಗ್ರಾಮೀಣ ವಿದ್ಯಾರ್ಥಿಗಳು ವಿಶೇಷವಾಗಿ ಪರಿಶಿಷ್ಟ ಜಾತಿ/ವರ್ಗ, ಹಿಂದುಳಿದ ವರ್ಗದ ಮಕ್ಕಳು, ಅದರಲ್ಲೂ ವಿಶೇಷವಾಗಿ ಹೆಣ್ಣುಮಕ್ಕಳು ಪ್ರಭುತ್ವದ ಮಟ್ಟಕ್ಕೆ ಕಲಿತು ಒಂದು ಪದವಿಯನ್ನು ಗಳಿಸಲು ಹರಸಾಹಸ ಪಡುತ್ತಿದ್ದಾರೆ. ಅರ್ಥಪೂರ್ಣ ಕಲಿಕೆ ಸಾಧ್ಯವಾಗುತ್ತಿಲ್ಲ. ಜೊತೆಗೆ, ಮೂಲಭೂತ ಸೌಕರ್ಯಗಳಲ್ಲಿ ಯಾವುದೂ ಇಲ್ಲದಾಗಿದೆ. ಮೂಲಭೂತ ಸೌಲಭ್ಯಗಳೇ ಇಲ್ಲದೇ ಕಾಲೇಜು/ವಿಶ್ವವಿದ್ಯಾಲಯಗಳು ಸೊರಗುತ್ತಾ ಇರುವಾಗ ಎರಡೆರಡು ಪದವಿ ಓದುವುದಕ್ಕೆ ಯಾವ ರೀತಿಯ ವಾತಾವರಣವನ್ನು ಕಟ್ಟಿಕೊಟ್ಟಿದ್ದೇವೆ ಎನ್ನುವ ಪ್ರಶ್ನೆಗೆ ಉತ್ತರ ಸಿಗುವುದಿಲ್ಲ.

ಈ ಬಗೆಯ ನೀತಿಗಳು ಈಗಾಗಲೇ ಇರುವ ಅಂತರ, ತಾರತಮ್ಯವನ್ನು ಹಾಗೂ

ಏಕಕಾಲಕ್ಕೆ ಎರಡೆರಡು ಪದವಿ ಓದುವ ನೀತಿಯ ಜಾರಿಯಿಂದ ಉಳ್ಳವರು ಮತ್ತು ಇಲ್ಲದವರ ಮಧ್ಯೆ ಅನಾರೋಗ್ಯಕರ ಸ್ಪರ್ಧೆ ಉಂಟಾಗುತ್ತದೆ. ಉಳ್ಳವರು ಎರಡು ಪದವಿ ಮಾಡುತ್ತಾರೆ, ಹೆಚ್ಚಿನ ಅವಕಾಶಗಳನ್ನು ದೊರಕಿಸಿಕೊಳ್ಳುತ್ತಾರೆ. ಗ್ರಾಮೀಣ ಭಾಗದ ಬಹುತೇಕ ಮಕ್ಕಳಿಗೆ ಹಣಬಲ ಇಲ್ಲದ ಕಾರಣ ಅವರಿಗೆ ಅವಕಾಶವೇ ಇಲ್ಲಂದಂತಾಗುತ್ತದೆ. ಈಗಾಗಲೇ ಹಿಂದೆ ಬಿದ್ದಿರುವ ಅವರು ಮತ್ತಷ್ಟು ಹಿಂದೆ ಬೀಳುವಂಥ ಸ್ಥಿತಿ ನಿರ್ಮಾಣವಾಗುತ್ತದೆ .

ಅಸಮಾನತೆಯನ್ನು ಮತ್ತಷ್ಟು ಹೆಚ್ಚಿಸುತ್ತವೆ. ಉದಾಹರಣೆಗೆ, ಎರಡೆರಡು ಪದವಿ ಮಾಡುವುದನ್ನು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳು ಬೆಳಿಗ್ಗೆ ಒಂದು ಕಾಲೇಜಿಗೆ ಹೋದರೆ, ಮಧ್ಯಾಹ್ನದ ಇನ್ನೊಂದು ಕಾಲೇಜಿಗೆ ಹೋಗುವ ಅನಿವಾರ್ಯತೆ ಸೃಷ್ಟಿಯಾಗುತ್ತದೆ. ಅದಲ್ಲದೆ, ಎಲ್ಲಾ ರೀತಿಯ ಸೌಲಭ್ಯ ಇರುವ ಸರ್ಕಾರಿ ಕಾಲೇಜುಗಳನ್ನು ಹುಡುಕುವುದು ಕಷ್ಟದ ಕೆಲಸವೇ ಸರಿ. ಹತ್ತಿರದಲ್ಲೇ ಸೌಲಭ್ಯ ಇರುವ ಖಾಸಗಿ ಕಾಲೇಜು ಇದೆ ಎಂದಾದರೂ ಅದು ದುಬಾರಿಯಾಗಿರುತ್ತದೆ. ಅದು ಕೇವಲ ಉಳ್ಳವರಿಗೆ ಮಾತ್ರ ಸಾಧ್ಯವಾಗುತ್ತದೆ.

ಅತ್ಯಂತ ನೋವಿನ ಸಂಗತಿ ಎಂದರೆ, ಈ ನೀತಿಯನ್ನು ಜಾರಿಗೆ ತರುವಲ್ಲಿ ಮುಂಚೂಣಿಯಲ್ಲಿರುವವರು ಹೇಳುವ ಮಾತೆಂದರೆ 'ಯಾರು ಸಮರ್ಥರು ಮತ್ತು ಬುದ್ಧಿವಂತರಿದ್ದಾರೆ ಅವರು ಏಕಕಾಲದಲ್ಲಿ ಎರಡೆರಡು ಪದವಿ ಓದಿಕೊಂಡರೆ ಏನು ತಪ್ಪೇನು'. ಅಂದರೆ ಅವರ ಚಿಂತನೆಯ ಪ್ರಕಾರ ಶಿಕ್ಷಣ ಅವರು ಪರಿಭಾವಿಸುವ ಸಮರ್ಥರಿಗೆ, ಬುದ್ಧಿವಂತರಿಗೆ ಸಿಕ್ಕಿದರೆ ಸಾಕು. ಅವರ ತರ್ಕವನ್ನು ಒಪ್ಪುವುದಾದರೆ, ನಮಗೆ ಸಮಾನತೆ, ಸಾಮಾಜಿಕ ನ್ಯಾಯ ಮತ್ತು ತಾರತಮ್ಯರಹಿತ ಸಮ ಸಮಾಜವನ್ನು ಪ್ರತಿಪಾದಿಸುವ ಸಂವಿಧಾನದ ಅವಶ್ಯಕತೆಯಿಲ್ಲ. ಪ್ರಾಚೀನ ಭಾರತದಲ್ಲಿದ್ದಂತೆ ಶಿಕ್ಷಣ ಒಂದು ಸವಲತ್ತಾದರೆ ಸಾಕು ಅದು ಸಾರ್ವತ್ರಿಕವಾಗಬೇಕಿಲ್ಲ.

ಈ ಬಗೆಯ ಅಪ್ರಬುದ್ಧ ಚಿಂತನೆಯ ಜನರು ಸ್ಪಷ್ಟವಾಗಿ ಅರಿಯಬೇಕಾದ ಅಂಶವೆಂದರೆ, ಭಾರತದ ಸಂವಿಧಾನ ಹಾಗು ಅಂತರಾಷ್ಟ್ರೀಯ ಮಾನವ ಹಕ್ಕುಗಳ ಅನ್ವಯ ಅವಕಾಶಗಳು ಎಲ್ಲರಿಗೂ ಸಮಾನವಾಗಿ ಲಭ್ಯವಾಗಬೇಕು. ಅದರಲ್ಲೂ ವಿಶೇಷವಾಗಿ, ದಮನಿತ ವರ್ಗದ ಜನರಿಗೆ ವಿಶೇಷ ಸೌಲಭ್ಯ ಕಲ್ಪಿಸಿಕೊಡಬೇಕಾದ ಜವಾಬ್ದಾರಿ ಸರ್ಕಾರದ ಮೇಲಿದೆ ಎಂಬುದು ಸಂವಿಧಾನದ ಆಶಯ. ಯಾರು ಸಮರ್ಥರು, ಯಾರಿಗೆ ಹಣ ಬಲ ಇದೆ ಅವರು ಓದಿಕೊಳ್ಳಲಿ ಎಂದು ನೀತಿ ನಿರೂಪಕರು ಹೇಳುವುದು ಸಂವಿಧಾನವನ್ನು ಅಣಕಿಸಿದಂತಾಗುತ್ತದೆ. ಈಗಿರುವ ಅಸಮಾನತೆಯ ಫಲವಾಗಿ, ಈಗಾಗಲೇ ಶೇ 80ರಷ್ಟು ಉದ್ಯೋಗ ಅವಕಾಶಗಳು ಮೇಲ್ವರ್ಗದ ಶೇ20ರಷ್ಟು ಜನರಿಗೆ ಸಿಗುತ್ತಿವೆ. ಕೇವಲ ಶೇಕಡ 20ರಷ್ಟು ಉದ್ಯೋಗಗಳಿಗೆ ಶೇಕಡ 80ರಷ್ಟು ಜನರು ಪೈಪೋಟಿ ಮಾಡಬೇಕಾದ ಅನಾರೋಗ್ಯಕರ ಪರಿಸ್ಥಿತಿ ಉಂಟಾಗಿದೆ. ಖಾಸಗಿ ವಲಯದಲ್ಲಿ ಉದ್ಯೋಗ ಅವಕಾಶ ಕುರಿತಂತೆ ಯಾವುದೇ ಸ್ಪಷ್ಟ ನೀತಿಯಿಲ್ಲ. ಈ ತೆರನಾದ ಅಸಮತೋಲನ ಇರುವಾಗ ನಾವು ಈ ಬಗೆಯ ಅವೈಜ್ಞಾನಿಕ ಮತ್ತು ಬಹುಸಂಖ್ಯಾತರನ್ನು ಹೊರಗಿಡುವ ನೀತಿಗಳನ್ನು ರೂಪಿಸುವುದು ಸಂವಿಧಾನದ ಮೂಲ ತತ್ವವನ್ನೇ ಬುಡಮೇಲು ಮಾಡಿದಂತಾಗುತ್ತದೆ.

ಏಕಕಾಲಕ್ಕೆ ಎರಡೆರಡು ಪದವಿ ಓದುವ ನೀತಿಯ ಜಾರಿಯಿಂದ ಉಳ್ಳವರು ಮತ್ತು ಇಲ್ಲದವರ ಮಧ್ಯೆ ಅನಾರೋಗ್ಯಕರ ಸ್ಪರ್ಧೆ ಉಂಟಾಗುತ್ತದೆ. ಉಳ್ಳವರು ಎರಡು ಪದವಿ ಮಾಡುತ್ತಾರೆ, ಹೆಚ್ಚಿನ ಅವಕಾಶಗಳನ್ನು ದೊರಕಿಸಿಕೊಳ್ಳುತ್ತಾರೆ. ಗ್ರಾಮೀಣ ಭಾಗದ ಬಹುತೇಕ ಮಕ್ಕಳಿಗೆ ಹಣಬಲ ಇಲ್ಲದ ಕಾರಣ ಅವರಿಗೆ ಅವಕಾಶವೇ ಇಲ್ಲಂದಂತಾಗುತ್ತದೆ. ಅದರಲ್ಲೂ ಹೆಣ್ಣು ಮಕ್ಕಳಿಗೆ ಇದು ಅನಾರೋಗ್ಯಕರ ಸ್ಪರ್ಧೆಯಾಗುತ್ತದೆ. ಪರಿಣಾಮ ಅವರು ವ್ಯವಸ್ಥೆಯಿಂದ ಹೊರ ನೂಕಲ್ಪಡುತ್ತಾರೆ. ಈಗಾಗಲೇ ಹಿಂದೆ ಬಿದ್ದಿರುವ ಅವರು ಮತ್ತಷ್ಟು ಹಿಂದೆ ಬೀಳುವಂಥ ಸ್ಥಿತಿ ನಿರ್ಮಾಣವಾಗುತ್ತದೆ .

ಒಟ್ಟಾರೆ, ಈ ನೀತಿಯ ಅಪಾಯಗಳನ್ನು ಸೂಕ್ಷ್ಮವಾಗಿ ಗಮನಿಸುವುದಾದರೆ, ಮೂರು ಅಂಶಗಳು ಮುಖ್ಯವಾಗುತ್ತವೆ.

ಮೊದಲನೆಯದಾಗಿ ಈ ನೀತಿಯು, 'ಶಿಕ್ಷಣ ಹಕ್ಕಲ್ಲ, ಸವಲತ್ತು' ಎನ್ನುವ ಪ್ರಾಚೀನ ಭಾರತಕ್ಕೆ ನಮ್ಮನ್ನು ಕರೆದೊಯ್ಯುತ್ತದೆ. ಸಂವಿಧಾನ, ಮಾನವ ಹಕ್ಕುಗಳು, ಸಾರ್ವತ್ರಿಕ ಶಿಕ್ಷಣ, ಗೌಣವಾಗುತ್ತದೆ. ಏಕಕಾಲಕ್ಕೆ ಸಮರ್ಥರಿಗೆ ಎರಡೆರಡು ಪದವಿ ಮಾಡಲು ಅವಕಾಶ ಕಲ್ಪಿಸಲು ಹೊರಟಿರುವವರ ಮನಸ್ಥಿತಿಯ ಹಿಂದೆ ಒಂದು ಕಾಣದ ಹುನ್ನಾರವಿದೆ. ಈ ಮೂಲಕ ಭಾರತದ ಸಂವಿಧಾನದ ಅನ್ವಯ ಸಾರ್ವಭೌಮ, ಸಮಾಜವಾದಿ, ಜಾತ್ಯತೀತ, ಪ್ರಜಾಸತ್ತಾತ್ಮಕ ಗಣತಂತ್ರದ ಬದಲು ಬೇರೊಂದು ಬಗೆಯ ಭಾರತವನ್ನು ಸೃಷ್ಟಿಸುವ ಉದ್ದೇಶವನ್ನು ಹೊಂದಿದ್ದಾರೆ. ಈ ನೀತಿಯು ಜಾರಿಗೆ ಬಂದರೆ ಸಂವಿಧಾನ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿನ ಮಾನವ ಹಕ್ಕುಗಳ ಒಡಂಬಡಿಕೆಗಳನ್ನು ಸಾಮಾನ್ಯ ತತ್ವಗಳನ್ನು ಉಲ್ಲಂಘಿಸುವ ಅಪಾಯ ಇದೆ.

ಎರಡನೆಯದಾಗಿ, ಪದವಿ ಗಳಿಸುವುದು ಎಂದರೆ ಒಂದು ವಿಷಯದಲ್ಲಿ ಆಳವಾದ ಜ್ಞಾನವನ್ನು ಹೊಂದಿರುವುದು ಎಂದು ಅರ್ಥ. ಏಕಕಾಲದಲ್ಲಿ ಎರಡು ಪದವಿಗಳನ್ನು ಮಾಡಲು ಹೊರಟರೆ, ವಿದ್ಯಾರ್ಥಿಯು ಆ ಕಡೆಗೂ ಇಲ್ಲದ, ಈ ಕಡೆಗೂ ಇಲ್ಲದ ಎಡಬಿಡಂಗಿಯಾಗುವ ಸಾಧ್ಯತೆ ಹೆಚ್ಚುತ್ತದೆ. ಯಾವುದಾದರು ಒಂದು ವಿಷಯದಲ್ಲಾದರು ಪ್ರಭುತ್ವದ ಮಟ್ಟಕ್ಕೆ ಜ್ಞಾನ –ಕೌಶಲವಿಲ್ಲದೆ ಕೆಲಸಕ್ಕೆ ಬಾರದ ಪದವೀಧರರಾಗುವ ಮೂಲಕ ರೀತಿಯಲ್ಲಿ ಪದವಿ ಪಡೆದುಕೊಂಡಂತಾಗುತ್ತದೆ. ಮೂರನೆಯದಾಗಿ, 'ಸಮರ್ಥರು-ಬುದ್ದಿವಂತರು ಎನಿಸಿಕೊಂಡವರೂ ಕೂಡ ಏಕಕಾಲದಲ್ಲಿ ಎರಡು ಪದವಿ ಮಾಡಲು ಖಾಸಗಿ ವಿಶ್ವ ವಿದ್ಯಾಲಯಗಳಲ್ಲಿ ಅಥವಾ ಖಾಸಗಿ ಕಾಲೇಜುಗಳನ್ನು ಅವಲಂಬಿಸಬೇಕಾಗುತ್ತದೆ. ಇದು ಶಿಕ್ಷಣ ವ್ಯವಸ್ಥೆಯ ಖಾಸಗೀಕರಣ -ವ್ಯಾಪಾರೀಕರಣವನ್ನು ಮತ್ತಷ್ಟು ಹೆಚ್ಚಿಸುತ್ತದೆ.

ಇಂಥಹ, ಅವೈಜ್ಞಾನಿಕ ವಿಚಾರಗಳನ್ನು ಕೈಬಿಟ್ಟು, ಇರುವ ವ್ಯವಸ್ಥೆಯನ್ನು ಮತ್ತಷ್ಟು ಗಟ್ಟಿಗೊಳಿಸಬೇಕಿದೆ. ವಿದ್ಯಾರ್ಥಿಗಳು ಈಗ ಯಾವ ಪದವಿ ಓದುತ್ತಿದ್ದಾರೋ ಅದರಲ್ಲೇ ಅತ್ಯಂತ ಶ್ರೇಷ್ಠವಾದ, ಉತ್ಕೃಷ್ಟವಾದ ಜ್ಞಾನವನ್ನು ಕಟ್ಟಿಕೊಡುವ ಕಡೆ ಸರ್ಕಾರ ಗಮನಕೊಡಬೇಕು. ಆ ಮೂಲಕ ತಮ್ಮ ಜ್ಞಾನ ಕೌಶಲವನ್ನು ಬಳಸಿ ಆರ್ಥಿಕ ಸ್ವಾವಲಂಬಿಗಳಾಗುವ ಹೊಸ ಬಗೆಯ ಆರ್ಥಿಕ ವ್ಯವಸ್ಥೆಯ ಬಗ್ಗೆ ಯೋಚಿಸಬೇಕಿದೆ.

ಲೇಖಕ: ಅಭಿವೃದ್ಧಿ ಶಿಕ್ಷಣ ತಜ್ಞ

ನಿರೂಪಣೆ: ಸುಕೃತ ಎಸ್.

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 102

ಪೂಜೆಗೆ ಬಿಲ್ವಪತ್ರೆ ಉತ್ತಮ

ಶಿವಮೂರ್ತಿಗೆ ವೇದಮಂತ್ರಗಳಿಂದಾಗಲಿ, ಶಿಕ್ಷಾದಿ ವೇದಾಂಗಗ ಳಿಂದಾಗಲಿ, ನಾಮಮಂತ್ರಗಳಿಂದಾಗಲಿ, ಹನ್ನೊಂದು ಸಲ ಜಲಧಾರೆಯಿಂದ ಅಭಿಷೇಕ ಮಾಡಿದ ಬಳಿಕ ಬಟ್ಟೆಯಿಂದ ಒರೆಸಬೇಕು. ಆಚಮನವನ್ನು ಇತ್ತು, ವಸ್ತ್ರವನ್ನು ಅರ್ಪಿಸಬೇಕು. ಅನಂತರ ಎಳ್ಳು, ಜವೆಗೋಧಿ, ಗೋಧಿ, ಹೆಸರು, ಉದ್ದು, ಇವುಗಳನ್ನು ನಾನಾ ವಿಧವಾದ ಮಂತ್ರಗಳೊಡನೆ ಶಿವನಿಗೆ ಅರ್ಪಿಸಬೇಕು. ಸದ್ಯೋಜಾತಾದಿ ಪಂಚ-ಮುಖಗಳುಳ್ಳ ಆ ಮಹಾತ್ಮನ ಒಂದೊಂದು ಮುಖಕ್ಕೂ, ಧ್ಯಾನಕ್ಕೆ ಅನುಸಾರವಾಗಿ ಮತ್ತು ಆಯಾ ಅಭಿಲಾಷೆಗಳಿಗನುಗುಣವಾಗಿ ಹೂವುಗಳನ್ನು ಸಮರ್ಪಿಸಬೇಕು.

ನೂರು ದಳಗಳುಳ್ಳ ಕಮಲಗಳು, ಶಂಖಾಕೃತಿಯುಳ್ಳ ಹೂಗಳು; ಹಾಗೆಯೇ, ಕುಶಪುಷ್ಪ, ದತ್ತೂರಿಹೂವು, ಮಂದಾರಕುಸುಮ, ತುಲಸೀದಳಗಳು, ವಿಶೇಷವಾಗಿ ಬಿಲ್ವಪತ್ರೆಗಳಿಂದ ಶಿವನನ್ನು ಅರ್ಚಿಸಬೇಕು. ಹೂಗಳಿಂದ ಭಕ್ತವತ್ಸಲನಾದ ಶಂಕರನನ್ನು ಮಿಗಿಲಾದ ಭಕ್ತಿಯಿಂದ ಪೂಜಿಸಬೇಕು. ಯಾವುದೂ ಸಿಗದಿದ್ದ ಪಕ್ಷದಲ್ಲಿ ಬಿಲ್ವಪತ್ರ-ವೊಂದರಿಂದಲೇ ಶಿವನನ್ನು ಪೂಜಿಸಬಹುದು. ಬಿಲ್ವಪತ್ರವೊಂದನ್ನು ಒಪ್ಪಿಸಿದರೆ, ಎಲ್ಲ ಪೂಜೆಯನ್ನೂ ಮಾಡಿದಂತಾಗುವುದು. ಸುಗಂದ ಚೂರ್ಣವನ್ನೂ, ಸುವಾಸನೆಯುಳ್ಳ ನಾನಾ ವಿಧವಾದ ತೈಲವನ್ನೂ, ಪರಮ ಸಂತೋಷ ದಿಂದ ಶಿವನಿಗೊಪ್ಪಿಸಬೇಕು.

ಗುಗ್ಗಳ, ಅಗುರುಚಕ್ಕೆಗಳಿಂದ ಧೂಪವನ್ನು ಹೊತ್ತಿಸಬೇಕು. ಶಂಕರ ನಿಗೆ ತುಪ್ಪದ ದೀಪವನ್ನು ಹಚ್ಚಬೇಕು. ಆಮೇಲೆ 'ಓ ಶಂಕರ! ಅರ್ಘ್ಯವನ್ನು ಸ್ವೀಕರಿಸಿ, ರೂಪವನ್ನೂ ಕೀರ್ತಿಯನ್ನೂ ಕೊಡು. ಭೋಗವನ್ನು ನೀಡು. ಭುಕ್ತಿಯನ್ನೂ ಮುಕ್ತಿಯನ್ನೂ ಅನುಗ್ರಹಿಸು. ನಿನಗೆ ನಮಸ್ಕಾರ' ಎಂಬ ಮಂತ್ರದಿಂದ ಭಕ್ತಿಯುಕ್ತನಾಗಿ ಆತನಿಗೆ ಅರ್ಘ್ಯವನ್ನೀಯಬೇಕು. ಭಕ್ತಿಭಾವದಿಂದ ವಸ್ತ್ರವನ್ನು ತೆಗೆದುಕೊಂಡು ಮುಖವನ್ನು ಒರೆಸಬೇಕು. ಬಳಿಕ ಆ ಶಿವನಿಗೆ ನಾನಾ ಬಗೆಯ ಶುಭಕರವಾದ ನೈವೇದ್ಯವನ್ನು ನಿವೇದಿಸಬೇಕು. ವಿಳಂಬಕ್ಕೆ ಸ್ವಲ್ಪವೂ ಅವಕಾಶಕೊಡದೆ, ಪ್ರೀತಿಯಿಂದ ಆಚಮನ-ವನ್ನಿತ್ತು, ಅನಂತರ ಬೇಕಾದ ನಾನಾ ಬಗೆಯ ಪರಿಕರಗಳಿಂದ ಕೂಡಿದ ಹಿತವಾದ ತಾಂಬೂಲವನ್ನು ಒಪ್ಪಿಸಬೇಕು.

ಸಂಖ್ಯಾನುಗುಣವಾಗಿ ಐದು ಬತ್ತಿಗಳುಳ್ಳ ಆರತಿಯನ್ನು ಹಚ್ಚಿಕೊಂಡು, ಕಾಲ್ಗಳ ಬಳಿ ನಾಲ್ಕು ಸಲವೂ, ನಾಭಿಮಂಡಲದ ಬಳಿ ಎರಡು ಬಾರಿಯೂ, ಮುಖದ ಬಳಿ ಒಂದು ಸಾರಿಯೂ, ಸರ್ವಾಂಗಗಳಲ್ಲಿಯೂ ಏಳುಸಲವೂ ಆರತಿಯನ್ನು ಬೆಳಗಿ ಯಥೋಕ್ತವಾದ ಧ್ಯಾನವನ್ನು ಮಾಡಿದ ಬೇಕು. ವಿವೇಕಿಯಾದವನು ತಾನು ತಿಳಿದ ಮಟ್ಟಿಗೆ ನಿಯತವಾದ ಸಂಖ್ಯೆಗನುಗು ಣವಾಗಿ, ತನಗೆ ಗುರುವು ಉಪದೇಶವಿತ್ತಂತೆ ಆ ಮಂತ್ರಜಪವನ್ನು ಮಾಡ ಬೇಕು. ನಾನಾ ವಿಧವಾದ ಸ್ತೋತ್ರಗಳನ್ನು ಹೇಳುತ್ತಾ, ವೃಷಭಧ್ವಜನಾದ ಶಿವನನ್ನು ಸ್ತೋತ್ರ ಮಾಡಬೇಕು. ಆಮೇಲೆ ಮೆಲ್ಲಗೆ ನಿಧಾನವಾಗಿ ಶಿವನಿಗೆ ಪ್ರದಕ್ಷಿಣೆಯನ್ನು ಮಾಡಬೇಕು.

ವಿಧ್ಯುಕ್ತವಾಗಿ, 'ಎದೆ, ತಲೆ, ದೃಷ್ಟಿ, ಮನಸ್ಸು, ಶ್ರದ್ಧೆ, ಕಾಲು, ಕೈ, ಕಿವಿ' ಎಂಬ ಅಷ್ಟಾಂಗಗಳಿಂದ ಕೂಡಿದ ನಮಸ್ಕಾರಗಳನ್ನು ಮಾಡಿದಮೇಲೆ, ಭಕ್ತಿಯುಕ್ತನಾಗಿ, ಪುಷ್ಪಾಂಜಲಿಯನ್ನೀಯಬೇಕು. 'ಓ ಶಂಕರ! ಜ್ಞಾನ ಪೂರ್ವಕವಾಗಿಯೋ ಜ್ಞಾನಪೂ-ರ್ವಕವಲ್ಲದೆಯೋ, ನಾನು ಮಾಡಿದ ಪೂಜೆ ಮೊದಲಾದವುಗಳಲ್ಲಿ ಯಾವ ಯಾವ ಕ್ರಿಯಾಕಲಾಪವಿದೆಯೋ, ಅದೆಲ್ಲವೂ ಹೋಗಿ ನಿನ್ನ ದಯೆಯಿಂದ ಪೂಜೆಯು ಸಫಲವಾಗಲಿ.

ಎಲೈ ಕೃಪಾಳುವೇ, ನಾನು ಯಾವಾಗಲೂ ನಿನ್ನವನು. ನನ್ನ ಪ್ರಾಣಗಳೆ ಲ್ಲವೂ ನಿನ್ನಲ್ಲೇ ನೆಲಸಿವೆ. ಮನಸ್ಸೆಲ್ಲಾ ನಿನ್ನನ್ನೇ ನೆನಸುತ್ತಿದೆ. ಗೌರೀಪತೀ, ಭೂತನಾಥ! ನನ್ನಲ್ಲಿ ಪ್ರಸನ್ನನಾಗು. ನೆಲದ ಮೇಲೆ ನಡೆಯುತ್ತಾ ಜಾರಿ ಬಿದ್ದವನಿಗೆ ಹೇಗೆ ನೆಲವೇ ಅವಲಂಬನೆಯೋ, ಹಾಗೆ ನಿನ್ನಲ್ಲಿ ಅಪರಾಧ ವೆಸಗಿದ್ದರೂ ನಮಗೆ ನೀನೇ ಗತಿಯಲ್ಲದೆ ಮತ್ತಾರೂ ಇಲ್ಲ – ಎಂದು ಪ್ರಾರ್ಥಿಸಬೇಕು.

ಈ ಪ್ರಕಾರ ಬಿನ್ನಹಗಳನ್ನು ಮಾಡಿಕೊಂಡು ವಿಧಿಪೂರ್ವಕವಾಗಿ ಪುಷ್ಪಾಂಜ-ಲಿಯನ್ನು ಸಮರ್ಪಿಸಿ ಪುನಃ ಪುನಃ ನಮಸ್ಕಾರವನ್ನು ಮಾಡ ಬೇಕು. 'ಓ ಪ್ರಭೂ, ಓ ದೇವ ದೇವ, ನಿನ್ನ ಪರಿವಾರ ಸಮೇತವಾಗಿ ಈಗ ನಿನ್ನ ನಿವಾಸಕ್ಕೆ ತೆರಳುವವನಾಗು. ನಾಥ, ನಾನು ಪುನಃ ಪೂಜೆ ಮಾಡುವಾಗ ನನ್ನಲ್ಲಿ ಅಭಿಮಾನವಿಟ್ಟು, ನೀನು ಮರಳಿ ದಯೆಮಾಡಿ ಬರಬೇಕು' ಎಂದು ಭಕ್ತವತ್ಸಲನಾದ ಶಂಕರನನ್ನು ಬಹುವಾಗಿ ಪ್ರಾರ್ಥಿಸಿ ಬೀಳ್ಕೊಡಬೇಕು. ಆಮೇಲೆ ಆ ತೀರ್ಥೋದಕವನ್ನು ತನ್ನ ಎದೆಯ ಮೇಲೂ, ತಲೆಯಮೇಲೂ ಪ್ರೋಕ್ಷಿಸಿಕೊಳ್ಳಬೇಕು.

ಹೀಗೆ ಶಿವಪೂಜಾಕ್ರಮವನ್ನು ಬ್ರಹ್ಮನು ವಿವರಿಸುವುದರೊಂದಿಗೆ ಸೃಷ್ಟಿಖಂಡದ ಶಿವಪೂಜಾವರ್ಣನ ಎಂಬ ಹದಿಮೂರನೆಯ ಅಧ್ಯಾಯ ಮುಗಿಯುತ್ತದೆ.

ಪದಬಂಧ 4936

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಜೋರು ಎಂದು ಹೀಗೆನ್ನಿ (4)
3.ಕಪಟ ಇಲ್ಲಿದ್ದಾನೆ (4)
5.ಧನಧಾನ್ಯಗಳು ಸಮೃದ್ಧಿಯಾಗಿರುವ ಕಾಲ (3)
7.ರಾಜನ ಪತ್ನಿ (2)
8.ತತ್ತಿಯ ಒತ್ತು ತೆಗೆದರೆ ಸಮೂಹ ಕಾಣುವುದಲ್ಲಾ! (2)
11.ಪುಢಾರಿ ಜೊತೆಗಿರುವ ಶತ್ರು (2)
13.ಕಡಲಿನಲ್ಲಿರುವ ಶೂರ! (2)
14.ಮೃದುವಲ್ಲದ್ದು ಇದು (3)
16.ದೇಗುಲದಲ್ಲಿ ಮೂಲವಿಗ್ರಹ ಪ್ರತಿಷ್ಠೆ ಮಾಡಿರುವ ಜಾಗ (4)
17.ಮತ ಹಾಕಿದ್ದಕ್ಕೆ ಪಚ್ಚೆ ಸಿಕ್ಕಿತಲ್ಲಾ! (4)

ಮೇಲಿಂದ ಕೆಳಕ್ಕೆ

1.ನೀರು ಧುಮುಕುವ ಸ್ಥಳ (4)
2.ತಿರುಗಿದಾಗಲೇ ಆದ ಆಯಾಸ! (2)
3.ನಿರ್ವಾಣವನ್ನು ಹೀಗೆ ಹೇಳಿ (2)
4.ಮಣಿ ಧರಿಸಿದ ಚೆಲುವೆ (3)
6.ಭಿಕ್ಷುಕನನ್ನು ಹೀಗೂ ಕರೆವರು (3)
7.ಬೇರೊಂದು ದೇಶಕ್ಕೆ ಕಳಿಸುವ ರಾಜಪ್ರತಿನಿಧಿ (4)
9.ಎಳ್ಳು ನೀರು ಬಿಡುವಿಕೆ (4)
10.ಕಡ ಕೇಳುವ ಖದೀಮ! (3)
12.ವೇದಾದಿ ಶಾಸ್ತ್ರಗಳನ್ನು ವಿಧ್ಯುಕ್ತವಾಗಿ ಮಾಡಿಸುವವನು (4)
13.ಕೈಗೆ ಧರಿಸುವ ಆಭರಣ (3)
14.ಗಡಿಬಿಡಿಯಿಂದ ಪ್ರವೇಶಿಸಿರುವ ಎಲ್ಲೆ! (2)
15.ಮಧುರ ವಾಸನೆ ಬೀರುತ್ತಿರುವ ಹೂ (2)

4935ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ಗೆಹೊ 5.ಪರಮಾವಧಿ 6.ಗಡವ 7.ಪಾಮರ 8.ಸಾರ್ವಜನಿಕ 9.ಸಂಧಾನ 10.ಪ್ರಪಾತ 13.ಸಮೀಕರಣ 14.ತತ್ತಿ

ಮೇಲಿಂದ ಕೆಳಕ್ಕೆ: 1.ಉಪಯೋಗ 2.ಸಮಾಧಿ 4.ಹೊಣೆಗಾರ 5.ಪರ್ಯವಸನ 7.ಪಾಕಪ್ರವೀಣ 9.ಸಂಭಾವಿತ 11.ತಹಬಂದು 12.ಅಂಕಣ

ಸುಡೊಕು 5322

4			3		8			2
		1		6		3	8	
9		3			2			6
							6	
	2	6	9	4	7			
	4		6		1		7	5
			1		9	8		
8		7					9	
1	9		8		6	4		3

5321 ಸುಡೊಕು

1	5	8	4	3	2	9	7	6
3	7	6	9	8	1	2	4	5
9	2	4	6	5	7	1	8	3
8	9	5	2	7	4	6	3	1
4	6	1	5	9	3	7	2	8
7	3	2	1	6	8	5	9	4
5	4	9	3	2	6	8	1	7
2	1	7	8	4	5	3	6	9
6	8	3	7	1	9	4	5	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಏಪ್ರಿಲ್ 23, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ಚೈತ್ರ ಕೃಷ್ಣ ಸಪ್ತಮಿ ಗಂ. 06-28, ಅಷ್ಟಮಿ ಗಂ. 28-30 ನಕ್ಷತ್ರ: ಉತ್ತರಾಷಾಢ ಗಂ. 18-54 ಯೋಗ: ಸಾಧ್ಯ ಗಂ. 25-30, ಕರಣ: ಬವ ಗಂ. 06-28, ಮೇಷ ಮಾಸದ 09 ನೇ ದಿನ. ರಾಹುಕಾಲ : ಬೆಳಿಗ್ಗೆ 09:00–10:30 ಸೂರ್ಯೋದಯ : 06-17 ಸೂರ್ಯಾಸ್ತ : 06-41 ಮುಸ್ಲಿಂ ದಿನಾಂಕ : 21 ರಂಜಾನ್ ದಿನ ವಿಶೇಷ: ಬಾಬು ಕುಯಿರ್ ಸಿಂಗ್‌ರವರ ಜನ್ಮದಿನ (ಬಿಹಾರ್), ಷಹದತ್--ಎ-ಹಜರತ್ ಅಲಿ (ಮುಸ್ಲಿಂ) ಅದೃಷ್ಟ ಸಂಖ್ಯೆ: 4, 7

ಮೇಷ: ನಿರುದ್ಯೋಗಿಗಳಿಗೆ ಹಂಗಾಮಿ ನೌಕರಿ ದೊರೆಯುವುದು. ಈ ದಿನ ಸಭೆ ಸಮಾರಂಭಗಳಲ್ಲಿ ಮುಂದಾಳತ್ವ ವಹಿಸಿ ಕೀರ್ತಿ ಗೌರವವನ್ನು ಪಡೆದುಕೊಳ್ಳುವಿರಿ ಹಾಗು ಸಭೆಯ ಯಶಸ್ಸಿಗೆ ನಿಮ್ಮ ಪಾತ್ರ ಮುಖ್ಯವಾಗಿರುವುದು.

ವೃಷಭ: ಕಾರ್ಯದೊತ್ತಡದ ನಡುವೆ ಕುಟುಂಬದ ಸಮಸ್ಯೆಯತ್ತ ಗಮನ ನೀಡಲು ಮರೆಯದಿರಿ. ಸಾಂಸಾರಿಕ ಜೀವನದಲ್ಲಿ ಬಿರುಕು ಮೂಡದಂತೆ ನೋಡಿಕೊಳ್ಳುವುದು ನಿಮ್ಮ ಜವಾಬ್ದಾರಿ.

ಮಿಥುನ: ಮನುಷ್ಯ ಪ್ರಯತ್ನದ ಜೊತೆಯಲ್ಲಿ ದೇವರಕೃಪೆಗೆ ಪಾತ್ರರಾಗುವ ರೀತಿಯಲ್ಲಿ ನಡೆದುಕೊಂಡಾಗ ಶ್ರಮಕ್ಕೆ ತಕ್ಕ ಪ್ರತಿಫಲ ದೊರಕುವುದು. ತಂದೆ ತಾಯಿಯ ಅಥವಾ ಹಿರಿಯರ ಆರೋಗ್ಯದಲ್ಲಿ ವ್ಯತ್ಯಯಗಳಾಗುತ್ತದೆ.

ಕರ್ಕಾಟಕ: ಬೆಂಕಿಯಿಂದ ಅನಾಹುತ ಸಂಭವಿಸುವ ಲಕ್ಷಣವಿರುವುದರಿಂದ ಜಾಗ್ರತರಾಗಿರುವುದು ಒಳ್ಳೆಯದು. ಪ್ರಾಮಾಣಿಕವಾಗಿ ಕೆಲಸ–ಕಾರ್ಯದಲ್ಲಿ ತೊಡಗಿಸಿಕೊಂಡಲ್ಲಿ ನಿಧಾನವಾಗಿ ಯಶಸ್ಸು ಪ್ರಾಪ್ತಿಯಾಗುವುದು.

ಸಿಂಹ: ಸಣ್ಣ ಕೈಗಾರಿಕೋದ್ಯಮಿಗಳಿಗೆ ರಫ್ತು ಮಾರಾಟದಿಂದ ಹೇರಳ ಲಾಭ. ಹೊಸ ಕೆಲಸಗಳ ಬಗ್ಗೆ ಯೋಜನೆಗಳನ್ನು ರೂಪಿಸಿಕೊಳ್ಳುವಿರಿ. ಮಕ್ಕಳೊಂದಿಗೆ ವಿದೇಶ ಪ್ರಯಾಣ ಮಾಡುವ ಸಂದರ್ಭ ಬರಲಿದೆ.

ಕನ್ಯಾ: ಪ್ರಿಯ ವ್ಯಕ್ತಿಯೊಂದಿಗೆ ವಿಚಾರ ವಿನಿಮಯವನ್ನು ಸೂಕ್ತ ರೀತಿಯಲ್ಲಿ ಮಾಡಿಕೊಳ್ಳುವುದು ಒಳ್ಳೆಯದು. ಕಲೆ, ಅಲಂಕಾರಿಕ ಹಾಗೂ ವೈಭೋಗ ವಸ್ತುಗಳಿಂದಾಗಿ ಹೆಚ್ಚಿನ ಲಾಭವನ್ನು ನಿರೀಕ್ಷಿಸಬಹುದು.

ತುಲಾ: ಬಿಸಿನೆಸ್ ಸಂಬಂಧ ಬ್ಯಾಂಕ್ ಅಧಿಕಾರಿಗಳ ಜೊತೆ ತಕ್ಷಣದಲ್ಲಿ ಮಾತುಕತೆ ನಡೆಸಬೇಕಾದೀತು. ಈ ದಿನದ ಪರಿಸ್ಥಿತಿಯನ್ನು ನೀವು ಬುದ್ಧಿವಂತಿಕೆ ಮತ್ತು ಎಚ್ಚರಿಕೆಯಿಂದ ನಿಭಾಯಿಸಿ.

ವೃಶ್ಚಿಕ: ಬಂಧು ಮಿತ್ರರೊಂದಿಗೆ ಸಂತೋಷ ಹಂಚಿಕೊಳ್ಳುವಿರಿ. ಮನೆಕೊಳ್ಳುವ ವಿಷಯ ಇತ್ಯರ್ಥವಾಗುವುದು. ಹಳದಿ ವರ್ಣ ಶುಭದಾಯಕ. ಪೋಲೀಸ್ ಅಧಿಕಾರಿಗಳು ವರ್ಗಾವಣೆಗಾಗಿ ಮಾಡಿದ ಭಾರಿ ಪ್ರಯತ್ನ ವ್ಯರ್ಥವಾಗುವುದು.

ಧನು: ನಿಮ್ಮ ಯಶಸ್ಸಿಗೆ ಏಕಾಗ್ರತೆ ಮತ್ತು ಪ್ರಯತ್ನ ಬಹಳ ಮುಖ್ಯ. ಅದರಿಂದಾಗಿ ಎಲ್ಲ ಸವಾಲುಗಳನ್ನು ಎದುರಿಸುವ ಆತ್ಮಸ್ಥೈರ್ಯ ನಿಮಗೆ ಬರುವುದು. ರಾಸಾಯನಿಕ ವಸ್ತುಗಳ ಮಾರಾಟಗಾರರಿಗೆ ಲಾಭಾಂಶ ವೃದ್ಧಿಯಾಗುತ್ತದೆ.

ಮಕರ: ಎಲ್ಲಾ ಆಸೆಗಳನ್ನು ಕೈಬಿಟ್ಟು ಜೀವನ ನಡೆಸುವ ಸಮಯದಲ್ಲಿ ಪುನಃ ಅದೃಷ್ಟ ನಿಮ್ಮನ್ನು ಕೈ ಬೀಸಿ ಕರೆಯುವುದು. ಮಗಳ ಮದುವೆ ವಿಚಾರವಾಗಿ ದೂರದ ಊರಿಗೆ ಪ್ರಯಾಣ ಬೆಳೆಸಬೇಕಾಗುವುದು.

ಕುಂಭ: ನಿಮ್ಮ ಅಸಾಧ್ಯ ಸಾಧನೆಗಳಿಗಾಗಿ ಪ್ರಶಂಸೆಯ ನುಡಿ ಮತ್ತು ಸನ್ಮಾನಗಳನ್ನು ಪಡೆಯುವಿರಿ. ಸುದ್ದಿಗೋಷ್ಠಿಗಳಲ್ಲಿ ಭಾಗವಹಿಸುವ ಅವಕಾಶ ಸಿಗುವುದು. ಮಗನ ಮುಂದಿನ ಓದಿನ ವಿಷಯ ಮನೆಯಲ್ಲಿ ಚರ್ಚೆಗೆ ಬರುವುದು.

ಮೀನ: ಪ್ರಮುಖ ಕಾರ್ಯ ಮಾಡುವಾಗ ಸಣ್ಣ ಪುಟ್ಟ ಸಮಸ್ಯೆ ಎದುರಾಗಬಹುದು, ಲೆಕ್ಕಿಸದೆ ಕೇವಲ ಗುರಿ ಸಾಧನೆಯ ಬಗ್ಗೆ ಯೋಚಿಸಿ. ಕೊಟ್ಟ ಮಾತು ಉಳಿಸಿಕೊಳ್ಳುವಲ್ಲಿ ಶ್ರಮವಿರಲಿ. ದಿನದ ಅಂತ್ಯದಲ್ಲಿ ಸಂತಸದ ಸುದ್ದಿ ಕೇಳುವಿರಿ.

ಎಮ್ಟಿ ನೆಸ್ಟ್ ಸಿಂಡ್ರೋಮ್

'ಗೂಡು' ಖಾಲಿಯಾದಾಗ..

ಮಕ್ಕಳೆಲ್ಲ ತಮ್ಮ ಜೀವನ ರೂಪಿಸಿಕೊಂಡು ಮನೆಯಿಂದ ಹೊರಗೆ ಹೊರಟ ಮೇಲೆ ವಿಶೇಷವಾಗಿ ತಾಯಂದಿರಿಗೆ ಮನಸ್ಸಿನಲ್ಲಿ 'ಶೂನ್ಯ ಭಾವ' ಆವರಿಸುತ್ತದೆ. ಈ ಏಕಾಂಗಿತನದ ತಳಮಳಗಳನ್ನು 'ಎಮ್ಟಿ ನೆಸ್ಟ್ ಸಿಂಡ್ರೋಮ್' ಎನ್ನುತ್ತಾರೆ.

ಮಂಜುಳಾ ರಾಜ್

ಭಾರತಿಯವರಿಗೆ ಮೊನ್ನೆ ಮೊನ್ನೆವರೆಗೂ ಕೈ ತುಂಬಾ ಕೆಲಸ. ಮಗನಿಗೆ ಡಬ್ಬಿ ಕಟ್ಟಬೇಕು, ಅವನನ್ನು ಟ್ಯೂಶನ್‌ಗೆ ಬಿಡಬೇಕು, ಅವನು ಮನೆಗೆ ಮರಳುವ ಹೊತ್ತಿಗೆ ಏನಾದರೂ ಸಂಜೆ ಉಪಾಹಾರಕ್ಕೆ ಸಿದ್ಧ ಮಾಡಬೇಕು. ಮಗಳಿಗೂ ಅಷ್ಟೇ. ಆಕೆ ಆಫೀಸಿಗೆ ಹೋಗುವಷ್ಟರಲ್ಲಿ ತಿಂಡಿ ಸಿದ್ಧಪಡಿಸಿ ಡಬ್ಬಿ ಕೊಡಬೇಕು. ಹೀಗೆ ದಿನವಿಡೀ ಬ್ಯುಸಿ ಇರುತ್ತಿದ್ದರು. ಆದರೆ ಈಗ ಏನೂ ಕೆಲಸವಿಲ್ಲ. ಮಗಳು ಬೇರೆ ಕೆಲಸ ಸಿಕ್ಕು ದೆಹಲಿಗೆ ಹೋದಳು. ಮಗ ಎಂಜಿನಿಯರಿಂಗ್ ಓದಲು ಚೆನ್ನೈಗೆ ಹೋದ. ಭಾರತಿಯವರಿಗೆ ಮಕ್ಕಳಿಬ್ಬರ ಭವಿಷ್ಯ ಸೆಟಲ್ ಆಯ್ತು ಎನ್ನುವ ಸಂತಸ ಒಂದೆಡೆಯಾದರೆ, ಮನೆಯಲ್ಲವೂ ಖಾಲಿ ಖಾಲಿ ಎನ್ನುವ ಭಾವ ಇನ್ನೊಂದೆಡೆ!

ಮನೆಯಂತೆ ಮನಸ್ಸೂ ಖಾಲಿ. ಯಾವುದಕ್ಕೂ ಉತ್ಸಾಹ, ಹುಮ್ಮಸ್ಸಿಲ್ಲ. ಮಕ್ಕಳು ಇರುವ ತನಕ ಬಿಡುವಿಲ್ಲದೇ ದುಡಿದಿದ್ದ ಜೀವಕ್ಕೀಗ ಬಿಡುವು ಸಿಕ್ಕರೂ ಏನೂ ಮಾಡಲು ಮನಸ್ಸಿಲ್ಲದ ಸ್ಥಿತಿ. ಮರಿ ಹಕ್ಕಿಗಳು ಗೂಡು ಬಿಟ್ಟು ಹೊರ ಹಾರಲು ಆರಂಭಿಸಿದ್ದಾಗ ತಾಯಿ ಹಕ್ಕಿಗೆ ಸಂತೋಷವೇ, ಆದರೆ ಖಾಲಿ ಗೂಡು ನೋಡಿದಾಗ ಮನ ಮುದುಡುತ್ತದೆ. ಹಾಗೆ, ಮಕ್ಕಳು ಸ್ವತಂತ್ರರಾಗಲಿ, ತಮ್ಮ ಕಾಲ ಮೇಲೆ ತಾವು ನಿಲ್ಲಲಿ ಎಂದು ಬಯಸುವ ಪೋಷಕರಿಗೂ, ಖಾಲಿ ಮನೆ ನೋಡಿದಾಗ ಮನಸ್ಸು ಮುದುಡುತ್ತದೆ. ಮನಸ್ಸಿನಲ್ಲಿ ಉಂಟಾಗುವ 'ಶೂನ್ಯಭಾವ'ವನ್ನು ಎದುರಿಸುವುದು ಬಲು ಕಷ್ಟ. ಹೀಗೆ ಖಾಲಿತನದ ತೊಳಲಾಟವನ್ನು 'ಎಮ್ಟಿ ನೆಸ್ಟ್ ಸಿಂಡ್ರೋಮ್' ಎನ್ನುತ್ತಾರೆ. ಈ ಮಾನಸಿಕ ಕ್ಷೋಭೆಯಿಂದ ಏನೇನು ಸಮಸ್ಯೆಗಳು ಆಗುತ್ತವೆ? ಇದರ ಲಕ್ಷಣಗಳೇನು? ನಿಭಾಯಿಸುವ ಬಗೆ ಹೇಗೆ? ಎಂಬ ಬಗ್ಗೆ ಮಾಹಿತಿ ಇಲ್ಲಿದೆ;

ಶೂನ್ಯ ಭಾವವೇ ಲಕ್ಷಣ

ಮಕ್ಕಳು ಮನೆಬಿಟ್ಟು ತಮ್ಮ ತಮ್ಮ ಕೆಲಸಗಳತ್ತ ಹೊರಟ ಮೇಲೆ ಪೋಷಕರಿಗೆ ಜೀವನವೇ ಶೂನ್ಯ ಎನ್ನಿಸುತ್ತದೆ. ಒಂದು ಕಡೆ ಭಯ, ಮತ್ತೊಂದು ಕಡೆ ದುಃಖ, ಇನ್ನೊಂದೆಡೆ ಚಿಂತೆ... ಹೀಗೆ ಮನಸ್ಸಿನಲ್ಲಿ ಏನೇನೋ ತಳಮಳ. ಇವೆಲ್ಲದರ ಜೊತೆಗೆ, 'ಮುಂದೇನು?' ಎಂಬ ಪ್ರಶ್ನೆ ಕಾಡುತ್ತಾ, ಭವಿಷ್ಯದ ಬಗ್ಗೆ ಭಯ ಮೂಡುತ್ತದೆ. ಇವೆಲ್ಲ ಎಮ್ಟಿ ನೆಸ್ಟ್ ಸಿಂಡ್ರೋಮ್‌ನ ಆರಂಭಿಕ ಲಕ್ಷಣಗಳು.

ಈ ಸಿಂಡ್ರೋಮ್ ಸಾಮಾನ್ಯವಾಗಿ 40 ರಿಂದ 50ರ ಆಸುಪಾಸಿನಲ್ಲಿ ಕಾಣಿಸುತ್ತದೆ. ಇದು ಪುರುಷರಿಗಿಂತ ಮಹಿಳೆಯರಲ್ಲೇ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ನಿದ್ರಾಹೀನತೆ, ವಿಷಾದ, ಏಕಾಂಗಿತನ, ದುಃಖ, ಮನಃಸ್ಥಿತಿಯಲ್ಲಿ ಏರುಪೇರು, ಗೊಂದಲ ಮೂಡುವುದು ಇವೆಲ್ಲವೂ ಸಿಂಡ್ರೋಮ್‌ನ ಲಕ್ಷಣಗಳೇ. ಈ ತೊಳಲಾಟ ಎಷ್ಟು ದಿನ ಮುಂದುವರಿಯುತ್ತದೆ ಎಂದು ಹೇಳಲಾಗುವುದಿಲ್ಲ. ಇದೆಲ್ಲ ಅವರವರ ಮನೋಭಾವಕ್ಕೆ ತಕ್ಕಂತೆ ಬದಲಾಗುತ್ತದೆ. ಕೆಲವರಿಗೆ ತಿಂಗಳಿನಲ್ಲೇ ಸರಿಯಾಗಬಹುದು, ಇನ್ನೂ ಕೆಲವರಿಗೆ ವರ್ಷಾನುಗಟ್ಟಲೆ ಮುಂದುವರೆಯಬಹುದು. ಆದರೆ ಈ ಸಮಸ್ಯೆಗಳು ಹಲವು ಕೌಟುಂಬಿಕ ಸಂಘರ್ಷಗಳಿಗೂ ಮೂಲವಾಗಬಹುದು.

ಎದುರಿಸುವ ಬಗೆ ಹೇಗೆ?

- ಬಾಲ್ಯದಿಂದಲೂ ಮಕ್ಕಳನ್ನು ಪ್ರೀತಿಯಿಂದಲೇ ಬೆಳೆಸಿ. ಆದರೆ, ಅತಿಯಾದ ವ್ಯಾಮೋಹ ಬೆಳೆಸಿಕೊಳ್ಳಬೇಡಿ. ಅವರನ್ನು ಸ್ವತಂತ್ರವಾಗಿ ಬೆಳೆಯಲು ಬಿಡಿ. ಅವರ ಬೆಳವಣಿಗೆಯನ್ನು ನೋಡಿ ಸಂತಸಪಡಿ. ಆದರೆ, ಅವರಿಂದ ತುಂಬಾ ನಿರೀಕ್ಷೆಗಳನ್ನಿಟ್ಟುಕೊಳ್ಳಬೇಡಿ.
- ಮಕ್ಕಳು ಮನೆಯಿಂದ ಹೊರಗೆ ಹೋಗುವ ಮೊದಲೇ ಮಾನಸಿಕರಾಗಿ ಸಿದ್ಧರಾಗಿ. ಅವರು ನಮ್ಮಿಂದ ದೂರ ಇರುತ್ತಾರೆ. ಇದೇ ಸತ್ಯ ಎಂದು ಒಪ್ಪಿಕೊಳ್ಳಿ.
- ಸರಿ ಹೋಗುವಂತಹ ಸಮಸ್ಯೆಗಳಿಗೆ ಮಾತ್ರ ಪರಿಹಾರ ಹುಡುಕಲು ಪ್ರಯತ್ನಿಸಿ. ಪರಿಹಾರವಾಗದೆ ಇರುವಂತಹದ್ದನ್ನು ಹಾಗೆಯೇ ಎದುರಿಸಲು ಸಿದ್ಧರಾಗಿ.
- ನಿಮ್ಮ ಸಂಗಾತಿಯ ಮೇಲೆ ಪುನಃ ಒಲವು ಮೂಡಿಸಿಕೊಳ್ಳಿ.

ಏಕಾಂಗಿತನ ಹೋಗಲಾಡಿಸಿದ 'ಸೇವೆ'

ಒಂಟಿತನ ಕಾಡುತ್ತಿದ್ದ ಕಲ್ಪನಾ ಸಂತೋಷ್, ಅದನ್ನು ನಿವಾರಿಸಿಕೊಳ್ಳಲು ಬೆಂಗಳೂರಿನ ಆಶಾ ಇನ್ಫಿನೈಟ್ ಎಂಬ ಸಂಸ್ಥೆಯಲ್ಲಿ ಸ್ವಯಂ ಸೇವಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರು ತಮ್ಮ ಅನುಭವವನ್ನು ಇಲ್ಲಿ ಹಂಚಿಕೊಂಡಿದ್ದಾರೆ; 'ನನ್ನ ಮಗಳಿಗೆ ಮದುವೆಯಾಯಿತು. ಮಗ ವಿದೇಶಕ್ಕೆ ಹೋದ. ಮನೆಯಲ್ಲಿ ಯಾರೂ ಇಲ್ಲ. ಆ ನಂತರ ನನಗೆ ಬಹಳ ಬೇಸರವೆನಿಸುತ್ತಿತ್ತು. ಒಂಥರಾ ಏಕಾಂಗಿತನ. ಏನಾದರೂ ಮಾಡಬೇಕೆಂದು ಮನಸ್ಸು ತುಡಿಯುತ್ತಿತ್ತು. ಆದರೆ ಹೇಗೆ ಎಂದು ಗೊತ್ತಿರಲಿಲ್ಲ. ಆಶಾ ಸಂಸ್ಥೆಯ ಪರಿಚಯವಾದ ನಂತರ ನಿಜಕ್ಕೂ ಸಮಾಧಾನವಾಯಿತು. ಅಲ್ಲಿ ನಾನು ಮಕ್ಕಳಿಗೆ ಪಾಠ ಹೇಳಿ ಕೊಡುತ್ತೇನೆ. ಈ ಮೂಲಕ ಮಕ್ಕಳೊಂದಿಗೆ ಒಂದು ರೀತಿಯ ಅನುಬಂಧ ಏರ್ಪಟ್ಟಿದೆ. ಈಗಂತೂ ನನಗೆ ಬಿಡುವೇ ಇಲ್ಲ. ಹಾಗೆಯೇ ಒತ್ತಡವೂ ಇಲ್ಲ'.

ಅಸ್ತಿತ್ವ ರೂಪಿಸಿಕೊಳ್ಳಿ

ಸಾಮಾನ್ಯವಾಗಿ ಹೆಣ್ಣುಮಕ್ಕಳಿಗೆ ಮದುವೆಯಾದ ಮೇಲೆ ಗಂಡ ಮತ್ತು ಮಕ್ಕಳೇ ಸರ್ವವೂ ಆಗಿಬಿಡುತ್ತಾರೆ. ಅವರ ಸೇವೆಯಲ್ಲೇ ತಮ್ಮನ್ನು ತಾವು ಮರೆತುಬಿಡುತ್ತಾರೆ. ಮಕ್ಕಳು ಬೆಳೆದು ದೊಡ್ಡವರಾಗಿ ಸ್ವತಂತ್ರರಾಗಿ ಜೀವನ ರೂಪಿಸಿಕೊಳ್ಳಲು ಮನೆಯಿಂದ ಹೊರಗೆ ಹೊರಟ ಮೇಲೆ, 'ನಾನು ಇವರಿಗೆ ನನ್ನ ಜೀವನವನ್ನೇ ತೇಯ್ದುಬಿಟ್ಟೆ. ಇವರಿಗೆ ನನ್ನ ಬಗ್ಗೆ ಗಮನವೇ ಇಲ್ಲವಲ್ಲಾ' ಎಂದು ಎನ್ನಿಸುತ್ತದೆ. ಆದ್ದರಿಂದ ಮೊದಲಿನಿಂದಲೂ ತಾಯಂದಿರು ಮಕ್ಕಳ ಜೀವನ ರೂಪಿಸುತ್ತಾ, ತಮ್ಮದೇ ಆದ ಅಸ್ತಿತ್ವವನ್ನು ಕಾಯ್ದಿರಿಸಿಕೊಳ್ಳಬೇಕು. ಆಗ ಮಕ್ಕಳು ನಮ್ಮಿಂದ ದೂರವಾದರೂ, ತಮಗಾಗೇ ಇರುವ ಬದುಕನ್ನು ನಡೆಸಲು ಅನುಕೂಲವಾಗುತ್ತದೆ. ಆಗ ಇಂಥ 'ಶೂನ್ಯ ಭಾವ' ಅಷ್ಟಾಗಿ ಬಾಧಿಸದು.

ಉಷಾ ಮದನ್, ಆಪ್ತ ಸಮಾಲೋಚಕಿ

ಒಂಟಿ ಪೋಷಕರಿಗೆ(ಸಿಂಗಲ್ ಪೇರೆಂಟ್)

ಒಂಟಿ ಪೋಷಕರು ಅಥವಾ ಸಿಂಗಲ್ ಪೇರೆಂಟ್ ಆಗಿದ್ದಾಗ ಈ ಸಮಸ್ಯೆ ಎದುರಿಸುವುದು ಇನ್ನೂ ಕ್ಲಿಷ್ಟಕರವಾಗಿರುತ್ತದೆ. ಒಂಟಿ ಪೋಷಕರಲ್ಲಿ, ಹೆಣ್ಣುಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೆ. ಇಂಥ ಮಾನಸಿಕ ವ್ಯಾಧಿಗಳಿಂದ ಮತ್ತಷ್ಟು ಕುಗ್ಗಿ ಹೋಗುತ್ತಾರೆ. ಈ ಸಮಸ್ಯೆ ಎದುರಿಸಲು, ಪರಿಸ್ಥಿತಿ ನಿಭಾಯಿಸುವುದನ್ನು ಅಭ್ಯಾಸ ಮಾಡಿಕೊಳ್ಳಲು ಪ್ರಯತ್ನಿಸಬೇಕು.

ಪರಿಸ್ಥಿತಿ ನಿಭಾಯಿಸುವುದು ಹೇಗೆ?

- ಒಂಟಿ ಅಥವಾ ಜಂಟಿ, ಯಾರೇ ಆಗಲಿ ಬದಲಾಗುತ್ತಿರುವ 'ಪರಿಸ್ಥಿತಿ'ಯನ್ನು ಒಪ್ಪಿಕೊಳ್ಳಬೇಕು.
- ಮನೆಯಿಂದ ಹೊರಡಲು ತಯಾರಾದ ಮಕ್ಕಳ ಮೇಲೆ ಅತಿಯಾಗಿ ವ್ಯಾಮೋಹ ಇರಿಸಿಕೊಳ್ಳಬೇಡಿ.
- ನೀವು ಹಾಗೂ ನಿಮ್ಮ ಪ್ರೀತಿ ಇನ್ನೂ ಬೇಕು ಎನ್ನುವಂತೆ ಮಕ್ಕಳನ್ನು ಬೆಳೆಸಿ.
- ಹೊಸದೊಂದು ಹವ್ಯಾಸ ರೂಢಿಸಿಕೊಳ್ಳಿ. ನಿಮ್ಮನ್ನು ನೀವು ಮರೆಯುವಷ್ಟು ಹವ್ಯಾಸದಲ್ಲಿ ತೊಡಗಿಕೊಳ್ಳಿ.
- ಈವರೆಗೂ ನಿಮ್ಮ ಜೀವನವನ್ನು ನಿಮ್ಮ ಮಕ್ಕಳಿಗಾಗಿ ಮೀಸಲಿಟ್ಟಿದ್ದಿರಿ. ಇನ್ನು ಮುಂದಿನ ಜೀವನವಿರುವುದು ನಿಮಗಾಗಿ. ಅದನ್ನು ಉಪಯೋಗಿಸಿಕೊಳ್ಳಿ.
- ಇಲ್ಲಿಯವರೆಗೆ ಮನೆ ಮಂದಿಯ ಬೇಕು ಬೇಡಗಳನ್ನು ಪೂರೈಸುತ್ತಾ, ನಿಮ್ಮ ಆಸೆಗಳನ್ನು ಮರೆತಿದ್ದೀರಿ. ಅವುಗಳನ್ನು ಈಡೇರಿಸಿಕೊಳ್ಳಲು ಇದು ಸುಸಮಯ.
- ನಿಮ್ಮದೇ ಆದ ಜೀವನವನ್ನು ರೂಢಿಸಿಕೊಳ್ಳಿ. ಆರೋಗ್ಯದ ಬಗ್ಗೆ ಗಮನ ಕೊಡಿ.
- ಇಲ್ಲಿಯವರೆಗೂ ಮರೆತಿದ್ದ ಚಿಕ್ಕಂದಿನ ಆಸೆಗಳಿಗೆ ನೀರೆರೆಯುವ ಕೆಲಸ ಮಾಡಿ.
- ನಿಮ್ಮದೇ ಆದ ಒಂದು ಸ್ನೇಹಿತರ ಬಳಗವನ್ನು ಸೃಷ್ಟಿಸಿಕೊಳ್ಳಿ.
- ನಿಮ್ಮ ಆಸುಪಾಸಿನಲ್ಲಿ ಸಾಮಾಜಿಕ ಸೇವೆ ಕೈಗೊಳ್ಳುವ ಸಾಕಷ್ಟು ಸಂಘ–ಸಂಸ್ಥೆಗಳಿರುತ್ತವೆ. ಅವುಗಳಲ್ಲಿ ನಿಮ್ಮ ಮನಸ್ಸಿಗೆ ಹೊಂದುವಂತಹ ಸಂಸ್ಥೆಯನ್ನು ಆಯ್ಕೆ ಮಾಡಿಕೊಂಡು ಸೇವಾಕಾರ್ಯದಲ್ಲಿ ತೊಡಗಿಕೊಳ್ಳಿ.

ಒಟ್ಟಾರೆ ಜೀವನದಲ್ಲಿ ಇದೊಂದು ಬದಲಾವಣೆಯ ಪರ್ವ ಕಾಲ (ಟ್ರಾನ್ಸಿಶನ್ ಪಿರಿಯಡ್). ಇದನ್ನು ಒಪ್ಪಿಕೊಂಡು ನಿಭಾಯಿಸುವುದನ್ನು ಅಭ್ಯಾಸ ಮಾಡಿ. ❖

ನಳಪಾಕ

ಗೇರುಹಣ್ಣಿನ ರಸರುಚಿಗಳು

ಇದು ಗೇರುಹಣ್ಣಿನ ಕಾಲ. ಗೇರುಬೀಜಕ್ಕೆ ಹೋಲಿಸಿದರೆ ತಾಜಾಹಣ್ಣಿನ ಬಳಕೆಗೆ ಅಷ್ಟು ಪ್ರಾಮುಖ್ಯತೆ ಇಲ್ಲ. ಅದರ ಗಾಢ ಪರಿಮಳ ಕೆಲವರಿಗೆ ಹಿಡಿಸುವುದಿಲ್ಲ. ಇದಕ್ಕಿರುವ ಗಂಟಲು ಕೆರೆಸುವ ಗುಣ ತಾಜಾಹಣ್ಣನ್ನು ತಿನ್ನದಂತೆ ಹೆದರಿಸುತ್ತದೆ. ಜೊತೆಗೆ ಗೇರುಹಣ್ಣಿನ ರಸರುಚಿಗಳೂ ಕಮ್ಮಿ. ಅಲ್ಲಲ್ಲಿ ಕೆಲವರು ಬಳಸಿದರೂ, ಬಹುತೇಕ ಗೃಹಿಣಿಯರು ಯಾಕೋ ಆ ಬಗ್ಗೆ ಗಮನ ಹರಿಸಿದ್ದು ಕಡಿಮೆ. ಆದರೆ ತಾಜಾ ಗೇರುಹಣ್ಣಿನಿಂದ ಹಲವು ಬಗೆಯ ರುಚಿಕರ ರೆಸಿಪಿಗಳನ್ನು ಮಾಡಬಹುದು. ಈ ಹಣ್ಣಿನ ಕೆಲವು ರಸರುಚಿಗಳನ್ನು ಸೌಖ್ಯ ಮೋಹನ್ ತಲಕಾಲುಕೊಪ್ಪ ಇಲ್ಲಿ ವಿವರಿಸಿದ್ದಾರೆ.

ಗೇರುಹಣ್ಣಿನ ಪಡ್ಡು

ಬೇಕಾಗುವ ಸಾಮಗ್ರಿಗಳು: ಅಕ್ಕಿ – 3 ಕಪ್, ಗೇರುಹಣ್ಣು 5 ರಿಂದ 6, ಅವಲಕ್ಕಿ – 1 ಕಪ್, ಕಾಯಿತುರಿ – 1 ಕಪ್, ಏಲಕ್ಕಿ – 2, ಬೆಲ್ಲ – 1ಕಪ್, ಉಪ್ಪು, ತುಪ್ಪ

ತಯಾರಿಸುವ ವಿಧಾನ: ಅಕ್ಕಿಯನ್ನು 6 ರಿಂದ 6 ಗಂಟೆ ನೆನೆಸಿ. ನಂತರ ಗೇರುಹಣ್ಣು, ಅವಲಕ್ಕಿ, ಕಾಯಿತುರಿ, ಉಪ್ಪು, ಏಲಕ್ಕಿ, ಬೆಲ್ಲ ಹಾಕಿ. ನುಣ್ಣಗೆ ರುಬ್ಬಿ, 2ರಿಂದ 3 ಗಂಟೆ ಹಾಗೇ ಇಡಿ. ಈ ಹಿಟ್ಟು ದೋಸೆಹಿಟ್ಟಿನ ಹದಕ್ಕೆ ಇರಲಿ. ನಂತರ ಪಡ್ಡಿನ ಕಾವಲಿ ಕಾದ ಮೇಲೆ ತುಪ್ಪ ಹಾಕಿ, ಹುಟ್ಟು ಹಾಕಿ ಎರಡೂ ಕಡೆ ಬೇಯಿಸಿ. ತುಪ್ಪದ ಜೊತೆ ತಿನ್ನಿ. ತೆಳುವಾದ ಗೇರುಹಣ್ಣಿನ ಪರಿಮಳ ಬರುವ ಈ ಪಡ್ಡು/ಅಪ್ಪಂ ಬಹಳ ರುಚಿ.

ಗೇರುಹಣ್ಣಿನ ಸಾಸ್ವೆ

ಬೇಕಾಗುವ ಸಾಮಗ್ರಿಗಳು: ಗೇರುಹಣ್ಣು – 2, ಕಾಯಿತುರಿ – 1 ಕಪ್, ಸಾಸಿವೆ – ಕಾಲು ಚಮಚ, ಒಣಮೆಣಸು – 5 ರಿಂದ 6, ಜೀರಿಗೆ – ಕಾಲು ಚಮಚ, ಉಪ್ಪು, ಒಗ್ಗರಣೆಗೆ ಕೊಬ್ಬರಿ ಎಣ್ಣೆ, ಸಾಸಿವೆ, ಜೀರಿಗೆ

ತಯಾರಿಸುವ ವಿಧಾನ: ಮೊದಲು ಗೇರುಹಣ್ಣಿನ ತೊಟ್ಟಿನ ಭಾಗ ತೆಗೆದು ಸಣ್ಣಗೆ ಹೆಚ್ಚಿಕೊಳ್ಳಿ. ನಂತರ ಅದಕ್ಕೆ ಉಪ್ಪು ಹಾಕಿಡಿ. ಬಾಣಲೆಯಲ್ಲಿ ಜೀರಿಗೆ, ಒಣಮೆಣಸು ಹುರಿದು ಅದನ್ನು ಕಾಯಿತುರಿ ಮತ್ತು ಸಾಸಿವೆ ಜೊತೆಗೆ ಸೇರಿಸಿ ಸಣ್ಣಗೆ ರುಬ್ಬಿ. ಅದನ್ನು ಗೇರುಹಣ್ಣಿನ ಭಾಗಕ್ಕೆ ಸೇರಿಸಿ. ಒಗ್ಗರಣೆ ಕೊಡಿ. ಸ್ವಲ್ಪ ಬೆಲ್ಲ ಬೇಕಾದರೆ ಹಾಕಿಕೊಳ್ಳಬಹುದು.

ಗೇರುಹಣ್ಣಿನ ಫ್ರಿಟ್ಟರ್ಸ್

ಬೇಕಾಗುವ ಸಾಮಗ್ರಿಗಳು: ಗೇರುಹಣ್ಣು 4ರಿಂದ 5, ರವೆ – ಅರ್ಧ ಕಪ್, ಕಾಯಿತುರಿ – ಮುಕ್ಕಾಲು ಕಪ್, ಬೆಲ್ಲ – ಕಾಲು ಕಪ್, ಗೋಡಂಬಿ ಚೂರು, ಉಪ್ಪು, ಕರಿಯಲು ಎಣ್ಣೆ, ಏಲಕ್ಕಿಪುಡಿ ಚೂರು

ತಯಾರಿಸುವ ವಿಧಾನ: ಗೇರುಹಣ್ಣಿನ ತೊಟ್ಟಿನ ಭಾಗವನ್ನು ಕತ್ತರಿಸಿ ತೆಗೆದುಹಾಕಿ. ನಂತರ ಉಳಿದ ಭಾಗವನ್ನು ಹೋಳು ಮಾಡಿ, ಅದಕ್ಕೆ ಬೆಲ್ಲ, ಕಾಯಿತುರಿ, ಏಲಕ್ಕಿ ಹಾಕಿ ನುಣ್ಣಗೆ ರುಬ್ಬಿ. ಉಪ್ಪು ಹಾಕಿ. ನಂತರ ರವೆಯನ್ನು ಹಾಕಿ. ನೀರು ಸೇರಿಸುವ ಅಗತ್ಯ ಇಲ್ಲ. ಕೈಯಲ್ಲಿ ತೆಗೆದು ಮೆತ್ತನೆ ಉಂಡೆ ಮಾಡುವ ಹದಕ್ಕಿರಲಿ. ಮುಳ್ಕ/ಸುಟ್ಟವ್ವು ರೀತಿಯಲ್ಲಿ ಎಣ್ಣೆಯಲ್ಲಿ ಕರಿಯಿರಿ. ನಿಜಕ್ಕೂ ಒಳ್ಳೆಯ ರುಚಿ.

ಗೇರುಹಣ್ಣಿನ ತಂಬುಳಿ

ಬೇಕಾಗುವ ಸಾಮಗ್ರಿಗಳು: ಗೇರುಹಣ್ಣು – 5 ರಿಂದ 6, ತೆಂಗಿನತುರಿ – ಒಂದು ದೊಡ್ಡ ಕಪ್, ಉಪ್ಪು, ಸೂಜಿಮೆಣಸು/ಗಾಂಧಾರಿಮೆಣಸಿನ ಪೇಸ್ಟ್, ಒಗ್ಗರಣೆಗೆ – ಕೊಬ್ಬರಿ ಎಣ್ಣೆ, ಜೀರಿಗೆ, ಸಾಸಿವೆ, ಒಣಮೆಣಸು

ತಯಾರಿಸುವ ವಿಧಾನ: ಮೊದಲು ಗೇರುಹಣ್ಣನ್ನು ಹಿಂಡಿ ರಸ ತೆಗೆದಿಟ್ಟುಕೊಳ್ಳಿ. ಅದಕ್ಕೆ ಉಪ್ಪು ಸೇರಿಸಿ. ತೆಂಗಿನತುರಿಯನ್ನು ರುಬ್ಬಿ, ತೆಂಗಿನಹಾಲನ್ನು ತೆಗೆಯಿರಿ. ಇದನ್ನು ಗೇರುಹಣ್ಣಿನ ರಸಕ್ಕೆ ಸೇರಿಸಿ. ಸೂಜಿಮೆಣಸಿನ ಪೇಸ್ಟ್ ಅನ್ನು ಹಾಕಿ. ನಂತರ ಒಗ್ಗರಣೆ ಕೊಡಿ. ಇದನ್ನು ಹಾಗೇ ಕುಡಿಯಬಹುದು. ಅನ್ನಕ್ಕೂ ಉಪಯೋಗಿಸಬಹುದು.

ಗೇರುಹಣ್ಣಿನ ಹಲ್ವಾ

ಬೇಕಾಗುವ ಸಾಮಗ್ರಿಗಳು: ಗೇರುಹಣ್ಣು 5-6, ಸಕ್ಕರೆ – 1 ಕಪ್, ಕೇಸರಿ, ಗೋಡಂಬಿ ಚೂರುಗಳು – ಅರ್ಧ ಕಪ್, ಕಾರ್ನ್‌ಫ್ಲೋರ್ – 1/2ಕಪ್, ಚಿಟಿಕೆ ಉಪ್ಪು, ತುಪ್ಪ – 1ಕಪ್

ತಯಾರಿಸುವ ವಿಧಾನ: ಗೇರುಹಣ್ಣಿನ ತೊಟ್ಟಿನ ಭಾಗವನ್ನು ಕತ್ತರಿಸಿ ಮಿಕ್ಸಿಗೆ ಹಾಕಿ. ಚಿಟಿಕೆ ಉಪ್ಪು ಸೇರಿಸಿ ನುಣ್ಣಗೆ ರುಬ್ಬಿ. ನಂತರ ದಪ್ಪತಳದ ಬಾಣಲೆಗೆ ಹಾಕಿ. 5 ನಿಮಿಷ ಮಗುಚಿ. ನಂತರ ಸಕ್ಕರೆ ಹಾಕಿ. ಚೆನ್ನಾಗಿ ಮಗುಚಿ. ಕಾರ್ನ್‌ಫ್ಲೋರ್‌ಗೆ ನೀರು ಸೇರಿಸಿ ಕದಡಿ ಗೇರುಹಣ್ಣಿನ ಮಿಶ್ರಣಕ್ಕೆ ಹಾಕಿ. ಚೆನ್ನಾಗಿ ತಿರುಗಿಸುತ್ತಾ ಇರಿ. ಮಧ್ಯೆ-ಮಧ್ಯೆ ತುಪ್ಪ ಸೇರಿಸಿಕೊಳ್ಳುತ್ತಾ ಹೋಗಿ. ತುಪ್ಪದಲ್ಲಿ ಹುರಿದ ಗೋಡಂಬಿಯನ್ನು ಹಾಕಿ. ಕೇಸರಿಯನ್ನು ಸೇರಿಸಿ. ತಳ ಬಿಡುವವರೆಗೆ ಮಗುಚುತ್ತಾ ಹೋಗಿ. ಗಟ್ಟಿಯಾದ ಮೇಲೆ ಒಂದು ಪ್ಲೇಟಿಗೆ ಹಾಕಿ. ಸ್ವಲ್ಪ ತಣಿದ ನಂತರ ನಿಮಗೆ ಬೇಕಾದ ಆಕಾರದಲ್ಲಿ ಕತ್ತರಿಸಿ.

40ರ ನಂತರ ಸ್ತನದಲ್ಲಿ ನೋವು ಅಪಾಯವೇ?

ಸ್ಪಂದನ

ಡಾ. ವೀಣಾ ಎಸ್. ಭಟ್

1. ನನಗೆ 47 ವರ್ಷ. ಕಳೆದ ಒಂದು ವರ್ಷದಿಂದ ಒಂದೂವರೆಯಿಂದ ಮೂರು ತಿಂಗಳ ಅಂತರದಲ್ಲಿ ಒಮ್ಮೆ ಮುಟ್ಟಾಗುತ್ತಿದೆ ಮತ್ತು ಆಗಾಗ ಸ್ತನಗಳ ನೋವು ಬರುತ್ತಿದೆ. ಗರ್ಭಕೋಶ ಹಾಗೂ ಸ್ತನದ ಸ್ಕ್ಯಾನಿಂಗ್ ಮಾಡಿಸಿದ್ದೇನೆ. ರಿಪೋರ್ಟ್ ನಾರ್ಮಲ್ ಎಂದು ಬಂದಿದೆ. ದಯವಿಟ್ಟು ಸಲಹೆ ಕೊಡಿ.

ಹೆಸರು, ಊರು ತಿಳಿಸಿಲ್ಲ

ನಿಮಗೆ ಈಗ 47 ವರ್ಷವಾದ್ದರಿಂದ ನೀವು ಋತುಬಂಧದ ಆಸುಪಾಸಿನಲ್ಲಿದ್ದೀರಿ. ಈ ಸಮಯದಲ್ಲಿ ಅಂಡಾಶಯದಿಂದ ಉತ್ಪತ್ತಿಯಾಗುವ ಹೆಣ್ತನದ ಹಾರ್ಮೋನುಗಳಾದ ಇಸ್ಟ್ರೋಜನ್ ಮತ್ತು ಪ್ರೊಜೆಸ್ಟಿರಾನ್ ಹಾರ್ಮೋನುಗಳು ನಿಧಾನವಾಗಿ ಕ್ಷೀಣಿಸುತ್ತಾ ಬರುತ್ತದೆ ಮತ್ತು ಈ ಸಂದರ್ಭದಲ್ಲಿ ರಕ್ತದಲ್ಲಿ ಈ ಹಾರ್ಮೋನುಗಳ ಪ್ರಮಾಣ ಅನಿರೀಕ್ಷಿತವಾದ ಏರಿಳಿತಕ್ಕೆ ಒಳಗಾಗುವುದರಿಂದ ಇದು ಸ್ತನದ ಅಂಗಾಂಶದ ಮೇಲೆ ಪರಿಣಾಮ ಬೀರಿ ನೋವನ್ನುಂಟುಮಾಡುತ್ತದೆ. ಇಂತಹ ನೋವು ಮುಟ್ಟು ನಿಂತ ಮೇಲೆ ತಾನೇ ತಾನಾಗಿ ಕಡಿಮೆಯಾಗುತ್ತದೆ. ನಿಮ್ಮ ತೂಕ ಅತಿಯಾಗಿದ್ದರೂ ಮತ್ತು ಸ್ತನದ ಗಾತ್ರ ಹೆಚ್ಚಿದ್ದವರಲ್ಲಿ ಕೂಡ ಇಂತಹ ನೋವು ಹೆಚ್ಚಾಗಿ ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಸ್ತನದಲ್ಲಿ ಸಿಸ್ಟ್‌ಗಳು ಅಥವಾ ಸೌಮ್ಯಗಡ್ಡೆಗಳು ಇದ್ದಾಗಲೂ ಇಂತಹ ನೋವು ಕಾಣಿಸಿಕೊಳ್ಳಬಹುದು. ಋತುಬಂಧದ ಸಮಯದಲ್ಲಿ ಈ ಹೆಣ್ತನದ ಹಾರ್ಮೋನುಗಳ ಏರಿಳಿತದಿಂದಲೇ ನಿಮಗೆ ಮುಟ್ಟಿನ ಅವಧಿಯಲ್ಲಿ ವ್ಯತ್ಯಾಸವಾಗುತ್ತಿರಬಹುದು. ನಿಮ್ಮ ಸ್ಕ್ಯಾನಿಂಗ್ ವರದಿಗಳು ನಾರ್ಮಲ್ ಇರುವುದರಿಂದ ಚಿಂತೆ ಬೇಡ. ಯಾವುದಕ್ಕೂ ತಜ್ಞವೈದ್ಯರಿಗೆ ಸಲಹೆ ಚಿಕಿತ್ಸೆ ಅವಶ್ಯವಿದ್ದಲ್ಲಿ ಪಡೆಯಿರಿ. ತೂಕ ಹೆಚ್ಚಿದ್ದರೆ ಸಮತೂಕ ಹೊಂದಲು ಪ್ರಯತ್ನಿಸಿ. ಮುಟ್ಟು ನಿಲ್ಲುತ್ತಿದ್ದ ಹಾಗೆ ನಿಮ್ಮ ಸಮಸ್ಯೆ ಪರಿಹಾರವಾಗುತ್ತದೆ.

2. ನನಗೆ 31 ವರ್ಷ. ತುಂಬಾ ವರ್ಷಗಳಿಂದ ಋತುಚಕ್ರದ ಒಂದು ವಾರದ ನಂತರ ಬಿಳಿಸೆರಗು ಅತಿಯಾಗಿ ನೀರಿನ ಹಾಗೆ 4 ದಿನ ಹೋಗುತ್ತದೆ. ಹಲವು ತಜ್ಞ ವೈದ್ಯರಿಗೆ ತೋರಿಸಿದ್ದೇನೆ. ಪ್ರಯೋಜನವೂ ಆಗಿಲ್ಲ. ದಯವಿಟ್ಟು ಪರಿಹಾರ ತಿಳಿಸಿ.

ಹೆಸರು, ಊರು ತಿಳಿಸಿಲ್ಲ

ಬಿಳಿಮುಟ್ಟು ಹೋಗಲು ಸೋಂಕಿನ ಕಾರಣವಿರಬಹುದು, ಇಲ್ಲವೇ ಕೆಲವೊಮ್ಮೆ ಗರ್ಭಕೊರಳಿನಲ್ಲಿ ಗಾಯವೇನಾದರೂ ಆಗಿದ್ದಲ್ಲಿ ಕೂಡ ಬಿಳಿಮುಟ್ಟು ಹೋಗಬಹುದು. ಅಂತಹ ಸ್ರಾವವು ವಾಸನೆ ಹಾಗೂ ಬಣ್ಣರಹಿತವಾಗಿರುತ್ತದೆ. ಯಾವುದಕ್ಕೂ ನೀವು ತಜ್ಞವೈದ್ಯರ ಹತ್ತಿರ ಸ್ಪೆಕ್ಯೂಲಂ ಎನ್ನುವ ಉಪಕರಣದಿಂದ ಗರ್ಭಕೊರಳನ್ನು ಪರೀಕ್ಷಿಸಿಕೊಳ್ಳಿ. ಇದು ಹೊರರೋಗಿ ವಿಭಾಗದಲ್ಲಿ ಮಾಡಬಹುದಾದ ಸರಳವಾದ ಪರೀಕ್ಷೆ. ಇದರಿಂದ ನಿಮ್ಮ ಬಿಳಿಸೆರಗಿಗೆ ಕಾರಣ ಗೊತ್ತಾಗಬಹುದು. ಇದರಿಂದ ಪರಿಹಾರ ಸಿಗಬಹುದು.

3. ನನಗೆ 29 ವರ್ಷ. ನವೆಂಬರ್‌ನಲ್ಲಿ ಪ್ರೆಗ್ನೆಸಿ ಪಾಸಿಟಿವ್ ಆಗಿತ್ತು. ಆದರೆ ಬೇಡ ಅಂತ ಗರ್ಭಪಾತ ಮಾಡಿಸಿಕೊಂಡೆ. ಆದರೆ ಈಗ 2 ತಿಂಗಳಿನಿಂದ ಋತುಚಕ್ರದಲ್ಲಿ ಏರುಪೇರಾಗಿದೆ. ಇದನ್ನು ಸರಿಪಡಿಸಬಹುದೇ?

ಲಕ್ಷ್ಮೀ, ಬೆಂಗಳೂರು

ಗರ್ಭಪಾತದ ನಂತರ ಋತುಚಕ್ರದಲ್ಲಿ ಏರುಪೇರಾಗಬಹುದು. ಕೆಲವೊಮ್ಮೆ ಟ್ಯೂಬ್‌ಬ್ಲಾಕ್ ಕೂಡ ಆಗುತ್ತದೆ. ಹಾಗಾಗಿ ಅನಪೇಕ್ಷಿತ ಗರ್ಭಧಾರಣೆಯಾಗದ ಹಾಗೆ ನೀವು ಹಾಗೂ ನಿಮ್ಮಂತವರೆಲ್ಲಾ ಸದಾ ಜಾಗರೂಕರಾಗಿರಬೇಕು. ಸೂಕ್ತ ಸಂತಾನ ನಿಯಂತ್ರಣ ಕ್ರಮಗಳನ್ನು ಅನುಸರಿಸಿ, ಲೈಂಗಿಕ ಸುಖವನ್ನು ಅನುಭವಿಸಿ. ಯಾವಾಗ, ಎಷ್ಟು ಮಗುವನ್ನು ಪಡೆಯಬೇಕೆಂಬ ಪರಿಜ್ಞಾನ ಹೊಂದುವುದು ಪ್ರತಿ ದಂಪತಿಗೂ ಅಗತ್ಯವಿದೆ. ಋತುಚಕ್ರ ಕಾಲಕ್ರಮೇಣ ಸರಿ ಹೋಗಬಹುದು. ನಂತರವೂ ಸರಿಯಾಗಿಲ್ಲ ಎಂದರೆ ತಜ್ಞ ವೈದ್ಯರ ಸಲಹೆಯನ್ನು ಪಡೆಯಿರಿ.

4. ನನಗೆ ಮೊದಲನೆ ಮಗು ಹೆರಿಗೆಯಾದ ನಂತರ ಋತುಚಕ್ರದಲ್ಲಿ ಏರುಪೇರಾಗಿದೆ ಮತ್ತು ಮುಟ್ಟಿಗೆ 3 ದಿನ ಮೊದಲು ಸ್ವಲ್ಪ ಕೆಂಪು ಹಾಗೂ ಕಂದುಬಣ್ಣದ ಸ್ರಾವವಾಗಿ ನಾಲ್ಕನೇ ದಿನದ ನಂತರ 3 ದಿನ ಸರಿಯಾಗಿ ರಕ್ತಸ್ರಾವವಾಗುತ್ತದೆ. ಕಳೆದ ನಾಲ್ಕು ವರ್ಷದಿಂದ ಹೀಗೆ ಯಾಕಾಗುತ್ತದೆ? ನನಗೆ ತಿಂಗಳಿಗೊಮ್ಮೆ ಸಹಜ ಋತುಚಕ್ರ ಆಗುತ್ತಿದೆ.

ಹೆಸರು, ಊರು ತಿಳಿಸಿಲ್ಲ

ಕಳೆದ ನಾಲ್ಕು ವರ್ಷದಿಂದ ನಿಯಮಿತವಾಗಿ ನಿಮಗೆ ಈ ತರಹ ಋತುಸ್ರಾವ ಆಗುತ್ತಿದೆ ಎಂದರೆ ಈ ಬಗ್ಗೆ ನೀವು ಚಿಂತಿಸಬೇಡಿ. ಈ ತರಹದ ಸ್ರಾವ ರಕ್ತದಲ್ಲಿ ಹೆಣ್ತನದ ಹಾರ್ಮೋನುಗಳ ಮಟ್ಟ ಕುಸಿದು ರಕ್ತಸ್ರಾವವಾಗುವಾಗ (ವಿತ್‌ಡ್ರಾಲ್ ಬ್ಲೀಡಿಂಗ್) ಕೆಲವರಿಗೆ ಹೀಗಾಗಬಹುದು ಚಿಂತಿಸಬೇಡಿ.

5.1. ನನ್ನ ಮಗಳಿಗೆ ಸಮಾರು 9ನೇ ತರಗತಿಯಿಂದ ಪಿಸಿಓಡಿ ಸಮಸ್ಯೆ ಶುರುವಾಗಿತ್ತು. ಹಲವು ಗೈನಕಾಲಜಿಸ್ಟ್ ಬಳಿ ತೋರಿಸಿದ್ದೇನೆ ಹಾಗೂ ಆಯುರ್ವೇದ ಔಷಧಿಗಳನ್ನೂ ಸೇವಿಸಿದ್ದೇನೆ. ಆದರೆ ಅವಳ ತೂಕ ಹೆಚ್ಚಾಗುತ್ತಾಲೇ ಇದೆ. ಪಿಸಿಓಡಿ ಪ್ರಾಬ್ಲಮ್ ಗುಣಪಡಿಸಲು ಸಲಹೆ ನೀಡಿ.

ಹೆಸರು, ಊರು ಬೇಡ

5.2. ನಾನು 2 ವರ್ಷದಿಂದ ಮಗು ಮಾಡಿಕೊಳ್ಳಲು ಪ್ರಯತ್ನ ಮಾಡುತ್ತಿದ್ದೇನೆ. ಆದರೆ ಆಗುತ್ತಿಲ್ಲ. ನನಗೆ ನಿರಂತರವಾಗಿ ಋತುಚಕ್ರವಾಗುತ್ತಿಲ್ಲ. ಅಲ್ಲದೇ ಪಿಸಿಓಡಿ ಸಮಸ್ಯೆಯೂ ಇದೆ. ಅದಕ್ಕೆ ಪರಿಹಾರ ತಿಳಿಸಿ.

ಹೆಸರು, ಊರು ಬೇಡ

ಪಿಸಿಓಡಿ ಬಗ್ಗೆ ಸಾಕಷ್ಟು ಬಾರಿ ಹಿಂದಿನ ಅಂಕಣಗಳಲ್ಲಿ ಸಲಹೆಯನ್ನು ಕೊಟ್ಟಿರುತ್ತೇನೆ. ಉತ್ತಮ ಜೀವನಶೈಲಿಯನ್ನು ಅನುಸರಿಸಿ ತಜ್ಞವೈದ್ಯರ ಸಲಹೆಯ ಮೇರೆಗೆ ಚಿಕಿತ್ಸೆ ತೆಗೆದುಕೊಂಡು ನಿಮ್ಮ ಸಮಸ್ಯೆ ಪರಿಹರಿಸಿಕೊಳ್ಳಿ. ತೂಕ ಹೆಚ್ಚಿದ್ದರೆ ಕೇವಲ ಶೇ 10ರಷ್ಟು ತೂಕ ಕಡಿಮೆ ಮಾಡಿಕೊಂಡರೂ ನಾವು ಕೊಡುವ ಔಷಧದ ಪರಿಣಾಮ ಗಮನಾರ್ಹವಾಗಿ ಹೆಚ್ಚಾಗುತ್ತದೆ. ಸತತ ಪ್ರಯತ್ನದಿಂದ ನೀವು ಆಹಾರ ನಿಯಂತ್ರಣ ಜೊತೆಗೆ ನಿಯಮಿತ ವ್ಯಾಯಾಮ, ರಾತ್ರಿ 6 ರಿಂದ 8 ತಾಸು ನಿದ್ರೆ, ಅಳವಡಿಸಿಕೊಂಡು ಜೀವನಶೈಲಿ ಸುಧಾರಿಸಿಕೊಂಡರೆ ಮಾತ್ರ ಪಿಸಿಓಡಿ ಜಯಿಸಲು ಸಾಧ್ಯ. ❖

ಸ್ಪಂದನ... ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳಿಸಬಹುದು.

ಅಧಿಕವಾದ ಕರ ಭಾರ, ಕಾಗದದ ಕೊರತೆ ● ಓದುಗರಿಗೂ ಬೆಲೆ ಏರಿಕೆ ಬಿಸಿ

ಪುಸ್ತಕೋದ್ಯಮಕ್ಕೆ ಜಿಎಸ್‌ಟಿ 'ಗ್ರಹಣ'

● ಎಸ್. ರವಿಪ್ರಕಾಶ್

ಬೆಂಗಳೂರು: ಜಿಎಸ್‌ಟಿಯ ಅಧಿಕ ಹೊರೆ, ಮುದ್ರಣ ಕಾಗದದ ಕೊರತೆ ಮತ್ತು ಸರ್ಕಾರದ ಅಸಹಕಾರದ ಮಧ್ಯೆ ಕನ್ನಡ ಪುಸ್ತಕೋದ್ಯಮ ನಲುಗಿದೆ. ಮುದ್ರಣ ಕಾಗದ ಇಲ್ಲದೇ ಪುಸ್ತಕಗಳ ಮುದ್ರಣಕ್ಕೂ ಗರ ಬಡಿದಿದೆ.

ಏಪ್ರಿಲ್ 23 ವಿಶ್ವ ಪುಸ್ತಕ ದಿನ. ಆದರೆ, ಈ ವರ್ಷ ಈ ದಿನಾಚರಣೆಯನ್ನು ಉತ್ಸಾಹದಿಂದ ಆಚರಿಸುವ ಸ್ಥಿತಿಯಲ್ಲಿ ಪುಸ್ತಕೋದ್ಯಮಿಗಳು ಇಲ್ಲ. ಪುಸ್ತಕದ ಪ್ರೇಮಿಗಳೂ ಇಲ್ಲ. ಏಕೆಂದರೆ, ಪುಸ್ತಕಗಳ ಬೆಲೆ ಏರಿಕೆಯಿಂದ ಗ್ರಾಹಕರ ಜೇಬು ಸುಡುವಂತಾಗಿದೆ. ಪುಸ್ತಕೋದ್ಯಮಿಗಳು ವಿವಿಧ ಸಮಸ್ಯೆಗಳ ಸಂಕಷ್ಟದ ಬಲೆಯಲ್ಲಿ ಸಿಲುಕಿಕೊಂಡಿದ್ದಾರೆ.

ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದಾಗ ಅತಿಥಿಗಳಿಗೆ ಸರ್ಕಾರದ ವತಿಯಿಂದ ಹಾರ-ತುರಾಯಿಗಳ ಬದಲಿಗೆ ಪುಸ್ತಕಗಳನ್ನು ಕೊಡುಗೆಯಾಗಿ ನೀಡುವ ಹೊಸ ಪದ್ಧತಿ ನಾಂದಿ ಹಾಡಿದರೂ, ಆ ಬಳಿಕ ಪುಸ್ತಕೋದ್ಯಮಕ್ಕೆ ಹೆಚ್ಚಿನ ಅನುಕೂಲ ಮಾಡಿಲ್ಲ ಎಂಬ ಕೊರಗು ವಲಯದಲ್ಲಿದೆ.

> ಪುಸ್ತಕ ಓದುವುದನ್ನು ಉತ್ತೇಜಿಸಲು ಸರ್ಕಾರವು ಶಾಲೆಗಳಲ್ಲಿ ಗ್ರಂಥಾಲಯ ಅವಧಿ ನಿಗದಿ ಮಾಡಿ, ಪುಸ್ತಕ ಓದಲು ವಿದ್ಯಾರ್ಥಿಗಳಿಗೆ ಉತ್ತೇಜನ ನೀಡಬೇಕು
>
> **ಪ್ರಕಾಶ್ ಕಂಬತ್ತಹಳ್ಳಿ,** ಕನ್ನಡ ಪುಸ್ತಕ ಪ್ರಕಾಶಕರ ಸಂಘದ ಅಧ್ಯಕ್ಷ

ಜಿಎಸ್‌ಟಿಯ ಹೊರೆ: ಪುಸ್ತಕೋದ್ಯಮಕ್ಕೆ ಜಿಎಸ್‌ಟಿ ಹೊರೆ ಅಧಿಕವಾಗಿದೆ. ಪುಸ್ತಕ ರಾಯಧನದ (ರಾಯಲ್ಟಿ) ಮೇಲೆ ಜಿಎಸ್‌ಟಿ ಶೇ 12 ರಿಂದ ಶೇ 18 ಕ್ಕೆ ಏರಿಕೆ ಮಾಡಲಾಗಿದೆ. ಮುದ್ರಣ ಕಾಗದದ ಮೇಲಿನ ಜಿಎಸ್‌ಟಿ ಶೇ 5 ರಿಂದ ಶೇ 18 ಕ್ಕೆ ಏರಿಕೆ ಆಗಿದೆ. ಜಾಬ್ ವರ್ಕ್ ಜಿಎಸ್‌ಟಿಯೂ ಶೇ 18 ಕ್ಕೆ ನಿಗದಿ ಮಾಡಲಾಗಿದೆ. 'ಇಷ್ಟಿದ್ದರ ಪರಿಣಾಮ ₹200 ಬೆಲೆಯ ಪುಸ್ತಕಕ್ಕೆ ₹400 ನಿಗದಿ ಮಾಡಬೇಕಾಗಿದೆ' ಎಂದು ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷ ಪ್ರಕಾಶ್ ಕಂಬತ್ತಹಳ್ಳಿ 'ಪ್ರಜಾವಾಣಿ'ಗೆ ತಿಳಿಸಿದರು.

ಇಂದು ವಿಶ್ವ ಪುಸ್ತಕ ದಿನ

ಪುಸ್ತಕ ಅಂತಿಮ ಉತ್ಪನ್ನವಾಗಿ ಹೊರ ಬರುವುದಕ್ಕಿಂತ ಮೊದಲೇ ಜಿಎಸ್‌ಟಿ ಪಾವತಿಸಬೇಕು. ಒಂದು ಅಂದಾಜಿನ ಪ್ರಕಾರ ₹400 ಮುಖ ಬೆಲೆ ಇರುವ ಪುಸ್ತಕದ ಒಂದು ಸಾವಿರ ಪ್ರತಿ ಮುದ್ರಿಸುವುದಾದಲ್ಲಿ ₹7,200 ರಾಯಧನ(ರಾಯಲ್ಟಿ) ಜಿಎಸ್‌ಟಿ ಪಾವತಿ ಮಾಡಬೇಕಾಗುತ್ತದೆ. ಪುಸ್ತಕೋದ್ಯಮದ ಮೇಲಿನ ಜಿಎಸ್‌ಟಿ ಕೈಬಿಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ರಾಷ್ಟ್ರೀಯ ಮಟ್ಟದಲ್ಲೇ ಮನವಿ ಸಲ್ಲಿಸಲಾಗಿದೆ. ಈ ಹೊರೆಯಿಂದ ಮುಕ್ತಿ ಸಿಗಬೇಕು ಎಂದರು.

ಮುದ್ರಣ ಕಾಗದ ಸಿಗುತ್ತಿಲ್ಲ: 'ರಷ್ಯಾ-ಉಕ್ರೇನ್ ಯುದ್ಧ ಮತ್ತು ಚೀನಾದಲ್ಲಿ ಕೋವಿಡ್ ಕಾರಣದಿಂದ ಈಗ ಪುಸ್ತಕ ಮುದ್ರಣ ಕಾಗದ ಸಿಗುತ್ತಿಲ್ಲ. ಕಾಗದದ ಬೆಲೆಯೂ ದಿನದಿಂದ ದಿನಕ್ಕೆ ಏರಿಕೆ ಆಗುತ್ತಿದೆ. ಹೆಚ್ಚು ಬೆಲೆ ಕೊಡುತ್ತೇವೆ ಎಂದರೂ ಕಾಗದ ಸಿಗದ ಸ್ಥಿತಿ ನಿರ್ಮಾಣವಾಗಿದೆ. ಪುಸ್ತಕ ಮುದ್ರಣ ನಿಲ್ಲುವ ಸ್ಥಿತಿ ಬಂದಿದೆ' ಎಂದು ಅವರು ಹೇಳಿದರು.

ಗ್ರಂಥಾಲಯ ಇಲಾಖೆ ಏಕ ಗವಾಕ್ಷಿ ಯೋಜನೆಯಡಿ ಪುಸ್ತಕಗಳನ್ನು ಖರೀದಿ ಮಾಡುತ್ತದೆ. 2019ರ ಸಾಲಿಗೆ ಖರೀದಿ ಮಾಡಿದೆ. ಆ ಬಳಿಕ ಖರೀದಿ ಆಗಿಲ್ಲ. 2019 ರಲ್ಲಿ ಖರೀದಿ ಮಾಡಿದ ಬಿಲ್ ₹18 ಕೋಟಿ. ಇದರಲ್ಲಿ ₹5.90 ಕೋಟಿ ಮಾರ್ಚ್‌ನಲ್ಲಿ ಬಿಡುಗಡೆ ಮಾಡಿದೆ. ಉಳಿದ ₹12 ಕೋಟಿ ಬಿಲ್ ಪಾವತಿ ಆಗಿಲ್ಲ. ಅಲ್ಲದೆ, ಪುಸ್ತಕ ಬೆಲೆ ನಿಗದಿಯೂ ಪರಿಷ್ಕರಣೆ ಆಗಿಲ್ಲ. ಒಂದು ಪುಟಕ್ಕೆ 70 ಪೈಸೆ ನಿಗದಿ ಮಾಡಿ ಹಲವು ವರ್ಷಗಳೇ ಕಳೆದಿವೆ. ಅದನ್ನು ಪರಿಷ್ಕರಿಸಿಲ್ಲ. ₹1 ಮಾಡಬೇಕು ಎಂಬುದು ನಮ್ಮ ಬೇಡಿಕೆ ಎಂದು ಕಂಬತ್ತಹಳ್ಳಿ ಅವರು ವಿವರಿಸಿದರು.

ಡಿಜಿಟಲೀಕರಣದಿಂದ ಕುತ್ತು

ಕರ್ನಾಟಕ ರಾಜ್ಯ ಗ್ರಂಥಾಲಯ ಇಲಾಖೆಯು ಡಿಜಿಟಲೀಕರಣಕ್ಕೆ ಮೊರೆ ಹೋಗಿದ್ದರಿಂದ ಕನ್ನಡ ಪುಸ್ತಕಗಳ ಖರೀದಿಯ ಮೇಲೆ ಪರಿಣಾಮ ಬೀರಿದೆ ಎನ್ನುತ್ತಾರೆ ಪ್ರಕಾಶಕ ಸೃಷ್ಟಿ ನಾಗೇಶ್.

ಒಂದು ಪುಸ್ತಕದ ಹಲವು ಪ್ರತಿಗಳನ್ನು ಖರೀದಿ ಮಾಡುತ್ತಿದ್ದ ಗ್ರಂಥಾಲಯ ಇನ್ನು ಮುಂದೆ ಹೆಚ್ಚು ಪ್ರತಿಗಳ ಖರೀದಿಗೆ ಕಡಿವಾಣ ಹಾಕುವ ಸಾಧ್ಯತೆ ಇದೆ. ಅಷ್ಟೇ ಅಲ್ಲದೆ, ಡಿಜಿಟಲ್ ಗ್ರಂಥಾಲಯದ ನೋಂದಣಿ ಸಂಖ್ಯೆಯನ್ನು ಲಕ್ಷಗಟ್ಟಲೆ ತೋರಿಸಲಾಗಿದೆ. ಆದರೆ, ಅಷ್ಟು ಜನ ಡಿಜಿಟಲ್ ಪುಸ್ತಕ ಓದುತ್ತಾರೆಯೇ ಎಂಬ ಸಂಶಯವಿದೆ. ಗ್ರಂಥಾಲಯದಲ್ಲಿ ಒಂದು ಡೆಸ್ಕ್ ಟಾಪ್ ಇಟ್ಟು, ಡಿಜಿಟಲ್ ಪುಸ್ತಕ ಓದಿ ಎನ್ನುತ್ತಾರೆ ಎಂದು ವಿವರಿಸಿದರು.

'ರೈಲಿನಲ್ಲಿ ಸೈದ್ಧಾಂತಿಕ ಪತ್ರಿಕೆ ವಿತರಣೆ: ತನಿಖೆಗೆ ಆದೇಶ

ನವದೆಹಲಿ: ಬೆಂಗಳೂರು-ಚೆನ್ನೈ ಮಾರ್ಗದ ಶತಾಬ್ದಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಪ್ರಯಾಣಿಕರಿಗೆ ಒಂದು ಸಿದ್ಧಾಂತವನ್ನು ಪ್ರಚಾರ ಮಾಡುವ 'ದ ಆರ್ಯಾವರ್ತ ಎಕ್ಸ್‌ಪ್ರೆಸ್' ಎಂಬ ದಿನಪತ್ರಿಕೆ ವಿತರಣೆ ಮಾಡಿರುವುದು ವಿವಾದಕ್ಕೆ ಕಾರಣವಾಗಿದೆ. ಈ ಬಗ್ಗೆ ಭಾರತೀಯ ರೈಲ್ವೆ ತನಿಖೆಗೆ ಆದೇಶಿಸಿದೆ.

ಈ ಬಗ್ಗೆ ಟ್ವೀಟ್ ಮಾಡಿದ್ದ ಲಿಂಗ ಸಮಾನತೆ ಚಳವಳಿಗಾರ್ತಿ ಗೋಪಿಕಾ ಬಾಷಿ ಅವರು, ಬೆಂಗಳೂರು-ಚೆನ್ನೈ ಶತಾಬ್ದಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಪ್ರಯಾಣಿಕರಿಗೆ 'ದಿ ಆರ್ಯಾವರ್ತ ಎಕ್ಸ್‌ಪ್ರೆಸ್' ದಿನ ಪತ್ರಿಕೆ ನೀಡಲಾಯಿತು. ಈವರೆಗೆ ಈ ಪತ್ರಿಕೆ ಹೆಸರನ್ನು ನಾನು ಕೇಳಿಲ್ಲ. ಐಆರ್‌ಸಿಟಿಸಿ 'ಇದಕ್ಕೆ ಹೇಗೆ ಅನುಮತಿ ನೀಡಿದೆ' ಎಂದು ಪ್ರಶ್ನಿಸಿದ್ದರು.

'ಇದಕ್ಕೆ ಕಾರಣರಾದವರ ವಿರುದ್ಧ ಕ್ರಮಕೈಗೊಳ್ಳಲಾಗುತ್ತದೆ. ದ ಆರ್ಯಾವರ್ತ' ಎಕ್ಸ್‌ಪ್ರೆಸ್ ಪತ್ರಿಕೆಯು ಐಆರ್‌ಸಿಟಿಸಿ ಅನುಮೋದಿಸಿದ ಪತ್ರಿಕೆಗಳ ಪಟ್ಟಿಯಲ್ಲಿ ಇಲ್ಲ' ಎಂದು ಐಆರ್‌ಸಿಟಿಸಿಯ ವಕ್ತಾರ ಆನಂದ್ ಝಾ ಹೇಳಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಪ್ರಜಾವಾಣಿಯಲ್ಲಿ ನೇರಪ್ರಸಾರ
ಇಂದು
ಗಾಂಧಿ ಕ್ಲಾಸು
ಸೆಲೆಬ್ರಿಟಿ LIVE
ಕುಂ.ವೀರಭದ್ರಪ್ಪ
ಸಾಹಿತಿ, ಕಥೆಗಾರ

ಬೆಳಿಗ್ಗೆ 11 ರಿಂದ 12
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಬೋಧಕ ಹುದ್ದೆಗಳ ಭರ್ತಿಗೆ ಅನುಮತಿ

ಬೆಂಗಳೂರು: ಸಾರ್ವಜನಿಕ ಶಿಕ್ಷಣ ಇಲಾಖೆಯ ಧಾರವಾಡ ಆಯುಕ್ತಾಲಯ ವ್ಯಾಪ್ತಿಯ ಖಾಸಗಿ ಅನುದಾನಿತ ಪ್ರೌಢ ಶಾಲೆಗಳಲ್ಲಿ ಶಿಕ್ಷಕರ ನೇಮಕಕ್ಕೆ ಸರ್ಕಾರ ಅನುಮತಿ ನೀಡಿದೆ.

ಈ ಪ್ರೌಢಶಾಲೆಗಳಲ್ಲಿ ನಿವೃತ್ತಿ, ನಿಧನ, ರಾಜೀನಾಮೆ ಇತ್ಯಾದಿ ಕಾರಣಗಳಿಂದ 2015ರ ಡಿಸೆಂಬರ್ 31ರ ಅಂತ್ಯಕ್ಕೆ ಖಾಲಿ ಉಳಿದಿರುವ ಬೋಧಕ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲು ಒಪ್ಪಿಗೆ ಸೂಚಿಸಲಾಗಿದೆ. ಒಟ್ಟು 318 ಬೋಧಕ ಹುದ್ದೆಗಳ ಪೈಕಿ ಈಗಾಗಲೇ 114 ಹುದ್ದೆಗಳ ನೇಮಕಾತಿ ಅನುಮೋದನೆ ನೀಡಲಾಗಿತ್ತು. ಈ ಹುದ್ದೆಗಳನ್ನು ಹೊರತುಪಡಿಸಿ ಬಾಕಿ ಉಳಿದಿರುವ 204 ಬೋಧಕ ಹುದ್ದೆಗಳನ್ನು ಸಂಬಂಧಿಸಿದ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳು ನಿಯಮಾನುಸಾರ ನೇಮಕಾತಿ ಮಾಡಿಕೊಳ್ಳಬಹುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಮಿತ್ರ ಪಕ್ಷ ಬಿಜೆಪಿಗೆ 'ಸಂದೇಶ' ರವಾನೆ?

ಆರ್‌ಜೆಡಿ ಆಯೋಜನೆಯ ಇಫ್ತಾರ್‌ನಲ್ಲಿ ನಿತೀಶ್ ಭಾಗಿ

ಪಟ್ನಾ: ರಾಷ್ಟ್ರೀಯ ಜನತಾ ದಳದ (ಆರ್‌ಜೆಡಿ) ನಾಯಕ ತೇಜಸ್ವಿ ಯಾದವ್ ಶುಕ್ರವಾರ ಆಯೋಜಿಸಿದ್ದ ಇಫ್ತಾರ್ ಕೂಟದಲ್ಲಿ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಪಾಲ್ಗೊಳ್ಳುವ ಮೂಲಕ ತಮ್ಮ ಮೈತ್ರಿ ಪಕ್ಷವಾದ ಬಿಜೆಪಿಗೆ 'ಸಂದೇಶ' ರವಾನಿಸಿದ್ದಾರೆ.

ಬೋಚಹಾ ವಿಧಾನಸಭೆ ಕ್ಷೇತ್ರದ ಉಪಚುನಾವಣೆಯಲ್ಲಿ ಆರ್‌ಜೆಡಿ ಜಯಗಳಿಸಿದ ಕೆಲವು ದಿನಗಳ ನಂತರ, ಯಾದವ್ ಅವರು ಪಕ್ಷದ ಶಕ್ತಿ ಪ್ರದರ್ಶನಕ್ಕಾಗಿ ಇದನ್ನು ಆಯೋಜಿಸಿದ್ದಾರೆ ಎನ್ನಲಾಗುತ್ತಿದೆ ಎಂದು 'ಎನ್‌ಡಿಟಿವಿ' ವರದಿ ಮಾಡಿದೆ.

ಇಫ್ತಾರ್ ಕೂಟದಲ್ಲಿ ಭಾಗವಹಿಸಲು ಆರ್‌ಜೆಡಿ ನಾಯಕನ ಪಟ್ನಾ ಮನೆಗೆ ಭೇಟಿ ನೀಡಿದವರಲ್ಲಿ ಬಿಜೆಪಿ ನಾಯಕರಾದ ಅವಧೇಶ್ ನಾರಾಯಣ ಸಿಂಗ್, ಸೈಯದ್ ಶಾನವಾಜ್ ಹುಸೇನ್, ಲೋಕ ಜನಶಕ್ತಿ ಪಕ್ಷದ ಚಿರಾಗ್ ಪಾಸ್ವಾನ್, ತೇಜಸ್ವಿ ಯಾದವ್ ಅವರ ಸಹೋದರ ತೇಜ್ ಪ್ರತಾಪ್ ಯಾದವ್, ಮೀಸಾ ಭಾರತಿ ಮತ್ತು ಅವರ ತಾಯಿ ರಾಬ್ಡಿ ದೇವಿ ಇದ್ದರು.

ನಿತೀಶ್ ಕುಮಾರ್ ಅವರನ್ನು ದೆಹಲಿಗೆ ಕಳುಹಿಸುವ ಮತ್ತು ಬಿಹಾರಕ್ಕೆ ಹೊಸ ಮುಖ್ಯಮಂತ್ರಿ ನೇಮಿಸಲು ಮಿತ್ರಪಕ್ಷ ಬಿಜೆಪಿ ಕಾರ್ಯತಂತ್ರ ಹೆಣೆದಿರುವ ನಡುವೆ, ತಮ್ಮ ಮಾಜಿ ಮಹಾಮೈತ್ರಿಕೂಟದ ಪಾಲುದಾರ ಪಕ್ಷದ ನಾಯಕನ ಆತಿಥ್ಯದ ಇಫ್ತಾರ್‌ನಲ್ಲಿ ನಿತೀಶ್ ಕುಮಾರ್ ಭಾಗವಹಿಸಿರುವುದು ಗಮನ ಸೆಳೆದಿದೆ. ವೀರ್ ಕುನ್ವರ್ ಸಿಂಗ್ ಜಯಂತಿಯಲ್ಲಿ ಭಾಗವಹಿಸಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇದೇ 23ರಂದು ಬಿಹಾರಕ್ಕೆ ಭೇಟಿ ನೀಡುತ್ತಿದ್ದಾರೆ.

ನಿತೀಶ್ ಕುಮಾರ್ 2020ರ ನವೆಂಬರ್‌ನಲ್ಲಿ ನಾಲ್ಕನೇ ಅವಧಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಅವರ ಜೆಡಿಯು 43 ಸ್ಥಾನಗಳನ್ನು ಗೆಲ್ಲುವ ಮೂಲಕ ನೀರಸ ಪ್ರದರ್ಶನ ತೋರಿತ್ತು. ಬಿಜೆಪಿ ಅಭೂತಪೂರ್ವವಾಗಿ 74 ಸ್ಥಾನ ಗಳಿಸಿದ್ದರೂ ಮೈತ್ರಿಯಲ್ಲಿ ನಿತೀಶ್ ಪಕ್ಷಕ್ಕೇ ದೊಡ್ಡಣ್ಣನ ಸ್ಥಾನ ಸಿಕ್ಕಿದೆ.

'ನಿತೀಶ್ ಕುಮಾರ್ ರಾಜೀನಾಮೆ ನೀಡಬೇಕು. ಬಿಜೆಪಿಯವರು ಮುಖ್ಯಮಂತ್ರಿಯಾಗಬೇಕು' ಎಂದು ಕೆಲವು ಬಿಜೆಪಿ ಶಾಸಕರು ಒತ್ತಾಯಿಸುತ್ತಿದ್ದಾರೆ. ರಾಷ್ಟ್ರಪತಿ ಚುನಾವಣೆಗೆ ನಿತೀಶ್ ಕುಮಾರ್ ಸಂಭವನೀಯ ಅಭ್ಯರ್ಥಿ ಮತ್ತು ರಾಜ್ಯಸಭೆ ಚುನಾವಣೆಯಲ್ಲಿ ಅವರು ಕಣಕ್ಕಿಳಿಯುವ ಊಹಾಪೋಹಗಳೂ ಬಲವಾಗಿ ಕೇಳಿಬರುತ್ತಿವೆ. 'ನಾನು ಮತ್ತು ಸುಶೀಲ್ ಮೋದಿ ಅವರು ಆಯೋಜಿಸಿದ್ದ ಇಫ್ತಾರ್‌ಗೂ ನಿತೀಶ್ ಕುಮಾರ್ ಬಂದಿದ್ದರು. ಇಲ್ಲಿ ತೇಜಸ್ವಿ ಯಾದವ್ ಆಯೋಜಿಸಿದ್ದ ಇಫ್ತಾರ್‌ಗೆ ಆಹ್ವಾನಿಸಿದ್ದರಿಂದ ಬಂದಿದ್ದೇವೆ. ಇದರಲ್ಲಿ ರಾಜಕೀಯ ಬೆರೆಸುವ ಅಗತ್ಯವಿಲ್ಲ' ಎಂದು ಸೈಯದ್ ಶಾನವಾಜ್ ಹುಸೇನ್ ಹೇಳಿದ್ದಾರೆ.

ಐದು ವರ್ಷಗಳ ನಂತರ ತೇಜಸ್ವಿ ಯಾದವ್ ಅವರ ಮನೆಯಲ್ಲಿ ನಡೆದ ಇಫ್ತಾರ್ ಕೂಟದಲ್ಲಿ ನಿತೀಶ್ ಕುಮಾರ್ ಭಾಗವಹಿಸಿದರು. 2017ರಲ್ಲಿ ಜನತಾ ದಳ (ಯುನೈಟೆಡ್) ಮುಖ್ಯಸ್ಥರು ಬಿಹಾರದ ಮಹಾಮೈತ್ರಿಕೂಟದಿಂದ ಹೊರಬಿದ್ದು, ಬಿಜೆಪಿ ಜತೆಗೆ ಮೈತ್ರಿ ಸಾಧಿಸಿದರು. ಆ ನಂತರ ನಿತೀಶ್ ಮತ್ತು ಲಾಲು ಪ್ರಸಾದ್ ಕುಟುಂಬದ ನಡುವಿನ ಸಂಬಂಧ ಹಳಸಿತ್ತು.

ಬಿಹಾರ ಮುಖ್ಯಮಂತ್ರಿ ಇಫ್ತಾರ್‌ನಲ್ಲಿ ಪಾಲ್ಗೊಳ್ಳಲು ಸುಮಾರು 50 ಮೀಟರ್ ದೂರದಲ್ಲಿರುವ ರಾಬ್ಡಿದೇವಿ ಅವರ ಮನೆಗೆ ನಡೆದುಕೊಂಡು ಬಂದರು. ಚಿರಾಗ್ ಪಾಸ್ವಾನ್ ನಿತೀಶ್ ಕುಮಾರ್ ಅವರ ಪಾದ ಮುಟ್ಟಿ ನಮಸ್ಕರಿಸಿದರು. ರಾಮ್ ವಿಲಾಸ್ ಪಾಸ್ವಾನ್ 2020ರಲ್ಲಿ ಹೃದಯ ಸ್ತಂಭನದಿಂದ ಮೃತಪಟ್ಟ ನಂತರ, ಚಿರಾಗ್ ಮತ್ತು ನಿತೀಶ್ ಇಬ್ಬರೂ ಮೊದಲ ಬಾರಿಗೆ ಭೇಟಿಯಾದರು.

ಮೇವು ಹಗರಣದಲ್ಲಿ ಜೈಲಿಗೆ ಹೋಗಿದ್ದ ಆರ್‌ಜೆಡಿ ವರಿಷ್ಠ ಲಾಲು ಪ್ರಸಾದ್ ಅವರಿಗೆ ಜಾಮೀನು ದೊರೆತಿರುವುದು ಇಫ್ತಾರ್ ಕೂಟದ ಮೆರಗು ಹೆಚ್ಚಿಸಿತ್ತು.

'ಕೃಷ್ಣಾ ನೀರು: ಅಧಿಸೂಚನೆಗೆ ಸರ್ವಪ್ರಯತ್ನ'

ಬಾಗಲಕೋಟೆ: 'ಕೃಷ್ಣಾ ನ್ಯಾಯಮಂಡಳಿ ಆದೇಶದಂತೆ ರಾಜ್ಯದ ಪಾಲಿನ ನೀರು ಬಳಕೆಗೆ ಕೇಂದ್ರದಿಂದ ಶೀಘ್ರ ಅಧಿಸೂಚನೆ ಪಡೆಯಲು ಸರ್ವ ಪ್ರಯತ್ನ ನಡೆಸಿದ್ದೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬಾದಾಮಿ ತಾಲ್ಲೂಕಿನ ಉಗಲವಾಟದಲ್ಲಿ ಕೆರೂರು ಏತ ನೀರಾವರಿ ಹಾಗೂ ಮುಧೋಳದಲ್ಲಿ ಸಸಾಲಟ್ಟಿ-ಮಂಟೂರು ಏತ ನೀರಾವರಿ ಯೋಜನೆಗಳಿಗೆ ಶುಕ್ರವಾರ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

'ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸುತ್ತಿದ್ದಂತೆಯೇ ಆಲಮಟ್ಟಿ ಜಲಾಶಯದ ಎತ್ತರವನ್ನು 524 ಮೀಟರ್‌ಗೆ ಹೆಚ್ಚಳಗೊಳಿಸಿ ಕೃಷ್ಣಾ ಮೇಲ್ದಂಡೆ ಮೂರನೇ ಹಂತದ ಯೋಜನೆಗಳ ಅನುಷ್ಠಾನಕ್ಕೆ ಮುಂದಾಗಲಿದ್ದೇವೆ' ಎಂದರು.

'ಮಹಾರಾಷ್ಟ್ರ, ಆಂಧ್ರ, ತೆಲಂಗಾಣದೊಂದಿಗೆ ಅಂತರರಾಜ್ಯ ನದಿ ವಿವಾದಗಳಿಂದ ಬಹಳಷ್ಟು ತೊಂದರೆ ಅನುಭವಿಸುತ್ತಿದ್ದೇವೆ. ಅದರ ನಡುವೆಯೂ ಅಗತ್ಯ ಮೂಲಸೌಕರ್ಯ ಕಲ್ಪಿಸುವ ಕೆಲಸ ಮಾಡಿದ್ದೇವೆ ಎಂದು ತಿಳಿಸಿದರು.

ಸಿಡಿಲು ಬಡಿದು ಇಬ್ಬರ ಸಾವು

ಕಲಬುರಗಿ/ಹೊಸಪೇಟೆ: ಸಿಡಿಲು ಬಡಿದು ಬಾಲಕ ಸೇರಿ ಸೇರಿ ಇಬ್ಬರು ಮೃತಪಟ್ಟಿದ್ದಾರೆ. ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ರೇವನೂರ ಗ್ರಾಮದಲ್ಲಿ ಶುಕ್ರವಾರ ಸಂಜೆ ಸಿಡಿಲು ಬಡಿದು ರೈತ ಮಹಾದೇವಪ್ಪ ಹೂವಣ್ಣ ಹನ್ನೂರ (44) ಮೃತಪಟ್ಟಿದ್ದಾರೆ.

ಯಾದಗಿರಿ ಜಿಲ್ಲೆಯ ಗುರುಮಠಕಲ್ ತಾಲ್ಲೂಕಿನ ಚಪೆಟ್ಲಾ ಗ್ರಾಮದಲ್ಲಿ ಸಿಡಿಲು ಬಡಿದು ಎತ್ತು ಸಾವನ್ನಪ್ಪಿದೆ. ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಕಡೆಕೊಪ್ಪ ಗ್ರಾಮದಲ್ಲಿ ಸಿಡಿಲಿಗೆ ಹಸು ಸಾವನ್ನಪ್ಪಿದೆ.

ಹೊಸಪೇಟೆ (ವಿಜಯನಗರ) ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಚಿಂತ್ರಪಳ್ಳಿಯಲ್ಲಿ ಬಾಲಕ ಸಿ. ನಾಗರಾಜ್ (11) ಮೃತಪಟ್ಟಿದ್ದಾರೆ. ಹರಪನಹಳ್ಳಿ ತಾಲ್ಲೂಕಿನ ತೆಲಿಗಿ ಗ್ರಾಮದಲ್ಲಿ ಸಿಡಿಲಿಗೆ 17 ಕುರಿ, ಒಂದು ನಾಯಿ, ಒಂದು ಹಸು ಮೃತಪಟ್ಟಿವೆ.

ಕಲಬುರಗಿ ಜಿಲ್ಲೆಯ ಜೇವರ್ಗಿ, ಚಿತ್ತಾಪುರ, ಸೇಡಂ, ಕಾಳಗಿಯಲ್ಲಿ ಮತ್ತು ಯಾದಗಿರಿ ಜಿಲ್ಲೆಯ ಶಹಾಪುರ, ಸುರಪುರ, ಹುಣಸಗಿ ತಾಲ್ಲೂಕಿನಲ್ಲಿ ಮಳೆಯಾಯಿತು. ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ವಿವಿಧೆಡೆ ಮಳೆಯಾಯಿತು.

ಬೆಳೆ ನಷ್ಟ ಚಿತ್ರದುರ್ಗ ವರದಿ: ಹಿರಿಯೂರು ತಾಲ್ಲೂಕಿನ ಬಬ್ಬೂರು ಗ್ರಾಮದಲ್ಲಿ ಬುಧವಾರ ಹಾಗೂ ಗುರುವಾರ ಸಂಜೆ ಬೀಸಿದ ಬಿರುಗಾಳಿಗೆ ಆರೇಳು ಸಾವಿರ ಬಾಳೆ ಗಿಡಗಳು ನೆಲಕ್ಕೆ ಉರುಳಿವೆ.

ಬಬ್ಬೂರು ಗ್ರಾಮದಲ್ಲಿ 11 ಎಕರೆಯಲ್ಲಿ ಅಡಿಕೆ ಹಾಗೂ ಬಾಳೆ ಬೆಳೆ ನಷ್ಟವಾಗಿದೆ. ಹೊಳಲ್ಕೆರೆ ತಾಲ್ಲೂಕಿನ ಚಿಕ್ಕಜಾಜೂರು, ಬಿ.ದುರ್ಗ, ಹೊನ್ನಕಾಲುವೆ ಕಡೆ ಬಿರುಸಿನ ಮಳೆಯಾಗಿದೆ. ಹೊನ್ನಕಾಲುವೆ ಗ್ರಾಮದಲ್ಲಿ ಹಲಸಿನ ಮರ ಕೊಟ್ಟಿಗೆ ಮೇಲೆ ಉರುಳಿದೆ.

ದಾವಣಗೆರೆ ಜಿಲ್ಲೆಯ ಚನ್ನಗಿರಿ ಪಟ್ಟಣ ಸೇರಿ ವಿವಿಧೆಡೆ 9 ಮನೆ ಹಾಗೂ 20 ಅಡಿಕೆ ಮರಗಳಿಗೆ ಹಾನಿಯಾಗಿದೆ. ಸಂತೇಬೆನ್ನೂರು ಸಮೀಪದ ಗೆದ್ದಲಹಟ್ಟಿ ಬಳಿಯ ಕೋಳಿ ಫಾರಂನ ಚಾವಣಿಯ ತಗಡಿನ ಶೀಟ್‌ಗಳು ಹಾರಿಹೋಗಿವೆ. ಸಾಸ್ವೆಹಳ್ಳಿ ಹೋಬಳಿಯಲ್ಲಿ ತೆಂಗು, ಬಾಳೆ, ಅಡಿಕೆ ಮರಗಳು, 6 ವಿದ್ಯುತ್ ಕಂಬಗಳು ಉರುಳಿವೆ.

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು.
ಸಂಖ್ಯೆ: ಕಾಇಂ/ಪಂರಾಇಂವಿ/ತುಮ/ಜೆಇ-1/ಟೆಂಡರ್/2022-23 ದಿನಾಂಕ: 20.04.2022
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ-03/2022-23
(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ -ದ್ವಿಲಕೋಟೆ)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-3 (ಸ್ಟಾಂಡರ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಸಪೋರ್ಟ್‌ಗಾಗಿ 1/1, ಸನ್‌ಬೀಮ್ ಬಿಲ್ಡಿಂಗ್, ಈಗಲ್ ಸ್ಟ್ರೀಟ್, ಲಾಂಗ್‌ಫೋರ್ಡ್ ರೋಡ್, ಲಾಂಗ್‌ಫೋರ್ಡ್ ಟೌನ್, ಬೆಂಗಳೂರು-560 025, ದೂರವಾಣಿ: 080-22485867, 080-22485927) ರಲ್ಲಿ ನೋಂದಾಯಿಸಿದ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು ವಿಭಾಗ ವ್ಯಾಪ್ತಿಯ ಈ ಕೆಳಗೆ ನಮೂದಿಸಿರುವ 2019-20ನೇ ಸಾಲಿನ ಸರ್ಕಾರಿ ಪ್ರಾಥಮಿಕ/ಪ್ರೌಢ ಶಾಲಾ ಕೊಠಡಿ ನಿರ್ಮಾಣ ಯೋಜನೆಯಡಿಯ ಕಾಮಗಾರಿಗೆ ಅಲ್ಪಾವಧಿ ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ದ್ವಿಲಕೋಟೆ ಮೂಲಕ ಮಾತ್ರ ಆಹ್ವಾನಿಸಲಾಗಿದೆ.
ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು ಕಾಮಗಾರಿಗಳ ಸಂಪೂರ್ಣ ವಿವರಗಳನ್ನು ವೆಬ್‌ಸೈಟ್ www.eproc.karnataka.gov.in ಮುಖಾಂತರ ದಿನಾಂಕ: **22.04.2022 ರಿಂದ 06.05.2022** ಸಂಜೆ 5.00 ಗಂಟೆವರೆಗೆ ಫಾರಂ ಫೀ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ (ಹಿಂತಿರುಗಿಸಲಾಗುವುದಿಲ್ಲ) ಸಲ್ಲಿಸಿ ನಿಗದಿತ ಇ.ಎಂ.ಡಿ. ಪಾವತಿಸಿ ಟೆಂಡರ್‌ಗಳನ್ನು ಪಡೆಯಬಹುದಾಗಿದೆ ಹಾಗೂ ಸಲ್ಲಿಸಬಹುದಾಗಿದೆ. ಹಾಗೂ ಈ ಕೆಳ ಸಹಿದಾರರಿಂದ ಕಚೇರಿ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿರುತ್ತದೆ. ದೂರವಾಣಿ ಸಂಖ್ಯೆ: 0816-2272620 ಟೆಂಡರ್‌ಗೆ ಯಾವುದೇ ಮಾರ್ಪಾಟು, ತಿದ್ದುಪಡಿಗಳ ಮಾಹಿತಿಗಳನ್ನು ಇ-ಪೋರ್ಟಲ್ ಮುಖಾಂತರವೇ ಮಾತ್ರ ಪ್ರಕಟಿಸಲಾಗುವುದು.
ಸಹಿ/- ಕಾರ್ಯಪಾಲಕ ಇಂಜಿನಿಯರ್,
ಪಂ.ರಾ.ಇಂ. ವಿಭಾಗ, ತುಮಕೂರು.
DIPR/TUM/50/MCA/2022-23

ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ
(ಲೋಕೋಪಯೋಗಿ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್ ಕಛೇರಿ, ಕೆಶಿಪ್ ವಿಭಾಗ ನಂ: ಎಫ್-149, 1ನೇ ಮಹಡಿ, ಭಾರತ್ ನಗರ, ಹಂತ-1, ಈಸ್ಟ್ ವೆಸ್ಟ್ ಕಾಲೇಜು ರಸ್ತೆ, ಬಿ.ಇ.ಎಲ್ ಬಡಾವಣೆ, ಮಾಗಡಿ ರಸ್ತೆ, ಬೆಂಗಳೂರು-560091
ಸಂ: EE/KSHIP/BNG/OBRK/IFT-01/2022-23 Date: 21.04.2022
ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ
ಕಾರ್ಯಪಾಲಕ ಅಭಿಯಂತರರು, ಕೆಶಿಪ್ ವಿಭಾಗ, ಬೆಂಗಳೂರು ಕಛೇರಿಯಿಂದ 2022-23ನೇ ಸಾಲಿನಲ್ಲಿ ಮಳವಳ್ಳಿ ಪಟ್ಟಣದ ಸರಪಳಿ: 0+200 ರಿಂದ 0+300 ವರೆಗಿನ ಚರ್ಚ್ ಕಾಂಪೌಂಡ್ ಗೋಡೆ ನಿರ್ಮಿಸುವ ಕಾಮಗಾರಿಗಾಗಿ ಏಕ ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಇ-ಟೆಂಡರ್‌ಗಳನ್ನು ಇ-ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **06.05.2022 ಮಧ್ಯಾಹ್ನ 12.00 ಗಂಟೆಯಾಗಿದ್ದು,** ಆಸಕ್ತಿಯುಳ್ಳ ಗುತ್ತಿಗೆದಾರರು ಭಾಗವಹಿಸಬಹುದಾಗಿರುತ್ತದೆ. ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://eproc.karnataka.gov.in** ರಲ್ಲಿ ವೀಕ್ಷಿಸಬಹುದಾಗಿದೆ ಹಾಗೂ ಕಛೇರಿ ಸಮಯದಲ್ಲಿ ಭೇಟಿ ನೀಡಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/- ಕಾರ್ಯಪಾಲಕ ಇಂಜಿನಿಯರ್, ಕೆಶಿಪ್ ವಿಭಾಗ, ಬೆಂಗಳೂರು
ವಾಸಾಸಂಇ/ಉನಿ.ಸಿ.ಪಿ/260/ಎಂಸಿಎ/2022-23

ಕರ್ನಾಟಕ ಸರ್ಕಾರ- ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ,
ಲಸಿಕೆ ಸಂಸ್ಥೆ ಆವರಣ, 2ನೇ ರೇಲ್ವೆಗೇಟ್ ಹತ್ತಿರ, ಟಿಳಕವಾಡಿ,
ಬೆಳಗಾವಿ-590006 ದೂರವಾಣಿ ಸಂಖ್ಯೆ: (0831)-242911
ಸಂ:ಡಿ.ಪಿ.ಎಂ.ಯು/ಎನ್.ಹೆಚ್.ಎಂ/ಬೆ/11/2022-23 ದಿನಾಂಕ:22/04/2022
ವೈದ್ಯಾಧಿಕಾರಿಗಳ ನೇಮಕಾತಿ ಪ್ರಕಟಣೆ
ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ(ನಗರ/ಗ್ರಾಮೀಣ) ಬೆಳಗಾವಿ ಜಿಲ್ಲೆಯಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳನ್ನು ನೇಮಕಾತಿ ನಿಯಮಾವಳಿಗಳನ್ವಯ ಒಂದು ವರ್ಷದ ಅವಧಿಗೆ ಗುತ್ತಿಗೆ ಅಧಾರದ ಮೇಲಿನ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಈ ಕೆಳಕಾಣಿಸಿದ ಕಾಲಮಿತಿಯಲ್ಲಿ ಅರ್ಜಿ ಸಲ್ಲಿಸಬಹುದು. ವೈದ್ಯಾಧಿಕಾರಿಗಳು ಎಂ.ಬಿ.ಬಿ.ಎಸ್ ಹುದ್ದೆ-10 ಮಾಸಿಕ ಸಂಚಿತ ವೇತನ ರೂ.50000/-(NHM),
ಹುದ್ದೆ 04 ಮಾಸಿಕ ಸಂಚಿತ ವೇತನ ರೂ.36750/-(NUHM)
ಅರ್ಜಿಗಳನ್ನು ವಿತರಿಸುವ ದಿ:25.04.2022 ರಿಂದ 09.05.2022 ಮುಂಜಾನೆ 10.00 ಮಧ್ಯಾಹ್ನ 03.00 ಘಂಟೆಯವರೆಗೆ (ರಜಾ ದಿನ ಹೊರತು ಪಡಿಸಿ) ಭರ್ತಿ ಮಾಡಿ ಅರ್ಜಿಗಳನ್ನು ಸಲ್ಲಿಸುವುದು. ಅಭ್ಯರ್ಥಿಗಳು ಮೇಲೆ ನಿಗದಿಪಡಿಸಿದ ದಿನಾಂಕದ ನಂತರವು ನೇರವಾಗಿ ಅರ್ಜಿಗಳನ್ನು ಸಲ್ಲಿಸಲು ಅವಕಾಶ ನೀಡಲಾಗುವುದು.(ಈ ನೇಮಕಾತಿಯ ತಾತ್ಕಲಿಕ ಆಯ್ಕೆ ಪಟ್ಟಿ ಪ್ರಚುರಪಡಿಸುವ ದಿನಾಂಕದ ಒಳಗಾಗಿ) ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ವಿಳಾಸದಲ್ಲಿ ಸಂಪರ್ಕಿಸಬಹುದಾಗಿದೆ. ಜಿಲ್ಲಾ ಆರೋಗ್ಯ ಮತ್ತು ಕು. ಕ ಇಲಾಖೆ, ಎನ್.ಹೆಚ್.ಎಂ ವಿಭಾಗ, ಲಸಿಕಾ ಸಂಸ್ಥೆ ಆವರಣ, 2ನೇ ರೇಲ್ವೆಗೇಟ್ ಹತ್ತಿರ, ಬೆಳಗಾವಿ
ವಿ.ಸೂ:ವಿಧ್ಯಾರ್ಹತೆ ಹಾಗೂ ವಯೋಮಿತಿಯೊಂದಿಗೆ ನೇಮಕಾತಿ ಷರುತ್ತಗಳನ್ನು ಅರ್ಜಿ ಪಾರಂನಲ್ಲಿ ಪಡೆಯಬಹುದಾಗಿದೆ.
ಸಹಿ/-ಜಿಲ್ಲಾ ಆರೋಗ್ಯ ಮತ್ತು ಕು ಕ ಅಧಿಕಾರಿಗಳು,
ಬೆಳಗಾವಿ.
DIPR/BGM/RO-NO-109/MCA/2022-23

ಕೆಪಿಸಿಸಿ ಎಸ್.ಸಿ ಘಟಕದ ಅಧ್ಯಕ್ಷರಾಗಿ ಆರ್. ಧರ್ಮಸೇನ

ಬೆಂಗಳೂರು: ವಿಧಾನ ಪರಿಷತ್‌ನ ಮಾಜಿ ಸದಸ್ಯ ಆರ್. ಧರ್ಮಸೇನ ಅವರನ್ನು ಕೆಪಿಸಿಸಿ ಪರಿಶಿಷ್ಟ ಜಾತಿ (ಎಸ್.ಸಿ) ಘಟಕದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.

ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿಯವರ ಅನುಮೋದನೆ ಪಡೆದು ಧರ್ಮಸೇನ ಅವರನ್ನು ನೇಮಿಸಲಾಗಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ತಿಳಿಸಿದ್ದಾರೆ.

'ಶವಸಂಸ್ಕಾರಕ್ಕೆ ಪರಿಸರಸ್ನೇಹಿ ವಿಧಾನ ಬಳಸಿ'

ನವದೆಹಲಿ: 'ಸ್ಮಶಾನಗಳಲ್ಲಿ ಶವಸಂಸ್ಕಾರಕ್ಕೆ ಬಳಸುವ ಕಟ್ಟಿಗೆಗಳಿಂದ ಉಂಟಾಗುವ ಪರಿಸರಮಾಲಿನ್ಯವನ್ನು ತಡೆಗಟ್ಟಲು ವಿದ್ಯುತ್ ಅಥವಾ ನೈಸರ್ಗಿಕ ಅನಿಲದಂತಹ (ಪಿಎನ್‌ಜಿ) ಪರಿಸರಸ್ನೇಹಿ ವಿಧಾನ ಬಳಸಲು ಆದ್ಯತೆ ನೀಡಬೇಕು' ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು (ಎನ್‌ಜಿಟಿ) ರಾಜ್ಯಗಳಿಗೆ ಸೂಚನೆ ನೀಡಿದೆ.

ನ್ಯಾಯಮೂರ್ತಿ ಆದರ್ಶ್ ಕುಮಾರ್ ಗೋಯಲ್ ನೇತೃತ್ವದ ಎನ್‌ಜಿಟಿಯ ಪ್ರಧಾನ ಪೀಠವು, 'ಧಾರ್ಮಿಕ ನಂಬಿಕೆಯ ಪ್ರಕಾರ, ಬೆಂಕಿಯಿಂದ ಶವಸಂಸ್ಕಾರ ಮಾಡುವ ವಿಧಾನವನ್ನು ಪವಿತ್ರವೆಂದು ಪರಿಗಣಿಸಲಾಗುತ್ತದೆ. ಆದರೆ, ಒಂದು ಶವಸಂಸ್ಕಾರ ಮಾಡಲು ತೆರೆದ ಸ್ಥಳದಲ್ಲಿ 350ರಿಂದ 450 ಕೆ.ಜಿ. ಕಟ್ಟಿಗೆ ಸುಡುತ್ತಿದ್ದು, ವಾಯುಮಾಲಿನ್ಯ ಉಂಟಾಗುತ್ತಿದೆ' ಎಂದು ಹೇಳಿದೆ.

ಉತ್ತರಪ್ರದೇಶದ ಇಂದಿರಾಪುರಂನ ಶಕ್ತಿ ಖಂಡ್ -4ರಲ್ಲಿರುವ ಸ್ಮಶಾನದಲ್ಲಿ ಶವಸಂಸ್ಕಾರದ ವೇಳೆ ಹೊರಹೊಮ್ಮುತ್ತಿರುವ ಬೂದಿ ಮತ್ತು ಹೊಗೆಯಿಂದ ವಾಯುಮಾಲಿನ್ಯ ಆಗುತ್ತಿದೆ. ಇದನ್ನು ತಡೆಗಟ್ಟಲು ಕೋರಿ ಎನ್‌ಜಿಟಿಗೆ ಸಲ್ಲಿಸಿದ್ದ ಮನವಿಯ ವಿಚಾರಣೆ ವೇಳೆ ಪೀಠವು, 'ಯಾವುದೇ ಧಾರ್ಮಿಕ ನಂಬಿಕೆಯನ್ನು ನೋಯಿಸುವ ಉದ್ದೇಶವಿಲ್ಲ. ಪರಿಸರ ಮಾಲಿನ್ಯ ತಡೆಯಲು ಸಂಬಂಧಿಸಿದ ರಾಜ್ಯಗಳ ಅಧಿಕಾರಿಗಳು ಪರಿಸರಸ್ನೇಹಿ ಶವಸಂಸ್ಕಾರದ ವಿಧಾನಗಳಿಗೆ ಜನರ ಮನವೊಲಿಸಬೇಕು' ಎಂದೂ ತಿಳಿಸಿದೆ.

ದಾವೂದ್, ಸಹಚರರಿಗೆ ಸಂಬಂಧಿಸಿದ ಹಣ ಅವ್ಯವಹಾರ

ಮಲಿಕ್ ನ್ಯಾಯಾಂಗ ಬಂಧನ ವಿಸ್ತರಣೆ

ಮುಂಬೈ(ಪಿಟಿಐ): ಭೂಗತ ಪಾತಕಿ ದಾವೂದ್ ಇಬ್ರಾಹಿಂ ಮತ್ತು ಆತನ ಸಹಚರರ ಅಕ್ರಮ ಹಣ ವರ್ಗಾವಣೆಗೆ ಸಂಬಂಧಿಸಿದ ಪ್ರಕರಣದಲ್ಲಿ ಮಹಾರಾಷ್ಟ್ರದ ಸಚಿವ ನವಾಬ್ ಮಲಿಕ್ ಅವರ ನ್ಯಾಯಾಂಗ ಬಂಧನವನ್ನು ವಿಶೇಷ ನ್ಯಾಯಾಲಯವು ಶುಕ್ರವಾರ ಮೇ 6ರವರೆಗೆ ವಿಸ್ತರಣೆ ಮಾಡಿದೆ.

ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಎನ್‌ಸಿಪಿಯ ಹಿರಿಯ ನಾಯಕರಾದ ಮಲಿಕ್ ಅವರನ್ನು ಫೆಬ್ರುವರಿ 23ರಂದು ಜಾರಿ ನಿರ್ದೇಶನಾಲಯ(ಇ.ಡಿ) ಬಂಧಿಸಿತ್ತು. ಅವರ ನ್ಯಾಯಾಂಗ ಬಂಧನವು ಶುಕ್ರವಾರ ಮುಕ್ತಾಯವಾದ ಹಿನ್ನೆಲೆಯಲ್ಲಿ ಅವರನ್ನು ವಿಶೇಷ ನ್ಯಾಯಾಧೀಶ ಆರ್.ಎನ್. ರೊಕಡೆ ಅವರ ಎದುರು ಹಾಜರುಪಡಿಸಲಾಯಿತು. ಗುರುವಾರವಷ್ಟೇ ಮಲಿಕ್ ವಿರುದ್ಧ 5,000ಕ್ಕೂ ಹೆಚ್ಚು ಪುಟಗಳ ದೋಷಾರೋಪ ಪಟ್ಟಿಯನ್ನು ಇ.ಡಿ ಸಲ್ಲಿಸಿತ್ತು.

1993ರ ಮುಂಬೈ ಸರಣಿ ಸ್ಫೋಟದ ಪ್ರಮುಖ ಆರೋಪಿ ಹಾಗೂ ಭಾರತಕ್ಕೆ ಬೇಕಿರುವ ದಾವೂದ್ ಇಬ್ರಾಹಿಂ ಮತ್ತು ಆತನ ಸಹಚರರ ವಿರುದ್ಧದ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯಡಿ ರಾಷ್ಟ್ರೀಯ ತನಿಖಾ ಸಂಸ್ಥೆ ದಾಖಲಿಸಿಕೊಂಡ ದೂರಿನ ಮೇರೆಗೆ ಮಲಿಕ್ ವಿರುದ್ಧ ಜಾರಿ ನಿರ್ದೇಶನಾಲಯ ತನಿಖೆ ನಡೆಸುತ್ತಿದೆ. ಭಯೋತ್ಪಾದನೆಗೆ ಹಣಕಾಸು ನೆರವು ನೀಡುವ ಚಟುವಟಿಕೆಗಳಲ್ಲಿ ಮಲಿಕ್ ಭಾಗಿಯಾಗಿದ್ದರು ಎಂದು ಜಾರಿ ನಿರ್ದೇಶನಾಲಯ ಆರೋಪಿಸಿದೆ.

ಜಾಮೀನು ನೀಡಲು ಸುಪ್ರೀಂ ನಕಾರ

ನವದೆಹಲಿ(ಪಿಟಿಐ): ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಮಹಾರಾಷ್ಟ್ರದ ಸಚಿವ ನವಾಬ್ ಮಲಿಕ್ ಅವರಿಗೆ ಜಾಮೀನು ಮಂಜೂರು ಮಾಡಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಈ ಬಗ್ಗೆ ಶುಕ್ರವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ಸೂರ್ಯ ಕಾಂತ್ ಅವರಿದ್ದ ಪೀಠವು, ಮಾರ್ಚ್ 15ರಂದು ಬಾಂಬೆ ಹೈಕೋರ್ಟ್ ಹೊರಡಿಸಿದ ಆದೇಶದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಆದರೆ ಅವರು ವಿಚಾರಣಾಧೀನ ನ್ಯಾಯಾಲಯದ ಮೊರೆ ಹೋಗಿ ಕಾನೂನಿನಡಿ ಇರುವ ಪರಿಹಾರಗಳನ್ನು ಪಡೆದುಕೊಳ್ಳಬಹುದು ಎಂದು ಹೇಳಿದೆ.

ಸಂಕ್ಷಿಪ್ತ ಸುದ್ದಿ

ಮೇವು ಹಗರಣ: ಲಾಲು ಪ್ರಸಾದ್‌ಗೆ ಜಾಮೀನು

ರಾಂಚಿ (ಪಿಟಿಐ): ಮೇವು ಹಗರಣಕ್ಕೆ ಸಂಬಂಧಿಸಿ ಡೊರಾಂಡ ಖಜಾನೆ ಪ್ರಕರಣದಲ್ಲಿ ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಅವರಿಗೆ ಜಾರ್ಖಂಡ್ ಹೈಕೋರ್ಟ್ ಶುಕ್ರವಾರ ಜಾಮೀನು ನೀಡಿದೆ. ಸಿಬಿಐ ವಿಶೇಷ ನ್ಯಾಯಾಲಯ ಈ ಪ್ರಕರಣದಲ್ಲಿ ಲಾಲು ಪ್ರಸಾದ್ ಅವರಿಗೆ ಐದು ವರ್ಷ ಸಜೆ ವಿಧಿಸಿತ್ತು. 73 ವರ್ಷದ ಲಾಲು ಪ್ರಸಾದ್ ಫೆಬ್ರುವರಿಯಿಂದ ಜೈಲಿನಲ್ಲಿದ್ದಾರೆ. ಹೈಕೋರ್ಟ್ ಆದೇಶದ ಮಾಹಿತಿ ಕೆಳಹಂತದ ಕೋರ್ಟ್‌ಗೆ ಮಂಗಳವಾರ ತಲುಪಬಹುದು. ಬಳಿಕ ನಾವು ಜಾಮೀನು ಬಾಂಡ್ ಸಲ್ಲಿಸಿ ಬಿಡುಗಡೆಗೆ ಕ್ರಮವಹಿಸುತ್ತೇವೆ ಎಂದು ವಕೀಲ ಪ್ರಭಾತ್ ಕುಮಾರ್ ತಿಳಿಸಿದರು.

ಹಜ್ ಕಮಿಟಿ ಅಧ್ಯಕ್ಷರಾಗಿ ಎ.ಪಿ.ಅಬ್ದುಲ್ಲಾಕುಟ್ಟಿ ಆಯ್ಕೆ

ನವದೆಹಲಿ (ಪಿಟಿಐ): ಭಾರತದ ಹಜ್ ಕಮಿಟಿಯ ಅಧ್ಯಕ್ಷರಾಗಿ ಮಾಜಿ ಸಂಸದ ಎ.ಪಿ.ಅಬ್ದುಲ್ಲಾ ಕುಟ್ಟಿ ಆಯ್ಕೆಯಾಗಿದ್ದಾರೆ. ಇದೇ ಮೊದಲ ಬಾರಿಗೆ ಸಮಿತಿಯ ಉಪಾಧ್ಯಕ್ಷರಾಗಿ ಇಬ್ಬರು ಮಹಿಳೆಯರನ್ನು ಆಯ್ಕೆ ಮಾಡಲಾಗಿದೆ ಎಂದು ಸರ್ಕಾರ ಪ್ರಕಟಿಸಿದೆ.

ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಮುಕ್ತಾರ್ ಅಬ್ಬಾಸ್ ನಖ್ವಿ, ಹೊಸ ಪದಾಧಿಕಾರಿಗಳಿಗೆ ಅಭಿನಂದನೆ ಸಲ್ಲಿಸಿ ಟ್ವೀಟ್ ಮಾಡಿದ್ದು, ಉಪಾಧ್ಯಕ್ಷರಾಗಿ ಮುನ್ನಾವರಿ ಬೇಗಂ ಮತ್ತು ಮಾಫುಜಾ ಖತುನ್ ಅವರ ಆಯ್ಕೆಗೆ ಸಂತಸ ವ್ಯಕ್ತಪಡಿಸಿದ್ದಾರೆ.

ನವೀನ್ ಜಿಂದಾಲ್ ಮೇಲೆ ಇ.ಡಿ ದಾಳಿ: ಕಾಂಗ್ರೆಸ್ ಟೀಕೆ

ನವದೆಹಲಿ (ಪಿಟಿಐ): ಉದ್ಯಮಿ ನವೀನ್ ಜಿಂದಾಲ್ ಅವರ ಕಚೇರಿಯ ಮೇಲೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ದಾಳಿ ನಡೆಸಿರುವುದನ್ನು ಖಂಡಿಸಿರುವ ಕಾಂಗ್ರೆಸ್, 'ಬಿಜೆಪಿ ಆಡಳಿತದಲ್ಲಿ ಭಾರತ 'ಪೊಲೀಸ್ ರಾಜ್ಯ'ವಾಗಿ ಪರಿವರ್ತನೆಯಾಗುತ್ತಿದೆ' ಎಂದು ಟೀಕಿಸಿದೆ. ವಿದೇಶಿ ವಿನಿಮಯ ನಿಯಮಗಳ ಉಲ್ಲಂಘನೆ ಆರೋಪಕ್ಕೆ ಸಂಬಂಧಿಸಿದಂತೆ ಇ.ಡಿ ಅಧಿಕಾರಿಗಳು ಗುರುವಾರ ಜಿಂದಾಲ್ ಅವರಿಗೆ ಸೇರಿದ ಜೆಎಸ್‌ಪಿಎಲ್ ಕಂಪನಿಯ ಕಚೇರಿಗಳಲ್ಲಿ ತಪಾಸಣೆ ನಡೆಸಿದ್ದರು. ಈ ಕುರಿತು ಹೇಳಿಕೆ ನೀಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲ, 'ಉದ್ಯಮಿಗಳಿಗೆ ಕಿರುಕುಳ ನೀಡುವ ಮೂಲಕ ಅವರ ಧ್ವನಿಯನ್ನು ಹತ್ತಿಕ್ಕಲಾಗುತ್ತಿದೆ' ಎಂದು ಟೀಕಿಸಿದ್ದಾರೆ.

ಕೋರ್ಟ್‌ನಲ್ಲಿ ಕಕ್ಷಿದಾರರ ಜಗಳ: ಗುಂಡು ಹಾರಿಸಿದ ಕಾನ್‌ಸ್ಟೆಬಲ್

ನವದೆಹಲಿ (ಪಿಟಿಐ): ನವದೆಹಲಿಯ ರೋಹಿಣಿ ಕೋರ್ಟ್ ಸಮುಚ್ಛಯದಲ್ಲಿ ಇಬ್ಬರು ಕಕ್ಷಿದಾರರ ನಡುವೆ ಜಗಳ ನಡೆಯುತ್ತಿದ್ದ ವೇಳೆ ಮಧ್ಯಪ್ರವೇಶಿಸಿದ ಕಾನ್‌ಸ್ಟೆಬಲ್ ಗುಂಡು ಹಾರಿಸಿದ ಪರಿಣಾಮ ಸ್ಥಳದಲ್ಲಿ ಉದ್ವಿಗ್ನ ವಾತಾವರಣ ಏರ್ಪಟ್ಟಿತ್ತು.

'ಶುಕ್ರವಾರ ಬೆಳಿಗ್ಗೆ 9.40ರ ಸುಮಾರಿಗೆ ನ್ಯಾಯಾಲಯದ ಸಮುಚ್ಛಯದಲ್ಲಿ ಇಬ್ಬರು ವಕೀಲರ ಕಕ್ಷಿದಾರರ ನಡುವೆ ನಡೆಯುತ್ತಿದ್ದ ಜಗಳವನ್ನು ನಿಲ್ಲಿಸಲು ಪೊಲೀಸರು ಪ್ರಯತ್ನಿಸಿದರು. ಪರಿಸ್ಥಿತಿ ನಿಯಂತ್ರಿಸುವ ವೇಳೆ ಶಸ್ತ್ರದಿಂದ ಗುಂಡು ಹಾರಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಗುಂಡು ನೆಲಕ್ಕೆ ಬಡಿದಿದ್ದು, ಯಾರಿಗೂ ಗಾಯವಾಗಿಲ್ಲ. ಅದು ಆಕಸ್ಮಿಕವಾಗಿ ನಡೆದ ಘಟನೆಯೇ ಎಂಬುದರ ಬಗ್ಗೆ ತನಿಖೆ ನಡೆಸಲಾಗುವುದು ಎಂದು ಅವರು ಹೇಳಿದ್ದಾರೆ. ಈ ಘಟನೆಯಲ್ಲಿ ಪ್ರಾಣಾಪಾಯ ಸಂಭವಿಸಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ
ಪಿ.ಹೆಚ್.ಐ ಕಟ್ಟಡ, ಎಸ್.ಜೆ.ಪಿ ಪಾಲಿಟೆಕ್ನಿಕ್ ಎದುರು, ಕೆ.ಆರ್. ಸರ್ಕಲ್,
ಶೇಷಾದ್ರಿ ರಸ್ತೆ, ಬೆಂಗಳೂರು-560 001. ದೂರವಾಣಿ ಸಂಖ್ಯೆ: +91-80-29619801
ಮಿಂಚ್ ಅಂಚೆ: md.ksmscl@gmail.com
No: HFW/KSMSCL/EQPT/COVID-19/3rd Wave/RTPCR-CONSU/98/2021-22 Date: 22/04/2022
ಟೆಂಡರ್ ಪ್ರಕಟಣೆ
ಉಲ್ಲೇಖ : ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: HFW/KSMSCL/EQPT/COVID-19/3rd Wave/RTPCR-CONSU/98/2021-22 Dated: 22-04-2022 (IFQ)
ದರಪಟ್ಟಿ (IFQ) ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರನ್ವಯ ಈ ಕೆಳಕಂಡ ಟೆಂಡರ್ ರಾಷ್ಟ್ರವ್ಯಾಪ್ತಿಯಲ್ಲಿ ಕರೆಯಲಾಗಿದೆ.
1. **ಕೋವಿಡ್ ಪರೀಕ್ಷೆಗಾಗಿ ಅಗತ್ಯವಿರುವ RTPCR Consumable ದರಪಟ್ಟಿ (IFQ) ಮುಖಾಂತರ ಖರೀದಿಸಿ ಪೂರೈಸಲು ಮರು ಟೆಂಡರ್ ಕರೆಯುವ ಬಗ್ಗೆ.**
ತಾಂತ್ರಿಕ ವಿವರಣೆ, ಷರತ್ತು, ನಿಬಂಧನೆಗಳು ಮತ್ತು ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು, IFQ ಮುಖಾಂತರ ಇ-**Mail ID ksdlwscovid19.procurement@gmail.com** ಟೆಂಡರ್ ವ್ಯವಸ್ಥೆಯಡಿಯಲ್ಲಿ ದಿನಾಂಕ: **22-04-2022** ರಿಂದ ಟೆಂಡರ್‌ಗಳ ದಸ್ತಾವೇಜುಗಳನ್ನು **KSMSCL https://www.ksmscl.kar.nic.in** ವೆಬ್‌ಸೈಟ್ ಮುಖಾಂತರ ಡೌನ್‌ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.
ಸಹಿ/- ವ್ಯವಸ್ಥಾಪಕ ನಿರ್ದೇಶಕರು,
ಕೆ.ಎಸ್.ಎಂ.ಎಸ್.ಸಿ.ಎಲ್., ಬೆಂಗಳೂರು.
DIPR/CP/RO259/AAPL/2022-23
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಚೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಡಗಲಿ
ಸಂ. ಕಾನಿಅ/ಪಂರಾಇಂವಿ/ಹಡಗಲಿ/ಪಿಬಿ-3/ಟೆಂಡರ್/ವಿವಿಧಲೆ.ಶೀ/36/2022-23 ದಿನಾಂಕ: 20-04-2022
ಅಲ್ಪಾವಧಿ ಟೆಂಡರ್ ಪ್ರಕಟಣೆ
(Through Government of Karnataka e-procurement)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಡಗಲಿ ವಿಜಯನಗರ ಜಿಲ್ಲೆ ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-2000 ಮತ್ತು ಸರ್ಕಾರದ ಅಧಿಸೂಚನೆ ಸಂ: ಸಂವ್ಯಶಾಇ/22ಶಾಸನ 2016/ಬೆಂ/ದಿ-29-06-2017 ರ ಆದೇಶದಂತೆ ಇಪ್ರಾಕ್ ಲಾಟ್ ಸಂಖ್ಯೆ: RDPR_EE_HADAGALI/2022-23/LOT148, 148&154 ರ ಮೀಸಲಾತಿಗೆ ಒಳಪಟ್ಟು ವಿಭಾಗ ವ್ಯಾಪ್ತಿಯಡಿಯ ತಾಲೂಕುಗಳ ವಿವಿಧ ಲೆಕ್ಕಶೀರ್ಷಿಕೆಗಳಡಿ ಅನುಮೋದನೆಯಾದ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ Standard Bid Document KW-I,II,III & IV ರ ನಿಯಮಗಳ ನಿಬಂದನೆಗಳೊಪಟ್ಟು (ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವಂತೆ) ಟರ್ಮ್ ಕೀ ಆಧಾರದ ಮೇಲೆ GOK e-procurement ಮೂಲಕ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಿದ್ದು, ಘಟನಾವಳಿಗಳ ವಿವಿರ ಈ ಕೆಳಕಂಡಂತೆಯಿದೆ.
1) ಟೆಂಡರ್ ಪ್ರಕಟಣೆಯ ಬಗ್ಗೆ ಆಕ್ಷೇಪಣೆಗಳನ್ನು ಸಲ್ಲಿಸಿ, ಪರಿಹರಿಸಿಕೊಳ್ಳಲು ನಿಗಧಿಪಡಿಸಿದ ಕೊನೆಯ **ದಿನಾಂಕ: 10-05-2022ರ ಸಂಜೆ 17:00ರ ವರೆಗೆ 2)** ಅರ್ಜಿಗಳನ್ನು ಸ್ವೀಕರಿಸುವ ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ಕೊನೆಯ **ದಿನಾಂಕ: 13-05-2022ರ ಸಂಜೆ 17:00ರ ವರೆಗೆ 3)** ಟೆಂಡರ್/ತಾಂತ್ರಿಕ ಬಿಡ್ ತೆರೆಯಲು ನಿಗಧಿಪಡಿಸಿದ **ದಿನಾಂಕ: 16-05-2022 ರಂದು ಬೆಳಿಗ್ಗೆ: 11:00 ಗಂಟೆಗೆ 4)** ಆರ್ಥಿಕ ಬಿಡ್ ತೆರೆಯಲು ನಿಗಧಿಪಡಿಸಿದ **ದಿನಾಂಕ: 20-05-2022 ರಂದು ಬೆಳಿಗ್ಗೆ 11:00 ಗಂಟೆಗೆ** Pre-bid meeting for 2 cover work is on **16-05-2022** place PRE Divn, Office, Madalagatta road, Hadagali, ಟೆಂಡರ್ ಪ್ರಕಟಣೆಯ ಹೆಚ್ಚಿನ ಮಾಹಿತಿಗಾಗಿ CEG (Government of Karnataka) **080-25501216/25501227** ಅಥವಾ www.eproc.karnataka.gov.in ಮತ್ತು ಕಚೇರಿ ವೇಳೆಯಲ್ಲಿ ಖುದ್ದಾಗಿ (eepredhadagali@gmail.com) ಸಂಪರ್ಕಿಸಬಹುದು.
ಸಹಿ/-ಕಾನಿಅ ಪಂರಾಇಂ. ವಿಭಾಗ ಹಡಗಲಿ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್ ಬಳ್ಳಾರಿ
ಕಾರ್ಯನಿರ್ವಾಹಕ ಅಭಿಯಂತರರವರ ಕಚೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ
ಸಂ. ಕಾನಿಇಂ./ಗ್ರಾ.ಕು.ನೀ&ನೈ/ವಿಬ/ಜೆಇ-01/JJM/2022-23/148 ದಿನಾಂಕ: 22-04-2022
ಇ-ಟೆಂಡರ್ ಪ್ರಟಕಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ-2000ರಂತೆ)
ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಬಳ್ಳಾರಿ, ಬಳ್ಳಾರಿ ಜಿಲ್ಲೆಯ 2021-22ನೇ ಸಾಲಿನ ಜಲ್ ಜೀವನ್ ಮೀಷನ್ ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ಸಂಡೂರು ತಾಲ್ಲೂಕಿನ ತೋರಣಗಲ್ಲು ಮತ್ತು ಇತರೆ 058 ಜನವಸತಿಗಳು ಹಗೂ ದರೋಜಿ ಮತ್ತು ಇತರೆ 02 ಜನವಸತಿಗಳಿಗೆ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಯನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಕರೆಯಲಾಗಿದ್ದು ಸದರಿ ಟೆಂಡರ್‌ನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ (www.eproc.karnataka.gov.in) ವೆಬ್‌ಸೈಟ್‌ನ್ನು ಸಂಪರ್ಕಿಸಲು ಕೋರಿದೆ. ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **ದಿನಾಂಕ: 22-04-2022** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **23-05-2022 ರಂದು ಸಂಜೆ 17:30 ರವರೆಗೆ** ಸಲ್ಲಿಸಬಹುದಾಗಿರುತ್ತದೆ. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 25-05-2022 ಸಮಯ ಬೆಳಿಗ್ಗೆ 11:00 ಗಂಟೆ** ನಂತರ, ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆಯನ್ನು ತಾಂತ್ರಿಕ ಬಿಡ್‌ಲ್ಲಿ ಅರ್ಹತೆ ಹೊಮದಿವರಿಗೆ ತಿಳಿಸಲಾಗುವುದು ಹಾಗೂ **ದಿನಾಂಕ: 04-05-2022 ರಂದು** ಪೂರ್ವಭಾವಿ ಸಭೆಯನ್ನು ಮುಖ್ಯ ಇಂಜನೀಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಕಚೇರಿ, ಬೆಂಗಳೂರು ಒಂದನೇ ಮಹಡಿ, ಕೆ.ಹೆಚ್.ಬಿ. ಕಟ್ಟಡ, ಕೆ.ಜಿ ರಸ್ತೆ, ಬೆಂಗಳೂರು-56009 ಕಚೇರಿಯಲ್ಲಿ ಕರೆಯಲಾಗಿದೆ.
ಕಾಮಗಾರಿಗಾಗಿ ಟೆಂಡರ್ ಸಲ್ಲಿಸಲು ನಿಗಧಿ ಪಡಿಸಿದ ಅರ್ಹತೆ, ಷರತ್ತುಗಳು ಕಾಮಗಾರಿ ವಿವರ ಇತ್ಯಾದಿಗಳನ್ನು **ದಿನಾಂಕ: 02-05-2022ರ 17:30 ಗಂಟೆಯವರೆಗೆ** ವಿಭಾಗ, ಕಚೇರಿಯಲ್ಲಿ ಅಥವಾ ಇ-ಪ್ರೊಕ್ಯೂರ್‌ಮೆಂಟ್ ಹೆಲ್ಪ್ ಡೆಸ್ಕ್‌ನಿಂದ ಪಡೆಯಬಹುದು. ಇನ್ನೂ ಹೆಚ್ಚಿನ ಮಾಹಿತಿಗಾಗಿ ಈ ವಿಭಾಗ ಕಚೇರಿ ಸಮಯದಲ್ಲಿ ಭೇಟಿ ನೀಡಿ ಮಾಹಿತಿಯನ್ನು ಪಡೆಯಬಹುದು.
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ.ಕು.ನೀ&ನೈ ವಿಭಾಗ, ಬಳ್ಳಾರಿ

ಚಿನ್ನದ ದರ ₹ 263 ಹೆಚ್ಚಳ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ಚಿನ್ನ, ಬೆಳ್ಳಿ ದರ ಏರಿಕೆ ಆಗಿದೆ. ಚಿನ್ನದ ದರ ₹ 263ರಷ್ಟು ಹೆಚ್ಚಾಗಿ ₹ 52,209ರಂತೆ ಮಾರಾಟ ಆಯಿತು.

ಬೆಳ್ಳಿ ಧಾರಣೆ ಕೆ.ಜಿ.ಗೆ ₹ 500ರಷ್ಟು ಹೆಚ್ಚಾಗಿ ₹ 67,707ಕ್ಕೆ ತಲುಪಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆಯ ಜೊತೆಗೆ ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯ ಇಳಿಕೆ ಆಗಿರುವುದೇ ದೇಶದಲ್ಲಿ ಚಿನ್ನದ ದರ ಹೆಚ್ಚಳಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,392
ಇಂದಿನ ಅಂತ್ಯ	17,172
▼	220
ದಿನದ ಕನಿಷ್ಠ	17,149

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹390
12 ಮೊಟ್ಟೆಗೆ ₹55
ಮೈಸೂರು
100 ಮೊಟ್ಟೆಗೆ ₹390

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹10000-15000

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹166
ಆರ್‌ಎಸ್‌ಎಸ್-5 ₹160
ಗುಡ್ ಲಾಟ್ ₹156
(ಪ್ರತಿ ಕೆ.ಜಿಗೆ)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)
ದಪ್ಪ ₹1000-1300
ಮಧ್ಯಮ ₹800-1000
ಸಣ್ಣ ₹400-800

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

1ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಎಚ್. ಜೆ. ರಾಮೇಗೌಡರು
ಪಟೇಲ್ ಜಟ್ಟಪ್ಪನವರ ಮಗ
ಜನನ: 21.07.1952 ಮರಣ: 23.4.2021
ನಿಮ್ಮ ಸವಿನೆನಪು ನಮ್ಮಲ್ಲಿ ಸದಾ ಹಸಿರಾಗಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ
ದುಃಖತಪ್ತರು :
ಧರ್ಮಪತ್ನಿ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಕುಟುಂಬದವರು.
ಚಿಕ್ಕಹುಲ್ಲೂರು.

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ. ಬಿ. ಕೆ. ಗೋಪಾಲಯ್ಯ
ನಿವೃತ್ತ ಸಿ.ಜಿ.ಎಂ.
ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಬೆಂಗಳೂರು
24.03.2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ
ನೀವು ತೋರಿದ ಬೆಳಕಲ್ಲಿ ಬೆಳಗಿದವರು ಅನೇಕ, ನಮ್ಮೆಲ್ಲರನ್ನು ಅಗಲಿದ ನಿಮ್ಮ ದೈವಾತ್ಮಕ್ಕೆ ಚಿರಶಾಂತಿ ಸಿಗಲೆಂದು ಪ್ರಾರ್ಥಿಸುವ
ನಿಮ್ಮ ದುಃಖಿತಸ್ಥ ಕುಟುಂಬದವರು

ರಷ್ಯಾದ ಕಚ್ಚಾ ತೈಲ ಖರೀದಿಸಿದ ರಿಲಯನ್ಸ್

ನವದೆಹಲಿ (ರಾಯಿಟರ್ಸ್): ರಷ್ಯಾ-ಉಕ್ರೇನ್ ಸಂಘರ್ಷ ಆರಂಭ ಆದ ಬಳಿಕ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್, ರಷ್ಯಾದಿಂದ 1.5 ಕೋಟಿ ಬ್ಯಾರಲ್‌ಗಳಷ್ಟು ಕಚ್ಚಾ ತೈಲ ಖರೀದಿಸಿದೆ ಎಂದು ವ್ಯಾಪಾರಿ ಮೂಲಗಳು ಹೇಳಿವೆ.

ಜೂನ್ ತ್ರೈಮಾಸಿಕದಲ್ಲಿ 50 ಲಕ್ಷ ಬ್ಯಾರಲ್ ಕಚ್ಚಾ ತೈಲ ಖರೀದಿ ಮಾಡಿದೆ ಎಂದು ಮಾಹಿತಿ ನೀಡಿವೆ. ಈ ಕುರಿತು ರಿಲಯನ್ಸ್ ತಕ್ಷಣಕ್ಕೆ ಪ್ರತಿಕ್ರಿಯೆ ನೀಡಿಲ್ಲ.

80 ಲಕ್ಷ ಬ್ಯಾರಲ್ ರಷ್ಯಾ ತೈಲವು ರಿಲಯನ್ಸ್ ನಿರ್ವಹಿಸುತ್ತಿರುವ ಸಿಕ್ಕಾ ಬಂದರಿಗೆ ಬಂದಿದೆ ಎಂದು ರಿಫಿನಿಟಿವ್ ಕಂಪನಿಯು ಹೇಳಿದೆ.

ಸಾಗಣೆ ವೆಚ್ಚ ಹೆಚ್ಚಿಗೆ ಇದೆ ಎನ್ನುವ ಕಾರಣಕ್ಕಾಗಿ ಭಾರತದ ಕಂಪನಿಗಳು ರಷ್ಯಾ-ಉಕ್ರೇನ್ ಸಂಘರ್ಷಕ್ಕೂ ಮೊದಲು ರಷ್ಯಾದಿಂದ ಅಷ್ಟಾಗಿ ತೈಲ ಖರೀದಿ ಮಾಡುತ್ತಿರಲಿಲ್ಲ.

ಪಾಶ್ಚಾತ್ಯ ದೇಶಗಳು ರಷ್ಯಾದ ಮೇಲೆ ನಿರ್ಬಂಧ ವಿಧಿಸಿದ ಬಳಿಕ ರಷ್ಯಾ ದೇಶವು ಕಡಿಮೆ ಬೆಲೆಗೆ ಕಚ್ಚಾ ತೈಲ ನೀಡಲು ಆರಂಭಿಸಿತು. ಹೀಗಾಗಿ ಭಾರತದ ಹಲವು ಕಂಪನಿಗಳು ಖರೀದಿ ಮಾಡುತ್ತಿವೆ.

ಶೇ 5ಕ್ಕಿಂತ ತುಸು ಹೆಚ್ಚು ಷೇರು ಮಾರಲಿರುವ ಕೇಂದ್ರ?

ಎಲ್‌ಐಸಿ ಐಪಿಒ ಗುರಿ ಅರ್ಧದಷ್ಟು ಇಳಿಕೆ

ನವದೆಹಲಿ (ರಾಯಿಟರ್ಸ್): ಕೇಂದ್ರ ಸರ್ಕಾರವು ಎಲ್‌ಐಸಿ ಐಪಿಒ ಮೂಲಕ ಸಂಗ್ರಹಿಸಲು ಉದ್ದೇಶಿಸಿರುವ ಮೊತ್ತವನ್ನು ₹ 29,640 ಕೋಟಿಗೆ ತಗ್ಗಿಸಿದೆ. ಇದು ಮೊದಲು ಉದ್ದೇಶಿಸಿದ್ದ ಮೊತ್ತಕ್ಕೆ ಹೋಲಿಸಿದರೆ ಸರಿಸುಮಾರು ಅರ್ಧದಷ್ಟು ಕಡಿಮೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಕಂಪನಿಯಲ್ಲಿನ ಶೇಕಡ 5ರಷ್ಟು ಷೇರುಗಳನ್ನು ಮಾರಾಟ ಮಾಡುವ ಮೂಲಕ ₹ 60 ಸಾವಿರ ಕೋಟಿ ಸಂಗ್ರಹಿಸುವ ಗುರಿಯನ್ನು ಸರ್ಕಾರ ಹೊಂದಿತ್ತು.

ಹೂಡಿಕೆದಾರರಿಂದ ಪ್ರತಿಕ್ರಿಯೆ ಪಡೆದ ಬಳಿಕ ಕಂಪನಿಯ ಒಟ್ಟಾರೆ ಮೌಲ್ಯದ ಅಂದಾಜನ್ನು ಸಹ ತಗ್ಗಿಸಲು ಸರ್ಕಾರ ಮುಂದಾಗಿದೆ ಎಂದು ಮೂಲಗಳು ಹೇಳಿವೆ.

ಹೂಡಿಕೆದಾರರು ಈಚಿನ ಕೆಲವು ತಿಂಗಳುಗಳಿಂದ ಬಹಳ ಎಚ್ಚರಿಕೆಯಿಂದ ವಹಿವಾಟು ನಡೆಸುತ್ತಿದ್ದಾರೆ. ಐಪಿಒ ವಿಚಾರವಾಗಿ ರೋಡ್‌ಷೋ ನಡೆಸಿದ ಬಳಿಕ, ಕಂಪನಿಗೆ ಗರಿಷ್ಠ ಮೌಲ್ಯ ನಿಗದಿಪಡಿಸುವುದರಲ್ಲಿ ಯಾವುದೇ ಅರ್ಥ ಇಲ್ಲ ಎನ್ನುವುದು ಮನವರಿಕೆ ಆಗಿದೆ. ಕಂಪನಿಯು ಷೇರು ಮಾರುಕಟ್ಟೆಯಲ್ಲಿ ನೋಂದಣಿ ಆದ ಬಳಿಕ ಗರಿಷ್ಠ ಮೌಲ್ಯ ತಲುಪಲು ಯತ್ನಿಸಬಹುದು. ಏನೇ ಆದರೂ ಐಪಿಒ ಬಳಿಕ ಸರಿಸುಮಾರು ಶೇ 95ರಷ್ಟು ಷೇರುಪಾಲು ಸರ್ಕಾರದ ಬಳಿಯೇ ಇರಲಿದೆ ಎಂದು ಮೂಲಗಳು ಹೇಳಿವೆ.

ಮುಖ್ಯಾಂಶಗಳು
- ₹ 29,640 ಕೋಟಿ ಮೊತ್ತ ಸಂಗ್ರಹಿಸುವ ಗುರಿ
- ಒಟ್ಟಾರೆ ಮೌಲ್ಯವನ್ನೂ ತಗ್ಗಿಸುವ ಸಾಧ್ಯತೆ

ಕೇಂದ್ರ ಸರ್ಕಾರವು ಎಲ್‌ಐಸಿಯಲ್ಲಿ ಈಗ ಶೇ 100ರಷ್ಟು ಷೇರುಗಳನ್ನು ಹೊಂದಿದ್ದು ಈ ಪೈಕಿ ಶೇ 5ಕ್ಕಿಂತ ತುಸು ಹೆಚ್ಚಿನ ಷೇರುಪಾಲನ್ನು ಮಾರಾಟ ಮಾಡುವ ಯೋಜನೆ ಹೊಂದಿದೆ ಎಂದು ಮೂಲಗಳು ತಿಳಿಸಿವೆ. ಶೇ 5ರಷ್ಟು ಷೇರುಗಳನ್ನು ಮಾತ್ರ ಮಾರಾಟ ಮಾಡಲಾಗುವುದು ಎಂದು ಕೇಂದ್ರ ಈ ಹಿಂದೆ ಹೇಳಿತ್ತು.

ಐಪಿಒ ಮೊತ್ತವನ್ನು ಅರ್ಧದಷ್ಟು ಕಡಿಮೆ ಮಾಡಿದರೂ ಈವರೆಗಿನ ಅತಿದೊಡ್ಡ ಐಪಿಒ ಮೊತ್ತ ಇದಾಗಲಿದೆ. ಕೇಂದ್ರ ಸರ್ಕಾರವು ಕಂಪನಿಯ ಮೌಲ್ಯ ₹ 17 ಲಕ್ಷ ಕೋಟಿ ಆಗಬಹುದು ಎಂದು ಈ ಹಿಂದೆ ಅಂದಾಜು ಮಾಡಿತ್ತು. ಆದರೆ ಈಗ ಕಂಪನಿಯ ಮೌಲ್ಯವನ್ನು ₹ 6 ಲಕ್ಷ ಕೋಟಿಗೆ ನಿಗದಿ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ. ಈ ವಿಚಾರವಾಗಿ ಕೇಂದ್ರ ಹಣಕಾಸು ಸಚಿವಾಲಯದ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ಸುದ್ದಿ 2 ನಿಮಿಷ

ಮಾರಾಟದ ಒತ್ತಡ: ಸೆನ್ಸೆಕ್ಸ್ 715 ಅಂಶ ಇಳಿಕೆ

ಮುಂಬೈ (ಪಿಟಿಐ): ಮಾರಾಟದ ಒತ್ತಡಕ್ಕೆ ಒಳಗಾದ ದೇಶದ ಷೇರುಪೇಟೆಗಳು ಶುಕ್ರವಾರದ ವಹಿವಾಟಿನಲ್ಲಿ ಇಳಿಕೆ ಕಂಡವು. ಇದರಿಂದಾಗಿ ಎರಡು ದಿನಗಳ ಸೂಚ್ಯಂಕಗಳ ಓಟಕ್ಕೆ ಅಡ್ಡಿ ಉಂಟಾಯಿತು.

ಜಾಗತಿಕ ಮಾರುಕಟ್ಟೆಯ ಪ್ರಭಾವದ ಕಾರಣದಿಂದಾಗಿ ಐ.ಟಿ., ಬ್ಯಾಂಕಿಂಗ್ ಮತ್ತು ಇಂಧನ ವಲಯದ ಷೇರುಗಳು ಮಾರಾಟದ ಒತ್ತಡಕ್ಕೆ ಒಳಗಾದವು.

ರೂಪಾಯಿ ಮೌಲ್ಯ ಇಳಿಕೆ ಮತ್ತು ವಿದೇಶಿ ಬಂಡವಾಳ ಹೊರಹರಿವು ಕೂಡ ವಹಿವಾಟಿನ ಮೇಲೆ ಪರಿಣಾಮ ಉಂಟುಮಾಡಿವೆ ಎಂದು ವಿಶ್ಲೇಷಕರು ಹೇಳಿದ್ದಾರೆ.



ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 714 ಅಂಶ ಇಳಿಕೆ ಕಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 220 ಅಂಶ ಇಳಿಕೆ ಕಂಡಿತು.

ರೂಪಾಯಿ ಮೌಲ್ಯ ಇಳಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 25 ಪೈಸೆ ಇಳಿಕೆ ಆಗಿದ್ದು, ಒಂದು ಡಾಲರ್‌ಗೆ ₹ 76.42ರಂತೆ ವಿನಿಮಯಗೊಂಡಿತು.

ಬ್ರೆಂಟ್ ಕಚ್ಚಾ ತೈಲ ದರ ಶೇ 1.60ರಷ್ಟು ಇಳಿಕೆ ಆಗಿ ಒಂದು ಬ್ಯಾರಲ್‌ಗೆ 106.6 ಬ್ಯಾರಲ್‌ಗಳಿಗೆ ತಲುಪಿತು.

ಸೀಮಿತ ಅವಧಿಗೆ ಗೃಹ ಸಾಲದ ಬಡ್ಡಿ ತಗ್ಗಿಸಿದ ಬ್ಯಾಂಕ್ ಆಫ್ ಬರೋಡಾ

ಮುಂಬೈ (ಪಿಟಿಐ): ಗೃಹ ಸಾಲಗಳ ಮೇಲಿನ ಬಡ್ಡಿದರವನ್ನು ಸೀಮಿತ ಅವಧಿಗೆ ಶೇಕಡ 6.75ರಿಂದ ಶೇ 6.50ಕ್ಕೆ ಇಳಿಕೆ ಮಾಡಿರುವುದಾಗಿ ಬ್ಯಾಂಕ್ ಆಫ್ ಬರೋಡಾ ಶುಕ್ರವಾರ ತಿಳಿಸಿದೆ. ಈ ಬಡ್ಡಿದರವು ಜೂನ್ 30ರವರೆಗೆ ಮಾತ್ರವೇ ಜಾರಿಯಲ್ಲಿ ಇರಲಿದೆ ಎಂದು ಹೇಳಿದೆ.

'ಕೆಲವು ತಿಂಗಳುಗಳಿಂದ ಮನೆ ಮಾರಾಟ ನಿರಂತರವಾಗಿ ಹೆಚ್ಚಾಗುತ್ತಿರುವುದನ್ನು ಗಮನಿಸಿದ್ದೇವೆ. ಹೀಗಾಗಿ ವಿಶೇಷ, ಸೀಮಿತ ಅವಧಿಯ ಬಡ್ಡಿದರ ನೀಡಲು ಇದು ಸೂಕ್ತ ಸಮಯ. ಸಂಸ್ಕರಣಾ ಶುಲ್ಕವೂ ಇರುವುದಿಲ್ಲ' ಎಂದು ಬ್ಯಾಂಕ್‌ನ ಪ್ರಧಾನ ವ್ಯವಸ್ಥಾಪಕ ಎಚ್.ಟಿ. ಸೋಲಂಕಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶೇ 6.5ರಷ್ಟು ಇದ್ದ ಬಡ್ಡಿದರವನ್ನು ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ಶೇ 6.75ಕ್ಕೆ ಹೆಚ್ಚಿಸಲಾಗಿತ್ತು. ಇದೀಗ ಮತ್ತೆ ಸೀಮಿತ ಅವಧಿಯ ಕೊಡುಗೆಯಾಗಿ ಶೇ 6.5ಕ್ಕೆ ಇಳಿಕೆ ಮಾಡಲಾಗಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

'ಫ್ಯೂಚರ್'ಗೆ ಸಾಲ ಕೊಟ್ಟವರ ವಿರೋಧ

ನವದೆಹಲಿ (ಪಿಟಿಐ): ಫ್ಯೂಚರ್ ರಿಟೇಲ್ ಲಿಮಿಟೆಡ್‌ಗೆ ಅಡಮಾನ ಸಾಲ ನೀಡಿದವರ ಪೈಕಿ ಬಹುತೇಕರು, ಕಂಪನಿಯು ರಿಲಯನ್ಸ್ ರಿಟೇಲ್ ಜೊತೆ ಮಾಡಿಕೊಂಡಿರುವ ₹ 24,713 ಕೋಟಿ ಮೌಲ್ಯದ ಒಪ್ಪಂದವನ್ನು ತಿರಸ್ಕರಿಸಿದ್ದಾರೆ.

ಆದರೆ, ಫ್ಯೂಚರ್ ರಿಟೇಲ್‌ನ ಷೇರುದಾರರು ಹಾಗೂ ಅಡಮಾನ ಇಲ್ಲದೆ ಸಾಲ ನೀಡಿದವರ ಪೈಕಿ ತಲಾ ಶೇಕಡ 75ಕ್ಕಿಂತ ಹೆಚ್ಚಿನವರು ಈ ಒಪ್ಪಂದಕ್ಕೆ ಅನುಮೋದನೆ ನೀಡಿದ್ದಾರೆ.

ಅಡಮಾನ ಸಾಲ ನೀಡಿರುವ ಶೇ 75ಕ್ಕಿಂತ ಹೆಚ್ಚಿನವರ ಒಪ್ಪಿಗೆ ಪಡೆಯಲು ಫ್ಯೂಚರ್ ರಿಟೇಲ್‌ಗೆ ಸಾಧ್ಯವಾಗಿಲ್ಲ.

ಅಡಮಾನ ಸಾಲ ಕೊಟ್ಟವರ ಪೈಕಿ ಶೇ 69.29ರಷ್ಟು ಜನ ಒಪ್ಪಂದವನ್ನು ತಿರಸ್ಕರಿಸಿದ್ದಾರೆ. ಶೇ 30.71ರಷ್ಟು ಜನ ಒಪ್ಪಿದ್ದಾರೆ ಎಂದು ಫ್ಯೂಚರ್ ರಿಟೇಲ್ ಲಿಮಿಟೆಡ್ ಷೇರುಪೇಟೆಗೆ ಮಾಹಿತಿ ನೀಡಿದೆ.

ರಿಲಯನ್ಸ್ ಜೊತೆಗಿನ ಒಪ್ಪಂದಕ್ಕೆ ಫ್ಯೂಚರ್ ಸಮೂಹದ ಅಂಗಸಂಸ್ಥೆಯಾಗಿರುವ ಫ್ಯೂಚರ್ ಲೈಫ್‌ಸ್ಟೈಲ್ ಫ್ಯಾಷನ್ ಲಿಮಿಟೆಡ್‌ಗೆ ಕೂಡ ಅಡಮಾನ ಸಾಲ ನೀಡಿದ ಬಹುತೇಕರಿಂದ ಒಪ್ಪಿಗೆ ಪಡೆಯಲು ಸಾಧ್ಯವಾಗಿಲ್ಲ.

ಫ್ಯೂಚರ್ ಸಮೂಹವು ತನ್ನ ರಿಟೇಲ್, ಸಗಟು, ಸರಕು ಸಾಗಣೆ ವಲಯಗಳಲ್ಲಿನ ಒಟ್ಟು 19 ಕಂಪನಿಗಳನ್ನು ರಿಲಯನ್ಸ್ ರಿಟೇಲ್ ವೆಂಚರ್ಸ್ ಲಿಮಿಟೆಡ್‌ಗೆ ಮಾರಾಟ ಮಾಡುವ ಘೋಷಣೆಯನ್ನು 2020ರ ಆಗಸ್ಟ್‌ನಲ್ಲಿ ಮಾಡಿತು. ಆದರೆ ಇದಕ್ಕೆ ಅಮೆಜಾನ್ ವಿರೋಧ ವ್ಯಕ್ತಪಡಿಸಿತ್ತು.

ಮೀಸಲು ಸಂಗ್ರಹ ಇಳಿಕೆ

ಮುಂಬೈ(ಪಿಟಿಐ): ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹ ಏಪ್ರಿಲ್ 15ಕ್ಕೆ ಕೊನೆಗೊಂಡ ವಾರದಲ್ಲಿ ₹ 2,363 ಕೋಟಿಯಷ್ಟು ಕಡಿಮೆ ಆಗಿದ್ದು, ₹ 45.82 ಲಕ್ಷ ಕೋಟಿಗೆ ಇಳಿಕೆ ಆಗಿದೆ.

ಒಂದು ಡಾಗ್ ಲಿಂಬೆಗೆ ಕನಿಷ್ಠ ₹ 4 ಸಾವಿರದಿಂದ ಗರಿಷ್ಠ ₹7 ಸಾವಿರ ದರ

ಲಿಂಬೆ ದರ ಏರಿಕೆ: ಬೆಳೆಗಾರರಿಗೆ ಖುಷಿ

• ಬಸವರಾಜ್ ಸಂಪಳ್ಳಿ

ವಿಜಯಪುರ: ಈ ಬಾರಿಯ ಬೇಸಿಗೆಯಲ್ಲಿ ಲಿಂಬೆ ಹಣ್ಣಿಗೆ ಮಾರುಕಟ್ಟೆಯಲ್ಲಿ ಭಾರೀ ಬೇಡಿಕೆ ಬಂದಿದ್ದು, ದರವು ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದೆ. ಲಿಂಬೆ ಬೆಳೆಗಾರರು ಖುಷಿಯಾಗಿದ್ದಾರೆ.

ರಾಜ್ಯದ 'ಲಿಂಬೆ ಕಣಜ' ಎಂದೇ ಪ್ರಸಿದ್ಧವಾದ ವಿಜಯಪುರ ಜಿಲ್ಲೆಯಲ್ಲಿ ವಾರದ ಸಂತೆಗಳಲ್ಲಿ ದೊಡ್ಡ ಗಾತ್ರ ಲಿಂಬೆ ₹ 20ಕ್ಕೆ ನಾಲ್ಕರಂತೆ ಮತ್ತು ಸಣ್ಣ ಗಾತ್ರದ ಲಿಂಬೆ ₹ 20ಕ್ಕೆ ಆರರಂತೆ ಮಾರಾಟವಾಗುತ್ತಿದೆ.

ಹಿಂದಿನ ವರ್ಷಗಳಲ್ಲಿ 40 ಕೆ.ಜಿ. ತೂಕದ ಒಂದು ಡಾಗ್ (1,100 ಲಿಂಬೆ ಕಾಯಿಗಳಿರುವ ಒಂದು ಚೀಲ) ಕನಿಷ್ಠ ₹ 3 ಸಾವಿರದಿಂದ ಗರಿಷ್ಠ ₹ 4 ಸಾವಿರಕ್ಕೆ ಮಾರಾಟವಾಗುತ್ತಿತ್ತು. ಸದ್ಯ ಒಂದು ಡಾಗ್‌ಗೆ ಕನಿಷ್ಠ ₹ 4 ಸಾವಿರದಿಂದ ಗರಿಷ್ಠ ₹ 7 ಸಾವಿರಕ್ಕೆ ದರ ಏರಿದೆ.

> ವಿಜಯಪುರ ಜಿಲ್ಲೆಯ ಲಿಂಬೆಗೆ ದೆಹಲಿ, ಮುಂಬೈ, ನೇಪಾಳದಲ್ಲಿ ಬೇಡಿಕೆ ಇದೆ. ಪ್ರತಿ ವಾರ ಲಿಂಬೆ ಪೂರೈಕೆ ಆಗುತ್ತಿದೆ
>
> **ಸಂತೋಷ ಸಪ್ಪಂಡಿ,** ವ್ಯವಸ್ಥಾಪಕ, ರಾಜ್ಯ ಲಿಂಬೆ ಅಭಿವೃದ್ಧಿ ಮಂಡಳಿ

'ವಿಜಯಪುರ ಎಪಿಎಂಸಿ ಮಾರುಕಟ್ಟೆಗೆ ಪ್ರತಿ ಬುಧವಾರ ಹಾಗೂ ಭಾನುವಾರ 2,500ರಿಂದ 3,000 ಡಾಗ್ (ಲಿಂಬೆ ಚೀಲ) ಆವಕವಾಗುತ್ತಿದೆ. ಗುಣಮಟ್ಟದ ಲಿಂಬೆ ಹಣ್ಣಿನ ಪೂರೈಕೆ ಕಡಿಮೆಯಾಗಿರುವುದರಿಂದ ದರ ಏರಿಕೆಯಾಗಿದೆ, ರೈತರಿಗೆ ಹೆಚ್ಚಿನ ದರ ಸಿಗುತ್ತಿದೆ' ಎಂದು ಎಪಿಎಂಸಿ ಮಾರುಕಟ್ಟೆ ವ್ಯವಸ್ಥಾಪಕ ರಮೇಶಗೌಡ ತಿಳಿಸಿದರು.

ವಿಜಯಪುರ ಎಪಿಎಂಸಿಯಲ್ಲಿ ಖರೀದಿಸಿ ರಾಶಿ ಹಾಕಿರುವ ಲಿಂಬೆ ಮೂಟೆ
–ಪ್ರಜಾವಾಣಿ ಚಿತ್ರ

'ಹವಾಮಾನ ವೈಪರೀತ್ಯದಿಂದಾಗಿ ಈ ಬಾರಿ ಲಿಂಬೆ ಗಿಡಗಳು ಹೂವು, ಕಾಯಿ ಕಟ್ಟಲು ತೊಂದರೆಯಾಗಿತ್ತು. ಹೀಗಾಗಿ ಈ ವರ್ಷ ಇಳುವರಿ ಕಡಿಮೆ, ಎಕರೆಗೆ ಸರಾಸರಿ 10 ಟನ್ ಇಳುವರಿ ಬಂದಿದೆ. ಜೊತೆಗೆ ಗುಣಮಟ್ಟದ ಲಿಂಬೆ ಹಣ್ಣುಗಳ ಕೊರತೆಯೂ ಇದೆ' ಎಂದು ಕರ್ನಾಟಕ ರಾಜ್ಯ ಲಿಂಬೆ ಅಭಿವೃದ್ಧಿ ಮಂಡಳಿಯ ವ್ಯವಸ್ಥಾಪಕ ಸಂತೋಷ ಸಪ್ಪಂಡಿ 'ಪ್ರಜಾವಾಣಿ'ಗೆ ತಿಳಿಸಿದರು.

ಹಣದುಬ್ಬರ: ಎಂಪಿಸಿ ಕಳವಳ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿಯು (ಎಂಪಿಸಿ) ಈಚೆಗೆ ನಡೆದ ಸಭೆಯಲ್ಲಿ, ಹಣದುಬ್ಬರ ಹೆಚ್ಚಾಗುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದೆ.

ಸಮಿತಿಯು ಏಪ್ರಿಲ್ 6ರಿಂದ 8ರವರೆಗೆ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ನೇತೃತ್ವದಲ್ಲಿ ಸಭೆ ಸೇರಿತ್ತು. ಸಭೆಯು ರೆಪೊ ದರ ಹೆಚ್ಚಿಸದಿರುವ ಒಕ್ಕೊರಲ ತೀರ್ಮಾನ ಕೈಗೊಂಡಿತ್ತು. ಸಭೆಯಲ್ಲಿ ಚರ್ಚೆಯಾದ ವಿಷಯಗಳನ್ನು ಆರ್‌ಬಿಐ ಶುಕ್ರವಾರ ಬಹಿರಂಗಪಡಿಸಿದೆ.

ಸಭೆಯಲ್ಲಿ ಪಾಲ್ಗೊಂಡಿದ್ದ ಆರ್‌ಬಿಐ ಡೆಪ್ಯುಟಿ ಗವರ್ನರ್ ದೇವವ್ರತ ಪಾತ್ರಾ ಅವರು, 'ಜಾಗತೀಕರಣಕ್ಕೆ

ವಿಮುಖವಾಗಿ ಸಾಗುತ್ತಿರುವ ಜಗತ್ತಿನಲ್ಲಿ ಒಂದು ಸಂಗತಿ ಮಾತ್ರ ಜಗತ್ತಿನ ಎಲ್ಲೆಡೆ ವ್ಯಾಪಕವಾಗಿ ಕಾಣಿಸುತ್ತಿದೆ. ಅದು ಹಣದುಬ್ಬರ ಹೆಚ್ಚಳಕ್ಕೆ ಸಂಬಂಧಿಸಿದ ಎಚ್ಚರಿಕೆಯ ಗಂಟೆ' ಎಂದು ಸಭೆಯಲ್ಲಿ ಹೇಳಿದ್ದರು.

ಅಭಿವೃದ್ಧಿ ಹೊಂದಿದ ದೇಶಗಳ ಪೈಕಿ ಶೇ 60ರಷ್ಟು ದೇಶಗಳಲ್ಲಿ ಹಣದುಬ್ಬರ ಪ್ರಮಾಣವು ಶೇ 5ಕ್ಕಿಂತ ಹೆಚ್ಚಿದೆ. 1980ರ ದಶಕದ ನಂತರದಲ್ಲಿ ಇಂತಹ ಪರಿಸ್ಥಿತಿ ಉದ್ಭವಿಸಿರಲಿಲ್ಲ. ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಪೈಕಿ ಶೇ 50ಕ್ಕಿಂತ ಹೆಚ್ಚು ದೇಶಗಳಲ್ಲಿ ಹಣದುಬ್ಬರ ಪ್ರಮಾಣವು ಶೇ 7ಕ್ಕಿಂತ ಜಾಸ್ತಿ ಇದೆ. ಬೆಲೆಯ ಏರಿಕೆಯು ಸಮಾಜದ ಸಹನೆಯ ಮಟ್ಟವನ್ನು ಪರೀಕ್ಷಿಸುತ್ತಿದೆ ಎಂದು ಪಾತ್ರಾ ಅವರು ಸಭೆಯಲ್ಲಿ ಹೇಳಿದ್ದರು.

ಎಂಪಿಸಿ ಸದಸ್ಯೆಯಾಗಿರುವ ಅಶೀಮಾ ಗೋಯಲ್ ಅವರು, 'ಇಂಧನ ಮೇಲಿನ ತೆರಿಗೆಯನ್ನು ತಗ್ಗಿಸಲು ಅವಕಾಶ ಇದೆ. ಎಕ್ಸೈಸ್ ಸುಂಕವನ್ನು 2019ರ ಮಟ್ಟಕ್ಕೆ ತಗ್ಗಿಸಬಹುದು' ಎಂದು ಹೇಳಿದ್ದರು.

ಯುದ್ಧಕ್ಕೆ ಸಂಚು: ಇಬ್ಬರ ವಿರುದ್ಧ ಆರೋಪ ಪಟ್ಟಿ

ನವದೆಹಲಿ (ಪಿಟಿಐ): ಭಾರತದ ವಿರುದ್ಧ ಯುದ್ಧ ಆರಂಭಿಸುವ ಸಂಚು ರೂಪಿಸುತ್ತಿದ್ದ ಮತ್ತು ಬೇಹುಗಾರಿಕೆಯ ಶಂಕೆಯ ಮೇಲೆ ಇಬ್ಬರ ವಿರುದ್ಧ ರಾಷ್ಟ್ರೀಯ ತನಿಖಾ ತಂಡವು ನ್ಯಾಯಾಲಯದಲ್ಲಿ ಆರೋಪ ಪಟ್ಟಿ ಸಲ್ಲಿಸಿದೆ ಎಂದು ಸಂಸ್ಥೆಯ ವಕ್ತಾರರು ತಿಳಿಸಿದ್ದಾರೆ.

ಗುಜರಾತ್‌ನ ಅಲ್ತಾಫ್ ಹುಸೇನ್ ಗಂಚಿಬಾಯಿ ಅಲಿಯಾಸ್ ಶಕೀಲ್ ಮತ್ತು ಪಾಕಿಸ್ತಾನದ ಪ್ರಜೆ ವಾಸೀಮ್ ಶಂಕಿತರು. ಹೈದರಾಬಾದ್‌ನ ನ್ಯಾಯಾಲಯವೊಂದರಲ್ಲಿ ಭಾರತೀಯ ದಂಡಸಂಹಿತೆ, ಐ.ಟಿ. ನಿಯಮ ಮತ್ತು ಕಾನೂನು ಬಾಹಿರ ಚಟುವಟಿಕೆ ತಡೆ ಕಾಯ್ದೆ ಅಡಿ ಆರೋಪ ಪಟ್ಟಿ ಸಲ್ಲಿಸಲಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	510
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54000
ಕಾರ್ಕಳ	
ಹೊಸತು	40000-45000
ಹಳತು	46000-54000
ಹೊಸನಗರ	
ಬಿಳಿಗೋಟು	24299-28299
ಚಾಲಿ	33299-38399
ಕೆಂಪುಗೋಟು	29299-35299
ರಾಶಿ	41569-48699
ಕುಮಟ	
ಚಿಪ್ಪು	26609-30509
ಕೋಕ	19099-29999
ಫ್ಯಾಕ್ಟರಿ	10109-20269
ಹಳೆಚಾಲಿ	46099-50299
ಹೊಸಚಾಲಿ	35999-40119
ಪುತ್ತೂರು	
ಕೋಕ	11000-26000
ಹೊಸತು	27500-45000
ಶಿವಮೊಗ್ಗ	
ಬೆಟ್ಟೆ	49619-54120
ಗೊರಬಲು	23850-36169
ರಾಶಿ	45589-48599
ಸರಕು	54599-77699
ಸಿದ್ದಾಪುರ	
ಬಿಳಿಗೋಟು	24099-33699
ಕೋಕ	23599-30899
ಹೊಸಚಾಲಿ	36809-40399
ಕೆಂಪುಗೋಟು	27689-30369
ರಾಶಿ	43699-48599
ತಟ್ಟಿಬೆಟ್ಟೆ	34099-42009
ಶಿರಸಿ	
ಬೆಟ್ಟೆ	37698-46899
ಬಿಳಿಗೋಟು	21119-34099
ಚಾಲಿ	20899-40899
ರಾಶಿ	40689-49749
ಸಿದ್ದಾಪುರ	
ಬಿಳಿಗೋಟು	26699-33750
ಕೋಕ	18899-30899
ಚಾಲಿ	36210-41069
ಕೆಂಪುಗೋಟು	32099-36919
ರಾಶಿ	48219-53899
ತಟ್ಟಿಬೆಟ್ಟೆ	38010-47699
ರಾಮನಗರ ರೇಷ್ಮೆಗೂಡು	
ಮಿಶ್ರತಳಿ	400-735
ದ್ವಿತಳಿ	288-842

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16200	16000	16100	228.1 ಸೆಂಟ್ಸ್
ಎಸಿ	8540	8200	8600	
ಆರ್‌ಪಿ	9500	9500	9550	ಲಂಡನ್
ಆರ್‌ಸಿ	4265	4100	4300	2114 ಡಾಲರ್ಸ್

ಸಂಕ್ಷಿಪ್ತ ಸುದ್ದಿ

ರಾಜ್ಯದಲ್ಲಿ ಅತಿದೊಡ್ಡ ಇ.ವಿ. ಘಟಕ: ಒಮೆಗಾ

ಮುಂಬೈ (ಪಿಟಿಐ): ತ್ರಿಚಕ್ರ ವಾಹನ ತಯಾರಿಕೆಗೆ ವಿಶ್ವದ ಅತಿದೊಡ್ಡ ಘಟಕವನ್ನು ಕರ್ನಾಟಕದಲ್ಲಿ ಸ್ಥಾಪನೆ ಮಾಡುವುದಾಗಿ ಒಮೆಗಾ ಸೀಕಿ ಮೊಬಿಲಿಟಿ ಕಂಪನಿಯು ಶುಕ್ರವಾರ ತಿಳಿಸಿದೆ. ಇದಕ್ಕಾಗಿ ₹ 1,900 ಕೋಟಿ ಹೂಡಿಕೆ ಮಾಡುವುದಾಗಿ ಹೇಳಿದೆ.

250 ಎಕರೆ ಪ್ರದೇಶದಲ್ಲಿ ಮೂರು ಹಂತಗಳಲ್ಲಿ ತಯಾರಿಕಾ ಘಟಕ ನಿರ್ಮಾಣ ಆಗಲಿದ್ದು, ಇದರ ವಾರ್ಷಿಕ ಸಾಮರ್ಥ್ಯವು 10 ಲಕ್ಷ ಇರಲಿದೆ. ಮುಂದಿನ ಹಣಕಾಸು ವರ್ಷದಿಂದ ತಯಾರಿಕೆ ಆರಂಭ ಆಗಲಿದೆ ಎಂದು ಕಂಪನಿಯು ತಿಳಿಸಿದೆ.

ಈ ಘಟಕ ನಿರ್ಮಾಣಕ್ಕೆ ಈಕ್ವಿಟಿ ಮತ್ತು ಸಾಲದ ಮೂಲಕ ಬಂಡವಾಳ ಸಂಗ್ರಹ ಮಾಡಲಾಗುವುದು ಎಂದು ಹೇಳಿದೆ.

ಜೋಯಾಲುಕ್ಕಾಸ್: ಅಕ್ಷಯ ತೃತೀಯ ಕೊಡುಗೆ

ಬೆಂಗಳೂರು: ಅಕ್ಷಯ ತೃತೀಯ ಹಿನ್ನೆಲೆಯಲ್ಲಿ ₹ 50 ಸಾವಿರಕ್ಕಿಂತ ಹೆಚ್ಚಿನ ಮೌಲ್ಯದ ವಜ್ರ, ಕತ್ತರಿಸದ ವಜ್ರ ಹಾಗೂ ಅತ್ಯಮೂಲ್ಯ ಆಭರಣಗಳನ್ನು ಖರೀದಿಸುವವರಿಗೆ ₹ 2 ಸಾವಿರ ಮೊತ್ತದ ಗಿಫ್ಟ್ ವೋಚರ್ ನೀಡಲಾಗುವುದು ಎಂದು ಜೋಯಾಲುಕ್ಕಾಸ್ ಹೇಳಿದೆ.

ಈ ಕೊಡುಗೆಯು ಕಂಪನಿಯ ಎಲ್ಲ ಮಳಿಗೆಗಳಲ್ಲಿ ಮೇ 3ರವರೆಗೆ ಲಭ್ಯವಿರಲಿದೆ. ₹ 50 ಸಾವಿರಕ್ಕಿಂತ ಹೆಚ್ಚಿನ ಮೌಲ್ಯದ ಚಿನ್ನದ ಆಭರಣ ಖರೀದಿಸುವವರಿಗೆ ₹ 1,000 ಮೌಲ್ಯದ ಗಿಫ್ಟ್ ವೋಚರ್ ಸಿಗಲಿದೆ. ₹ 10 ಸಾವಿರ ಮೌಲ್ಯದ ಬೆಳ್ಳಿ ಆಭರಣ ಖರೀದಿ ಮಾಡುವವರಿಗೆ ₹ 500 ಮೌಲ್ಯದ ವೋಚರ್ ದೊರೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

CMG, URGENTLY Required Boys/ Girls, 10th, 2nd PUC (Pass/ Fail) Any Degree (Room/ Food Available) 7338404970/ 9916331164

Wanted

General

Part-Time Jobs

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ,ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ತಕ್ಷಣ ಬೇಕಾಗಿದ್ದಾರೆ.ಬೆಂಗಳೂರಿನಲ್ಲಿ ಕೆಲಸಕ್ಕೆ,ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ,ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು,ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ.ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10,000 ರಿಂದ 15,000/- ESI & PF ಸೌಲಭ್ಯವಿರುತ್ತದೆ.ಬೆಂಗಳೂರು-56ಸಂಪರ್ಕಿಸಿ: 9606523337, 9606384001.

ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ ಆನ್‌ಲೈನ್ ಕಂಪನಿಗಳಿಗೆ 10ನೇ,ಪಿಯುಸಿ, ಡಿಗ್ರಿ, ಡಿಪ್ಲೋಮಾದವರು 18,000-56,000/- (ತಕ್ಷಣ ಬೇಕಾಗಿದ್ದಾರೆ) ವಸತಿಯೂಟದೊಂದಿಗೆ 8197650569, 7204396011

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17800-68000. 9538811223, 9538811104

Walk-in

shadowfax We Deliver
WALK-IN DRIVE FOR HUB IN-CHARGES (Last Mile Operations)
BASIC CRITERIA
• Age limit - 35 years
• Any Graduation
• Experience - more than 2 years
• Local Language(Must)
SPOC details as mentioned below
Locations: Bangalore
HR SPOC: Shankar
Contact: 7259472711
Email: Shankar.sk@shadowfax.in

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ ಭವಿಷ್ಯ ಖಚಿತ ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಧರ್ಮಸ್ಥಳ: 7022443071

ನಂ.1 ವಶೀಕರಣ ಸ್ಪೆಷಲಿಸ್ಟ್ ತಾಂತ್ರಿಕ್: ಸ್ತ್ರೀಪುರುಷ ವಶೀಕರಣ, ಪ್ರೀತಿಯಲ್ಲಿ ನಂಬಿಮೋಸ, ಗಂಡಹೆಂಡತಿ ಕಲಹ, ನಾಗಸಾಧುಗಳಿಂದ ವಶೀಕರಣ 3ದಿನಗಳಲ್ಲಿ ಪರಿಹಾರ 6360611244

ಪ್ರವಾಸ

Travel

24 ವರ್ಷಗಳ ಅನುಭವಿ ಪ್ರವಾಸಿ ಸಂಸ್ಥೆಯಿಂದ 11.06.2022 27.06.2022 ರಿಂದ 15 ದಿನಗಳ ಚಾರ್‌ಧಾಮ್ ಯಾತ್ರೆ.27.05.2022, 04.06.2022 ರಿಂದ 8 ದಿನಗಳ ಶಿಮ್ಲಾ,ಕುಲುಮನಾಲಿ ಚಂಡಿಘಡ್. 27.06.2022 ರಿಂದ 7 ದಿನಗಳ ಕಾಶಿ ಯಾತ್ರ 30.06.2022 09.07.2022 ರಿಂದ 12/8 ದಿನಗಳ ಅಮರನಾಥ್,ಕಾಶ್ಮೀರ್ ಪ್ರವಾಸಗಳು ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

ಹಿಮಾಚಲ ಸ್ಪೆಶಲ್ ಸಿಮ್ಲಾ,ಕುಲು,ಮನಾಲಿ ಚಂಡಿಘಡ್ ನೈನಾದೇವಿ ಚಾಮುಂಡಾ ವಜ್ರೇಶ್ವರಿ ವೈಷ್ಣವಿದೇವಿ ಅಮೃತ್-ಸರ್ ಕುರುಕ್ಷೇತ್ರ ಹಾಗು ಚಾರ್-ಧಾಮ್ ಯಾತ್ರೆ. ಬದರಿನಾಥ್ ಕೇದಾರನಾಥ್ ಗಂಗೋತ್ರಿ,ಯುಮುನೋತ್ರಿ, ಹರಿದ್ವಾರ್,ರಿಷಿಕೇಶ್ ಬುಕಿಂಗ್‌ಗಳಿಗಾಗಿ ಸಂಪರ್ಕಿಸಿ ಆರ್ಕಿಡ್ ಟ್ರಾವಲ್ ಅಂಡ್ ಟೂರ್ಸ್ 9900080793 9880079588

11.05.2022 01.06.2022 ಕಾಶಿ,ಗಯಾ,ಅಯೋಧ್ಯ 7 ದಿನಗಳು. 05.05.2022 26.05.2022 ಧರ್ಮಸ್ಥಳ ಹೊರನಾಡು 4 ದಿನಗಳು. 19.05.2022 ರಾಮೇಶ್ವರ ಕುಂಭಕೋಣಂ 6 ದಿನಗಳು. ಜೈನ್ ಟ್ರಾವಲ್ಸ್ ಬೆಂಗಳೂರು-03. 9448402248 7022547922

ಪಶುಪತಿ, ಸ್ವಯಂಭೂ, ಮನಕಾಮನ, ಚಂದ್ರಗಿರಿ, ಗುಪ್ತೇಶ್ವರ, ಮುಕ್ತಿನಾಥ್, ಚಿತ್ವಾನ್ ಇತ್ಯಾದಿ ನೇಪಾಳದ ಯಾವುದೇ ಸ್ಥಳಗಳಿಗೂ ಪ್ರವಾಸ ಏರ್ಪಡಿಸುವ ಏಕೈಕ ಸಂಸ್ಥೆ ನಾಲಂದಾ ಟ್ರಾವೆಲ್ಸ್ ಕುಂದಾಪುರ. ಸಂಪರ್ಕಿಸಿ: 8310028157.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
EFFECTIVE FROM May 1, 2022
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	70	100	80	135
CD Per Sqcm	Single Col	Double Col	Multi Col	
	480	450	475	
SPECIAL OFFER	PAY 2 And GET 1 Free			
	PAY 3 And GET 2 Free			
	PAY 5 And GET 5 Free			

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
condition apply*
dhclassifieds@deccanherald.co.in www.dhclassifieds.com

9 ಸಾವಿರ ನಾಗರಿಕರ ಹತ್ಯೆ ಶಂಕೆ: ಮ್ಯಾಕ್ಸರ್ ಟೆಕ್ನಾಲಜೀಸ್ ಉಪಗ್ರಹದಿಂದ ಸಮಾಧಿ ಚಿತ್ರ ಬಿಡುಗಡೆ

ಮ್ಯಾನ್‌ಹುಶ್: ಸಾಮೂಹಿಕ ಸಮಾಧಿ ಪತ್ತೆ

ಮರಿಯುಪೋಲ್ (ಉಕ್ರೇನ್) (ಎಪಿ): ಕೀವ್ ಹೊರವಲಯದ ಉಪನಗರ ಬುಚಾದಲ್ಲಿ ನಡೆದಿದೆ ಎನ್ನಲಾದ 'ನರಮೇಧ'ದ ಸಾಮೂಹಿಕ ಸಮಾಧಿಗಳ ಪತ್ತೆಯಾದಂತೆಯೇ ಮರಿಯುಪೋಲ್ ಬಳಿಯೂ ನಾಗರಿಕರ ಸಾಮೂಹಿಕ ಸಮಾಧಿ ಮಾಡಿರುವ ಸಾಧ್ಯತೆಗಳ ಚಿತ್ರಗಳನ್ನು ಮ್ಯಾಕ್ಸರ್ ಟೆಕ್ನಾಲಜೀಸ್ ಉಪಗ್ರಹ ಸೆರೆ ಹಿಡಿದಿದೆ.

ಮರಿಯುಪೋಲ್ ನಗರ ಹೊರವಲಯದ ಮ್ಯಾನ್‌ಹುಶ್ ಪಟ್ಟಣದಲ್ಲಿ ಸ್ಥಳಾಂತ್ಯ ಸ್ವಲ್ಪ ದೂರದಲ್ಲಿ 200ಕ್ಕೂ ಹೆಚ್ಚು ಸಾಮೂಹಿಕ ಸಮಾಧಿಗಳು ಗೋಚರಿಸಿರುವ ಚಿತ್ರಗಳನ್ನು ಮ್ಯಾಕ್ಸರ್ ಟೆಕ್ನಾಲಜೀಸ್ ಉಪಗ್ರಹ ಬಿಡುಗಡೆ ಮಾಡಿದೆ.

'ಮರಿಯುಪೋಲ್‌ನ ಸುಮಾರು 9 ಸಾವಿರ ನಾಗರಿಕರನ್ನು ರಷ್ಯಾ ಪಡೆಗಳು ಹತ್ಯೆಗೈದು, ಇಲ್ಲಿ ಸಾಮೂಹಿಕ ಸಮಾಧಿ ಮಾಡಿದ್ದಾರೆ. ರಷ್ಯಾದ ನಿಯಂತ್ರಣದಲ್ಲಿರುವ ಪ್ರದೇಶಗಳಿಂದ ಬಂದರು ನಗರದಲ್ಲಿ ನಡೆಯುತ್ತಿರುವ ನರಮೇಧ ಮರೆಮಾಚಲು ಮಾಡಿರುವ ಸಾಮೂಹಿಕ ಸಮಾಧಿಗಳು ಇವು' ಎಂದು ಉಕ್ರೇನ್ ಅಧಿಕಾರಿಗಳು ಆರೋಪಿಸಿದ್ದಾರೆ.

'ಮ್ಯಾನ್‌ಹುಶ್‌ನಲ್ಲಿನ ಸಮಾಧಿಗಳು ಮಾರ್ಚ್ ಅಂತ್ಯದಲ್ಲಿ ಶುರುವಾಗಿದ್ದು, ಇತ್ತೀಚಿನ ವಾರಗಳವರೆಗೂ ವಿಸ್ತರಿಸಿದಂತವು' ಎಂದು ಮ್ಯಾಕ್ಸರ್ ಟೆಕ್ನಾಲಜಿಸ್, ಉಪಗ್ರಹ ಸೆರೆ ಹಿಡಿದ ಚಿತ್ರಗಳನ್ನು ವಿಶ್ಲೇಷಿಸಿ ಹೇಳಿದೆ.

ದೈತ್ಯ ಉಕ್ಕಿನ ಸ್ಥಾವರದಲ್ಲಿ ಅಂದಾಜು 2 ಸಾವಿರ ಉಕ್ರೇನ್ ಹೋರಾಟಗಾರರು ಇದ್ದು, ಸ್ಥಾವರದ ನಿಯಂತ್ರಣ ಬಿಟ್ಟುಕೊಡದ ನಡುವೆಯೂ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, 'ಮರಿಯುಪೋಲ್ ಯುದ್ಧದಲ್ಲಿ ವಿಜಯ ಸಾಧಿಸಿದ್ದೇವೆ' ಎಂದು ಘೋಷಿಸಿದ ಕೆಲವೇ ತಾಸುಗಳಲ್ಲಿ ಮ್ಯಾನ್‌ಹುಶ್‌ನಲ್ಲಿನ ಸಾಮೂಹಿಕ ಸಮಾಧಿಯ ಚಿತ್ರಗಳು ಬಿಡುಗಡೆಯಾಗಿವೆ.

'ಆಕ್ರಮಣಕಾರರು ಮರಿಯುಪೋಲ್ ನಾಗರಿಕರನ್ನು ಹತ್ಯೆ ಮಾಡಿ, ಶವಗಳನ್ನು ಮ್ಯಾನ್‌ಹುಶ್‌ನಲ್ಲಿ ಸಾಮೂಹಿಕ ಸಮಾಧಿ ಮಾಡಿ, ಯುದ್ಧಾಪರಾಧ ಮರೆಮಾಚಲು ಯತ್ನಿಸಿದ್ದಾರೆ. ಅವರು ಶವಗಳನ್ನು ಟ್ರಕ್‌ಗಳಲ್ಲಿ ತಂದು ಇಲ್ಲಿ ಸುರಿಯುತ್ತಿದ್ದರು' ಎಂದು ನಗರದ ಮೇಯರ್ ವಾಡಿಮ್ ಬಾಯ್‌ಶೆಂಕೊ ಆರೋಪಿಸಿದ್ದಾರೆ. ಮ್ಯಾನ್‌ಹುಶ್ ಸಾಮೂಹಿಕ ಸಮಾಧಿ ಆರೋಪದ ಬಗ್ಗೆ ರಷ್ಯಾದಿಂದ ತಕ್ಷಣದ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ.

ರಕ್ಷಕರ ಶರಣಾಗತಿ: ರಷ್ಯಾ ಬಯಕೆ

ಉಕ್ಕಿನ ಸ್ಥಾವರದಲ್ಲಿ ಅಡಗಿರುವ ಉಕ್ರೇನ್ ಸೈನಿಕರನ್ನು ಮಣಿಸಲು ರಕ್ತಪಾತದ ಆಕ್ರಮಣಕ್ಕೆ ಸೈನಿಕರನ್ನು ಕಳುಹಿಸುವ ಬದಲು, ಸ್ಥಾವರಕ್ಕೆ ಮುತ್ತಿಗೆ ಹಾಕಿ, ಆಹಾರ ಮತ್ತು ಮದ್ದುಗುಂಡು ಖಾಲಿ ಮಾಡಿಸಿ, ಹೋರಾಟಗಾರರೇ ಸ್ವತಃ ಶರಣಾಗುವಂತೆ ಮಾಡುವ ಸ್ಪಷ್ಟ ಉದ್ದೇಶವನ್ನು ರಷ್ಯಾ ಹೊಂದಿದೆ.

'ಉಕ್ಕಿನ ಸ್ಥಾವರವನ್ನು ಮೂರರಿಂದ ನಾಲ್ಕು ದಿನಗಳಲ್ಲಿ ಸಂಪೂರ್ಣ ನಿಯಂತ್ರಣಕ್ಕೆ ತೆಗೆದುಕೊಳ್ಳಬಹುದು' ಎಂದು ರಷ್ಯಾ ರಕ್ಷಣಾ ಸಚಿವ ಸೆರ್ಗೆ ಶೋಯಿಗು ಭವಿಷ್ಯ ನುಡಿದರು. ಆದರೆ, ಅಧ್ಯಕ್ಷ ಪುಟಿನ್ ಅವರು ತಮ್ಮ ಸೈನಿಕರ ಜೀವದ ಬಗ್ಗೆ ಕಳಕಳಿ ತೋರಿ, 'ಇದು ಅಪ್ರಾಯೋಗಿಕ ನಿರ್ಧಾರ. ಸಾವಿಗೆ ಅಂಜದ ಹೋರಾಟಗಾರರು ಅಡಗಿರುವ ದೈತ್ಯ ಸ್ಥಾವರದ ಭೂಗತ ಸುರಂಗಗಳಿಗೆ ನಮ್ಮ ಸೈನಿಕರನ್ನು ನುಗ್ಗಿಸುವುದು ಬೇಡ' ಎಂದು ರಕ್ಷಣಾ ಸಚಿವರಿಗೆ ಸಲಹೆ ನೀಡಿದ್ದಾರೆ.

ಉಕ್ಕಿನ ಸ್ಥಾವರದ ಮೇಲೆ ಭೀಕರ ದಾಳಿಗೆ ಬದಲು, 'ಒಂದು ನೊಣವೂ ಹೊರಬರದಂತೆ' ಮುತ್ತಿಗೆ ಹಾಕಲು ಪುಟಿನ್ ಈಗಾಗಲೇ ಸೇನೆಗೆ ಆದೇಶ ನೀಡಿದ್ದಾರೆ.

ಉಕ್ರೇನಿನ ಚೆರೆವ್ಕಾ ಗ್ರಾಮದಲ್ಲಿ ರಷ್ಯಾ ಪಡೆಗಳು ವಾಪಸಾಗುವಾಗ ಬಿಟ್ಟುಹೋದ ಬಹು ವಿಧ ಕ್ಷಿಪಣಿಗಳನ್ನು ಉಕ್ರೇನ್ ಸೈನಿಕರು ಪರಿಶೀಲಿಸಿದರು– ಎಪಿ/ಪಿಟಿಐ ಚಿತ್ರ

ಉಕ್ಕಿನ ಸ್ಥಾವರದ ಮೇಲೆ ಬಾಂಬ್ ದಾಳಿ

ಲುವಿವ್ (ಎಪಿ): ಉಕ್ರೇನ್ ಹೋರಾಟಗಾರರು ಅಡಗಿರುವ ಮರಿಯುಪೋಲ್‌ನ ಅಜೋವ್‌ಸ್ಟಾಲ್ ಬೃಹತ್ ಉಕ್ಕಿನ ಸ್ಥಾವರದ ಮೇಲೆ ರಷ್ಯಾ ಪಡೆಗಳು ಬಾಂಬ್ ದಾಳಿ ಮುಂದುವರಿಸಿವೆ ಎಂದು ನಗರದ ಮೇಯರ್ ಸಲಹೆಗಾರ ಪೆಟ್ರೋ ಆಂಡ್ರಿಯುಶ್‌ಚೆಂಕೊ ಶುಕ್ರವಾರ ತಿಳಿಸಿದ್ದಾರೆ.

'ಸ್ಥಾವರದಲ್ಲಿರುವ ರಕ್ಷಕರನ್ನು ಮುಟ್ಟುವುದಿಲ್ಲ ಎಂದು ರಷ್ಯಾ ನೀಡಿರುವ ಭರವಸೆ ಸುಳ್ಳು. ಪ್ರತಿದಿನ ಅಜೋವ್‌ಸ್ಟಾಲ್ ಮೇಲೆ ಅವರ ಬಾಂಬ್‌ಗಳು ಬೀಳುತ್ತಿವೆ. ಹೋರಾಟ, ಶೆಲ್ ದಾಳಿ, ಬಾಂಬ್ ದಾಳಿ ನಿಲ್ಲುತ್ತಿಲ್ಲ' ಎಂದು ಅವರು ಹೇಳಿದ್ದಾರೆ. ಅಜೋವ್‌ಸ್ಟಾಲ್ ಸ್ಥಾವರದ ಸುರಂಗ ಉಕ್ರೇನ್ ಪಡೆಗಳ ಕೊನೆಯ ಭದ್ರಕೋಟೆಯಾಗಿದೆ. ಉಕ್ರೇನ್ ರಕ್ಷಕ ಪಡೆಗಳ ಅಧಿಕಾರಿಗಳು ಮತ್ತು ಒಂದು ಸಾವಿರಕ್ಕೂ ಹೆಚ್ಚು ನಾಗರಿಕರು ಈ ಸ್ಥಾವರದೊಳಗಿರುವ ಅಂದಾಜು ಇದೆ.

ಪಾಕಿಸ್ತಾನ: ದಿನಕ್ಕೆ 12 ಗಂಟೆ ಲೋಡ್ ಶೆಡ್ಡಿಂಗ್

ಕತ್ತಲೆಯಿಂದ ತತ್ತರಿಸಿದ ನಾಗರಿಕರು

ಇಸ್ಲಾಮಾಬಾದ್ (ಪಿಟಿಐ): ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ಪಾಕಿಸ್ತಾನದಲ್ಲಿ ಈಗ ವಿದ್ಯುತ್ ಸಮಸ್ಯೆ ಎದುರಾಗಿದ್ದು, ನಾಗರಿಕರು ಕತ್ತಲಲ್ಲೇ ಜೀವನ ಕಳೆಯುವ ದುಃಸ್ಥಿತಿ ಎದುರಾಗಿದೆ. ರಂಜಾನ್ ಮಾಸದ ಹಿನ್ನೆಲೆಯಲ್ಲಿ ಉಪವಾಸ ಆಚರಿಸುತ್ತಿರುವ ಮುಸ್ಲಿಮರು ಇಫ್ತಾರ್ (ರಾತ್ರಿ ಭೋಜನ) ಮತ್ತು ಸೆಹ್ರಿ (ನಸುಕಿನ ಜಾವದ ಊಟ) ಕತ್ತಲಲ್ಲೇ ಮಾಡುವಂತಾಗಿದೆ.

ಹಣಕಾಸಿನ ಬಿಕ್ಕಟ್ಟಿನಿಂದಾಗಿ ವಿದ್ಯುತ್ ಉತ್ಪಾದನೆಗೆ ಬೇಕಿರುವ ಇಂಧನ ಕೊರತೆ ಇದ್ದರೆ, ಮತ್ತೊಂದೆಡೆ ಕೆಲವು ಪ್ರಮುಖ ವಿದ್ಯುತ್ ಉತ್ಪಾದನಾ ಘಟಕಗಳ ನಿರ್ವಹಣೆಗೆ ತೊಂದರೆಯಾಗಿದೆ. ಹೀಗಾಗಿ, ದೇಶದಲ್ಲಿ ದಿನಕ್ಕೆ ಕನಿಷ್ಠ 12 ಗಂಟೆಗಳ ಕಾಲ ವಿದ್ಯುತ್ ಕಡಿತ ಮಾಡಲಾಗುತ್ತಿದೆ.

ಕರಾಚಿ, ಹೈದರಾಬಾದ್, ರಾವಲ್ಪಿಂಡಿ, ಲಾಹೋರ್, ಫೈಸಲಾಬಾದ್ ಮತ್ತು ಸಿಯಾಲ್‌ಕೋಟ್ ನಗರಗಳಲ್ಲಿ ದಿನಕ್ಕೆ 4-10 ಗಂಟೆಗಳ ಕಾಲ ವಿದ್ಯುತ್ ನಿಲುಗಡೆ ಮಾಡಲಾಗುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ 10-12 ಗಂಟೆ ವಿದ್ಯುತ್ ಕಡಿತ ಮಾಡಲಾಗುತ್ತಿದೆ. ಮಳೆಯಿಲ್ಲದೆ ಜಲಾಶಯಗಳಿಗೆ ನೀರಿನ ಒಳಹರಿವು ಕಡಿಮೆಯಾದ ಕಾರಣ ಜಲವಿದ್ಯುತ್ ಉತ್ಪಾದನೆಯೂ ಕಡಿಮೆಯಾಗಿದೆ. ಇದು ಸಹ ವಿದ್ಯುತ್ ಅಭಾವ ಸೃಷ್ಟಿಯಾಗಲು ಪ್ರಮುಖ ಕಾರಣ ಎಂದು ಮಾಧ್ಯಮಗಳು ವರದಿ ಮಾಡಿವೆ.

ವಿಜಯವಾಡ ಸರ್ಕಾರಿ ಆಸ್ಪತ್ರೆಯಲ್ಲಿ ನಡೆದ ಕೃತ್ಯ

ಮಾನಸಿಕ ಅಸ್ವಸ್ಥೆ ಮೇಲೆ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ವಿಜಯವಾಡ: ಮಾನಸಿಕ ಅಸ್ವಸ್ಥ ಮಹಿಳೆಯನ್ನು ಆಸ್ಪತ್ರೆಯ ಸಣ್ಣ ಕೊಠಡಿಯಲ್ಲಿ ಕೂಡಿ ಹಾಕಿ ಸಾಮೂಹಿಕ ಅತ್ಯಾಚಾರ ಎಸಗಿದ ಆಘಾತಕಾರಿ ಘಟನೆ ವಿಜಯವಾಡ ಸರ್ಕಾರಿ ಆಸ್ಪತ್ರೆಯಲ್ಲಿ ನಡೆದಿದೆ. ಈ ಘಟನೆ ನಡೆದ 30 ಗಂಟೆಗಳ ಬಳಿಕ ಸಂತ್ರಸ್ತೆಯ ಸುಳಿವು ಪತ್ತೆಯಾಗಿದೆ.

ಈ ಕೃತ್ಯವೆಸಗಿದ ಗುತ್ತಿಗೆ ನೌಕರರರಾದ ಡಾರ ಶ್ರೀಕಾಂತ್, ಚೆನ್ನಬಾಬು ರಾವ್ ಮತ್ತು ಜೆ.ಪವನ್ ಎಂಬ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ಏಪ್ರಿಲ್ 19ರ ರಾತ್ರಿ ಡಾರ ಶ್ರೀಕಾಂತ್ ಎಂಬ ಆರೋಪಿಯು, ವಿಜಯವಾಡದ ವಾಂಬೆ ಕಾಲೋನಿಯ 23 ವರ್ಷದ ಮಹಿಳೆಯನ್ನು ಆಸ್ಪತ್ರೆಗೆ ಕರೆತಂದು, ಲಿಫ್ಟ್ ಪಕ್ಕದಲ್ಲಿರುವ ಸಣ್ಣ ಕೊಠಡಿಯಲ್ಲಿ ಕೂಡಿಹಾಕಿ ಅತ್ಯಾಚಾರವೆಸಗಿದ್ದಾನೆ. ಬಳಿಕ ಮಾರನೇ ದಿನ ಇದೇ ಕೊಠಡಿಯಲ್ಲಿ ಮತ್ತಿಬ್ಬರು ಆರೋಪಿಗಳು ಆಕೆಯ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ತಮ್ಮ ಪುತ್ರಿ ಕಾಣೆಯಾಗಿದ್ದರ ಬಗ್ಗೆ ದೂರು ಸಲ್ಲಿಸಿದ್ದರೂ, ಪೊಲೀಸರು ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಏಪ್ರಿಲ್ 20ರ ರಾತ್ರಿ ಸಂತ್ರಸ್ತೆಯ ಪೋಷಕರೇ ಸ್ವತಃ ಆಸ್ಪತ್ರೆಗೆ ಹೋಗಿದ್ದು, ಆಗ ತಮ್ಮ ಪುತ್ರಿಯ ಮೇಲೆ ದೌರ್ಜನ್ಯ ಎಸಗುತ್ತಿದ್ದನ್ನು ಕಂಡಿದ್ದಾಗಿ ಹೇಳಿದ್ದಾರೆ.

ಏಪ್ರಿಲ್ 20ರಂದು ಸಂತ್ರಸ್ತೆಯ ಪೋಷಕರು ಠಾಣೆಗೆ ದೂರು ನೀಡಿದ್ದಾರೆ. ಈ ವೇಳೆ ತ್ವರಿತ ಕಾರ್ಯಾಚರಣೆ ಕೈಗೊಂಡು ಸಂತ್ರಸ್ತೆ ಜೊತೆ ಮಾತನಾಡಿದ್ದ ಆರೋಪಿಯ ಮೊಬೈಲ್ ಸಂಖ್ಯೆಯನ್ನು ಪತ್ತೆ ಹಚ್ಚಿದೆವು. ಇದರಿಂದ ಸಂತ್ರಸ್ತೆ ಆಸ್ಪತ್ರೆಯಲ್ಲಿ ಇರುವುದು ಪತ್ತೆಯಾಗಿತ್ತು ಎಂದು ಪೊಲೀಸರು ಹೇಳಿದ್ದಾರೆ.

ಕರ್ತವ್ಯ ಲೋಪದ ಹಿನ್ನೆಲೆಯಲ್ಲಿ ಸರ್ಕಲ್ ಇನ್‌ಸ್ಪೆಕ್ಟರ್ ಹನಿಶ್ ಕುಮಾರ್ ಮತ್ತು ಎಸ್‌ಐ ಶ್ರೀನಿವಾಸ್ ಅವರನ್ನು ಅಮಾನತು ಮಾಡಲಾಗಿದೆ. ಆಸ್ಪತ್ರೆಗೆ ಭೇಟಿ ನೀಡಿ ಸಂತ್ರಸ್ತೆಯ ಆರೋಗ್ಯ ವಿಚಾರಿಸಿದ ಮಾಜಿ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು, ಸರ್ಕಾರದ ವೈಫಲ್ಯವೇ ಈ ಘಟನೆಗೆ ಕಾರಣ ಎಂದು ವಾಗ್ದಾಳಿ ನಡೆಸಿದರು.

ಏತನ್ಮಧ್ಯೆ, ಸಂತ್ರಸ್ತೆಯ ಕುಟುಂಬಕ್ಕೆ ಮುಖ್ಯಮಂತ್ರಿ ಜಗನ್ ಮೋಹನ್ ರೆಡ್ಡಿ ಅವರು ₹10 ಲಕ್ಷ ಪರಿಹಾರ ಘೋಷಣೆ ಮಾಡಿದ್ದಾರೆ.

'4ನೇ ಅಲೆ ತಪ್ಪಿಸಲು ಮಾರ್ಗಸೂಚಿ ಪಾಲಿಸಿ'

ಮೈಸೂರು: 'ನವದೆಹಲಿ ಸೇರಿದಂತೆ ಕೆಲ ರಾಜ್ಯಗಳಲ್ಲಿ ಕೊರೊನಾ ಸೋಂಕು ಪ್ರಕರಣಗಳು ಗಣನೀಯವಾಗಿ ಹೆಚ್ಚುತ್ತಿವೆ. ರಾಜ್ಯದಲ್ಲಿ ಎಲ್ಲರೂ ಮಾಸ್ಕ್ ಧರಿಸಿ, ಕೋವಿಡ್ ಮಾರ್ಗಸೂಚಿ ಪಾಲಿಸಬೇಕು' ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಶುಕ್ರವಾರ ಇಲ್ಲಿ ಸಲಹೆ ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಾಲ್ಕನೇ ಅಲೆ ತಪ್ಪಿಸಿಕೊಳ್ಳಬೇಕು, ಎಲ್ಲರೂ ಕಡ್ಡಾಯವಾಗಿ ಲಸಿಕೆ ಹಾಕಿಸಿಕೊಳ್ಳಬೇಕು. ಜನಸಂದಣಿ ಇರುವೆಡೆ, ಕಾರ್ಯಕ್ರಮಗಳಲ್ಲಿ, ಒಳಾಂಗಣ ಪ್ರದೇಶಗಳಲ್ಲಿ ಮಾಸ್ಕ್ ಧರಿಸಬೇಕು' ಎಂದರು.

'ಮಾಸ್ಕ್ ಕಡ್ಡಾಯ ಮಾಡಿ, ದಂಡ ವಿಧಿಸುವ ಪರಿಸ್ಥಿತಿ ರಾಜ್ಯದಲ್ಲಿಲ್ಲ. ಆದರೆ, ಕೋವಿಡ್ ವಿದೇಶದಲ್ಲಿದೆ ಎಂಬ ನಿರ್ಲಕ್ಷ್ಯ ಬೇಡ. 5ರಿಂದ 12 ವರ್ಷದೊಳಗಿನ ಮಕ್ಕಳಿಗೆ ಲಸಿಕೆ ಹಾಕಲು ಕೇಂದ್ರ ಸರ್ಕಾರ ಸಿದ್ಧತೆ ಮಾಡಿಕೊಳ್ಳುತ್ತಿದೆ. ಸದ್ಯದಲ್ಲೇ ನಿರ್ಧಾರ ಹೊರಬೀಳಲಿದೆ' ಎಂದರು. 'ಭಾರತದಲ್ಲಿ ಮೂರನೇ ಅಲೆ ಕಾಣಿಸಿಕೊಂಡರೂ ಸಾವು–ನೋವು ಉಂಟಾಗದಿರಲು ಲಸಿಕಾಕರಣವೇ ಕಾರಣ. ರಾಜ್ಯದಲ್ಲಿ 10.5 ಕೋಟಿ ಸೇರಿ ದೇಶದಲ್ಲಿ ಒಟ್ಟು 185 ಕೋಟಿ ಡೋಸ್ ಲಸಿಕೆ ನೀಡಲಾಗಿದೆ' ಎಂದರು.

ಉಕ್ರೇನ್–ರಷ್ಯಾ ಯುದ್ಧ: ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಹೇಳಿಕೆ

'ಭಾರತೀಯರ ಬಯಕೆ ಒಪ್ಪುತ್ತೇವೆ'

ನವದೆಹಲಿ (ಪಿಟಿಐ/ರಾಯಿಟರ್ಸ್/ಎಎಫ್‌ಪಿ): 'ರಷ್ಯಾವು ಉಕ್ರೇನ್‌ನಿಂದ ಹೊರ ಹೋಗಬೇಕು ಮತ್ತು ಉಕ್ರೇನ್‌ನಲ್ಲಿ ಶಾಂತಿ ನೆಲೆಸಬೇಕು ಎಂದು ಭಾರತೀಯರು ಬಯಸುತ್ತಾರೆ. ನಾನು ಅದನ್ನು ಒಪ್ಪುತ್ತೇನೆ' ಎಂದು ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರು ಹೇಳಿದ್ದಾರೆ.

ಉಕ್ರೇನ್‌ನ ಮೇಲೆ ರಷ್ಯಾದ ಅತಿಕ್ರಮಣವನ್ನು ಖಂಡಿಸುವುದರಿಂದ ಭಾರತವು ಹಿಂದೆ ಸರಿದಿದೆ ಎಂದು ಬ್ರಿಟನ್, ಅಮೆರಿಕ ಸೇರಿದಂತೆ ಹಲವು ದೇಶಗಳು ಅಸಮಾಧಾನ ವ್ಯಕ್ತಪಡಿಸಿದ್ದವು. ಬೋರಿಸ್ ಜಾನ್ಸನ್ ಅವರ ಭಾರತದ ಭೇಟಿಯ ಸಂದರ್ಭದಲ್ಲಿ ಈ ವಿಚಾರವು ಚರ್ಚೆಯಾಗಲಿದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ, ಭಾರತದ ನಿಲುವನ್ನು ಒಪ್ಪಿಕೊಳ್ಳುವುದಾಗಿ ಜಾನ್ಸನ್ ಅವರು ಹೇಳಿದ್ದಾರೆ.

'ಭಾರತವು ಬುಕಾದಲ್ಲಿನ ಹತ್ಯಾಕಾಂಡವನ್ನು ಕಠಿಣ ಮಾತುಗಳಿಂದ ಖಂಡಿಸಿದೆ. ಈ ಬಗ್ಗೆ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ಜತೆ ಹಲವು ಬಾರಿ ಮಾತನಾಡಿದ್ದಾರೆ. ಉಕ್ರೇನ್‌ನಲ್ಲಿ ಶಾಂತಿ ನೆಲೆಸಬೇಕು ಎಂದು ಭಾರತವು ಬಯಸಿದೆ. ಇದನ್ನು ಬ್ರಿಟನ್ ಒಪ್ಪುತ್ತದೆ' ಎಂದು ಅವರು ಹೇಳಿದ್ದಾರೆ. ಶುಕ್ರವಾರ ಪ್ರಧಾನಿ ನರೇಂದ್ರ ಮೋದಿ ಅವರ ಜತೆಯಲ್ಲಿ ನಡೆದ ಮಾತುಕತೆಯ ನಂತರ ಅವರು ಈ ಹೇಳಿಕೆ ನೀಡಿದ್ದಾರೆ.

ಮಹಾತ್ಮ ಗಾಂಧಿ ಅವರ ಪ್ರತಿಮೆಯ ಸ್ಮರಣಿಕೆಯೊಂದಿಗೆ ಬೋರಿಸ್ ಜಾನ್ಸನ್ –ಪಿಟಿಐ ಚಿತ್ರ

ಗುರುವಾರ ಸಹ ಈ ಬಗ್ಗೆ ಮಾತನಾಡಿದ್ದ ಜಾನ್ಸನ್, 'ಭಾರತ ಮತ್ತು ರಷ್ಯಾ ನಡುವಣ ಸಂಬಂಧ ಐತಿಹಾಸಿಕವಾದುದು. ಇಡೀ ವಿಶ್ವ ಇದನ್ನು ಅರ್ಥಮಾಡಿಕೊಳ್ಳಲಿ' ಎಂದು ಹೇಳಿದ್ದರು. ಶುಕ್ರವಾರ ಇದೇ ಮಾತನ್ನು ಅವರು ಮತ್ತೆ ಹೇಳಿದ್ದಾರೆ. ಆದರೆ, 'ರಷ್ಯಾ ಜತೆಗಿನ ಭಾರತದ ಸಂಬಂಧ ಎಷ್ಟು ಗಟ್ಟಿಯಾದುದು ಎಂಬುದು ಅರ್ಥವಾಗುತ್ತದೆ. ಆದರೆ, ಭಾರತವು ಬ್ರಿಟನ್‌ನೊಂದಿಗೆ ಸಖ್ಯಕ್ಕೆ ಮುಂದಾಗುತ್ತಿದೆ' ಎಂದು ಹೇಳಿದ್ದಾರೆ.

ಒತ್ತಡ ಹೇರಿಲ್ಲ: ಪ್ರಧಾನಿ ನರೇಂದ್ರ ಮೋದಿ ಅವರ ಜತೆಗಿನ ಮಾತುಕತೆಯ ವೇಳೆ ರಷ್ಯಾ–ಉಕ್ರೇನ್ ಯುದ್ಧಕ್ಕೆ ಸಂಬಂಧಿಸಿದಂತೆ ಬ್ರಿಟನ್ ಯಾವುದೇ ರೀತಿಯ ಒತ್ತಡವನ್ನು ಹೇರಿಲ್ಲ ಎಂದು ವಿದೇಶಾಂಗ ಕಾರ್ಯದರ್ಶಿ ಹರ್ಷವರ್ಧನ ಶೃಂಗ್ಲಾ ಅವರು ಹೇಳಿದ್ದಾರೆ.

'ಇಬ್ಬರೂ ನಾಯಕರ ಮಾತುಕತೆಯ ಮಧ್ಯೆ ಈ ವಿಚಾರವೂ ಚರ್ಚೆಗೆ ಬಂದಿತು. ಅವರು ಅವರ ನಿಲುವನ್ನು ಸ್ಪಷ್ಟಪಡಿಸಿದರು. ನಾವು ನಮ್ಮ ನಿಲುವನ್ನು ಸ್ಪಷ್ಟಪಡಿಸಿದೆವು. ಉಕ್ರೇನ್‌ನಲ್ಲಿ ಯುದ್ಧ ನಿಲ್ಲಬೇಕು, ಶಾಂತಿ ನೆಲಸಬೇಕು ಎಂಬುದೇ ಎರಡೂ ದೇಶಗಳ ನಿಲುವಾಗಿತ್ತು' ಎಂದು ಶೃಂಗ್ಲಾ ಹೇಳಿದ್ದಾರೆ.

2023ರ ಅಂತ್ಯದವರೆಗೂ ಯುದ್ಧ: 'ರಷ್ಯಾ ಅತಿಕ್ರಮಣವನ್ನು ಎದುರಿಸುತ್ತಿರುವ ರೀತಿಯನ್ನು ವಿಶ್ಲೇಷಿಸಿದರೆ ಈ ಯುದ್ಧವು 2023ರ ಅಂತ್ಯದವರೆಗೂ ಮುಂದುವರೆಯಬಹುದು' ಎಂದು ಬೋರಿಸ್ ಜಾನ್ಸನ್ ಹೇಳಿದ್ದಾರೆ.

'ರಷ್ಯಾದ ಅತಿಕ್ರಮಣವನ್ನು ಉಕ್ರೇನ್ ಸಮರ್ಥವಾಗಿ ಎದುರಿಸುತ್ತಿದೆ. ಎರಡೂ ದೇಶಗಳು ಪಟ್ಟು ಬಿಡುತ್ತಿಲ್ಲ. ಉಕ್ರೇನ್ ತನ್ನ ಸಾರ್ವಭೌಮತೆಗಾಗಿ ಹೋರಾಡುತ್ತಿದೆ. ಇದಕ್ಕೆ ನಾವು ನೆರವು ನೀಡುತ್ತೇವೆ. ಎಲ್ಲಾ ಸ್ವರೂಪದ ನೆರವನ್ನು ಮುಂದುವರಿಸುತ್ತೇವೆ' ಎಂದು ಜಾನ್ಸನ್ ಹೇಳಿದ್ದಾರೆ.

'ಸಚಿನ್, ಬಚ್ಚನ್‌ನಂತೆ ಭಾಸವಾಯಿತು'

'ಭಾರತೀಯರು ಬೀದಿಯಲ್ಲಿ ಕಿಕ್ಕಿರಿದು ನಿಂತು ನನ್ನನ್ನು ಸ್ವಾಗತಿಸಿದರು. ಜತೆಗೆ ಎಲ್ಲೆಡೆ ನನ್ನ ಚಿತ್ರದ ಪೋಸ್ಟರ್ ಹಾಕಿದ್ದಾರೆ. ನಾನೇ ಸಚಿನ್ ತೆಂಡೂಲ್ಕರ್ ಮತ್ತು ಅಮಿತಾಭ್ ಬಚ್ಚನ್ ಆಗಿದ್ದೇನೆ ಎಂದು ಭಾಸವಾಯಿತು' ಎಂದು ಬೋರಿಸ್ ಜಾನ್ಸನ್ ಹೇಳಿದ್ದಾರೆ.

ಅಹಮದಾಬಾದ್‌ನಲ್ಲಿ ನಡೆದ ಸ್ವಾಗತ ಕಾರ್ಯಕ್ರಮದ ಬಗ್ಗೆಯೂ ಅವರು ಇದೇ ರೀತಿಯ ಮಾತುಗಳನ್ನಾಡಿದ್ದಾರೆ.

ನರೇಂದ್ರ ವಿಶೇಷ ಗೆಳೆಯ: ಇಲ್ಲಿ ನಡೆದ ಸಭಾ ಕಾರ್ಯಕ್ರಮದ ನಂತರ ಮಾತನಾಡಿದ ಜಾನ್ಸನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಪದೇ ಪದೇ 'ನರೇಂದ್ರ' ಎಂದೇ ಸಂಬೋಧಿಸಿದರು. ಸಾಮಾನ್ಯವಾಗಿ ವಿದೇಶಿ ನಾಯಕರು ಪ್ರಧಾನಿಯನ್ನು ಮೋದಿ ಎಂದೇ ಸಂಬೋಧಿಸುತ್ತಾರೆ.

ಇದರ ಜತೆಯಲ್ಲಿಯೇ, 'ನರೇಂದ್ರ ನನ್ನ ವಿಶೇಷ ಗೆಳೆಯ. ಬ್ರಿಟನ್ ವಿಶ್ವದ ಅತ್ಯಂತ ಹಳೆಯ ಪ್ರಜಾಪ್ರಭುತ್ವ ರಾಷ್ಟ್ರ. ಭಾರತವು ವಿಶ್ವದ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ. ಎರಡೂ ದೇಶಗಳ ಸ್ನೇಹ ವಿಶೇಷವಾದುದು ಮತ್ತು ಇದು ಇನ್ನೂ ಗಟ್ಟಿಯಾಗುತ್ತಿದೆ' ಎಂದು ಅವರು ಹೇಳಿದ್ದಾರೆ.

ಜೆಇಎಂ ಇಬ್ಬರು ದಾಳಿಕೋರರ ಹತ್ಯೆ

ಜಮ್ಮು: ಕಾಶ್ಮೀರ ಕಣಿವೆಗೆ ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡಲು ಎರಡು ದಿನ ಬಾಕಿ ಇರುವಾಗಲೇ ಜೈಶೆ–ಮೊಹಮ್ಮದ್ (ಜೆಇಎಂ) ಉಗ್ರರು ವಿಧ್ವಂಸಕ ಕೃತ್ಯ ನಡೆಸಲು ರೂಪಿಸಿದ್ದ ಸಂಚನ್ನು ಭದ್ರತಾಪಡೆಗಳು ವಿಫಲಗೊಳಿಸಿದ್ದು, ಪಾಕಿಸ್ತಾನದ ಇಬ್ಬರು ಶಂಕಿತ ಭಯೋತ್ಪಾದಕರನ್ನು ಹತ್ಯೆ ಮಾಡಿವೆ.

ಜಲಲಾಬಾದ್ ಸಮೀಪದ ಸುಂಜ್ವಾನ್ ಪ್ರದೇಶದಲ್ಲಿ ಶುಕ್ರವಾರ ಮುಂಜಾನೆ 4.25ರ ಸುಮಾರಿನಲ್ಲಿ ಜಮ್ಮು ವಿಮಾನ ನಿಲ್ದಾಣದ ಕಡೆಗೆ ಹೊರಟಿದ್ದ 15 ಸಿಬ್ಬಂದಿಯಿದ್ದ ಸಿಐಎಸ್‌ಎಫ್ ಬಸ್‌ನ ಮೇಲೆ ಭಯೋತ್ಪಾದಕರು ಗ್ರೆನೆಡ್ ಎಸೆದಿದ್ದಲ್ಲದೇ ಗುಂಡಿನ ದಾಳಿ ನಡೆಸಿದರು. ಈ ವೇಳೆ ಸಿಐಎಸ್‌ಎಫ್‌ನ ಸಹಾಯಕ ಸಬ್‌ಇನ್‌ಸ್ಪೆಕ್ಟರ್ ಎಸ್.ಪಿ.ಪಾಟೀಲ ಮೃತಪಟ್ಟರು. ಇತರೆ ಒಂಬತ್ತು ಭದ್ರತಾ ಸಿಬ್ಬಂದಿ ಗಾಯಗೊಂಡರು. ಭದ್ರತಾ ಪಡೆಗಳ ಪ್ರತಿದಾಳಿಗೆ ಜೆಇಎಂ ಆತ್ಮಾಹುತಿ ದಾಳಿಕೋರರು ಹತರಾದರು' ಎಂದು ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯ ಅಧಿಕಾರಿಯೊಬ್ಬರು ತಿಳಿಸಿದರು.

'ಹತ್ಯೆಯಾದ ಪಾಕಿಸ್ತಾನ ಮೂಲದ ಈ ಇಬ್ಬರು ಜೆಇಎಂನ ಆತ್ಮಾಹುತಿ ದಳದ ಭಾಗವಾಗಿದ್ದು, ಸೇನಾ ಶಿಬಿರದ ಮೇಲೆ ದಾಳಿ ಅಥವಾ ಭದ್ರತಾ ಪಡೆಗಳ ಮೇಲೆ ಅತಿಹೆಚ್ಚು ಹಾನಿಯನ್ನು ಉಂಟು ಮಾಡುವುದು ಉದ್ದೇಶವಾಗಿತ್ತು. ಅಲ್ಲದೇ ಏಪ್ರಿಲ್ 24ರಂದು ನಡೆಯಲಿರುವ ಪ್ರಧಾನಿ ಅವರ ಭೇಟಿಯನ್ನು ಹಾಳು ಮಾಡಲು ನಡೆಸಿದ ದೊಡ್ಡ ಪಿತೂರಿಯಾಗಿರಬಹುದು' ಎಂದು ಜಮ್ಮು ಮತ್ತು ಕಾಶ್ಮೀರದ ಡಿಜಿಪಿ ದಿಲ್ಬಾಗ್ ಸಿಂಗ್ ತಿಳಿಸಿದರು.

'ಇಬ್ಬರು ಭಯೋತ್ಪಾದಕರು ಗುರುವಾರ ಜಮ್ಮುವಿನ ಅಂತರರಾಷ್ಟ್ರೀಯ ಗಡಿಯ ಆರ್.ಎಸ್.ಪುರ ಸೆಕ್ಟರ್ ಮೂಲಕ ಕಣಿವೆಯನ್ನು ಪ್ರವೇಶಿಸಿದ್ದು, ಸುಂಜ್ವಾನ್ ಸೇನಾ ಶಿಬಿರದ ಸಮೀಪದ ಪ್ರದೇಶದಲ್ಲಿ ತಂಗಿದ್ದರು. ತಕ್ಷಣ ಕಾರ್ಯಪ್ರವೃತ್ತರಾದ ಭದ್ರತಾ ಪಡೆಗಳು ದಾಳಿಕೋರರ ಯೋಜನೆಯನ್ನು ವಿಫಲಗೊಳಿಸಿವೆ' ಎಂದು ಅವರು ಹೇಳಿದರು.

ಸಾಂಬಾ ಜಿಲ್ಲೆಯ ಪಾಲಿ ಗ್ರಾಮದಲ್ಲಿ ಏಪ್ರಿಲ್ 24ರಂದು ನಡೆಯಲಿರುವ ರಾಷ್ಟ್ರೀಯ ಪಂಚಾಯತ್ ರಾಜ್ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿದ್ದು, ದೇಶದ ಜನರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ಅಫ್ಗಾನಿಸ್ತಾನ: ಬಾಂಬ್ ದಾಳಿ 33 ಮಂದಿ ಸಾವು

ಕಾಬೂಲ್(ಎಪಿ): ಉತ್ತರ ಅಫ್ಗಾನಿಸ್ತಾನದ ಧಾರ್ಮಿಕಶಾಲೆಗಳು ಮತ್ತು ಮಸೀದಿಯಲ್ಲಿ ಶುಕ್ರವಾರ ನಡೆದ ಬಾಂಬ್ ದಾಳಿಯಲ್ಲಿ ವಿದ್ಯಾರ್ಥಿಗಳು ಸೇರಿದಂತೆ 33 ಮಂದಿ ಮೃತಪಟ್ಟಿದ್ದಾರೆ ಎಂದು ತಾಲಿಬಾನ್ ಅಧಿಕಾರಿ ಹೇಳಿದ್ದಾರೆ.

ಕುಂಡುಜ್ ಪ್ರಾಂತ್ಯದ ಇಮಾಮ್ ಸಾಹೇಬ್ ಪಟ್ಟಣದಲ್ಲಿ ನಡೆದ ಈ ದಾಳಿಯಲ್ಲಿ ವಿದ್ಯಾರ್ಥಿಗಳು ಸೇರಿದಂತೆ 43 ಮಂದಿ ಗಾಯಗೊಂಡಿದ್ದಾರೆ. ಯಾವುದೇ ಭಯೋತ್ಪಾದಕ ಸಂಘಟನೆ ಹೊತ್ತುಕೊಂಡಿಲ್ಲ ಎಂದು ಅಧಿಕಾರಿ ಜಬೀವುಲ್ಲಾ ಮುಜಾಹಿದ್ ಟ್ವೀಟ್ ಮಾಡಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯ
ಪಾವಟೆ ನಗರ, ಧಾರವಾಡ
• ವಿಶ್ವವಿದ್ಯಾಲಯವು ಸೇವಾ ಪೂರೈಕೆದಾರ ಸಂಸ್ಥೆಯಾದ ಕಾಕಡೆ ಕರಿಯರ್ ಅಕಾಡೆಮಿಯ ಮೂಲಕ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕನ್ನಡ ಮಾಧ್ಯಮದಲ್ಲಿ Online ತರಗತಿಗಳನ್ನು ಪ್ರಾರಂಭಿಸಿದೆ • ಪೂರ್ತಿ ಪಠ್ಯಕ್ರಮ(Syllabus)ದ Live ತರಗತಿಗಳನ್ನು ಮತ್ತು Recorded Video ತರಗತಿಗಳನ್ನು ಪರೀಕ್ಷೆ ಮುಗಿಯುವ ತನಕ ನೀವು ಎಷ್ಟು ಸಾರಿ ಬೇಕಾದರೂ ವೀಕ್ಷಿಸಬಹುದು • ನಿರಂತರವಾಗಿ Online ಟೆಸ್ಟ್‌ಗಳು ಮತ್ತು ಡಿಸ್ಕಷನ್ ಇರುತ್ತದೆ. • ತರಗತಿಗಳಿಗೆ ಕೂಡಲೇ ಪ್ರವೇಶ ಪಡೆಯಿರಿ
GPSTR ಗಣಿತ, ಜೀವ/ವಿಜ್ಞಾನ, ಆಂಗ್ಲ ಮತ್ತು ಸಮಾಜ ಶಿಕ್ಷಕರು (ಪತ್ರಿಕೆ 1, 2 ಮತ್ತು 3)
KAS(P), PSI, PC, PDO & SDAA, KPTCL
'Karnatak University App' ಅನ್ನು Google Play Store ನಿಂದ download ಮಾಡಿಕೊಂಡು, App ನ ಮೇಲ್ಭಾಗದಲ್ಲಿ ಇರುವ 'Store'ನಲ್ಲಿ ಶುಲ್ಕವನ್ನು ಪಾವತಿಸಿ ಕೂಡಲೇ ಪ್ರವೇಶ ಪಡೆಯಿರಿ.
ಮೊಬೈಲ್: 9916058305 / 306
ಸಂಯೋಜಕರು
ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ವಿಭಾಗ
ಕವಿವಿ, ಧಾರವಾಡ

ಕೊರೊನಾ ಸೋಂಕು ಶಾಂಘೈನಲ್ಲಿ ಲಾಕ್‌ಡೌನ್ ವಿಸ್ತರಣೆ

ಶಾಂಘೈ(ಪಿಟಿಐ): ಚೀನಾದ ಶಾಂಘೈನಲ್ಲಿ ಕೋವಿಡ್‌ನಿಂದಾಗಿ ಮೃತಪಡುವವರ ಸಂಖ್ಯೆ ಹೆಚ್ಚುತ್ತಿದೆ. ಗುರುವಾರ 11 ಮಂದಿ ಸಾವನ್ನಪ್ಪಿದ್ದು, ಮೃತರ ಸಂಖ್ಯೆ 36ಕ್ಕೆ ಏರಿಕೆಯಾಗಿದೆ. ಈ ಹಿನ್ನೆಲೆಯಲ್ಲಿ, ಜನರ ವಿರೋಧದ ನಡುವೆಯೇ ಏಪ್ರಿಲ್ 26ರ ವರೆಗೂ ಲಾಕ್‌ಡೌನ್ ವಿಸ್ತರಿಸಲಾಗಿದೆ.

ಈ ಮೂಲಕ, ಓಮೈಕ್ರಾನ್ ತಳಿ ಸೋಂಕಿನ ಪ್ರಕರಣಗಳು ಹೆಚ್ಚಿದ ಬಳಿಕ ಜಾರಿಗೊಳಿಸಿರುವ ಲಾಕ್‌ಡೌನ್ ನಾಲ್ಕನೇ ವಾರಕ್ಕೆ ಕಾಲಿಟ್ಟಂತಾಗಿದೆ. ಸಮುದಾಯದಲ್ಲಿ ಸೋಂಕು ಪ್ರಸರಣಕ್ಕೆ ಕಡಿವಾಣ ಹಾಕಲು ಶುಕ್ರವಾರದಿಂದ ಅಭಿಯಾನ ಆರಂಭಿಸಲಾಗಿದೆ ಎಂದು ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಕೋವಿಡ್: ಸಕ್ರಿಯ ಪ್ರಕರಣ 14 ಸಾವಿರಕ್ಕೆ ಏರಿಕೆ

ನವದೆಹಲಿ(ಪಿಟಿಐ): ದೇಶದಲ್ಲಿ ಕೋವಿಡ್‌ನ ಹೊಸ ಪ್ರಕರಣಗಳ ಸಂಖ್ಯೆ ಮತ್ತೆ ಏರುಗತಿಯಲ್ಲಿದೆ. ಶುಕ್ರವಾರ ಬೆಳಿಗ್ಗೆ 8ಕ್ಕೆ ಲಭ್ಯವಿರುವ ಮಾಹಿತಿ ಪ್ರಕಾರ 2,451 ಹೊಸ ಪ್ರಕರಣಗಳು ವರದಿಯಾಗಿವೆ. ಇದರೊಂದಿಗೆ ಸಕ್ರಿಯ ಪ್ರಕರಣಗಳ ಸಂಖ್ಯೆ 14,241ಕ್ಕೆ ಏರಿಕೆಯಾಗಿದೆ.

ಕಳೆದ 24 ಗಂಟೆಗಳಲ್ಲಿ 808 ಸಕ್ರಿಯ ಪ್ರಕರಣಗಳು ಹೆಚ್ಚಾಗಿವೆ. 54 ಮಂದಿ ಸೋಂಕಿತರು ಮೃತಪಟ್ಟಿದ್ದಾರೆ. ಒಟ್ಟು ಮೃತರ ಸಂಖ್ಯೆ 5,22,116ಕ್ಕೆ ಏರಿಕೆಯಾಗಿದೆ.

ದೇಶದಲ್ಲಿ ಇದುವರೆಗೆ 4,30,52,425 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಸೋಂಕು ದೃಢ ಪ್ರಮಾಣ 0.55ರಷ್ಟಿದ್ದು, ಚೇತರಿಕೆ ಪ್ರಮಾಣ ಶೇ.98.75ರಷ್ಟಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಚೆನ್ನೈ: ಮಾಸ್ಕ್ ಧರಿಸದಿದ್ದರೆ ₹500 ದಂಡ



ಚೆನ್ನೈ: ಕೊರೊನಾ ಸೋಂಕಿನ ನಾಲ್ಕನೇ ಅಲೆಯ ಭೀತಿ ಹೆಚ್ಚುತ್ತಿದ್ದು, ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಧರಿಸದವರಿಗೆ ₹500 ದಂಡ ವಿಧಿಸಲು ಮತ್ತು ಕಟ್ಟುನಿಟ್ಟಾದ ನಿಯಮಾವಳಿಗಳನ್ನು ಜಾರಿಗೊಳಿಸಲು ತಮಿಳುನಾಡು ಸರ್ಕಾರ ಜಿಲ್ಲಾಡಳಿತಕ್ಕೆ ಸೂಚಿಸಿದೆ. ತಮಿಳುನಾಡಿನಲ್ಲಿ ಕೊರೊನಾ ಸೋಂಕು ಹರಡುವಿಕೆ ಆತಂಕಕಾರಿಯಾಗಿಲ್ಲ. ಆದರೆ, ಪ್ರತಿಷ್ಠಿತ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ (ಐಐಟಿ) ಹರಡಿರುವ ಸೋಂಕಿನ ಪ್ರಮಾಣದ ಹಿನ್ನೆಲೆಯಲ್ಲಿ ಅಗತ್ಯ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳುವಂತೆ ಸರ್ಕಾರವು ಜನರಿಗೆ ಮನವಿ ಮಾಡಿದೆ. ಐಐಟಿಯಲ್ಲಿ ಶುಕ್ರವಾರ 18 ಜನರಿಗೆ ಕೊರೊನಾ ಸೋಂಕು ಕಾಣಿಸಿಕೊಂಡಿದ್ದು, ಸೋಂಕಿತರ ಒಟ್ಟು ಸಂಖ್ಯೆ 30ಕ್ಕೆ ಏರಿದೆ. ಈ ಪೈಕಿ 29 ಮಂದಿ ವಿದ್ಯಾರ್ಥಿಗಳಿದ್ದಾರೆ.

ಖಾಸಗಿ ಕಾರುಗಳಲ್ಲಿ ಸಂಚಾರ: ಮಾಸ್ಕ್ ಕಡ್ಡಾಯ ಇಲ್ಲ

ನವದೆಹಲಿ (ಪಿಟಿಐ): ಖಾಸಗಿ ಕಾರು ಅಥವಾ ನಾಲ್ಕು ಚಕ್ರದ ವಾಹನಗಳಲ್ಲಿ ಸಂಚರಿಸುವವರು ಮಾಸ್ಕ್ ಧರಿಸುವುದು ಕಡ್ಡಾಯವಲ್ಲ ಎಂದು ದೆಹಲಿ ಸರ್ಕಾರ ತಿಳಿಸಿದೆ. ದೆಹಲಿಯಲ್ಲಿ ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರ ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಧರಿಸುವಿಕೆಯನ್ನು ಕಡ್ಡಾಯಗೊಳಿಸಿ ಆದೇಶ ಹೊರಡಿಸಿತ್ತು. ಒಂದು ವೇಳೆ ಯಾರಾದರೂ ನಿಯಮವನ್ನು ಉಲ್ಲಂಘಿಸಿದರೆ ಅವರಿಗೆ ₹ 500 ದಂಡ ವಿಧಿಸಲಾಗುತ್ತದೆ ಎಂದೂ ತಿಳಿಸಲಾಗಿದೆ.

ಆದರೆ, ಖಾಸಗಿ ಕಾರುಗಳಲ್ಲಿ ಓಡಾಡುವ ಜನರಿಗೆ ಇದು ಅನ್ವಯವಾಗುವುದಿಲ್ಲ ಎಂದು ದೆಹಲಿ ವಿಪತ್ತು ನಿರ್ವಹಣಾ ಪ್ರಾಧಿಕಾರ (ಡಿಡಿಎಂಎ) ತಿಳಿಸಿದೆ.

ಜೆರುಸಲೇಂ: ಕಲ್ಲು ತೂರಾಟದಿಂದ ಘರ್ಷಣೆ

ಜೆರುಸಲೇಂ(ಎಪಿ): ಇಸ್ರೇಲ್ ರಾಜಧಾನಿ ಜೆರುಸಲೇಂನಲ್ಲಿರುವ ಪ್ರಾರ್ಥನಾ ಮಂದಿರ ಅಲ್ ಅಕ್ಸಾ ಮೇಲೆ ಶುಕ್ರವಾರ ಪ್ಯಾಲೆಸ್ಟೀನ್ ಯುವಕರು ಕಲ್ಲು ತೂರಾಟ ನಡೆಸಿದ್ದಾರೆ. ಆಗ ಉಂಟಾದ ಉದ್ವಿಗ್ನ ಸ್ಥಿತಿಯನ್ನು ನಿಯಂತ್ರಿಸುವ ಸಲುವಾಗಿ ಭಾರಿ ಸಂಖ್ಯೆಯಲ್ಲಿ ಇಸ್ರೇಲ್ ಪೊಲೀಸರು ಪ್ರಾರ್ಥನಾ ಸ್ಥಳಕ್ಕೆ ನುಗ್ಗಿದ್ದಾರೆ.

ಈ ಸಂದರ್ಭದಲ್ಲಿ ನಡೆದ ಘರ್ಷಣೆಯಲ್ಲಿ 20ಕ್ಕೂ ಹೆಚ್ಚು ಪ್ಯಾಲೆಸ್ಟೀನಿಯರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಯಹೂದಿಗಳು ಮಸೀದಿಗೆ ತೆರಳದಂತೆ ಇಸ್ರೇಲ್ ಸರ್ಕಾರ ತಾತ್ಕಾಲಿಕ ನಿರ್ಬಂಧ ಹೇರಿತ್ತು.

ಇಸ್ರೇಲ್ ರಾಜಧಾನಿ ಜೆರುಸಲೇಂನಲ್ಲಿರುವ ಪ್ರಾರ್ಥನಾ ಮಂದಿರದ ಮೇಲೆ ಶುಕ್ರವಾರ ಪ್ಯಾಲೆಸ್ಟೀನ್ ಯುವಕರು ಕಲ್ಲು ತೂರಾಟ ನಡೆಸಿದರು. – ಎಎಫ್‌ಪಿ ಚಿತ್ರ

ಢಾಕಾದಲ್ಲಿ ಪ್ರತಿಭಟನೆ

ಢಾಕಾ (ಎಪಿ): ಸ್ವೀಡನ್‌ನಲ್ಲಿ ಇತ್ತೀಚೆಗೆ ನಡೆದ ಮುಸ್ಲಿಂ ವಿರೋಧಿ ಹಿಂಸಾಚಾರ ಹಾಗೂ ಇಸ್ರೇಲ್ ರಾಜಧಾನಿ ಜೆರುಸಲೇಂನಲ್ಲಿರುವ ಅಲ್-ಅಕ್ಸಾ ಮಸೀದಿಯಲ್ಲಿ ಪ್ಯಾಲೆಸ್ಟೀನಿಯರ ಮೇಲಿನ ದಾಳಿ ಖಂಡಿಸಿ ಬಾಂಗ್ಲಾದೇಶದ ರಾಜಧಾನಿ ಢಾಕಾದಲ್ಲಿ ಸಾವಿರಾರು ಮಂದಿ ಶುಕ್ರವಾರ ಪ್ರತಿಭಟನೆ ನಡೆಸಿದರು. ಇಸ್ಲಾಮಿ ಆಂದೋಲನ್ ಬಾಂಗ್ಲಾದೇಶ ಸಂಘಟನೆ ಕಾರ್ಯಕರ್ತರಿಂದ ಪ್ರತಿಭಟನೆ ನಡೆಯಿತು. ಮೆರವಣಿಗೆ ಉದ್ದಕ್ಕೂ, 'ಸ್ವೀಡನ್ ಪೊಲೀಸ್, ಶೇಮ್, ಶೇಮ್' ಮತ್ತು 'ಅಕ್ಸಾ ಮಸೀದಿಯಲ್ಲಿನ ಕ್ರೌರ್ಯ ನಿಲ್ಲಿಸಿ' ಎಂಬ ಬರಹಗಳಿದ್ದ ಫಲಕಗಳನ್ನು ಹಿಡಿದು ಸಾಗಿದರು. ಬಾಂಗ್ಲಾದೇಶವು ಇಸ್ರೇಲ್ ಜೊತೆ ರಾಜತಾಂತ್ರಿಕ ಸಂಬಂಧವನ್ನು ಹೊಂದಿಲ್ಲ. ಆದರೆ, ಸ್ವತಂತ್ರ ಪ್ಯಾಲೆಸ್ಟೀನ್ ದೇಶದ ರಚನೆಯನ್ನು ಬೆಂಬಲಿಸುತ್ತದೆ.

'ಇಲ್ಹಾನ್ ಒಮರ್ ಭೇಟಿ ಅಧಿಕೃತ ಪ್ರವಾಸವಲ್ಲ'

ವಾಷಿಂಗ್ಟನ್/ಇಸ್ಲಾಮಾಬಾದ್: 'ಸಂಸತ್ ಸದಸ್ಯೆ ಇಲ್ಹಾನ್ ಒಮರ್ ಅವರು ಕೈಗೊಂಡಿರುವ ಪಾಕಿಸ್ತಾನ ಪ್ರವಾಸವು ಸರ್ಕಾರ ಪ್ರಾಯೋಜಿತ ಭೇಟಿಯಲ್ಲ' ಎಂದು ಅಮೆರಿಕದ ವಿದೇಶಾಂಗ ಇಲಾಖೆ ವಕ್ತಾರ ನೆಡ್ ಪ್ರೈಸ್ ತಿಳಿಸಿದ್ದಾರೆ.

4 ದಿನಗಳ ಪಾಕಿಸ್ತಾನ ಪ್ರವಾಸದಲ್ಲಿರುವ ಒಮರ್ ಅವರು, ಪಾಕಿಸ್ತಾನ ಆಕ್ರಮಿತ ಕಾಶ್ಮೀರಕ್ಕೆ (ಪಿಒಕೆ) ಗುರುವಾರ ಭೇಟಿ ನೀಡಿದ್ದರು. ಕದನ ವಿರಾಮ ಒಪ್ಪಂದದ ನಂತರ ಎಲ್‌ಒಸಿ ಬಳಿ ಇರುವ ಸ್ಥಿತಿ ಕುರಿತು ಅವರಿಗೆ ಮಾಹಿತಿ ನೀಡಲಾಯಿತು ಎಂದು ಪಾಕಿಸ್ತಾನ ಅಧಿಕಾರಿಗಳು ಹೇಳಿದ್ದರು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಅಲ್ಪಸಂಖ್ಯಾತರ ನಿರ್ದೇಶನಾಲಯ
ಮೌಲಾನ ಅಬುಲ್ ಕಲಾಂ ಆಜಾದ್ ಭವನ, ನಂ.16ಸಿ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052 ಸಹಾಯವಾಣಿ: 8277799990
ವೆಬ್‌ಸೈಟ್: https://dom.karnataka.gov.in ಇ–ಮೇಲ್ : directorgokdom@gmail.com
ಸಂ. ಡಿಒಎಂ/ಎಜುಕೇಷನ್ ವಿಂಗ್/ಸಿಆರ್–03/2022–23 ದಿನಾಂಕ: 22.04.2022
ಅಲ್ಪಸಂಖ್ಯಾತರ ವಸತಿ ಶಾಲೆಗಳಿಗೆ (ಎಂಡಿಆರ್‌ಎಸ್/ಜಿಎಂಆರ್‌ಎಸ್/ಎಂಎಂಆರ್‌ಎಸ್) 6ನೇ ತರಗತಿಗೆ ಪ್ರವೇಶ ಪ್ರಕಟಣೆ
ಅಲ್ಪಸಂಖ್ಯಾತರ ವಸತಿ ಶಾಲೆಗಳಿಗೆ (ಎಂಡಿಆರ್‌ಎಸ್/ಜಿಎಂಆರ್‌ಎಸ್/ಎಂಎಂಆರ್‌ಎಸ್) 6ನೇ ತರಗತಿಗೆ ಪ್ರವೇಶಕ್ಕಾಗಿ ಆನ್‌ಲೈನ್ ಅರ್ಜಿಗಳನ್ನು ನೀಡುವ ಅವಧಿಯನ್ನು ವಿಸ್ತರಿಸಲಾಗಿದೆ.
ಹಿಂದಿನ ಪ್ರಕಟಣೆ ಸಂಖ್ಯೆ : ಡಿಒಎಂ/ಎಜುಕೇಷನ್ ವಿಂಗ್/ಸಿಆರ್–03/2022–23, ದಿನಾಂಕ: 12.04.2022ರಲ್ಲಿ ಉಲ್ಲೇಖಿಸಿರುವಂತೆ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು/ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳು/ಅಲ್ಪಸಂಖ್ಯಾತರ ಮಾದರಿ ವಸತಿ ಶಾಲೆಗಳಿಗೆ(ನವೋದಯ) ಪ್ರವೇಶಾತಿಗೆ ಆನ್‌ಲೈನ್ ಅರ್ಜಿಗಾಗಿ ದಿನಾಂಕವನ್ನು 30.04.2022ರವರೆಗೆ ವಿಸ್ತರಿಸಲಾಗಿದೆ. ಪ್ರವೇಶ ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ಸೇವಾ ಸಿಂಧು ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ತಿಳಿಸಲಾಗಿದೆ.
ಹೆಚ್ಚಿನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ | ಸಹಾಯವಾಣಿ : 8277799990(24/7) 080-22535916
ಆಸಕ್ತಿಯುಳ್ಳ ವಿದ್ಯಾರ್ಥಿಗಳು ಮತ್ತು ಪಾಲಕರುಗಳು ಸೇವಾ ಸಿಂಧು ಪೋರ್ಟಲ್ ಲಿಂಕ್ https://sevasindhuservices.karnataka.gov.in ಮೂಲಕ ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಬಹುದು, ಉಚಿತ ಸೇವೆ ಪಡೆಯಲು ಸಮೀಪದ ಜಿಲ್ಲಾ ಅಲ್ಪಸಂಖ್ಯಾತರ ಕಚೇರಿ ಅಥವಾ ಎಂಡಿಆರ್‌ಎಸ್/ಎಂಎಂಆರ್‌ಎಸ್/ಜಿಎಂಆರ್‌ಎಸ್ ಶಾಲೆಗಳು ಅಥವಾ ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳಿಗೆ ಭೇಟಿ ನೀಡಬಹುದು. ಸಂಕ್ಷಿಪ್ತ ಅಧಿಸೂಚನೆ ಮತ್ತು ವಿವರಗಳಿಗಾಗಿ ನಮ್ಮ ವೆಬ್‌ಸೈಟ್: https://dom.karnataka.gov.in ನೋಡಬಹುದು.
ಸಹಿ/- ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು



ಹೋರಾಡಿ ಸೋತ ಡೆಲ್ಲಿ ಕ್ಯಾಪಿಟಲ್ಸ್; ರೋವ್ಮನ್ ಪೊವೆಲ್ ಮಿಂಚು: ದೇವದತ್ತ ಅರ್ಧಶತಕ

ಬಟ್ಲರ್ ಶತಕ; ರಾಯಲ್ಸ್‌ಗೆ ಜಯ

ಮುಂಬೈ: ಜೋಸ್ ಬಟ್ಲರ್ ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಮೂರನೇ ಶತಕ ದಾಖಲಿಸಿದರು. ಇಂಗ್ಲೆಂಡ್ ಬ್ಯಾಟರ್ ಬಟ್ಲರ್ (116; 65ಎ) ಮತ್ತು ದೇವದತ್ತ ಪಡಿಕ್ಕಲ್ (54; 35ಎ) ಶತಕದ ಜೊತೆಯಾಟ ಮತ್ತು ಕನ್ನಡಿಗ ಪ್ರಸಿದ್ಧ ಕೃಷ್ಣ ಅವರ ಪ್ರಬಲ ದಾಳಿಯ ನೆರವಿನಿಂದ ರಾಜಸ್ಥಾನ ರಾಯಲ್ಸ್ ತಂಡ ಭರ್ಜರಿ ಜಯ ಗಳಿಸಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಶುಕ್ರವಾರ ರಾತ್ರಿ ನಡೆದ ಡೆಲ್ಲಿ ಕ್ಯಾಪಿಟಲ್ಸ್ ಎದುರಿನ ಪಂದ್ಯದಲ್ಲಿ ರಾಜಸ್ಥಾನ 15 ರನ್‌ಗಳಿಂದ ಗೆದ್ದಿತು.

ಟಾಸ್ ಗೆದ್ದ ಡೆಲ್ಲಿ ತಂಡದ ನಾಯಕ ರಿಷಭ್ ಪಂತ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಆದರೆ, ಬೌಲರ್‌ಗಳ ಯಾವ ತಂತ್ರವೂ ಫಲ ಕೊಡಲಿಲ್ಲ. ಹೀಗಾಗಿ ರಾಜಸ್ಥಾನ 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 222 ರನ್ ಗಳಿಸಿತು.

ಗುರಿ ಬೆನ್ನತ್ತಿದ ಡೆಲ್ಲಿ ಉತ್ತಮ ಹೋರಾಟ ಪ್ರದರ್ಶಿಸಿತು. ಮೊದಲ ವಿಕೆಟ್‌ಗೆ ಡೇವಿಡ್ ವಾರ್ನರ್ ಮತ್ತು ಪೃಥ್ವಿ ಶಾ 43 ರನ್ ಸೇರಿಸಿದರು. ನಾಯಕ ರಿಷಭ್ ಪಂತ್ 44 ರನ್ ಗಳಿಸಿದರೆ ಲಲಿತ್ ಯಾದವ್ 37 ರನ್ ಗಳಿಸಿ ತಂಡಕ್ಕೆ ಜಯ ತಂದುಕೊಡಲು ಪ್ರಯತ್ನಿಸಿದರು. ಅಂತಿಮ ಓವರ್‌ಗಳಲ್ಲಿ ರೋವ್ಮನ್ ಪೊವೆಲ್ ಸ್ಫೋಟಕ ಬ್ಯಾಟಿಂಗ್ ಮಾಡಿ ಭರವಸೆ ಮೂಡಿಸಿದರು.

ಕೊನೆಯ ಓವರ್‌ನಲ್ಲಿ ತಂಡದ ಜಯಕ್ಕೆ 36 ರನ್ ಬೇಕಾಗಿತ್ತು. ಒಬೆದ್ ಮೆಕಾಯ್ ಹಾಕಿದ ಓವರ್‌ನ ಮೊದಲ 3 ಎಸೆತಗಳಲ್ಲಿ ಸಿಕ್ಸರ್ ಸಿಡಿಸಿದ ರೋವ್ಮನ್ ಪ್ರೇಕ್ಷಕರನ್ನು ರಂಜಿಸಿದರು. ಆದರೆ ಆ ಲಯವನ್ನು ಮುಂದುವರಿಸಲು ಅವರಿಗೆ ಸಾಧ್ಯವಾಗಲಿಲ್ಲ.

ಬಟ್ಲರ್ ಮೂರನೇ ನೂರು: ಅಮೋಘ ಫಾರ್ಮ್‌ನಲ್ಲಿರುವ ಜೋಸ್ ಬಟ್ಲರ್ ಶತಕ ದಾಖಲಿಸಿದರು. ಈ ಬಾರಿ ಪಂದ್ಯಗಳು ನಡೆಯುತ್ತಿರುವ ಮುಂಬೈನ ಮೂರು ಕ್ರೀಡಾಂಗಣಗಳಲ್ಲಿಯೂ ಮೂರಂಕಿ ಮೊತ್ತ ಗಳಿಸಿದ ಸಾಧನೆ ಅವರದಾಯಿತು.

ಮುಂಬೈ ಇಂಡಿಯನ್ಸ್ ಮತ್ತು ಕೋಲ್ಕತ್ತ ನೈಟ್ ರೈಡರ್ಸ್ ಎದುರು ಅವರು ಶತಕ ದಾಖಲಿಸಿದ್ದಾರೆ. ಆರು ವರ್ಷಗಳ ಹಿಂದೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿರಾಟ್ ಕೊಹ್ಲಿ ಒಂದೇ ಋತುವಿನಲ್ಲಿ ನಾಲ್ಕು ಶತಕ ಗಳಿಸಿದ್ದರು. ಅವರ ದಾಖಲೆ ಸರಿಗಟ್ಟಲು ಬಟ್ಲರ್‌ಗೆ ಇನ್ನೊಂದು ಶತಕ ಬೇಕು.

ಡೆಲ್ಲಿ ತಂಡದ 'ಸ್ಪಿನ್ ತ್ರಿವಳಿ' ಕುಲದೀಪ್ ಯಾದವ್, ಲಲಿತ್ ಯಾದವ್ ಮತ್ತು ಅಕ್ಷರ್ ಪಟೇಲ್ ಅವರ ಆಟವು ಬಟ್ಲರ್ ಮುಂದೆ ನಡೆಯಲಿಲ್ಲ. ಮಧ್ಯಮವೇಗಿ ಖಲೀಲ್ ಮತ್ತು ಶಾರ್ದೂಲ್ ಠಾಕೂರ್ ಅವರ ಸ್ವಿಂಗ್, ಕಟರ್‌ಗಳೂ ಪರಿಣಾಮಕಾರಿಯಾಗಲಿಲ್ಲ. ಕ್ರಾಸ್ ಬ್ಯಾಟ್ ಹೊಡೆತಗಳ ಮೂಲಕ ಚೆಂಡನ್ನು ಬೌಂಡರಿಗೆರೆ ದಾಟಿಸುವಲ್ಲಿ ಬಟ್ಲರ್ ಯಶಸ್ವಿಯಾದರು.

36 ಎಸೆತಗಳಲ್ಲಿ ಅರ್ಧಶತಕ ತಲುಪಿದ ಅವರು ನಂತರ ತಮ್ಮ ಆಟದ ವೇಗವನ್ನು ಮತ್ತಷ್ಟು ಹೆಚ್ಚಿಸಿಕೊಂಡರು. ಕೇವಲ 22 ಎಸೆತಗಳಲ್ಲಿ 50 ರನ್ ಸೇರಿಸಿ ಶತಕ ಪೂರೈಸಿ ಸಂಭ್ರಮಿಸಿದರು. ಒಂಬತ್ತು ಸಿಕ್ಸರ್ ಮತ್ತು ಅಷ್ಟೇ ಸಂಖ್ಯೆಯ ಬೌಂಡರಿಗಳು ಅವರ ಬ್ಯಾಟ್‌ನಿಂದ ಹೊರಹೊಮ್ಮಿದವು. ಐಪಿಎಲ್‌ನಲ್ಲಿ ಇದು ಅವರ ನಾಲ್ಕನೇ ಶತಕವಾಗಿದೆ.

ಶತಕ ಸಂಭ್ರಮದಲ್ಲಿ ಜೋಸ್ ಬಟ್ಲರ್ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ರಾಜಸ್ಥಾನ ರಾಯಲ್ಸ್ 2ಕ್ಕೆ 222 (20 ಓವರ್)

ಬಟ್ಲರ್ ಸಿ ವಾರ್ನರ್ ಬಿ ಮುಸ್ತಫಿಜುರ್ 116 (65 ಎ, 4x9, 6x9), ದೇವದತ್ತ ಎಲ್‌ಬಿಡಬ್ಲ್ಯು ಬಿ ಖಲೀಲ್ 54 (35 ಎ, 4x7, 6x2), ಸಂಜು ಔಟಾಗದೆ 46 (19 ಎ, 4x5, 6x3), ಶಿಮ್ರೊನ್ 1 (1 ಎ)
ಇತರೆ (ಲೆಗ್‌ಬೈ 1, ವೈಡ್ 4) 5
ವಿಕೆಟ್ ಪತನ: 1-155 (ದೇವದತ್ತ ಪಡಿಕ್ಕಲ್, 15.1), 2-202 (ಜೋಸ್ ಬಟ್ಲರ್, 18.6)
ಬೌಲಿಂಗ್: ಖಲೀಲ್ ಅಹಮ್ಮದ್ 4–0–47–1, ಶಾರ್ದೂಲ್ ಠಾಕೂರ್ 3–1–29–0, ಲಲಿತ್ ಯಾದವ್ 4–0–41–0, ಮುಸ್ತಫಿಜುರ್ ರಹಮಾನ್ 4–0–43–1, ಕುಲದೀಪ್ ಯಾದವ್ 3–0–40–0, ಅಕ್ಷರ್ ಪಟೇಲ್ 2–0–21–0

ಡೆಲ್ಲಿ ಕ್ಯಾಪಿಟಲ್ಸ್ 8ಕ್ಕೆ 207 (20 ಓವರ್)

ಪೃಥ್ವಿ ಸಿ ಬೌಲ್ಟ್ ಬಿ ಅಶ್ವಿನ್ 37 (27 ಎ, 4x5, 6x1), ವಾರ್ನರ್ ಸಿ ಸಂಜು ಬಿ ಪ್ರಸಿದ್ಧ 28 (14 ಎ, 4x5, 6x1), ಸರ್ಫರಾಜ್ ಸಿ ಪ್ರಸಿದ್ಧ ಬಿ ಅಶ್ವಿನ್ 1 (3 ಎ), ಋಷಭ್ ಸಿ ದೇವದತ್ತ ಬಿ ಪ್ರಸಿದ್ಧ 44 (24 ಎ, 4x4, 6x2), ಲಲಿತ್ ಸಿ ಸ್ಯಾಮ್ಸನ್ ಬಿ ಪ್ರಸಿದ್ಧ 37 (24 ಎ, 4x3, 6x2), ಅಕ್ಷರ್ ಬಿ ಚಾಹಲ್ 1 (4 ಎ), ಶಾರ್ದೂಲ್ ರನ್ ಔಟ್ (ಪರಾಗ್/ಸಂಜು) 10 (7 ಎ, 6x1), ರೋವ್ಮನ್ ಸಿ ಸಂಜು ಬಿ ಮೆಕಾಯ್ 36 (15 ಎ, 6x5), ಕುಲದೀಪ್ ಔಟಾಗದೆ 0 (3 ಎ)
ಇತರೆ (ಬೈ 4, ನೋಬಾಲ್ 1, ವೈಡ್ 8) 13
ವಿಕೆಟ್ ಪತನ: 1-43 (ಡೇವಿಡ್ ವಾರ್ನರ್, 4.3), 2-48 (ಸರ್ಫರಾಜ್ ಖಾನ್, 5.1), 3-99 (ಪೃಥ್ವಿ ಶಾ, 9.6), 4-124 (ರಿಷಭ್ ಪಂತ್, 11.4), 5-127 (ಅಕ್ಷರ್ ಪಟೇಲ್, 12.6), 6-157 (ಶಾರ್ದೂಲ್ ಠಾಕೂರ್, 15.3), 7-187 (ಲಲಿತ್ ಯಾದವ್, 18.3), 8-207 (ರೋವ್ಮನ್ ಪೊವೆಲ್, 19.6)
ಬೌಲಿಂಗ್: ಟ್ರೆಂಟ್ ಬೌಲ್ಟ್ 4–0–47–0, ಪ್ರಸಿದ್ಧ ಕೃಷ್ಣ 4–1–22–3, ಒಬೇದ್ ಮೆಕಾಯ್ 3–0–52–1, ರವಿಚಂದ್ರನ್ ಅಶ್ವಿನ್ 4–0–32–2, ಯಜುವೇಂದ್ರ ಚಾಹಲ್ 4–0–28–1, ರಿಯಾನ್ ಪರಾಗ್ 1–0–22–0

ಫಲಿತಾಂಶ: ರಾಜಸ್ಥಾನ ರಾಯಲ್ಸ್‌ಗೆ 15 ರನ್‌ಗಳ ಗೆಲುವು

ಪಡಿಕ್ಕಲ್ ಜೊತೆಯಾಟದ ರಂಗು

ದೇವದತ್ತ ಪಡಿಕ್ಕಲ್ ಜೊತೆಗೆ ಇನಿಂಗ್ಸ್ ಆರಂಭಿಸಿದ ಬಟ್ಲರ್ ಶತಕದ ಜೊತೆಯಾಟವನ್ನೂ ಆಡಿದರು. ಇವರಿಬ್ಬರೂ ಮೊದಲ 15 ಓವರ್‌ಗಳಲ್ಲಿ 155 ರನ್‌ಗಳನ್ನು ಕಲೆಹಾಕಿದರು. ಬೆಂಗಳೂರು ಹುಡುಗ ದೇವದತ್ತ 31 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ಒಟ್ಟು ಏಳು ಬೌಂಡರಿ ಸಿಡಿಸಿದ ದೇವದತ್ತ, ಎರಡು ಸಿಕ್ಸರ್ ಎತ್ತಿದರು. ಅವರು 16ನೇ ಓವರ್‌ನಲ್ಲಿ ಖಲೀಲ್ ಅಹಮದ್ ಎಸೆತದಲ್ಲಿ ಎಲ್‌ಬಿಡಬ್ಲ್ಯು ಆದರು.

29 ಎಸೆತ, 67 ರನ್: ಬಟ್ಲರ್ ಜೊತೆಗೂಡಿದ ನಾಯಕ ಸಂಜು ಸ್ಯಾಮ್ಸನ್ ಬೌಲರ್‌ಗಳನ್ನು ನಿರ್ದಯವಾಗಿ ದಂಡಿಸಿದರು. ಕೊನೆಯ 29 ಎಸೆತಗಳಲ್ಲಿ 67 ರನ್‌ಗಳು ತಂಡದ ಖಾತೆ ಸೇರಲು ಅವರ ಆಟವು ಕಾರಣವಾಯಿತು. 19 ಎಸೆತಗಳಲ್ಲಿ 46 ರನ್ ಗಳಿಸಿದರು. ಒಂದು ಜೀವದಾನ ಲಭಿಸಿದ್ದನ್ನು ಬಳಸಿಕೊಂಡ ಸಂಜು ಐದು ಬೌಂಡರಿ, ಮೂರು ಸಿಕ್ಸರ್ ಬಾರಿಸಿದರು. 19ನೇ ಓವರ್‌ನಲ್ಲಿ ಬಟ್ಲರ್ ಔಟಾದರು.

ಬೆಂಗಳೂರಿಗೆ ಸನ್ ಚಾಲೆಂಜ್

ಡುಪ್ಲೆಸಿ–ಕೇನ್ ಮುಖಾಮುಖಿ: ದಿನೇಶ್ ಮೇಲೆ ಕಣ್ಣು

ಮುಂಬೈ (ಪಿಟಿಐ): ಒಂದು ಕಡೆ ಸ್ಫೋಟಕ ಶೈಲಿಯ ಬ್ಯಾಟರ್‌ಗಳಾದ ಫಫ್ ಡುಪ್ಲೆಸಿ, ದಿನೇಶ್ ಕಾರ್ತಿಕ್ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್. ಇನ್ನೊಂದೆಡೆ ಸ್ವಿಂಗ್ ಮೋಡಿ ಮಾಡುವ ಉಮ್ರನ್ ಮಲಿಕ್, ಭುವನೇಶ್ವರ್ ಕುಮಾರ್ ಹಾಗೂ ಯಾರ್ಕರ್ ಪರಿಣತ ಟಿ. ನಟರಾಜನ್. ಶನಿವಾರ ರಾತ್ರಿ ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ಇವರಲ್ಲಿ ಮೇಲುಗೈ ಸಾಧಿಸುವವರಿಗೇ ಜಯ ಒಲಿಯುವುದು ಖಚಿತ.

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಈ ಬಾರಿ ಏಳು ಪಂದ್ಯಗಳಲ್ಲಿ ಐದರಲ್ಲಿ ಗೆದ್ದು ಹತ್ತು ಅಂಕ ಗಳಿಸಲು ನಾಯಕ ಫಫ್, ದಿನೇಶ್ ಮತ್ತು ಮ್ಯಾಕ್ಸ್ ಕೊಡುಗೆ ದೊಡ್ಡದು. ಸನ್‌ರೈಸರ್ಸ್ ಹೈದರಾಬಾದ್ ತಂಡವು ಟೂರ್ನಿಯಲ್ಲಿ ಆಡಿದ ಆರು ಪಂದ್ಯಗಳ ಪೈಕಿ ಮೊದಲೆರಡರಲ್ಲಿ ಸೋತರೂ ನಂತರ ಪುಟಿದೆದ್ದು ಸತತ ಜಯ ಸಾಧಿಸಲು ಈ ಮೂವರು ಬೌಲರ್‌ಗಳೇ ಕಾರಣ. ಆದ್ದರಿಂದಲೇ ಈ ಎರಡೂ ತಂಡಗಳ ಮುಖಾಮುಖಿಯು ಕುತೂಹಲ ಕೆರಳಿಸಿದೆ.



ಉಮ್ರಾನ್ ಮಲಿಕ್

ವಿರಾಟ್ ಕೊಹ್ಲಿ ಫಾರ್ಮ್ ಕಳೆದುಕೊಂಡಿರುವುದು ಆರ್‌ಸಿಬಿಗೆ ಮತ್ತು ನಿಕೊಲಸ್ ಪೂರನ್ ಅಸ್ಥಿರ ಪ್ರದರ್ಶನ ಸನ್ ತಂಡಕ್ಕೆ ಚಿಂತೆಯ ವಿಷಯಗಳೇ ಆದರೂ. ಉಳಿದ ಆಟಗಾರರು ಒಂದಿಲ್ಲ ಒಂದು ಹಂತದಲ್ಲಿ ಮಿಂಚುತ್ತಿರುವುದರಿಂದ ತಂಡಗಳು ಗೆಲುವಿನ ಸವಿಯುಣ್ಣುತ್ತಿವೆ.

ಬೆಂಗಳೂರು ತಂಡದಲ್ಲಿ ಇದೇ ಮೊದಲ ಸಲ ಆಡುತ್ತಿರುವ ದಿನೇಶ್ ಫಿನಿಷರ್ ಆಗಿ ಹೊರಹೊಮ್ಮಿದ್ದಾರೆ. ಎಬಿ ಡಿವಿಲಿಯರ್ಸ್ ಇಲ್ಲದ ಕೊರತೆಯನ್ನು ತುಂಬಿದ್ದಾರೆ. ಫಫ್ ಆರಂಭಿಕ ಬ್ಯಾಟರ್ ಆಗಿ ಮಿಂಚುತ್ತಿದ್ದಾರೆ. ಶಾಬಾಜ್ ಅಹಮದ್ ಕೂಡ ಉಪಯುಕ್ತ ಆಟಗಾರ. ಬೌಲಿಂಗ್‌ನಲ್ಲಿ ಹರ್ಷಲ್ ಪಟೇಲ್, ಜೋಶ್ ಹ್ಯಾಜಲ್‌ವುಡ್ ಇದುವರೆಗೆ ನಿರೀಕ್ಷೆಗೆ ತಕ್ಕಂತೆ ಆಡಿದ್ದಾರೆ.

ಸನ್‌ರೈಸರ್ಸ್ ತಂಡದಲ್ಲಿ ನಾಯಕ ಕೇನ್ ವಿಲಿಯಮ್ಸನ್, ರಾಹುಲ್ ತ್ರಿಪಾಠಿ ಮತ್ತು ಏಡನ್ ಮರ್ಕರಮ್ ಮುಂದೆ ಆರ್‌ಸಿಬಿ ಬೌಲಿಂಗ್ ಪಡೆಯನ್ನು ಎದುರಿಸುವ ಸವಾಲು ಇದೆ. ಈ ತಂಡಕ್ಕೆ ಬೌಲರ್‌ಗಳೇ ಪ್ರಮುಖ ಶಕ್ತಿಯಾಗಿದ್ದಾರೆ.

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್
ಪಂದ್ಯ ಆರಂಭ: ರಾತ್ರಿ 7.30

ವಿರಾಟ್ ಕೊಹ್ಲಿ ಮತ್ತು ದಿನೇಶ್ ಕಾರ್ತಿಕ್

ಹಾರ್ದಿಕ್–ಶ್ರೇಯಸ್ ಮುಖಾಮುಖಿ

ನವಿ ಮುಂಬೈ (ಪಿಟಿಐ): ಹಾರ್ದಿಕ್ ಪಾಂಡ್ಯ ನಾಯಕತ್ವದ ಗುಜರಾತ್ ಟೈಟನ್ಸ್ ಮತ್ತು ಶ್ರೇಯಸ್ ಅಯ್ಯರ್ ಮುನ್ನಡೆಸುತ್ತಿರುವ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಶನಿವಾರ ಮಧ್ಯಾಹ್ನ ಡಿವೈ ಪಾಟೀಲ ಮೈದಾನದಲ್ಲಿ ಮುಖಾಮುಖಿಯಾಗಲಿವೆ.

ಆಡಿರುವ ಆರು ಪಂದ್ಯಗಳಲ್ಲಿ ಗುಜರಾತ್ ತಂಡವು ಐದರಲ್ಲಿ ಜಯಿಸಿದೆ. ಒಂದರಲ್ಲಿ ಮಾತ್ರ ಸೋತಿದೆ. ಕೋಲ್ಕತ್ತ ತಂಡವು ಏಳು ಪಂದ್ಯಗಳನ್ನು ಆಡಿದ್ದು ಮೂರರಲ್ಲಿ ಮಾತ್ರ ಗೆದ್ದಿದೆ. ಇದರಿಂದಾಗಿ ಒತ್ತಡದಲ್ಲಿದೆ. ಗುಜರಾತ್ ತಂಡದ ಡೇವಿಡ್ ಮಿಲ್ಲರ್ ಮತ್ತು ರಶೀದ್ ಖಾನ್ ಅವರು ಕಳೆದ ಪಂದ್ಯದಲ್ಲಿ ಚೆನ್ನೈ ಎದುರು ಅಬ್ಬರಿಸಿದ್ದರು. ಅದರಿಂದಾಗಿ ಮಧ್ಯಮ ಕ್ರಮಾಂಕವು ಬಲಿಷ್ಠವಾಗಿದೆ. ಗುಜರಾತ್ ತಂಡದ ಬ್ಯಾಟಿಂಗ್ ಬಲವನ್ನು ಕುಗ್ಗಿಸುವುದೇ ಕೋಲ್ಕತ್ತದ ಬೌಲರ್‌ಗಳ ಮುಂದಿರುವ ಪ್ರಮುಖ ಸವಾಲು. ಬ್ಯಾಟಿಂಗ್‌ನಲ್ಲಿ ಆ್ಯಂಡ್ರೆ ರಸೆಲ್, ಸುನೀಲ್ ನಾರಾಯಣ ಮತ್ತು ವೆಂಕಟೇಶ್ ಅಯ್ಯರ್ ತಮ್ಮ ಆಟ ತೋರಿಸಬೇಕಿದೆ.

ಪಂದ್ಯ ಆರಂಭ: ಮಧ್ಯಾಹ್ನ 3.30.
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	18
ಕುಲದೀಪ್	ಡೆಲ್ಲಿ	13
ಬ್ರಾವೊ	ಚೆನ್ನೈ	12

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	491
ರಾಹುಲ್	ಲಖನೌ	265
ಪೃಥ್ವಿ ಶಾ	ಡೆಲ್ಲಿ	254

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ರಾಜಸ್ಥಾನ	7	5	2	0	0	10	0.432
ಗುಜರಾತ್	6	5	1	0	0	10	0.395
ಬೆಂಗಳೂರು	7	5	2	0	0	10	0.251
ಲಖನೌ	7	4	3	0	0	8	0.124
ಹೈದರಾಬಾದ್	6	4	2	0	0	8	-0.077
ಡೆಲ್ಲಿ	7	3	4	0	0	6	0.715
ಕೋಲ್ಕತ್ತ	7	3	4	0	0	6	0.160
ಪಂಜಾಬ್	7	3	4	0	0	6	-0.562
ಚೆನ್ನೈ	7	2	5	0	0	4	-0.534
ಮುಂಬೈ	7	0	7	0	0	0	-1.892

*ಶುಕ್ರವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ರಿಕಿ ಪಾಂಟಿಂಗ್‌ಗೆ ಪ್ರತ್ಯೇಕವಾಸ

ನವದೆಹಲಿ (ಪಿಟಿಐ): ಡೆಲ್ಲಿ ಕ್ಯಾಪಿಟಲ್ಸ್ ತಂಡದ ಕೋಚ್ ರಿಕಿ ಪಾಂಟಿಂಗ್ ಕುಟುಂಬದ ಸದಸ್ಯರೊಬ್ಬರಿಗೆ ಕೋವಿಡ್ ದೃಢಪಟ್ಟಿದೆ. ಆದ್ದರಿಂದ ಪಾಂಟಿಂಗ್ ಅವರನ್ನು 5 ದಿನಗಳ ಕ್ವಾರಂಟೈನ್‌ಗೆ ಒಳಪಡಿಸಲಾಗಿದೆ.

ಶುಕ್ರವಾರ ರಾಜಸ್ಥಾನ್ ರಾಯಲ್ಸ್ ಎದುರಿನ ಪಂದ್ಯಕ್ಕೂ ಮುನ್ನ ಈ ವಿಷಯ ವರದಿಯಾಗಿದೆ. ಎರಡು ಬಾರಿ ಪರೀಕ್ಷೆಗೊಳಪಟ್ಟಿರುವ ಪಾಂಟಿಂಗ್ ಅವರಿಗೆ ಸೋಂಕು ಇಲ್ಲದಿರುವುದು ಖಚಿತಪಟ್ಟಿದೆ. ಆದರೆ ಕುಟುಂಬದ ಸದಸ್ಯರೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ಆದ್ದರಿಂದ ಮುನ್ನೆಚ್ಚರಿಕೆಯಿಂದ ಅವರನ್ನು ಪ್ರತ್ಯೇಕವಾಸಕ್ಕೆ ಕಳುಹಿಸಲಾಗಿದೆ. ಅವರ ಆರೋಗ್ಯದ ಕುರಿತು ತಂಡದ ವೈದ್ಯರು ನಿಗಾ ವಹಿಸಿದ್ದಾರೆ.

ಡೆಲ್ಲಿ ತಂಡದಲ್ಲಿ ಇಬ್ಬರು ಆಟಗಾರರು ಸೇರಿದಂತೆ ಒಟ್ಟು ಆರು ಮಂದಿಗೆ ಕೋವಿಡ್ ಇರುವುದು ಈಚೆಗೆ ಖಚಿತವಾಗಿತ್ತು.

'ಫಿನಿಶರ್' ಧೋನಿಗೆ ನಮಸ್ಕರಿಸಿದ ಜಡೇಜ

ಮುಂಬೈ: ಅಂತಿಮ ಓವರ್‌ನಲ್ಲಿ 'ಫಿನಿಶರ್' ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಿ ತಂಡಕ್ಕೆ ಗೆಲುವು ತಂದುಕೊಟ್ಟ ಮಹೇಂದ್ರ ಸಿಂಗ್ ಧೋನಿ ಅವರಿಗೆ ಚೆನ್ನೈ ಸೂಪರ್ ಕಿಂಗ್ಸ್‌ನ ನಾಯಕ ರವೀಂದ್ರ ಜಡೇಜ ತಲೆಬಾಗಿ ನಮಸ್ಕರಿಸಿದರು.

ಡಿ.ವೈ.ಪಾಟೀಲ್ ಕ್ರೀಡಾಂಗಣದಲ್ಲಿ ಗುರುವಾರ ರಾತ್ರಿ ನಡೆದ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ಚೆನ್ನೈ ಸೂಪರ್ ಕಿಂಗ್ಸ್ 3 ವಿಕೆಟ್‌ಗಳಿಂದ ಜಯ ಗಳಿಸಿತ್ತು. ಪಂದ್ಯದ ಬಳಿಕ ಹಸ್ತಲಾಘವ ಮಾಡುವಾಗ ರವೀಂದ್ರ ಜಡೇಜ ಕ್ಯಾಪ್ ತೆಗೆದು ಮಾಜಿ ನಾಯಕ ಧೋನಿ ಮುಂದೆ ತಲೆ ಬಾಗಿದರು. ಬಳಿಕ ತಬ್ಬಿಕೊಂಡರು. ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಕೊನೆಯ ಓವರ್‌ನಲ್ಲಿ ಚೆನ್ನೈ ಗೆಲುವಿಗೆ 17 ರನ್ ಬೇಕಾಗಿತ್ತು. ಜಯದೇವ ಉನದ್ಕತ್ ಹಾಕಿದ ಓವರ್‌ನ ಮೊದಲ ಎಸೆತದಲ್ಲಿ ಡ್ವೇನ್ ಪ್ರಿಟೋರಿಯಸ್ ಔಟಾದರು.

ಎರಡನೇ ಎಸೆತದಲ್ಲಿ ಡ್ವೇನ್ ಬ್ರಾವೊ ಒಂದು ರನ್ ಗಳಿಸಿದರು. ಮೂರು ಹಾಗೂ ನಾಲ್ಕನೇ ಎಸೆತಗಳಲ್ಲಿ ಕ್ರಮವಾಗಿ ಸಿಕ್ಸರ್ ಹಾಗೂ ಬೌಂಡರಿ ಸಿಡಿಸುವ ಮೂಲಕ ಧೋನಿ ಅಬ್ಬರಿಸಿದರು.

ಐದನೇ ಎಸೆತದಲ್ಲಿ ಎರಡು ರನ್ ಗಳಿಸುವ ಮೂಲಕ ಚಾಣಾಕ್ಷತನ ಮೆರೆದರು. ಕೊನೆಯ ಎಸೆತದಲ್ಲಿ ಗೆಲುವಿಗೆ ನಾಲ್ಕು ರನ್ ಬೇಕಾ ಗಿತ್ತು. ಚೆಂಡನ್ನು ಬೌಂಡರಿಗೆ ಅಟ್ಟುವ ಮೂಲಕ ಅವರು ಜಯ ತಂದರು.

ಮಹೇಂದ್ರ ಸಿಂಗ್ ಧೋನಿ –ಪಿಟಿಐ

ಬೆಳ್ಳಿ ಗೆದ್ದ ರಾಧಿಕಾ, ಅನ್ಶು

ಏಷ್ಯನ್ ಕುಸ್ತಿ: 62 ಕೆಜಿ ವಿಭಾಗದಲ್ಲಿ ಮನೀಷಾಗೆ ಕಂಚು

ಉಲಾನ್‌ಬಾತರ್, ಮಂಗೋಲಿಯ (ಪಿಟಿಐ): ಮೊದಲ ಮೂರು ಬೌಟ್‌ಗಳಲ್ಲಿ ಅಮೋಘ ಸಾಧನೆ ಮಾಡಿದ ಭಾರತದ ಅನ್ಶು ಮಲಿಕ್ ನಿರ್ಣಾಯಕ ಹಂತದಲ್ಲಿ ಮುಗ್ಗರಿಸಿದರು. ಹೀಗಾಗಿ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕಕ್ಕೆ ಸಮಾಧಾನಪಟ್ಟುಕೊಳ್ಳಬೇಕಾಯಿತು.

57 ಕೆಜಿ ವಿಭಾಗದ ಫೈನಲ್‌ನಲ್ಲಿ ಅಂಶು ಅವರು ಜಪಾನ್‌ನ ಸುಗುಮಿ ಸಕುರಾಯ್‌ಗೆ ಮಣಿದರು. 65 ಕೆಜಿ ವಿಭಾಗದಲ್ಲಿ ರಾಧಿಕಾ ಬೆಳ್ಳಿ ಪದಕ ಗಳಿಸಿದರು. 62 ಕೆಜಿ ವಿಭಾಗದಲ್ಲಿ ಮನೀಷಾ ಕಂಚಿನ ಪದಕ ಗಳಿಸಿದರು.

ಹಿಂದಿನ ಆವೃತ್ತಿಯ ಚಾಂಪಿಯನ್, 20 ವರ್ಷದ ಹರಿಯಾಣ ಕುಸ್ತಿಪಟು ಅನ್ಶು ಮಲಿಕ್ ಮೊದಲ ಮೂರು ಬೌಟ್‌ಗಳಲ್ಲಿ ತಾಂತ್ರಿಕವಾಗಿ ಮೇಲುಗೈ ಸಾಧಿಸಿ ಜಯ ಗಳಿಸಿದ್ದರು.

ಕಳೆದ ಬಾರಿ ಫೈನಲ್ ತಲುಪುವ ಮೂಲಕ ಈ ಸಾಧನೆ ಮಾಡಿದ ಭಾರತದ ಮೊದಲ ಮಹಿಳೆ ಎನಿಸಿದ್ದರು. 53 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಸ್ವಾತಿ ಶಿಂಧೆ ಮೊದಲ ಎರಡೂ ಬೌಟ್‌ಗಳಲ್ಲಿ ಸೋತು ಹೊರಬಿದ್ದರು. ತಾಂತ್ರಿಕ ಮೇಲುಗೈ ಸಾಧಿಸಿದ ಎದುರಾಳಿಗಳು ಅವರನ್ನು ಮಣಿಸಿದ್ದರು.

ಅನ್ಶು ಮಲಿಕ್ –ಟ್ವಿಟರ್ ಚಿತ್ರ

ಊಬರ್ ಕಪ್ : ಹಿಂದೆ ಸರಿದ ಸಿಕ್ಕಿ–ಅಶ್ವಿನಿ

ನವದೆಹಲಿ (ಪಿಟಿಐ): ಭಾರತದ ಮಹಿಳೆಯರ ಬ್ಯಾಡ್ಮಿಂಟನ್ ಡಬಲ್ಸ್ ಜೋಡಿ ಸಿಕ್ಕಿ ರೆಡ್ಡಿ ಮತ್ತು ಅಶ್ವಿನಿ ಪೊನ್ನಪ್ಪ ಅವರು ಊಬರ್ ಕಪ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಿಂದ ಹಿಂದೆ ಸರಿದಿದ್ದಾರೆ.

'ಸಿಕ್ಕಿ ರೆಡ್ಡಿ ಗಾಯಗೊಂಡಿದ್ದರಿಂದ ಹಿಂದೆ ಸರಿಯುವ ನಿರ್ಧಾರವನ್ನು ಶುಕ್ರವಾರ ಮಾಡಲಾಯಿತು. ಸಿಕ್ಕಿ ರೆಡ್ಡಿಯವರ ಉದರ ಭಾಗದ ಸ್ನಾಯುವಿನಲ್ಲಿ ಗಾಯ (ಗ್ರೇಡ್ 2) ಇದ್ದು 4–6 ವಾರಗಳ ವಿಶ್ರಾಂತಿ ಪಡೆಯಲು ವೈದ್ಯರು ಸಲಹೆ ನೀಡಿದ್ದಾರೆ' ಎಂದು ಭಾರತ ಬ್ಯಾಡ್ಮಿಂಟನ್ ಸಂಸ್ಥೆ (ಬಿಎಐ) ತಿಳಿಸಿದೆ.

ಊಬರ್ ಕಪ್ ಟೂರ್ನಿಯು ಮೇ 8 ರಿಂದ 15ರವರೆಗೆ ಬ್ಯಾಂಕಾಕ್‌ನಲ್ಲಿ ನಡೆಯಲಿದೆ.

ಕಾಮನ್‌ವೆಲ್ತ್; ಕುಸ್ತಿ, ಶೂಟಿಂಗ್ ಕೈಬಿಡದಿರಲು ಐಒಎ ಆಗ್ರಹ

ನವದೆಹಲಿ (ಪಿಟಿಐ): ಶೂಟಿಂಗ್, ಕುಸ್ತಿ ಮತ್ತು ಆರ್ಚರಿ ಕ್ರೀಡೆಗಳನ್ನು 2026ರ ಕಾಮನ್‌ವೆಲ್ತ್ ಗೇಮ್ಸ್‌ನಿಂದ ಕೈಬಿಡಲು ನಡೆದಿರುವ ಚಿಂತನೆಯು ಆಘಾತಕಾರಿ. ಈ ಕುರಿತು ಮುಂಬರಲಿರುವ ಕಾಮನ್‌ವೆಲ್ತ್ ಗೇಮ್ಸ್ ಫೆಡರೇಷನ್ ಮಹಾಸಭೆಯಲ್ಲಿ ಚರ್ಚಿಸಲಿದ್ದೇವೆ ಎಂದು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಶುಕ್ರವಾರ ತಿಳಿಸಿದೆ.

'ಸಿಡಬ್ಲ್ಯುಜಿಯು ಈಚೆಗೆ ಬಿಡುಗಡೆ ಮಾಡಿರುವ ಮೊದಲ ಪಟ್ಟಿಯಲ್ಲಿ 16 ಕ್ರೀಡೆಗಳಿವೆ. ಆದರೆ ಅದರಲ್ಲಿ ಅತ್ಯಂತ ಜನಪ್ರಿಯ ಮೂರು ಕ್ರೀಡೆಗಳಿಲ್ಲ. ಇದನ್ನು ನಾವು ವಿರೋಧಿಸುತ್ತೇವೆ. ಶೂಟಿಂಗ್, ಆರ್ಚರಿ ಮತ್ತು ಕುಸ್ತಿ ಕ್ರೀಡೆಗಳನ್ನು ಸೇರ್ಪಡೆ ಮಾಡಲು ಒತ್ತಾಯಿಸುತ್ತೇವೆ' ಎಂದು ಐಒಎ ಮಹಾಪ್ರಧಾನ ಕಾರ್ಯದರ್ಶಿ ರಾಜೀವ ಮೆಹ್ತಾ ಅವರು ಈಚೆಗೆ ಸಿಜಿಎಫ್ ಅಧ್ಯಕ್ಷ ಲೂಯಿಸ್ ಮಾರ್ಟಿನ್ ಅವರಿಗೆ ಪತ್ರ ಬರೆದಿದ್ದಾರೆ.

ಭಾರತ ತಂಡವು ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಇದುವರೆಗೆ ಶೂಟಿಂಗ್‌ನಲ್ಲಿ ಅತಿ ಹೆಚ್ಚು ಪದಕಗಳನ್ನು ಜಯಿಸಿದೆ. ಒಟ್ಟು 135 ಪದಕಗಳು ಅದರ ಖಾತೆಯಲ್ಲಿವೆ. ಕುಸ್ತಿಯಲ್ಲಿಯೂ ಇದುವರೆಗೆ 102 ಪದಕಗಳು ಒಲಿದಿವೆ.

ಜ್ಯೋತಿ ನಿವಾಸ ಕಾಲೇಜಿನ ತಂಡವು ಬೆಂಗಳೂರಿನಲ್ಲಿ ಕ್ರೈಸ್ಟ್ ವಿಶ್ವವಿದ್ಯಾಲಯ ಆಯೋಜಿಸಿದ್ದ 'ಕ್ರಿಸ್ಪೊ' ಕ್ರೀಡಾ ಹಬ್ಬದ ಫುಟ್‌ಬಾಲ್ ಸ್ಪರ್ಧೆಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು. ಫೈನಲ್ ಪಂದ್ಯದಲ್ಲಿ ಜ್ಯೋತಿ ನಿವಾಸ 1–0ಯಿಂದ ಕ್ರಿಸ್ಟ್ ವಿವಿ ವಿರುದ್ಧ ಗೆದ್ದಿತು. ಜ್ಯೋತಿ ನಿವಾಸ ತಂಡ: ಎಡದಿಂದ (ನಿಂತವರು) ಜನನಿ, ಶ್ರೀಮತಿ, ಮಧು, ಜೆನಿಫರ್, ಸಜನ್ ಜಾರ್ಜ್ (ಕೋಚ್ ಮತ್ತು ದೈಹಿಕ ಶಿಕ್ಷಣ ನಿರ್ದೇಶಕ), ಹರ್ಷಿತಾ, ಜಾಯ್ಸ್, ಸುನೈನಾ, ಪ್ರಿಯದರ್ಶಿನಿ. (ಕುಳಿತವರು) ರೆಬೆಕ್ಕಾ, ಆ್ಯಂಡ್ರಿಯಾ, ಸೌಮ್ಯಾ, ನಿಖಿತಾ, ಐಶ್ವರ್ಯ, ನಿತ್ಯಾ, ರಫಿಯಾ, ಸೌಂದರ್ಯ

ಫುಟ್‌ಬಾಲ್ ಟೂರ್ನಿ: ಐಫಾಜ್ ಹ್ಯಾಟ್ರಿಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಫಾಜ್ ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಟೌನ್ ಹೊಸಕೋಟೆ ಎಫ್‌ಸಿ ತಂಡವು ಬಿಡಿಎಫ್‌ಎ ಸಿ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಗುರುವಾರ ನಡೆದ 'ಇ' ಪಂದ್ಯದಲ್ಲಿ 4–1ರಿಂದ ಬೆಂಗಳೂರು ಯೆಲ್ಲೋಸ್ ಎಫ್‌ಸಿ ತಂಡವನ್ನು ಮಣಿಸಿತು. ಐಫಾಜ್ 10, 29 ಮತ್ತು 47ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು. ವಿಜೇತ ತಂಡದ ಪರ ಇನ್ನೊಂದು ಗೋಲನ್ನು ಶಿವ (13ನೇ ನಿ.) ಗಳಿಸಿದರು. ಯೆಲ್ಲೋಸ್ ಪರ ಬ್ರಯಾನ್ ಮೆನೆಜಸ್ (11ನೇ ನಿ.) ಗೋಲು ಹೊಡೆದರು.

ಮತ್ತೊಂದು ಪಂದ್ಯದಲ್ಲಿ ಬೆಂಗಳೂರು ವಾಂಡರರ್ಸ್ ಎಫ್‌ಸಿ 4–1ರಿಂದ ವಿನಾಯಕ ಎಫ್‌ಸಿಗೆ ಸೋಲುಣಿಸಿತು.

ಕೆಎಸ್‌ಎಫ್‌ಎ ಸಿ ಡಿವಿಷನ್ ಲೀಗ್‌ನಲ್ಲಿ ಹರಿಹರನ್ ಗಳಿಸಿದ ಹ್ಯಾಟ್ರಿಕ್ ಬಲದಿಂದ ಬಿಎಫ್‌ಎ 7–0ಯಿಂದ ಜೀವನಹಳ್ಳಿ ಎಫ್‌ಸಿಯನ್ನು ಮಣಿಸಿತು.

ಯಂಗ್ ಡ್ರೀಮ್ಸ್ ಎಫ್‌ಸಿ 5–0ರಿಂದ ಬೆಂಗಳೂರು ಚಾಂಪ್ಸ್ ಎದುರು, ಪ್ಲೇಸ್ಮಾರ್ಟ್ ಎಫ್‌ಸಿ 1–0ಯಿಂದ ಟೆಕ್ನಿಕೊ ಫುಟ್‌ಬಾಲ್ ಎದುರು, ಯುನೈಟೆಡ್ ಎಸಸ್ 3–2ರಿಂದ ಲೆಜೆಂಡರಿ ಎಫ್‌ಸಿ ವಿರುದ್ಧ ಜಯ ಸಾಧಿಸಿದವು.

ಮಹಿಳಾ ಕ್ರಿಕೆಟ್: ಕರ್ನಾಟಕ ಜಯಭೇರಿ

ಬೆಂಗಳೂರು: ದಿವ್ಯಜ್ಞಾನಾನಂದ ಅವರ ಅಮೋಘ ಬ್ಯಾಟಿಂಗ್ ಬಲದಿಂದ ಕರ್ನಾಟಕ ತಂಡ ಬಿಸಿಸಿಐ ಆಯೋಜಿಸಿರುವ ಮಹಿಳೆಯರ ಟ್ವೆಂಟಿ20 ಕ್ರಿಕೆಟ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು. ಸೌರಾಷ್ಟ್ರ ಕ್ರಿಕೆಟ್ ಸಂಸ್ಥೆಯ ಅಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ 5 ವಿಕೆಟ್‌ಗಳಿಂದ ಮಧ್ಯಪ್ರದೇಶವನ್ನು ಮಣಿಸಿತು.

ಸಂಕ್ಷಿಪ್ತ ಸ್ಕೋರು: ಮಧ್ಯಪ್ರದೇಶ: 20 ಓವರ್‌ಗಳಲ್ಲಿ 5ಕ್ಕೆ 136 (ಪೂಜಾ ವಸ್ತ್ರಕರ್ 49, ತಮನ್ನಾ ನಿಗಮ್ 25; ಚಂದು ವಿ 33ಕ್ಕೆ2); ಕರ್ನಾಟಕ: 19.4 ಓವರ್‌ಗಳಲ್ಲಿ 5ಕ್ಕೆ 139 (ದಿವ್ಯಜ್ಞಾನಾನಂದ 41, ವೃಂದಾ ದಿನೇಶ್ 39; ಸೌಮ್ಯಾ ತಿವಾರಿ 15ಕ್ಕೆ2). ಫಲಿತಾಂಶ: ಕರ್ನಾಟಕಕ್ಕೆ 5 ವಿಕೆಟ್‌ಗಳ ಜಯ.

ಉದಕಮಂಡಲ ರೇಸ್

ಅಲೆಕ್ಸಾಂಡ್ರೆ ಡೂಮಾಸ್ ಗೆಲ್ಲುವ ನಿರೀಕ್ಷೆ

ರೋಸಿ ಸನ್‌ಶೈನ್ ಹ್ಯಾಂಡಿಕ್ಯಾಪ್ ಶನಿವಾರದ ಉದಕಮಂಡಲ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಅಲೆಕ್ಸಾಂಡ್ರೆ ಡೂಮಾಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಬೆಳಿಗ್ಗೆ 11ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಫೈನ್ ಫ್ಯೂಚರ್ 3, ಡ್ಯಾಜ್ಲಿಂಗ್ ಪ್ರಿನ್ಸೆಸ್ 2, ಪ್ರಿನ್ಸೆಸ್ ಆಫ್ ವಿಂಡ್ಸರ್ 4
2ನೇ ರೇಸ್: ಡೈಮಂಡ್ ಆ್ಯಂಡ್ ಪರ್ಲ್ಸ್ 8, ಫಸ್ಟ್ ಎಂಪ್ರೆಸ್ 7, ಏಂಜೆಲ್ ಹಾರ್ಟ್ 5
3ನೇ ರೇಸ್: ಗಿನ್ಸ್‌ಬರ್ಗ್ 1, ಆಗಸ್ಟಾ 4, ಪ್ರೋಟಿಯಾ 2
4ನೇ ರೇಸ್: ಅಲೆಕ್ಸಾಂಡ್ರೆ ಡೂಮಾಸ್ 7, ಹೋಪ್ ಆ್ಯಂಡ್ ಗ್ಲೋರಿ 1, ಆಸ್ಕರ್ಸ್ ಥಂಡರ್ 9
5ನೇ ರೇಸ್: ಸೇಫ್ಟಿ 7, ಬೆರೆಟಿನಿ 2, ಇಬ್ರಾಹಿಮೊವಿಕ್ 4
6ನೇ ರೇಸ್: ವೇಟುಗೋ 2, ಅನ್‌ಡಿನೈಯಬಲ್ 6, ವಂಡರ್‌ಫುಲ್ ಎರ 5

ಉತ್ತಮ ಬೆಟ್: ಸೇಫ್ಟಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಸಂಕ್ಷಿಪ್ತ ಸುದ್ದಿ

ಚೆಸ್ ಒಲಿಂಪಿಯಾಡ್: ತಂಡಗಳಿಗೆ ಸಬ್ಸಿಡಿ

ಚೆನ್ನೈ (ಪಿಟಿಐ): ಪಾಲ್ಗೊಳ್ಳುವ ರಾಷ್ಟ್ರಗಳಿಗೆ ಸಬ್ಸಿಡಿ ಸೌಲಭ್ಯಗಳನ್ನು ಒದಗಿಸುವ ಮೂಲಕ ಫಿಡೆ ಚೆಸ್ ಒಲಿಂಪಿಯಾಡ್ ಯಶಸ್ವಿಗೊಳಿಸಲು ಅಖಿಲ ಭಾರತ ಚೆಸ್ ಫೆಡರೇಷನ್ (ಎಐಸಿಎಫ್) ಮುಂದಾಗಿದೆ.

ಫಿಡೆ ಮತ್ತು ಎಐಸಿಎಫ್ ಆಯೋಜಿಸಲಿರುವ ಒಲಿಂಪಿಯಾಡ್ ಜುಲೈ 28ರಿಂದ ಆಗಸ್ಟ್ 10ರ ವರೆಗೆ ಚೆನ್ನೈಯಲ್ಲಿ ನಡೆಯಲಿದೆ. ಇದರಲ್ಲಿ ಪಾಲ್ಗೊಳ್ಳುವವರ ಸಂಖ್ಯೆಯನ್ನು ಹೆಚ್ಚಿಸುವುದು ಯೋಜನೆಯ ಪ್ರಮುಖ ಉದ್ದೇಶ. ಬೆಳವಣಿಗೆಯ ಹಾದಿಯಲ್ಲಿರುವ ಫೆಡರೇಷನ್‌ಗಳಿಂದ ಬರುವ ತಂಡಗಳು ಮತ್ತು ಪ್ರತಿನಿಧಿಗಳಿಗೆ ವಿವಿಧ ಅನುಕೂಲಗಳನ್ನು ಕಲ್ಪಿಸಲು ಎಐಸಿಎಫ್ ಚಿಂತನೆ ನಡೆಸಿದೆ.

'ಬೆಳವಣಿಗೆಯ ಹಂತದಲ್ಲಿರುವ ಫೆಡರೇಷನ್‌ಗಳ ಪ್ರಯಾಣ ಮತ್ತಿತರ ವೆಚ್ಚವನ್ನು ಭರಿಸಲಾಗುವುದು. ಆಟಗಾರರು ಚೆನ್ನೈಗೆ ಬಂದು ತಲುಪಿದ ಕೂಡಲೇ ಊಟ ಮತ್ತು ವಸತಿ ವ್ಯವಸ್ಥೆಯನ್ನು ಮಾಡಲಾಗುವುದು. ವೈದ್ಯಕೀಯ ವಿಮೆಯನ್ನೂ ಮಾಡಿಸಲಾಗುವುದು. ಪ್ರಯಾಣ ವೆಚ್ಚಕ್ಕೆ ಸಬ್ಸಿಡಿಯನ್ನೂ ನೀಡಲಾಗುವುದು. ಫಿಡೆ ಮತ್ತು ಎಐಸಿಎಫ್ ಇದರ ಹೊಣೆಯನ್ನು ಹೊತ್ತುಕೊಳ್ಳಲಿದೆ' ಎಂದು ಟೂರ್ನಿಯ ನಿರ್ದೇಶಕರು ತಿಳಿಸಿದ್ದಾರೆ.

ಪ್ರಶಸ್ತಿಯೊಂದಿಗೆ ಸಂಭ್ರಮಿಸಿದ ಅಮೋದಿನಿ ವಿ. ನಾಯಕ್ ಮತ್ತು ಕಂದವೇಲ್ ಎಂ.

ಟೆನಿಸ್: ಅಮೋದಿನಿ, ಕಂದವೇಲ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಅಮೋದಿನಿ ವಿ. ನಾಯಕ್ ಮತ್ತು ತಮಿಳುನಾಡಿನ ಕಂದವೇಲ್ ಎಂ. ಅವರು ಎಐಟಿಎ ಸಿಎಸ್7 18 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕಿಯರ ಮತ್ತು ಬಾಲಕರ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ಶುಕ್ರವಾರ ಇಲ್ಲಿ ನಡೆದ ಬಾಲಕರ ವಿಭಾಗದ ಫೈನಲ್ ಪಂದ್ಯದಲ್ಲಿ ಕಂದವೇಲ್ 6-2, 6-4ರಿಂದ ಕರ್ನಾಟಕದ ಆರ್ಯ ಗಣಪತಿ ಕಳ್ಳಂಬೆಳ್ಳ ಅವರನ್ನು ಪರಾಭವಗೊಳಿಸಿದರು. ಆರ್ಯ ಅವರು ಡಬಲ್ಸ್ ವಿಭಾಗದಲ್ಲಿ ಕಂದವೇಲ್ ಜೊತೆಗೂಡಿ ಪ್ರಶಸ್ತಿ ಜಯಿಸಿದ್ದರು.

ಬಾಲಕಿಯರ ವಿಭಾಗದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ 6-4, 6-0ರಿಂದ ಮೇಘನಾ ಜಿ.ಡಿ. ಅವರಿಗೆ ಸೋಲುಣಿಸಿದರು.

ಪುಟಿನ್‌ಗೆ ಬೆಂಬಲ; ರಷ್ಯಾ ಈಜುಪಟು ಮೇಲೆ ನಿಷೇಧ

ಲಾಸೇನ್ (ಎಪಿ): ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಮತ್ತು ಉಕ್ರೇನ್ ಮೇಲಿನ ರಷ್ಯಾ ಆಕ್ರಮಣವನ್ನು ಬೆಂಬಲಿಸಿ ನಡೆದ ಮೆರವಣಿಗೆಯಲ್ಲಿ ಪಾಲ್ಗೊಂಡ ರಷ್ಯಾದ ಈಜುಪಟು ಎವ್ಜಿನಿ ರೈಲೊವ್ ಅವರ ಮೇಲೆ ಅಂತರರಾಷ್ಟ್ರೀಯ ಈಜು ಫೆಡರೇಷನ್ ಫಿನಾ ಒಂಬತ್ತು ತಿಂಗಳ ನಿಷೇಧ ಹೇರಿದೆ.

ಎವ್ಜಿನಿ ರೈಲೊವ್

ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದಿರುವ ರೈಲೊವ್ ಕಳೆದ ತಿಂಗಳಲ್ಲಿ ನಡೆದ ರ‍್ಯಾಲಿಯಲ್ಲಿ ಪಾಲ್ಗೊಂಡು ಎದೆಯ ಭಾಗದಲ್ಲಿ 'ಜಡ್' ಅಕ್ಷರ ಬರೆದಿರುವ ಜಾಕೆಟ್ ತೊಟ್ಟಿದ್ದರು. ಉಕ್ರೇನ್‌ನಲ್ಲಿ ದಾಳಿ ನಡೆಸುತ್ತಿರುವ ರಷ್ಯಾ ಸೇನೆಯನ್ನು ಬೆಂಬಲಿಸುವುದಕ್ಕಾಗಿ ಈ ಅಕ್ಷರವನ್ನು ಈಚೆಗೆ ಬಳಸಲಾಗುತ್ತಿದೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡ ರಷ್ಯಾದ ಈಜು ತಂಡದಲ್ಲಿ ರೈಲೊವ್ ಮಿಂಚಿದ್ದರು. ಅವರು ಎರಡು ಚಿನ್ನದ ಪದಕಗಳನ್ನು ಗೆದ್ದುಕೊಂಡಿದ್ದರು.

ಖೇಲೊ ಇಂಡಿಯಾ ವಿವಿ ಕ್ರೀಡಾಕೂಟ: ನಾಳೆ ಉದ್ಘಾಟನೆ

ಜೈನ್, ಮಂಗಳೂರು ವಿವಿ 'ಪಾರಮ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳೂರು ಮತ್ತು ಆತಿಥೇಯ ಜೈನ್ ವಿಶ್ವವಿದ್ಯಾಲಯಗಳು ಬೆಂಗಳೂರಿನಲ್ಲಿ ಭಾನುವಾರದಿಂದ ನಡೆಯಲಿರುವ ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟದಲ್ಲಿ (ಕೆಐಯುಜಿ) ಕರ್ನಾಟಕದಿಂದ ಅತಿ ಹೆಚ್ಚು ಕ್ರೀಡಾಪಟುಗಳನ್ನು ಕಣಕ್ಕೆ ಇಳಿಸಲಿವೆ.

ಮಂಗಳೂರು ವಿಶ್ವವಿದ್ಯಾಲಯದ 96 ಮತ್ತು ಜೈನ್ ವಿಶ್ವವಿದ್ಯಾಲಯದ 82 ಅಥ್ಲೀಟ್‌ಗಳು ಕೂಟದಲ್ಲಿ ಪಾಲ್ಗೊಳ್ಳಲಿದ್ದು ಮೈಸೂರು, ಬೆಂಗಳೂರು ಮತ್ತು ಬೆಂಗಳೂರು ನಗರ ವಿವಿಗಳು ಕೂಡ ಎರಡಂಕಿ ಸಂಖ್ಯೆಯ ಸ್ಪರ್ಧಿಗಳನ್ನು ಕಳುಹಿಸಿದೆ.

ಇದೇ ಮೊದಲು ಕೂಟದಲ್ಲಿ ಸೇರಿಸಿರುವ ಮಲ್ಲಕಂಬ ಮತ್ತು ಯೋಗ ಕ್ರೀಡೆಯಲ್ಲಿ ಕ್ರಮವಾಗಿ ಮಂಗಳೂರು ಹಾಗೂ ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥೆಯಿಂದ ಮಾತ್ರ ಸ್ಪರ್ಧಿಗಳು ಇದ್ದಾರೆ. ಈಜು ಮತ್ತು ಅಥ್ಲೆಟಿಕ್ಸ್‌ಗೆ ಕರ್ನಾಟಕದ ವಿವಿಗಳು ಹೆಚ್ಚು ಆದ್ಯತೆ ನೀಡಿವೆ. ಹಾಕಿಯಲ್ಲಿ ನಾಲ್ಕು ವಿವಿಗಳು, ಕುಸ್ತಿಯಲ್ಲಿ ಮೂರು ವಿವಿಗಳು ತಂಡಗಳನ್ನು ಕಳುಹಿಸಿವೆ. ಕಬಡ್ಡಿಯಲ್ಲಿ ಮಂಗಳೂರು ವಿವಿ ತಂಡ ಮಾತ್ರ ಇದೆ.

ಸಾಂಸ್ಕೃತಿಕ ವೈಭವ, ಅಂಚೆ ಚೀಟಿ: ಕೆಐಯುಜಿ ಎರಡನೇ ಆವೃತ್ತಿಯ ಉದ್ಘಾಟನೆ ಭಾನುವಾರ ಸಂಜೆ 4 ಗಂಟೆಗೆ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿದೆ. ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರು ಉದ್ಘಾಟನೆ ನೆರವೇರಿಸಲಿದ್ದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್, ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಪಾಲ್ಗೊಳ್ಳಲಿದ್ದಾರೆ ಎಂದು ರಾಜ್ಯದ ಯುವಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ ತಿಳಿಸಿದರು.

ವಿಧಾನಸೌಧದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಮೇ 3ರಂದು ಜೈನ್ ಗ್ಲೋಬಲ್ ಕ್ಯಾಂಪಸ್‌ನಲ್ಲಿ ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ್ ಜೋಶಿ ಭಾಗವಹಿಸಲಿದ್ದಾರೆ ಎಂದು ವಿವರಿಸಿದರು.

'ಉದ್ಘಾಟನಾ ಸಮಾರಂಭದಲ್ಲಿ ರಾಜ್ಯ ಮತ್ತು ದೇಶದ ಸಾಂಸ್ಕೃತಿಕ ವೈಭವ ಪ್ರತಿನಿಧಿಸುವ ಕಾರ್ಯಕ್ರಮಗಳು ನಡೆಯಲಿವೆ. ಲೇಸರ್ ಲೈಟ್ ಪ್ರದರ್ಶನ, ಚಂದನ್ ಶೆಟ್ಟಿ ಮತ್ತು ತಂಡದಿಂದ ನೃತ್ಯ ಪ್ರದರ್ಶನ, ಡೊಳ್ಳು ವಾದನ, ಮಲ್ಲಕಂಬ, ವಂದೇ ಮಾತರಂ ಗೀತೆಯ ಹಿನ್ನೆಲೆಯಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವ ನೃತ್ಯ ಪ್ರದರ್ಶನ, ಕಿಂಗ್ಸ್ ಯುನೈಟೆಡ್ ನೃತ್ಯ ತಂಡದಿಂದ ಯುವ ಶಕ್ತಿಯ ಸಂದೇಶ ಸಾರುವ ಅಕ್ರೋಬ್ಯಾಟಿಕ್ ಪ್ರದರ್ಶನ ಇರಲಿದೆ' ಎಂದು ಸಚಿವರು ಮಾಹಿತಿ ನೀಡಿದರು.

'ಕ್ರೀಡಾಕೂಟದ ನೆನಪಿನಲ್ಲಿ ಭಾರತ ಅಂಚೆ ಇಲಾಖೆ ವಿಶೇಷ ಅಂಚೆ ಲಕೋಟೆ ಬಿಡುಗಡೆ ಮಾಡಲಿದೆ ಎಂದು ಅವರು ತಿಳಿಸಿದರು. ತಲಾ 261 ಚಿನ್ನ ಮತ್ತು ಬೆಳ್ಳಿ ಪದಕಗಳು, 365 ಕಂಚಿನ ಪದಕಗಳು ಕ್ರೀಡಾಪ್ರತಿಭೆಗಳಿಗಾಗಿ ಕಾಯುತ್ತಿವೆ' ಎಂದರು.

ವಿಧಾನ ಪರಿಷತ್ ಸದಸ್ಯ ಕೆ.ಗೋವಿಂದರಾಜು, ಜೈನ್ ವಿವಿ ಕುಲಪತಿ ಚೆನ್ನರಾಜ್, ಕರ್ನಾಟಕ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಪುರುಷೋತ್ತಮ್, ಕ್ರೀಡಾ ಇಲಾಖೆ ಆಯುಕ್ತ ಗೋಪಾಲಕೃಷ್ಣ ಇದ್ದರು.

ಕ್ರೀಡಾಕೂಟದಲ್ಲಿ ಕರ್ನಾಟಕ

ವಿಶ್ವವಿದ್ಯಾಲಯ	ಅಥ್ಲೀಟ್ಸ್	ಪುರುಷ	ಮಹಿಳೆ
ಮಂಗಳೂರು	96	45	51
ಜೈನ್	82	48	34
ಮೈಸೂರು	43	7	36
ಬೆಂಗಳೂರು	29	27	2
ಬೆಂ. ನಗರ	23	18	5
ಕ್ರೈಸ್ಟ್	1	-	1
ಕಾನೂನು	1	-	1
ಕರ್ನಾಟಕ	4	3	1
ರಾಮಯ್ಯ	1	1	-
ಮಣಿಪಾಲ	2	1	1
ಪಿಇಎಸ್	6	4	2
ರಾಜೀವ್‌ಗಾಂಧಿ	4	-	4
ರಾಣಿ ಚನ್ನಮ್ಮ	2	1	1
ರೇವಾ	1	1	-
ಸ್ವಾಮಿ ವಿವೇಕಾನಂದ	6	6	-
ವಿಶ್ವೇಶ್ವರಯ್ಯ	2	1	1

ಉಚಿತ ಪ್ರವೇಶ; ಕೋವಿಡ್ ಎಚ್ಚರಿಕೆ

'ಕ್ರೀಡಾಕೂಟದ ಸ್ಪರ್ಧೆಗಳನ್ನು ವೀಕ್ಷಿಸಲು ಸಾರ್ವಜನಿಕರಿಗೆ ಮುಕ್ತ ಅವಕಾಶವಿದೆ. ಎಲ್ಲ ಕ್ರೀಡಾಂಗಣಗಳಿಗೂ ಉಚಿತ ಪ್ರವೇಶಾವಕಾಶ ಕಲ್ಪಿಸಲಾಗಿದೆ. ಈ ನಡುವೆ ಕೋವಿಡ್–19ಕ್ಕೆ ಸಂಬಂಧಿಸಿ ಮುಂಜಾಗ್ರತಾ ಕ್ರಮಗಳನ್ನು ಕೂಡ ಕೈಗೊಳ್ಳಲಾಗುವುದು' ಎಂದು ಸಚಿವರು ತಿಳಿಸಿದರು.

ಕ್ರೀಡಾಪಟುಗಳು ಎರಡು ಡೋಸ್ ಲಸಿಕೆ ಹಾಕಿಸಿಕೊಂಡಿರಬೇಕು. ಕ್ರೀಡಾಪಟು, ಅಧಿಕಾರಿ ಅಥವಾ ಸಿಬ್ಬಂದಿಗೆ ಸೋಂಕು ದೃಢಪಟ್ಟರೆ ಅವರ ಪ್ರತ್ಯೇಕವಾಸಕ್ಕೆ ಸೌಲಭ್ಯ ಕಲ್ಪಿಸಲಾಗಿದೆ. ಕೋವಿಡ್ ಪರೀಕ್ಷೆಗಳು ನಿರಂತರವಾಗಿ ನಡೆಯಲಿವೆ. ಎಲ್ಲ ಕ್ರೀಡಾಪಟುಗಳಿಗೆ ವೈದ್ಯಕೀಯ ವಿಮೆ ಮಾಡಿಸಲಾಗಿದೆ ಎಂದು ತಿಳಿಸಿದರು.

ತರುಣ್–ರಿಧಿ ಫೈನಲ್‌ಗೆ

ಅಂತಲ್ಯ (ಪಿಟಿಐ): ಭಾರತದ ತರುಣ್ ದೀಪ್ ರಾಯ್ ಮತ್ತು ರಿಧಿ ಫೊರ್ ಜೋಡಿ ವಿಶ್ವಕಪ್ ಆರ್ಚರಿ ಒಂದನೇ ಹಂತದ ಟೂರ್ನಿಯ ಫೈನಲ್ ಪ್ರವೇಶಿಸಿತು. ಶುಕ್ರವಾರ ನಡೆದ ರಿಕರ್ವ್ ಮಿಶ್ರ ತಂಡ ವಿಭಾಗದ ಪಂದ್ಯದಲ್ಲಿ ಭಾರತದ ಆರ್ಚರ್‌ಗಳು ಸ್ಪೇನ್ ವಿರುದ್ಧ 5–3ರಲ್ಲಿ ಜಯ ಗಳಿಸಿದರು.

ಭಾರತದ ಆಟಗಾರರು ಆರಂಭದಲ್ಲೇ 2–0 ಮುನ್ನಡೆಯೊಂದಿಗೆ ಗಮನ ಸೆಳೆದರು. ನಂತರ ಸ್ಪೇನ್ ಜೋಡಿ ತಿರುಗೇಟು ನೀಡಿತು. ಆದರೂ ಎದೆಗುಂದದ ತರುಣ್ ದೀಪ್–ರಿಧಿ ಗೆಲುವು ತಮ್ಮದಾಗಿಸಿಕೊಂಡರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ



Cheil-11521/22

ಇಲ್ಲಿ ಹಣ್ಣಿನರಸದ ಐಸ್ ಟೀ ಸಿಗುತ್ತೆ !

ಪ್ಯಾಲೆಸ್ ಆರ್ಚರ್ಡ್ಸ್ ಟೀ ಹೌಸ್, ಚಿತ್ರಗಳು: ರಂಜು ಪಿ.

ಸುಕೃತ ಎಸ್.

ಐಸ್ ಟೀ

‘ಕೋಲ್ಡ್ ಕಾಫಿ’ ಎಲ್ಲರಿಗೂ ಚಿರಪರಿಚಿತ. ಇದೇನಿದು ಹಣ್ಣಿನರಸದ ಐಸ್ ಟೀ..! ಬಹಳ ವಿಶೇಷವಾಗಿದೆ ಅಂತ ಎನ್ನಿಸುತ್ತದೆ ಅಲ್ಲವಾ?

ಹೌದು. ಕೋಲ್ಡ್ ಕಾಫಿಯಂತೆ, ಐಸ್ ಟೀ ಕೂಡ ಸಿಗುತ್ತದೆ. ಅದು ಬರೀ ಐಸ್ ಟೀ ಅಲ್ಲ, ವಿಶಿಷ್ಟ ಫ್ಲೇವರ್‌ನ ಹಣ್ಣಿನರಸದ ಟೀ. ಇದ್ಯಾವ ಥರ ಟೀ? ಇದರ ರುಚಿ ಹೇಗಿರುತ್ತೆ? ಇದನ್ನ ಹೇಗೆ ಮಾಡ್ತಾರೆ? ಅಂತೆಲ್ಲಾ ತಿಳಿಯಬೇಕೇ? ಹಾಗಾದರೆ ನೀವು ಸದಾಶಿವನಗರದಲ್ಲಿರುವ ಪ್ಯಾಲೆಸ್ ಆರ್ಚರ್ಡ್ಸ್ ಟೀ ಹೌಸ್‌ಗೆ ಒಮ್ಮೆ ಭೇಟಿ ಕೊಡಬೇಕು.

ಎಲ್ಲಿದೆ ಈ ‘ಚಹಾ ಮನೆ’?

ಕಾವೇರಿ ಥಿಯೇಟರ್ ಪಕ್ಕದ ರಸ್ತೆಯಲ್ಲಿ ಸಿಗುವ ಮಹಾಲಕ್ಷ್ಮಿ ದೇವಸ್ಥಾನದಿಂದ ಮುಂದಕ್ಕೆ ಸಾಗಿದರೆ, ಈ ವಿಶಿಷ್ಟ ಬಗೆಯ ಚಹಾ ಮಾರಾಟ ಮಾಡುವ ‘ಟೀ ಹೌಸ್’ ಸಿಗುತ್ತದೆ. ಹಳೆಯ ಪುಟ್ಟ ಮನೆಯನ್ನು ಕೆಫೆ ರೀತಿ ವಿನ್ಯಾಸ ಮಾಡಿದ್ದಾರೆ. ಗೋಡೆಯ ಮೇಲೆ ಅಲ್ಲಲ್ಲಿ ಇರುವ ಚಿತ್ರಕಲೆಯು ಕೆಫೆಯನ್ನು ಇನ್ನಷ್ಟು ಆಕರ್ಷಕಗೊಳಿಸಿದೆ.

ವಿವಿಧ ಐಸ್ ಟೀ: ಈ ಟೀ ಹೌಸ್‌ನ ಆಕರ್ಷಣೆಯೇ ಹಣ್ಣಿನರಸದ ‘ಐಸ್ ಟೀ’ಗಳು. ಇಲ್ಲಿ ನಾಲ್ಕು ಬಗೆಯ ಐಸ್ ಟೀಗಳು ದೊರೆಯುತ್ತವೆ. ಫ್ಯಾಷನ್ ಫ್ರೂಟ್, ಸ್ವೀಟ್ ಲೆಮನ್, ಆ್ಯಪಲ್ ಮತ್ತು ಮಿಕ್ಸ್‌ಡ್ ಹರ್ಬ್ಸ್. ಇದಕ್ಕೆ ಹೊರತಾಗಿ ಮಾಮೂಲಿ ಬಿಸಿ ಬಿಸಿ ಚಹಾ, ಅದರಲ್ಲೂ ಹಲವು ವಿಧದ ಚಹಾ ದೊರೆಯುತ್ತದೆ. ಚಹಾ ಹೌಸ್‌ನಲ್ಲಿ ಫಿಲ್ಟರ್ ಕಾಫಿ ಕೂಡ ಇದೆ!

‘ಅಡುಗೆ ಮಾಡುವುದು ನನಗೆ ಒತ್ತಡ ನಿವಾರಣೆಗೆ ಇರುವ ಒಂದು ಮಾರ್ಗ. ಜತೆಗೆ, ನಮ್ಮ ಕುಟುಂಬದವರು ಹಲವು ವರ್ಷಗಳಿಂದ ಟೀ ವ್ಯಾಪಾರ ಮಾಡಿಕೊಂಡು ಬರುತ್ತಿದ್ದಾರೆ. ಇದೇ ಕಾರಣಕ್ಕೆ ನನಗೆ ಟೀ ಬಗೆಗೆ ಒಲವು ಹೆಚ್ಚು. ಈ ಒಲವು, ಆಸಕ್ತಿಯ ಕಾರಣಕ್ಕಾಗಿಯೇ ಟೀ ಹೌಸ್ ಆರಂಭಿಸಿದೆ’ ಎನ್ನುತ್ತಾ ಚಹಾ ಮನೆ ಕಟ್ಟಿದ ಹಿನ್ನೆಲೆ ವಿವರಿಸುತ್ತಾರೆ ಮಾಲೀಕ ಪ್ರಕಾಶ್.

ಈ ಐಸ್ ಟೀ ಬಗ್ಗೆ ಪ್ರಕಾಶ್ ವಿವರಣೆ ನೀಡುವುದು ಹೀಗೆ; ‘ಐಸ್ ಟೀ ಎಂದರೆ, ಟೀ ಡಿಕಾಕ್ಷನ್ ಅನ್ನು ಐಸ್‌ಕ್ಯೂಬ್‌ಗಳನ್ನಾಗಿ ಮಾಡಿಕೊಂಡು, ಇದನ್ನು ತಣ್ಣನೆ ನೀರಿಗೆ ಹಾಕಿ ಕುಡಿಯುವುದು. ಇದು ಮಾಮೂಲಿ ಐಸ್ ಟೀ. ನಾನು ಸ್ವಲ್ಪ ಭಿನ್ನ ಪ್ರಯೋಗ ಮಾಡಿದೆ. ಟೀ ಡಿಕಾಕ್ಷನ್‌ನ ಐಸ್‌ಕ್ಯೂಬ್‌ಗಳನ್ನು ಹಣ್ಣಿನ ರಸಕ್ಕೆ ಸೇರಿಸಿದೆ. ಯಾವ ಹಣ್ಣಿನ ರಸವನ್ನು, ಎಷ್ಟು ಪ್ರಮಾಣ, ಎಷ್ಟು ಸಿಹಿಯೊಂದಿಗೆ ಸೇರಿದರೆ ರುಚಿಯಾಗುತ್ತದೆ ಎಂಬುದನ್ನು ಹಲವು ಪ್ರಯತ್ನಗಳಿಂದ ಕಂಡುಕೊಂಡೆ. ಪ್ರಯತ್ನಗಳು ಯಶಸ್ವಿಯಾದ ಮೇಲೆ, ವಿವಿಧ ರುಚಿಗಳುಳ್ಳ ಚಹಾ ಸಿದ್ಧಪಡಿಸಿದ್ದೇನೆ. ಹಾಗಾಗಿ, ಈ ಟೀ ನಮ್ಮಲ್ಲಿ ಮಾತ್ರ ಸಿಗುತ್ತದೆ’ ಎನ್ನುತ್ತಾರೆ ಅವರು.

ಗ್ರಾಹಕರಿಗೆ ಟೀ ಸರ್ವ್ ಮಾಡುತ್ತಿರುವ ಪ್ರಕಾಶ್

ಕೋವಿಡ್ ನಂತರ ಜನರು ಆರೋಗ್ಯದ ಬಗ್ಗೆ ತುಂಬಾ ಕಾಳಜಿ ವಹಿಸುತ್ತಿದ್ದಾರೆ. ಈ ಅಂಶವೂ ನಾನು ಟೀ ಹೌಸ್ ಪ್ರಾರಂಭಿಸಲು ಕಾರಣವಾಯಿತು. ಈ ಚಹಾ ಮನೆಯಲ್ಲಿ ದೊರೆಯುವ ಪ್ರತಿಯೊಂದು ಪಾನೀಯ ಮತ್ತು ತಿನಿಸುಗಳು ಆರೋಗ್ಯ ವರ್ಧಕವಾಗಿರಬೇಕು ಎಂಬುದು ನನ್ನ ಆಶಯ. ಹಾಗಾಗಿ ತುಂಬಾ ಕಾಳಜಿಯಿಂದ ಸಿದ್ಧಪಡಿಸಿದ್ದೇನೆ. ಟೀ ತಯಾರಿಸಲು ಸಕ್ಕರೆ ಬದಲು ಸಾವಯವ ಬೆಲ್ಲ ಬಳಸುತ್ತೇವೆ. ಚಹಾ ಜೊತೆಗೆ, ಬೇರೆ ತಿನಿಸುಗಳು ಲಭ್ಯವಿವೆ’ ಎಂದು ಟೀ ಹೌಸ್ ಬಗ್ಗೆ ವಿವರಣೆ ನೀಡುತ್ತಾರೆ.

ಪ್ರತಿದಿನ ಬೆಳಿಗ್ಗೆ 7.30ರ ಸುಮಾರಿಗೆ ‘ಹೌಸ್’ ಪ್ರಾರಂಭವಾಗುತ್ತದೆ. ರಾತ್ರಿ 8 ರಿಂದ 9ರವರೆಗೂ ನಡೆಯುತ್ತದೆ. ಕೆಲವರು ಸಣ್ಣ ಪುಟ್ಟ ಮೀಟಿಂಗ್‌ಗಳನ್ನು ಇಲ್ಲಿಯೇ ಮಾಡುತ್ತಾರೆ. ವರ್ಕ್ ಫ್ರಂ ಹೋಮ್ ಇರುವುದರಿಂದ ಕೆಲವರು ಇಲ್ಲಿಯೇ ಬಂದು ಸ್ವಲ್ಪ ಸಮಯ ಕೂತು ಕೆಲಸ ಮಾಡಿ ಹೋಗುತ್ತಾರೆ. ಕಳೆದ ಡಿಸೆಂಬರ್‌ನಿಂದ ಟೀ ಹೌಸ್ ಆರಂಭವಾಗಿದೆ ಎಂದು ವಿವರಿಸಿದರು ಪ್ರಕಾಶ್.

ಮಹಿಳಾ ಉದ್ಯಮಿಗಳಿಗೆ ಪ್ರೋತ್ಸಾಹ

ಈ ಟೀ ಹೌಸ್‌ನಲ್ಲಿ ಮಹಿಳಾ ಉದ್ಯಮಿಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಮಹಿಳೆಯರು ಮನೆಯಲ್ಲಿಯೇ ತಯಾರು ಮಾಡುವ ಚಿಪ್ಸ್, ಉಪ್ಪಿನಕಾಯಿಯಂಥ ವಸ್ತುಗಳನ್ನು ಹೌಸ್‌ನಲ್ಲಿ ಮಾರಾಟಕ್ಕೆ ಇಟ್ಟಿದ್ದಾರೆ.

‘ದಿನಾ ಟೀ ಹೌಸ್‌ಗೆ ಹೋಗುತ್ತೇನೆ’

‘ನನಗೆ ಕೆಫೆಗಳೆಂದರೆ ತುಂಬಾ ಇಷ್ಟ. ರಸ್ತೆಯಲ್ಲಿ ಹೀಗೆ ಒಮ್ಮೆ ಹಾದುಹೋಗುವಾಗ ಈ ಟೀ ಹೌಸ್ ಕಂಡಿತು. ಅಂದಿನಿಂದ ಇಂದಿನವರೆಗೆ ಪ್ರತಿದಿನ ಹೋಗುತ್ತೇನೆ. ಪುಟ್ಟದಾಗಿದ್ದರೂ ಸ್ವಚ್ಛವಾಗಿದೆ. ರುಚಿಯ ಬಗ್ಗೆ ಎರಡು ಮಾತಿಲ್ಲ. ಕೆಲವು ದಿನಗಳ ಹಿಂದೆ ಹೌಸ್‌ಗೆ ಹೋಗಿದ್ದಾಗ ಐಸ್ ಟೀ ಆರ್ಡರ್ ಮಾಡಿದೆ. ನನಗೆ ಸ್ವಲ್ಪ ನೆಗಡಿ ಇತ್ತು. ಇದನ್ನು ಗಮನಿಸಿದ ಪ್ರಕಾಶ್, ‘‘ಮೇಡಂ ಐಸ್ ಟೀ ಬೇಡ, ನಿಮ್ಮ ನೆಗಡಿ ಕಡಿಮೆ ಮಾಡಲು ಒಂದು ಬಿಸಿ ಬಿಸಿ ಟೀ ಮಾಡಿಕೊಡುತ್ತೇನೆ’’ ಎಂದರು. ನಿಜಕ್ಕೂ ಆ ಟೀ ಕುಡಿದ ಮೇಲೆ ನೆಗಡಿ ಕಡಿಮೆ ಆಯಿತು’ ಎಂದರು ಸಮೃದ್ಧಿ ಹೆಲ್ತ್ ಆ್ಯಂಡ್ ವೆಲ್‌ಬೀಯಿಂಗ್‌ನ ಜಯಾ.



ಹಿಂದಿಯಲ್ಲಿ ಬರುತ್ತಿದ್ದಾಳೆ ‘ಕನ್ನಡತಿ’

ಕಿರಣ್‌ರಾಜ್

ಕಿರಣ್ ರಾಜ್ – ರಂಜನಿ ರಾಘವನ್ ಅಭಿನಯದ ಕಿರುತೆರೆಯ ಜನಪ್ರಿಯ ಕನ್ನಡ ಧಾರಾವಾಹಿ ‘ಕನ್ನಡತಿ’ ಈಗ ಹಿಂದಿಗೆ ಡಬ್ ಆಗುತ್ತಿದೆ. ‘ಅಜ್ನಾಬಿ ಬನೇ ಹಮ್ ಸಫರ್’ ಎಂಬ ಹೆಸರಿನಲ್ಲಿ ಕಲರ್ಸ್ ರಿಷ್ತೇ ಯುಕೆ ವಾಹಿನಿಯಲ್ಲಿ ಪ್ರಸಾರವಾಗಲಿದೆ.

ರಂಜನಿ ರಾಘವನ್

ಈಗಾಗಲೇ ಈ ಧಾರಾವಾಹಿ ಮರಾಠಿಗೆ ಡಬ್ ಆಗಿ ಪ್ರಸಾರವಾಗುತ್ತಿದೆ. ಉಭಯ ಕಲಾವಿದರಿಗೂ ಹೆಸರು ತಂದುಕೊಟ್ಟ ಧಾರಾವಾಹಿಯಿದು. ಧಾರಾವಾಹಿ ಆರಂಭದ ದೃಶ್ಯದಲ್ಲಿ ತೋರಿಸುವ ‘ಸರಿಗನ್ನಡಂ ಗೆಲ್ಗೆ’ಯಲ್ಲಿ ಒಂದು ಕನ್ನಡ ಪದದ ಸರಿಯಾದ ಉಚ್ಚಾರ ಮತ್ತು ಪರಿಚಯದ ತುಣುಕು ಅಪಾರ ವೀಕ್ಷಕರ ಮೆಚ್ಚುಗೆ ಪಡೆದಿದೆ.

ಕಿರಣ್‌ರಾಜ್– ರಂಜನಿ ರಾಘವನ್ ಹಿರಿತೆರೆಯಲ್ಲೂ ಬ್ಯುಸಿ ಆಗಿದ್ದಾರೆ. ಕಿರಣ್ ಅವರ ‘ಬಡ್ಡೀಸ್’ ಚಿತ್ರದ ಟೀಸರ್ ಏ. 25ರಂದು ಬಿಡುಗಡೆ ಆಗಲಿದೆ.

ಅಡುಗೆಮನೆಯಲ್ಲಿದೆ ತೂಕ ನಿಯಂತ್ರಣದ ತಂತ್ರ

ಕಳೆದೆರೆಡು ವರ್ಷಗಳಿಂದ ಕೊರೊನಾ, ಲಾಕ್‌ಡೌನ್, ವರ್ಕ್ ಫ್ರಂ ಹೋಮ್ ಕಾರಣದಿಂದಾಗಿ ಅನೇಕರ ದೇಹದ ತೂಕ ಹೆಚ್ಚಾಗಿದೆ. ತೂಕ ಹೆಚ್ಚಿರುವುದು ಅನಾರೋಗ್ಯಕ್ಕೆ ಕಾರಣವಾಗಬಹುದು ಎಂಬ ಭಯ ಕಾಡುತ್ತಿದೆ. ತೂಕ ಇಳಿಸಲು ಜಿಮ್, ವರ್ಕೌಟ್, ವಾಕಿಂಗ್ ಹೀಗೆ ಹಲವು ದೇಹದಂಡನೆಯ ಮಾರ್ಗ ಅನುಸರಿಸುತ್ತಿದ್ದಾರೆ. ಕೆಲವರು ಆಹಾರ ಸೇವನೆಗೆ ಕಡಿವಾಣ ಹಾಕಿ, ತಜ್ಞರು ಸೂಚಿಸುವ ತಿನಿಸುಗಳನ್ನು ಸೇವಿಸುತ್ತಾ, ತೂಕ ಕಡಿಮೆ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಆದರೆ ನಮ್ಮ ಅಡುಗೆಮನೆಯಲ್ಲಿರುವ ಕೆಲ ಆಹಾರ ಪದಾರ್ಥಗಳನ್ನು ನಿರಂತರವಾಗಿ ಸೇವಿಸುವುದರಿಂದ ತೂಕ ಇಳಿಸಬಹುದು ಎನ್ನುತ್ತಾರೆ ತಜ್ಞರು. ಹಾಗಾದರೆ ಆರೋಗ್ಯ ಸಮಸ್ಯೆ ಕಾಡದಂತೆ ತೂಕ ಇಳಿಸಲು ನೆರವಾಗುವ ಪದಾರ್ಥಗಳು ಯಾವುವು? ಇಲ್ಲಿದೆ ಮಾಹಿತಿ...



ದಾಲ್ಚಿನ್ನಿ

ದಾಲ್ಚಿನ್ನಿ ಸಾಮಾನ್ಯವಾಗಿ ಎಲ್ಲರ ಮನೆಯ ಅಡುಗೆಮನೆಯಲ್ಲೂ ಸಿಗುವ ಪದಾರ್ಥ. ದಾಲ್ಚಿನ್ನಿ ಅಡುಗೆಗೆ ಪರಿಮಳ ನೀಡುವುದು ಮಾತ್ರವಲ್ಲ, ತೂಕ ಇಳಿಸುವಲ್ಲೂ ಪ್ರಮುಖ ಪಾತ್ರ ವಹಿಸುತ್ತದೆ. ಇದರ ನಿಯಮಿತ ಸೇವನೆಯಿಂದ ರಕ್ತದಲ್ಲಿ ಸಕ್ಕರೆ ಪ್ರಮಾಣ ನಿಯಂತ್ರಣದಲ್ಲಿರಲು ಸಹಾಯ ಮಾಡುತ್ತದೆ. ದೇಹದಲ್ಲಿ ಸಕ್ಕರೆ ಪ್ರಮಾಣ ನಿಯಂತ್ರಣದಲ್ಲಿದ್ದರೆ ತೂಕವೂ ನಿಯಂತ್ರಣದಲ್ಲಿರುತ್ತದೆ. ಆ ಕಾರಣಕ್ಕೆ ನೀವು ಸೇವಿಸುವ ಆಹಾರದಲ್ಲಿ ದಾಲ್ಚಿನ್ನಿ ಪ್ರಮಾಣ ಹೆಚ್ಚಿರಲಿ

ಗ್ರೀನ್ ಟೀ

ಗ್ರೀನ್ ಟೀ – ಆಹಾರ ಪಥ್ಯ (ಫುಡ್ ಡಯೆಟ್) ಮಾಡುತ್ತಿರುವ ಯಾರ ಬಳಿ ಕೇಳಿದರೂ 'ಪ್ರತಿ ನಿತ್ಯ ನಾನು ಗ್ರೀನ್ ಟೀ ಕುಡಿಯುತ್ತೇನೆ' ಎನ್ನುತ್ತಾರೆ. ತೂಕ ಇಳಿಸುವ ಹಾದಿಯಲ್ಲಿ ಗ್ರೀನ್ ಟೀ ಇಲ್ಲದೆ ಹಾದಿ ಮುಂದಕ್ಕೆ ಸಾಗುವುದಿಲ್ಲ. ಇದರಲ್ಲಿ ಕೆಫೀನ್ ಅಂಶ ಬಹಳಷ್ಟು ಕಡಿಮೆ ಇದೆ. ಆ ಕಾರಣಕ್ಕೆ ಕೊಬ್ಬು ಕರಗಿಸಲು ಇದು ಸಹಕಾರಿ. ಇದರಲ್ಲಿ ಆ್ಯಂಟಿಆಕ್ಸಿಡೆಂಟ್ ಅಂಶ ಅಧಿಕವಿದ್ದು ಚಯಾಪಚಯ ಕ್ರಿಯೆ ಹೆಚ್ಚಲು ಸಹಕಾರಿ.

ಕಾಮಕಸ್ತೂರಿ

ಕಾಮಕಸ್ತೂರಿ ಬೀಜ ಸೇವನೆಯು ತೂಕ ನಿಯಂತ್ರಣಕ್ಕೆ ಸಹಕಾರಿ. ಕಾಮಕಸ್ತೂರಿ ಬೀಜವನ್ನು ರಾತ್ರಿ ಮಲಗುವ ಮುನ್ನ ಸೇವಿಸುವುದರಿಂದ ಕೊಬ್ಬು ಕರಗುತ್ತದೆ. ಇದು ಬೇಸಿಗೆಯಲ್ಲಿ ದೇಹದ ಉಷ್ಣಾಂಶ ನಿಯಂತ್ರಣಕ್ಕೂ ಸಹಕಾರಿ. ಇದನ್ನು ಕುಡಿಯುವ ನೀರಿನಲ್ಲಿ ಹಾಕಿ ಆಗಾಗ ಆ ನೀರನ್ನು ಕುಡಿಯುತ್ತಿರಬೇಕು. ಇದರಿಂದ ತೂಕ ನಿಯಂತ್ರಣ ಸುಲಭವಾಗುತ್ತದೆ.

ದಾಲ್ಚಿನ್ನಿಯೊಂದಿಗೆ ಮೊಸರು

ಮೊಸರು ಸೇವನೆಯಿಂದ ದೇಹ ತೂಕ ಹೆಚ್ಚುತ್ತದೆ ಎನ್ನುವ ಮಾತಿದೆ. ಆದರೆ ದಾಲ್ಚಿನ್ನಿಯೊಂದಿಗೆ ಮೊಸರು ಸೇವಿಸುವುದರಿಂದ ದೇಹತೂಕವನ್ನು ನಿಯಂತ್ರಣ ಮಾಡಬಹುದು.

ಅಗಸೆ ಬೀಜ

ಅಗಸೆಬೀಜದ ಸೇವನೆಯಿಂದ ತೂಕವನ್ನು ಕಡಿಮೆ ಮಾಡಿಕೊಳ್ಳಬಹುದು. ಈ ಬೀಜವನ್ನು ಹುರಿದು ಅಥವಾ ಹಸಿಯಾಗಿಯೂ ತಿನ್ನಬಹುದು. ಸಲಾಡ್‌ನೊಂದಿಗೆ ಮಿಶ್ರಣ ಮಾಡಿಕೊಂಡು ಸೇವಿಸಬಹುದು. ಇದು ದೇಹದಲ್ಲಿನ ಬೇಡದ ಕೊಬ್ಬನ್ನು ತೆಗೆದುಹಾಕಿ ದೇಹ ತೂಕ ನಿಯಂತ್ರಣದಲ್ಲಿಡಲು ಸಹಾಯ ಮಾಡುತ್ತದೆ. ❖

ಒಂದು ಚಿಟಿಕೆ ದಾಲ್ಚಿನ್ನಿ ಪುಡಿಯನ್ನು ಜೇನುತುಪ್ಪ ಅಥವಾ ಬಿಸಿನೀರು ಅಥವಾ ಹಾಲಿನೊಂದಿಗೆ ಸೇರಿಸಿ, ಬೆಳಿಗ್ಗೆ ಖಾಲಿ ಹೊಟ್ಟೆಗೆ ಕುಡಿಯಬಹುದು. ಇಲ್ಲವೇ ಹಣ್ಣು, ತರಕಾರಿಗಳನ್ನು ಹೆಚ್ಚಿ, ಅದರ ಮೇಲೆ ಪುಡಿ ಉದುರಿಸಿ ತಿನ್ನಬಹುದು. ಹೆಚ್ಚು ಪ್ರಮಾಣದಲ್ಲಿ ಸೇವಿಸಿದರೆ ಉಷ್ಣವಾಗುತ್ತದೆ, ಎಚ್ಚರವಿರಲಿ.

ಅಗಸೆ ಬೀಜ ಪುಡಿ ಮಾಡಿ. ಒಂದು ಚಮಚ ಪುಡಿಯನ್ನು ಉಗುರುಬೆಚ್ಚಗಿನ ನೀರಿಗೆ ಬೆರೆಸಿ, ದಿನಕ್ಕೆ ಒಂದು ಬಾರಿ ಖಾಲಿ ಹೊಟ್ಟೆಯಲ್ಲಿ ತೆಗೆದುಕೊಳ್ಳಬೇಕು. ಅಗಸೆ ಬೀಜದ ಚಟ್ನಿಪುಡಿ ಮಾಡಿ ಊಟದ ಜೊತೆಗೆ ಉಪಯೋಗಿಸಬಹುದು.

– ಡಾ. ವಸುಂಧರಾ ಭೂಪತಿ, ಆಯುರ್ವೇದ ತಜ್ಞೆ

ಆರ್‌ಎನ್‌ಆರ್ ದೊನ್ನೆ ಬಿರಿಯಾನಿಯ ಪಾಕ ವೈವಿಧ್ಯ

ಕೋವಿಡ್ ಕೊಟ್ಟ ದೊನ್ನೆ ಬಿರಿಯಾನಿ

ಕೋವಿಡ್ ಸೃಷ್ಟಿಸಿದ ಅವಕಾಶವೊಂದು ಪಾರಂಪರಿಕ ರುಚಿಯೊಂದನ್ನು ಜನರಿಗೆ ತಲುಪಿಸಿದೆ. 2020ರಲ್ಲಿ ಕೋವಿಡ್ ಎರಡನೇ ಅಲೆ ಉತ್ತುಂಗದಲ್ಲಿದ್ದಾಗ ಹೋಟೆಲ್‌ಗಳೂ ಮುಚ್ಚಿ ಹೋಗಿದ್ದವು. ಹಾಗೆಂದು ಹೊಸ ಉದ್ಯಮ ತೆರೆಯುವುದಂತೂ ದೂರದ ಮಾತು.

ರಮ್ಯಾ ರವಿ

ಆಗ ರಮ್ಯಾ ರವಿ ಅವರಿಗೆ ಹೊಳೆದದ್ದೇ ಕ್ಲೌಡ್ ಕಿಚನ್. ಮನೆಯಲ್ಲಿಯೇ ಚಿಕ್ಕ ಪ್ರಮಾಣದಲ್ಲಿ ಬಿರಿಯಾನಿ ತಯಾರಿಸಿ ಸ್ಥಳೀಯವಾಗಿ ತಲುಪಿಸಿದರು. ಅಲ್ಲಿಂದ ಮುಂದುವರಿದು ಸೃಷ್ಟಿಯಾದ ಹೆಸರೇ ಆರ್‌ಎನ್‌ಆರ್ ದೊನ್ನೆ ಬಿರಿಯಾನಿ. 'ಪುಟ್ಟ ಅಡುಗೆ ಮನೆಯಲ್ಲಿ ತಯಾರಿಸಿ ಸ್ವಿಗ್ಗಿ ಮೂಲಕ ವಿತರಿಸಲಾರಂಭಿಸಿದೆ. ಮೊದಲವಾರವೇ ಉತ್ತಮ ಪ್ರತಿಕ್ರಿಯೆ ಗಳಿಸಿದ ಈ ಬಿರಿಯಾನಿ ಕೆಲವೇ ದಿನಗಳಲ್ಲಿ ಟ್ರೆಂಡ್ ಆಯಿತು. ನಿರಂತರ ಬೇಡಿಕೆ ಬರಲಾರಂಭಿಸಿತು' ಎಂದು ಒಂದೇ ಸಾಲಿನಲ್ಲಿ ತಮ್ಮ ಯಶೋಗಾಥೆ ವಿವರಿಸಿದರು ರಮ್ಯಾ.

ಆಗ ಹೆಚ್ಚಿನ ಬೇಡಿಕೆ ಪೂರೈಸಲು ದೊನ್ನೆ ಬಿರಿಯಾನಿಯ ಪುಟ್ಟ ಔಟ್‌ಲೆಟ್‌ನ್ನು ಜಯನಗರದಲ್ಲಿ ಆರಂಭಿಸಿದರು. ಕೋವಿಡ್ ಎರಡನೇ ಅಲೆ ಕಡಿಮೆಯಾಗುತ್ತಿದ್ದಂತೆಯೇ ಈ ಪುಟ್ಟ ಮಳಿಗೆಗೆ ಜೀವ ಬಂದಿತು. 'ಈಗ ಅದನ್ನೊಂದು ಬ್ರ್ಯಾಂಡ್ ಆಗಿ ರೂಪಿಸಿದ್ದೇವೆ' ಎಂದು ಖುಷಿ ಹಂಚಿಕೊಂಡರು ರಮ್ಯಾ. ರಮ್ಯಾ ಜೊತೆ ಅವರ ಸಹೋದರಿಯೂ ಕೈಜೋಡಿಸಿದ್ದಾರೆ.

ಪಾಕವಿಶೇಷ

ಮನೆಯ ಅಡುಗೆ ಮನೆಯಿಂದಲೇ ತಯಾರಿಸಲಾದ ಪಾಕ ಈ ಬಿರಿಯಾನಿಯದ್ದು. ರಮ್ಯಾ ಹೇಳುವಂತೆ, 'ಹಾಗೆ ನೋಡಿದರೆ ಇದರ ಹಿಂದಿರುವುದು ಅಜ್ಜಿಯ ಕೈ ರುಚಿ. ಭಿನ್ನವಾದ ಪರಿಮಳ, ಸಾಂಪ್ರದಾಯಿಕ ಮತ್ತು ಸುರಕ್ಷಿತ ಪ್ಯಾಕೇಜಿಂಗ್, ಪ್ರಸ್ತುತಿ ಇಲ್ಲಿದೆ. ಬಿರಿಯಾನಿಗಳು ದೇಶದಾದ್ಯಂತ ಜನಪ್ರಿಯವಾಗಿವೆ. ಆದರೆ ದುರದೃಷ್ಟವಶಾತ್ ದೇಶದಾದ್ಯಂತ ದೊನ್ನೆ ಬಿರಿಯಾನಿಯನ್ನು ಜನಪ್ರಿಯಗೊಳಿಸುವ ಬ್ರ್ಯಾಂಡ್‌ಗಳ ಕೊರತೆಯಿದೆ. ಈ ಎರಡೇ ನೋಟವನ್ನು ಮುಂದಿಟ್ಟುಕೊಂಡು ಆರ್‌ಎನ್‌ಆರ್ ಹುಟ್ಟಿಕೊಂಡಿತು' ಎನ್ನುತ್ತಾರೆ.

ಆರ್‌ಎನ್‌ಆರ್ ಇತರ ಖಾದ್ಯಗಳು: ನಾಟಿಕೋಳಿ ಸಾರು, ಫ್ರೈ, ಡ್ರಮ್ ಸ್ಟಿಕ್ ಚಿಲ್ಲಿ, ಎಳನೀರು ಪಾಯಸ... ಹೀಗೆ ಮೆನು ಮುಂದುವರಿದಿದೆ. ರಮ್ಯಾ ಅವರು ಹಾಸ್ಪಿಟಾಲಿಟಿ ಮ್ಯಾನೇಜ್‌ಮೆಂಟ್ ಪರಿಣತರು. ಫಿಟ್‌ನೆಸ್, ಭರತನಾಟ್ಯ ಅವರ ಆಸಕ್ತಿ, ತಂದೆಯೇ ಉದ್ಯಮದ ಗುರು. ಹೀಗಾಗಿ ಆಹಾರ ಕ್ಷೇತ್ರದ ನವೋದ್ಯಮ ಮುನ್ನಡೆಯುತ್ತಿದೆ ಎನ್ನುತ್ತಾರೆ ಅವರು. ❖

'ಒಂದಂಕೆ ಕಾಡು' ಅಲ್ಲೊಂದು ಜೋಡಿ

ಸೋನಿ, ಪ್ರಜ್ವಲ್ ಪೊನ್ನಣ್ಣ

ಕಿರುತೆರೆ ನಿರ್ದೇಶಕ ರಾಮಚಂದ್ರ ವೈದ್ಯ ಈಗ ಬೆಳ್ಳಿತೆರೆಗೆ ಪ್ರವೇಶಿಸಿದ್ದಾರೆ. ಅವರ ನಿರ್ದೇಶನದ 'ಒಂದಂಕೆ ಕಾಡು' ಸಿನಿಮಾ ಸಿದ್ಧವಾಗುತ್ತಿದ್ದು, ಇತ್ತೀಚೆಗಷ್ಟೇ ಚಿತ್ರದ ಪೋಸ್ಟರ್ ಬಿಡುಗಡೆ ಆಗಿದೆ.

ದಟ್ಟ ಅರಣ್ಯ... ಮರದ ಬೇರಿನಿಂದ ಸೃಷ್ಟಿಸಿರುವ ಆಕೃತಿ, ಅರಣ್ಯದಲ್ಲಿ ಕುಳಿತಿರುವ ಎರಡು ಜೋಡಿಯ ಚಿತ್ರ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರ ಹೊಂದಿರುವ 'ಒಂದಂಕೆ ಕಾಡು' ಸಿನಿಮಾದಲ್ಲಿ ಪ್ರಜ್ವಲ್ ಪೊನ್ನಣ್ಣ, ಸೋನಿ, ನೀರ್ನಳ್ಳಿ ರಾಮಕೃಷ್ಣ, ಕಿರಣ್ ನಾಯಕ್, ಮಧು ಹೆಗಡೆ, ಸುಮಂತ್ ಭಟ್, ಪ್ರೇರಣಾ ಕಂಬಂ ಸೇರಿದಂತೆ ಹಲವು ಕಲಾವಿದರು ನಟಿಸಿದ್ದಾರೆ.

'ಒಂದಂಕೆ ಕಾಡು' ಸಿನಿಮಾಗೆ ಶ್ರಾವಣಿ ಶಿವ್ ಕಥೆ, ರಾಮಚಂದ್ರ ವೈದ್ಯ ಚಿತ್ರಕಥೆ ಬರೆದಿದ್ದಾರೆ. ಟಿ.ಜಿ. ನಂದೀಶ್ ಸಂಭಾಷಣೆ, ಗಣೇಶ್ ಹೆಗ್ಡೆ ಕ್ಯಾಮೆರಾ, ಶ್ರೀಕಾಂತ್ ಸಂಕಲನ, ಮಧು ಹೆಗ್ಡೆ ಸಂಗೀತ ಸಿನಿಮಾದಲ್ಲಿದೆ. ಕನ್ನಡ ಮತ್ತು ತೆಲುಗಿನಲ್ಲಿ ಸಿನಿಮಾ ತಯಾರಾಗಿದೆ. ಶ್ರೀಮಹಾಕಾಳಿ ಪ್ರೊಡಕ್ಷನ್ ಲಾಂಛನದ ಅಡಿ ಸಿನಿಮಾ ಮೂಡಿ ಬರುತ್ತಿದೆ. ಕಾರವಾರ ಸುತ್ತಮುತ್ತ ಶೂಟಿಂಗ್ ಮಾಡಿರುವ ಚಿತ್ರತಂಡ ಪೋಸ್ಟ್ ಪ್ರೊಡಕ್ಷನ್‌ನಲ್ಲಿ ನಿರತವಾಗಿದೆ. ❖

'ಅಜ್ಞಾತವಾಸಿ'ಯಾದ ರಂಗಾಯಣ ರಘು!

'ಗೋಧಿಬಣ್ಣ ಸಾಧಾರಣ ಮೈಕಟ್ಟು', 'ಕವಲುದಾರಿ' ಖ್ಯಾತಿಯ ನಿರ್ದೇಶಕ ಹೇಮಂತ್ ಎಂ. ರಾವ್ ಇದೀಗ ಮತ್ತೆ ಸಿನಿಮಾ ನಿರ್ಮಾಣಕ್ಕಿಳಿದಿದ್ದಾರೆ. 'ಗುಲ್ಟು' ಸಿನಿಮಾ ಖ್ಯಾತಿಯ ಜನಾರ್ದನ್ ಚಿಕ್ಕಣ್ಣ ನಿರ್ದೇಶನದ, ರಂಗಾಯಣ ರಘು ಮುಖ್ಯಭೂಮಿಕೆಯಲ್ಲಿ ಅಭಿನಯಿಸುತ್ತಿರುವ 'ಅಜ್ಞಾತವಾಸಿ' ಸೆಟ್ಟೇರಿದ್ದು, ಈ ಚಿತ್ರದ ಮುಖಾಂತರ ಹೇಮಂತ್ ರಾವ್ ಪೂರ್ಣ ಪ್ರಮಾಣದ ನಿರ್ಮಾಪಕರಾಗಿದ್ದಾರೆ.

'ಗೋಧಿಬಣ್ಣ ಸಾಧಾರಣ ಮೈಕಟ್ಟು', 'ಕವಲುದಾರಿ' ಖ್ಯಾತಿಯ ನಿರ್ದೇಶಕ ಹೇಮಂತ್ ಎಂ. ರಾವ್ ಇದೀಗ ಮತ್ತೆ ಸಿನಿಮಾ ನಿರ್ಮಾಣಕ್ಕಿಳಿದಿದ್ದಾರೆ. ನಟ ರಂಗಾಯಣ ರಘು ಮುಖ್ಯಭೂಮಿಕೆಯಲ್ಲಿ ಅಭಿನಯಿಸುತ್ತಿರುವ 'ಅಜ್ಞಾತವಾಸಿ' ಸಿನಿಮಾ ಸೆಟ್ಟೇರಿದ್ದು, ಈ ಚಿತ್ರದ ಮುಖಾಂತರ ಹೇಮಂತ್ ಪೂರ್ಣಪ್ರಮಾಣದ ನಿರ್ಮಾಪಕರಾಗಿದ್ದಾರೆ.

ಈ ಹಿಂದೆ ಸಾದ್ ಖಾನ್ ನಿರ್ದೇಶನದ 'ಹಂಬಲ್ ಪೊಲಿಟಿಷಿಯನ್ ನೋಗರಾಜ್' ಸಿನಿಮಾದ ನಿರ್ಮಾಪಕರಲ್ಲಿ ಹೇಮಂತ್ ಒಬ್ಬರಾಗಿದ್ದರು. 'ಗುಲ್ಟು' ಸಿನಿಮಾ ಖ್ಯಾತಿಯ ಜನಾರ್ದನ್ ಚಿಕ್ಕಣ್ಣ ನಿರ್ದೇಶನದ, 'ಅಜ್ಞಾತವಾಸಿ' ಚಿತ್ರದ ಮುಹೂರ್ತ ಇತ್ತೀಚೆಗೆ ಧರ್ಮಗಿರಿ ಮಂಜುನಾಥ ಸ್ವಾಮಿ ದೇವಸ್ಥಾನದಲ್ಲಿ ನಡೆಯಿತು. ರಂಗಾಯಣ ರಘು ಅವರೊಂದಿಗೆ ಈ ಚಿತ್ರದಲ್ಲಿ ಪಾವನ ಗೌಡ ಹಾಗೂ ಸಿದ್ದು ಮೂಲಿಮನಿ ಅವರೂ ತಾರಾಗಣದಲ್ಲಿದ್ದಾರೆ.

ಚಿತ್ರದ ಕುರಿತು ಮಾತನಾಡಿದ ಜನಾರ್ದನ್ ಚಿಕ್ಕಣ್ಣ, 'ನನ್ನ ಗುರುಗಳಾದ ಕೃಷ್ಣರಾಜ್ ಅವರು ಈ ಚಿತ್ರದ ಕಥೆ ಬರೆದಿದ್ದಾರೆ. 1997ರಲ್ಲಿ ಮಲೆನಾಡಿನಲ್ಲಿ ನಡೆದ ಕೊಲೆಯೊಂದರ ಸುತ್ತ ಈ ಕಥೆ ಹೆಣೆಯಲಾಗಿದೆ. ಇದೊಂದು ಕನ್ನಡದಲ್ಲಿ ಈವರೆಗೂ ಬಂದಿರದ ಮರ್ಡರ್ ಮಿಸ್ಟರಿ ಎನ್ನಬಹುದು. ರಂಗಾಯಣ ರಘು ಅವರು ಪೊಲೀಸ್ ಅಧಿಕಾರಿಯಾಗಿ ಈ ಚಿತ್ರದಲ್ಲಿ ನಟಿಸಲಿದ್ದಾರೆ. ಅದ್ವೈತ ಛಾಯಾಗ್ರಾಹಕರಾಗಿ ಹಾಗೂ ಚರಣ್ ರಾಜ್ ಸಂಗೀತ ನಿರ್ದೇಶಕರಾಗಿ ಕಾರ್ಯನಿರ್ವಹಿಸಲಿದ್ದಾರೆ. ಶೀಘ್ರದಲ್ಲೇ ಚಿತ್ರೀಕರಣ ಆರಂಭವಾಗಲಿದೆ' ಎಂದರು.

'ಕಥೆ ಇಷ್ಟವಾಯಿತು. ರಂಗಾಯಣ ರಘು ಅವರ ಅಭಿನಯವನ್ನು ನೋಡಲು ನಾನು ನಿರ್ಮಾಪಕನಿಗಿಂತ ಹೆಚ್ಚಾಗಿ ಅಭಿಮಾನಿಯಾಗಿ ಕಾಯುತ್ತಿದ್ದೇನೆ' ಎಂದರು ಹೇಮಂತ್. ಪ್ರಸ್ತುತ ನಟ ರಕ್ಷಿತ್ ಶೆಟ್ಟಿ ನಟನೆಯ 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾವನ್ನು ಹೇಮಂತ್ ಅವರು ನಿರ್ದೇಶಿಸುತ್ತಿದ್ದು, ಈ ಚಿತ್ರ ವರ್ಷಾಂತ್ಯಕ್ಕೆ ತೆರೆಗೆ ಬರುವ ಸಾಧ್ಯತೆ ಇದೆ. ❖



ಅಜ್ಞಾತವಾಸಿ ಪೋಸ್ಟರ್

ಧ್ರುವ ಸರ್ಜಾ ಹಾಗೂ ಪ್ರೇಮ್

ಯುದ್ಧದ ಮುನ್ನುಡಿ... ಏ.24ಕ್ಕೆ

'ಏಕ್ ಲವ್ ಯಾ' ಸಿನಿಮಾ ಬೆನ್ನಲ್ಲೇ ಮತ್ತೊಂದು ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದಾರೆ ನಿರ್ದೇಶಕ 'ಜೋಗಿ' ಪ್ರೇಮ್. 'ಯುದ್ಧದ ಮುನ್ನುಡಿ ಇಲ್ಲಿಂದ ಆರಂಭ–1970' ಎಂಬ ಟ್ಯಾಗ್‌ಲೈನ್ ಇರುವ ಪೋಸ್ಟರ್ ಅಪ್‌ಲೋಡ್ ಮಾಡಿರುವ ಪ್ರೇಮ್, ಚಿತ್ರದ ಮುಹೂರ್ತ ಏ.24ರಂದು ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ನಡೆಯಲಿದೆ ಎಂದು ತಿಳಿಸಿದ್ದಾರೆ.

ಕೆ.ವಿ.ಎನ್. ಪ್ರೊಡಕ್ಷನ್ಸ್ ನಿರ್ಮಾಣದ ನಾಲ್ಕನೇ ಚಿತ್ರದಲ್ಲಿ ಆ್ಯಕ್ಷನ್ ಪ್ರಿನ್ಸ್ ಧ್ರುವ ಸರ್ಜಾ ನಾಯಕರಾಗಿ ನಟಿಸಲಿದ್ದು, ಚಿತ್ರಕ್ಕೆ ಪ್ರೇಮ್ ಆ್ಯಕ್ಷನ್ ಕಟ್ ಹೇಳಿದ್ದಾರೆ. ಇದು ಅವರ ನಿರ್ದೇಶನದ 9ನೇ ಚಿತ್ರ. ಸಿನಿಮಾ ಶೀರ್ಷಿಕೆಯನ್ನು ಚಿತ್ರತಂಡವು ಇನ್ನೂ ಬಹಿರಂಗಗೊಳಿಸಿಲ್ಲ. ಸದ್ಯಕ್ಕೆ, 'ಪೊಗರು' ಚಿತ್ರದ ಬಳಿಕ ಧ್ರುವ ಸರ್ಜಾ ಅವರು ನಿರ್ದೇಶಕ ಎ.ಪಿ.ಅರ್ಜುನ್ ನಿರ್ದೇಶನದ 'ಮಾರ್ಟಿನ್' ಚಿತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಅರ್ಜುನ್ ನಿರ್ದೇಶನದ 'ಅದ್ದೂರಿ' ಮುಖಾಂತರ 2012ರಲ್ಲಿ ಚಂದನವನಕ್ಕೆ ಪ್ರವೇಶಿಸಿದ್ದ ಧ್ರುವ ಸರ್ಜಾ, ನಂತರ 'ಬಹದ್ದೂರ್', 'ಭರ್ಜರಿ', 'ಪೊಗರು' ಚಿತ್ರದಲ್ಲಿ ಮಿಂಚಿದ್ದರು. ಪ್ರೇಮ್ ಆ್ಯಕ್ಷನ್ ಕಟ್ ಹೇಳಲಿರುವ ಚಿತ್ರವು ಧ್ರುವ ಸರ್ಜಾ ಅವರ ಆರನೇ ಸಿನಿಮಾ ಆಗಿರಲಿದೆ.

ಸಿನಿಮಾದೊಳಗೊಂದು ರಿಯಾಲಿಟಿ ಶೋ!

ಅದಿತಿ ಪ್ರಭುದೇವ ಹಾಗೂ ವಿನಯ್ ರಾಜ್‌ಕುಮಾರ್

ವಿನಯ್ ರಾಜ್‌ಕುಮಾರ್ ಹಾಗೂ ಅದಿತಿ ಪ್ರಭುದೇವ ಜೋಡಿಯ 'ಅಂದೊಂದಿತ್ತು ಕಾಲ' ಸಿನಿಮಾ ಶೂಟಿಂಗ್ ಪೂರ್ಣಗೊಂಡಿದೆ. ಚಿತ್ರೀಕರಣದ ಕೊನೆಯ ಹಂತದಲ್ಲಿ ಖ್ಯಾತ ನಟ ರವಿಚಂದ್ರ ವಿ. ಅತಿಥಿ ಪಾತ್ರದ ಮೂಲಕ ಚಿತ್ರತಂಡ ಸೇರಿಕೊಂಡಿದ್ದು, ಸಿನಿಮಾದೊಳಗೆ 'ವೀಕೆಂಡ್ ವಿತ್ ರಮೇಶ್' ಮಾದರಿಯ 'ಮೆಮೊರೀಸ್ ವಿತ್ ರವಿಚಂದ್ರನ್' ಎಂಬ ರಿಯಾಲಿಟಿ ಶೋವೊಂದನ್ನು ನಿರೂಪಣೆ ಮಾಡಿದ್ದಾರೆ.

ಕೀರ್ತಿ ನಿರ್ದೇಶನದ ಈ ಸಿನಿಮಾದಲ್ಲಿ ವಿನಯ್ ರಾಜ್‌ಕುಮಾರ್ ನಿರ್ದೇಶಕನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. 1990ರಿಂದ 2005ರವರೆಗೆ ನಡೆಯುವ ಚಿತ್ರಕಥೆ ಇದಾಗಿದೆ. ರಿಯಾಲಿಟಿ ಶೋನಲ್ಲಿ ತನ್ನ ಜೀವನ ಪಯಣವನ್ನು ನಾಯಕ ತೆರೆದಿಡುತ್ತಾನೆ. ಚಿತ್ರದ ಕೊನೆಯ ಹಂತದಲ್ಲಿ ಎರಡು ದಿನ 'ರಿಯಾಲಿಟಿ ಶೋ' ಚಿತ್ರೀಕರಣ ನಡೆದಿದೆ. 'ನಾನು ರಮೇಶ್ ಅರವಿಂದ್ ಅವರಿಗೆ ಡ್ಯೂಪ್ ಹಾಕಿದ್ದೇನೆ. ವಿಕೆಂಡ್ ವಿತ್ ರಮೇಶ್ ಹೋಸ್ಟ್ ಮಾಡುವ ರಮೇಶ್ ಕಾಲ್‌ಶೀಟ್ ಸಿಗಲಿಲ್ಲ ಎಂದು ನನ್ನನ್ನು ಹಾಕಿಕೊಂಡಿದ್ದಾರೆ' ಎಂದು ತಮ್ಮ ಪಾತ್ರವನ್ನು ವಿವರಿಸುತ್ತಾ ರವಿಚಂದ್ರ ಅವರು ಚಟಾಕಿ ಹಾರಿಸಿದರು.

'ವೇಗವಾಗಿ ಸಾಗುತ್ತಿರುವ ಈ ಜೀವನ ಪಯಣದಲ್ಲಿ ಹಿಂದಿನದೆಲ್ಲವನ್ನೂ ಮರೆಯುತ್ತೇವೆ. ನಾಯಕನ ಜೀವನ ಪಯಣವನ್ನು ನೆನಪಿಸುವುದು ನನ್ನ ಪಾತ್ರ. ಎರಡೇ ದಿನ ಚಿತ್ರೀಕರಣದಲ್ಲಿ ಭಾಗವಹಿಸಿದರೂ ಇಡೀ ಸಿನಿಮಾದಲ್ಲಿ ನಾನಿರುತ್ತೇನೆ. ಮಾಣಿಕ್ಯ ಸಿನಿಮಾದಿಂದ ಪೋಷಕ ಪಾತ್ರ ಮಾಡಲು ಆರಂಭಿಸಿದೆ. ಇನ್ನು ಮಾಡುವುದಿಲ್ಲ ಎನ್ನುವುದಕ್ಕೆ ಏನೂ ಆಗಿಲ್ಲ. ಹೀರೊ ಪಾತ್ರಕ್ಕೆ ಹೋಲಿಸಿದರೆ ಪೋಷಕ ಪಾತ್ರಕ್ಕೆ ವೇತನ ಹೆಚ್ಚು. ನನ್ನ ಪಾತ್ರದಿಂದ ಆ ಕಥೆಗೆ, ಸಿನಿಮಾಗೆ ಉಪಯೋಗವಾಗಲಿ ಎನ್ನುವ ಕಾರಣಕ್ಕೆ ನಟಿಸುತ್ತೇನೆ' ಎಂದರು.

ಭುವನ್, ಲೋಕೇಶ್.ಎನ್, ಶಿವಣ್ಣ ಎಸ್ ಈ ಚಿತ್ರವನ್ನು ನಿರ್ಮಿಸಿದ್ದು, ಅಭಿಷೇಕ್ ಜಿ.ಕಾಸರಗೋಡು ಅವರ ಛಾಯಾಗ್ರಹಣ, ರಾಘವೇಂದ್ರ ವಿ. ಸಂಗೀತ ಚಿತ್ರಕ್ಕಿದೆ. ❖

ಟ್ರೆಂಡ್‌ನಲ್ಲಿದೆ ಬನಾರಸ್ ಸೀರೆ

ರಾಜ್ಯಲಕ್ಷ್ಮೀ ಗುಬ

'ಫ್ಯಾಷನ್' ಜಗತ್ತಿನಲ್ಲಿ ಎಂಥದ್ದೇ ವಸ್ತ್ರಗಳು ಬಂದರೂ ಮಹಿಳೆಯರಿಗೆ ಸೀರೆಯ ಬಗೆಗಿನ ಸೆಳೆತ ಎಂದಿಗೂ ಕಡಿಮೆಯಾಗದು. ಸೀರೆಗೆ ಸರಿಸಾಟಿಯಾದ ಉಡುಗೆ ಬೇರೊಂದಿಲ್ಲ. ಅದರ ಘನತೆಯೇ ಅಂಥದ್ದು. ಸಾಂಪ್ರದಾಯಿಕ ಸಮಾರಂಭಗಳಲ್ಲಿ ಸೀರೆಗೆ ಹೆಚ್ಚು ಪ್ರಾಶಸ್ತ್ಯ ಇದೆ. ಈಗ ಮದುವೆ ಸೀಸನ್ ಆರಂಭವಾಗಿದೆ. ಮದುವೆ ಮನೆಗಳಲ್ಲೂ ಸೀರೆಗಳ ಬಗೆಗಿನ ಚರ್ಚೆ ರಂಗೇರಿರುತ್ತದೆ !

ಸೀರೆಗಳಲ್ಲಿ ರೇಷ್ಮೆ ಸೀರೆಗೆ ವಿಶೇಷ ಸ್ಥಾನ. ಬನಾರಸ್ ರೇಷ್ಮೆ ಸೀರೆಯೆಂದರೆ ಅದಕ್ಕೆ ಇನ್ನೂ ಉನ್ನತ ಸಮ್ಮಾನ. ಏಕೆಂದರೆ ಬನಾರಸ್ ಸೀರೆ ಸಂಪ್ರದಾಯಕ್ಕೆ ಹೆಸರು. ಭಾರತದ ಆಧ್ಯಾತ್ಮಿಕ ರಾಜಧಾನಿ, ಜಗತ್ತಿನ ಅತ್ಯಂತ ಪ್ರಾಚೀನ ನಗರಗಳಲ್ಲಿ ಒಂದಾದ ಕಾಶಿ ಅಥವಾ ವಾರಾಣಸಿ 'ಬನಾರಸ್' ಸೀರೆಯ ತವರೂರು. ಇಲ್ಲಿ ಮಹಿಳೆಯರು 'ಬಳೆ' ಮತ್ತು 'ಸಿಂಧೂರ'ಕ್ಕೆ ನೀಡುವಷ್ಟು ಆದ್ಯತೆಯನ್ನು 'ಬನಾರಸ್ ಸೀರೆ'ಗೂ ನೀಡುತ್ತಾರೆ. ಬನಾರಸ್ ಸೀರೆಗೆ 'ಸುಹಾಗ್' - ಅಂದರೆ ಪತಿಯ ಸ್ಥಾನ ನೀಡಲಾಗಿದೆ. ಇದರಿಂದ ಬನಾರಸ್ ಸೀರೆಗಿರುವ ಮಹತ್ವವನ್ನು ಅರಿಯಬಹುದು.

ಬನಾರಸ್ ಸೀರೆಗಳಲ್ಲಿ ಹಲವು ವಿಧಗಳು ಇವೆ: ಪ್ಯೂರ್ ಸಿಲ್ಕ್, ಶಾಟಿರ್, ಕೋರಾ, ಜಾರ್ಜೆಟ್, ಜಂಗ್ಲಾ, ಟ್ಯಾಂಚೋಯಿ, ಕಟ್ವರ್ಕ್, ಟಿಶ್ಯೂ, ಬೂಟಿದಾರ್. ಇವುಗಳಲ್ಲಿ ಈಗಿನ ಟ್ರೆಂಡ್‌ನಲ್ಲಿ, ಮದುವೆ ಸಮಾರಂಭಗಳಲ್ಲಿ ಅಗಲವಾದ ಬಾರ್ಡರ್‌ನ ಬನಾರಸ್ ಸೀರೆಗಳನ್ನು ಮಹಿಳೆಯರು ಹೆಚ್ಚಾಗಿ ಉಡುತ್ತಾರೆ.

ಯುವತಿಯರಿಗೆ ಬನಾರಸಿ ಲೆಹೆಂಗಾಗಳ ಹೊರತಾಗಿ ಶುದ್ಧ ಸಿಲ್ಕ್ ಬನಾರಸ್ ಸೀರೆಗಳು ಇಷ್ಟವಾಗುತ್ತಿವೆ. ಮದುವೆಗಳಲ್ಲಿ ಟ್ಯಾಂಚೋಯಿ ಬನಾರಸ್ ಸೀರೆಗಳು ಕೂಡ ಹೆಚ್ಚು ಬಳಕೆಯಾಗುತ್ತಿವೆ. ಗೃಹಿಣಿಯರು ಅಗಲವಾದ ಬಾರ್ಡರ್ ಹೊಂದಿರುವ ಜಂಗ್ಲಾ, ಬೂಟಿದಾರ್ ಬನಾರಸ್ ಸೀರೆಗಳಂಥ ವಿಧಗಳನ್ನು ಮೆಚ್ಚಿಕೊಳ್ಳುತ್ತಿದ್ದಾರೆ.

ಬಣ್ಣಗಳ ವಿಚಾರಕ್ಕೆ ಬಂದಾಗ, ಕೆಂಪು, ಮರೂನ್, ನೀಲಿ, ಜೆಮಿನಿ, ಲೆಮನ್, ಹಳದಿ ಇತ್ಯಾದಿ ಬಣ್ಣಗಳ ಬನಾರಸ್ ಸೀರೆಗಳು ಹೆಚ್ಚು ಫೇಮಸ್. ವಿನ್ಯಾಸದ ದೃಷ್ಟಿಯಿಂದ ನೋಡುವುದಾದರೆ, ವೆಡ್ಡಿಂಗ್ ಟೋನ್ ಬನಾರಸ್ ಸೀರೆ, ಪಾರ್ಟಿವೇರ್, ಬ್ರೈಡಲ್, ಸಿಲ್ಕ್ ಸ್ಯಾರೀ ಗೋಲ್ಡ್ ಬನಾರಸಿ ಸೀರೆಗಳು ಟ್ರೆಂಡಿಂಗ್‌ನಲ್ಲಿವೆ.

❖

ಎಳನೀರಿನಿಂದ ದೇಹ ತಂಪಾಗುವುದಲ್ಲದೇ ಇದರಲ್ಲಿ ಹಲವು ಬಗೆಯ ಆರೋಗ್ಯವರ್ಧಕ ಅಂಶಗಳಿವೆ. ಸೌಂದರ್ಯ ಹೆಚ್ಚಿಸುವ ಗುಣಗಳೂ ಇದರಲ್ಲಿದೆ. ಎಳನೀರಿನಿಂದ ಸೌಂದರ್ಯ ಹೆಚ್ಚಿಸಿಕೊಳ್ಳುವುದು ಹೇಗೆ?

ಎಳನೀರಿನಲ್ಲಿ ಅಡಗಿದೆ ಸೌಂದರ್ಯದ ಗುಟ್ಟು



ಮನಸ್ವಿ

ಬೇಸಿಗೆ ಎಂದರೆ ಬೇಸರ. ಬಿಸಿಲ ಧಗೆಗೆ ದೇಹ, ಮನಸ್ಸು ಎರಡೂ ಹೈರಾಣಾಗಿರುತ್ತದೆ. ಬೇಸಿಗೆಯ ದಾಹ ತಣಿಸುವ ಯೋಚನೆ ಮನದಲ್ಲಿ ಬಂದಾಗ ಮೊದಲು ನೆನಪಾಗುವುದು ಎಳನೀರು. ಎಳನೀರು ಕುಡಿಯುವುದರಿಂದ ದೇಹ ತಂಪಾಗುವುದಲ್ಲದೇ ಇದರಲ್ಲಿ ಹಲವು ಬಗೆಯ ಆರೋಗ್ಯವರ್ಧಕ ಅಂಶಗಳಿವೆ. ಅಲ್ಲದೇ ಸೌಂದರ್ಯ ಹೆಚ್ಚಿಸುವ ಗುಣಗಳೂ ಇದರಲ್ಲಿದೆ. ಎಳನೀರನ್ನು ನೈಸರ್ಗಿಕ ಸೌಂದರ್ಯವರ್ಧಕ ಅಂತಲೂ ಕರೆಯಬಹುದು. ಹಾಗಾದರೆ ಸೌಂದರ್ಯವರ್ಧಕವಾಗಿ ಇದರ ಬಳಕೆ ಹೇಗೆ? ಯಾವೆಲ್ಲಾ ಚರ್ಮದ ಸಮಸ್ಯೆಗಳಿಗೆ ಇದರ ಬಳಕೆಯಿಂದ ಪರಿಹಾರ ಕಂಡುಕೊಳ್ಳಬಹುದು... ಈ ಕುರಿತ ಟಿಪ್ಸ್ ಇಲ್ಲಿದೆ.

ಎಳನೀರಿನ ಟೋನರ್

ಎಳನೀರಿನ ಟೋನರ್ ಚರ್ಮವನ್ನು ಮೃದುವಾಗಿಸುತ್ತದೆ. ಎಳನೀರು ಟೋನರ್ ಬಳಸುವ ಮೊದಲು ಮುಖವನ್ನು ಚೆನ್ನಾಗಿ ತೊಳೆದು ಒಣಗಿಸಿಕೊಳ್ಳಬೇಕು. ಹತ್ತಿ ಉಂಡೆಯನ್ನು ಎಳನೀರಿನಲ್ಲಿ ಅದ್ದಿ ಮುಖಕ್ಕೆ ಮಸಾಜ್ ಮಾಡಿಕೊಳ್ಳಬೇಕು. ಚರ್ಮದ ಎಲ್ಲಾ ಭಾಗಕ್ಕೂ ಎಳನೀರು ತಾಕುವಂತೆ ಹಚ್ಚಿಕೊಳ್ಳಿ. ಪ್ರತಿದಿನ ಈ ರೀತಿ ಮಾಡುವುದರಿಂದ ಮುಖದ ಚರ್ಮದಲ್ಲಿ ತೇವಾಂಶ ಹೆಚ್ಚುತ್ತದೆ. ಇದರಿಂದ ಮುಖ ಹಾಗೂ ಚರ್ಮದ ಕಾಂತಿ ಹೆಚ್ಚುತ್ತದೆ.

ಎಳನೀರು ಮಾಸ್ಕ್

ಎರಡು ಚಮಚ ಎಳನೀರು, ಅರ್ಧ ಚಮಚ ಅರಿಸಿನ ಪುಡಿ ಹಾಗೂ ಅರ್ಧ ಚಮಚ ಜೇನುತುಪ್ಪ ಸೇರಿಸಿ ಮಿಶ್ರಣ ಮಾಡಿ, ಮುಖಕ್ಕೆ ಹಚ್ಚಿಕೊಳ್ಳಿ. ಇದನ್ನು 10 ನಿಮಿಷಗಳ ಕಾಲ ಹಾಗೇ ಬಿಡಿ. ನಂತರ ಉಗುರು ಬೆಚ್ಚಗಿನ ನೀರಿನಿಂದ ಮುಖ ತೊಳೆಯಿರಿ. ಇದರಿಂದ ಮುಖದ ಮೇಲಿನ ಕಪ್ಪು ಕಲೆ, ಮೊಡವೆಯಂತಹ ಸಮಸ್ಯೆಗಳಿಗೆ ಪರಿಹಾರ ಸಿಗುವುದಲ್ಲದೇ ತ್ವಚೆಯೂ ಮೃದುವಾಗುತ್ತದೆ.

ಮುಲ್ತಾನಿಮಿಟ್ಟಿ ಎಳನೀರು ಫೇಸ್‌ಪ್ಯಾಕ್

ಮುಲ್ತಾನಿಮಿಟ್ಟಿಗೆ ಎಳನೀರು ಸೇರಿಸಿ ಪೇಸ್ಟ್ ತಯಾರಿಸಿ ಮುಖಕ್ಕೆ ಹಚ್ಚಿಕೊಳ್ಳುವುದರಿಂದ ಬೇಸಿಗೆಯಲ್ಲಿ ಉಂಟಾಗುವ ಟ್ಯಾನ್ ಅನ್ನು ನಿವಾರಿಸಬಹುದು. ವಾರಕ್ಕೆ ಎರಡು ಬಾರಿ ಈ ಫೇಸ್‌ಪ್ಯಾಕ್ ಬಳಕೆಯಿಂದ ಮುಖದ ಟ್ಯಾನ್ ನಿವಾರಣೆಯಾಗಿ ಮುಖದ ಅಂದ ಹೆಚ್ಚುವುದರಲ್ಲಿ ಎರಡು ಮಾತಿಲ್ಲ.

ಮೊಡವೆ, ಕಪ್ಪುಕಲೆಗಳ ನಿವಾರಣೆ

ಎಳನೀರಿನಲ್ಲಿ ಡಿಟಾಕ್ಸಿಫೈಯಿಂಗ್, ಆ್ಯಂಟಿ ಇನ್ಫ್ಲಾಮೇಟರಿ ಅಂಶಗಳೂ ಹೆಚ್ಚಿವೆ. ಇದರಲ್ಲಿ ಲ್ಯೂರಿಕ್ ಆ್ಯಸಿಡ್ ಅಂಶವಿದ್ದು ಮೊಡವೆಗಳ ವಿರುದ್ಧ ಹೋರಾಡಲು ಸಹಾಯ ಮಾಡುತ್ತದೆ. ಆ ಕಾರಣಕ್ಕೆ ಪ್ರತಿನಿತ್ಯ ಎಳನೀರಿನಿಂದ ಮುಖ ತೊಳೆಯುವುದರಿಂದ ಕಪ್ಪು ಕಲೆ, ಬಂಗು, ಮೊಡವೆಯಂತಹ ಸಮಸ್ಯೆಗಳಿವೆ ಪರಿಹಾರ ಸಿಗುತ್ತದೆ. ಒಣ ಚರ್ಮದವರು ಎಳನೀರನ್ನು ಪ್ರತಿನಿತ್ಯ ಮುಖಕ್ಕೆ ಹಚ್ಚಿಕೊಳ್ಳುವುದರಿಂದ ಚರ್ಮದಲ್ಲಿ ತೇವಾಂಶ ಹೆಚ್ಚಿ ತ್ವಚೆಯ ಅಂದ ಹೆಚ್ಚುತ್ತದೆ.

ಆರೋಗ್ಯಕರ ಹಾಗೂ ಕಾಂತಿಯುತ ಚರ್ಮ

ಎಳನೀರಿನಲ್ಲಿ ವಿಟಮಿನ್ ಸಿ, ಕೆ ಹಾಗೂ ಎ ಅಂಶ ಅಧಿಕವಿದೆ. ಆ ಕಾರಣಕ್ಕೆ ಇದನ್ನು ಹಚ್ಚುವುದರಿಂದ ಚರ್ಮದ ಆರೋಗ್ಯ ಸುಧಾರಿಸುತ್ತದೆ. ಇದರಲ್ಲಿ ಆ್ಯಂಟಿಆಕ್ಸಿಡೆಂಟ್ ಅಂಶವಿದ್ದು ಇದು ಚರ್ಮವನ್ನು ಸ್ವಚ್ಛಗೊಳಿಸಿ ಕಾಂತಿ ಹೆಚ್ಚಲು ಸಹಾಯ ಮಾಡುತ್ತದೆ. ಅಲ್ಲದೇ ಇದನ್ನು ಬೇರೆ ಬೇರೆ ಫೇಶಿಯಲ್ ಪ್ಯಾಕ್‌ಗಳೊಂದಿಗೆ ಬಳಸುವುದರಿಂದ ಬೇಸಿಗೆಯಲ್ಲಿ ಉಂಟಾಗುವ ಟ್ಯಾನ್‌ನಂತಹ ಸಮಸ್ಯೆ ನಿವಾರಣೆಯಾಗುತ್ತದೆ.

ಆ್ಯಂಟಿ ಏಜಿಂಗ್

ವಯಸ್ಸಾದಂತೆ ಚರ್ಮದಲ್ಲಿ ಹಲವು ರೀತಿಯ ವ್ಯತ್ಯಾಸಗಳಾಗುತ್ತವೆ. ಆದರೆ ಎಳನೀರನ್ನು ಚರ್ಮಕ್ಕೆ ಹಚ್ಚಿಕೊಳ್ಳುವುದರಿಂದ ಮುಖದ ಮೇಲೆ ಮೂಡುವ ಗೆರೆಗಳು, ನೆರಿಗೆಯಂತಹ ವಯಸ್ಸಾದ ಲಕ್ಷಣಗಳನ್ನು ಇದು ನಿವಾರಿಸುತ್ತದೆ. ಇದರಲ್ಲಿ ನೈಸರ್ಗಿಕ ವಿಟಮಿನ್ ಹಾಗೂ ಮಿನರಲ್ಸ್ ಅಂಶಗಳಿದೆ ಇವು ಚರ್ಮದ ಹೊಳಪು ಹೆಚ್ಚಲು ಸಹಕರಿಸುತ್ತವೆ.

❖

ಶಬೀರ್ ಬಾಕ್ಸ್‌ವಾಲ, ಪರಂಬ್ರತ ಚಟ್ಟೋಪಾಧ್ಯಾಯ್ ಹಾಗೂ ಪವನ್ ಒಡೆಯರ್

ಬಾಲಿವುಡ್‌ಗೆ 'ಗೂಗ್ಲಿ' ಡೈರೆಕ್ಟರ್ ಪವನ್

ಚಂದನವನದಲ್ಲಿ 'ರಣವಿಕ್ರಮ', 'ಗೂಗ್ಲಿ', 'ನಟಸಾರ್ವಭೌಮ'ದಂತಹ ಹಿಟ್ ಸಿನಿಮಾಗಳನ್ನು ನಿರ್ದೇಶಿಸಿದ್ದ ಪವನ್ ಒಡೆಯರ್ ಸದ್ಯಕ್ಕೆ 'ರೇಮೊ' ಚಿತ್ರದ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ. ಈ ನಡುವೆಯೇ ಬಾಲಿವುಡ್‌ಗೂ ಅವರು ಹೆಜ್ಜೆ ಇಟ್ಟಿದ್ದಾರೆ.

'ನೋಟರಿ' ಚಿತ್ರಕ್ಕೆ ಪವನ್ ಸಾರಥಿ: ಪವನ್ ಒಡೆಯರ್ ನಿರ್ದೇಶನದಲ್ಲಿ ಮೂಡಿಬರಲಿರುವ ಮೊದಲ ಬಾಲಿವುಡ್ ಸಿನಿಮಾಗೆ 'ನೋಟರಿ' ಎಂಬ ಶೀರ್ಷಿಕೆ ಇಡಲಾಗಿದೆ. ಇದೊಂದು ಕಾಮಿಡಿ ಡ್ರಾಮಾ ಸಿನಿಮಾವಾಗಿದೆ. ಬಂಗಾಳಿ ನಟ, 'ಕಹಾನಿ', 'ಪರಿ' ಹಾಗೂ ನೆಟ್‌ಫ್ಲಿಕ್ಸ್‌ನಲ್ಲಿ ರಿಲೀಸ್ ಆಗಿರುವ 'ಅರಣ್ಯಕ್'ದಲ್ಲಿ ನಟಿಸಿರುವ ಪರಂಬ್ರತ ಚಟ್ಟೋಪಾಧ್ಯಾಯ 'ನೋಟರಿ' ಸಿನಿಮಾದ ಮುಖ್ಯಭೂಮಿಕೆಯಲ್ಲಿ ನಟಿಸಿದ್ದಾರೆ.

ಪವನ್ ಒಡೆಯರ್ ನಿರ್ದೇಶನದ ಜೊತೆಗೆ 'ನೋಟರಿ' ನಿರ್ಮಾಣದ ಹೊಣೆಯನ್ನೂ ಹೊತ್ತಿದ್ದಾರೆ. ನಿರ್ಮಾಪಕ ಶಬೀರ್ ಬಾಕ್ಸ್‌ವಾಲ ಅವರ ಕಾಶ್ ಎಂಟರ್‌ಟೈನ್‌ಮೆಂಟ್ ಜೊತೆಗೂಡಿ ಪವನ್ ತಮ್ಮದೇ ಒಡೆಯರ್ ಮೂವೀಸ್ ಬ್ಯಾನರ್‌ನಡಿ ನೋಟರಿ ಚಿತ್ರಕ್ಕೆ ಹಣ ಹೂಡಲಿದ್ದಾರೆ. ಸದ್ಯಕ್ಕೆ ಪ್ರಿಪ್ರೊಡಕ್ಷನ್ ಕೆಲಸದಲ್ಲಿ ತೊಡಗಿಸಿಕೊಂಡಿರುವ ಚಿತ್ರತಂಡವು ಆಗಸ್ಟ್‌ನಿಂದ ಮಧ್ಯಪ್ರದೇಶ ಅಥವಾ ಛತ್ತೀಸಗಡದಲ್ಲಿ ಚಿತ್ರೀಕರಣ ನಡೆಸಲು ಯೋಜನೆ ರೂಪಿಸಿದೆ. ಸದ್ಯದಲ್ಲಿಯೇ ಉಳಿದ ತಾರಾಗಣದ ಮಾಹಿತಿಯನ್ನು ತಿಳಿಸುವುದಾಗಿ ಚಿತ್ರತಂಡವು ತಿಳಿಸಿದೆ.

'ರೇಮೊ' ಸಿನಿಮಾ ಮೇಯಲ್ಲಿ ತೆರೆಗೆ ಬರುವ ಸಾಧ್ಯತೆಯಿದೆ. ಜೊತೆಗೆ ಒಡೆಯರ್ ಮೂವೀಸ್ ನಿರ್ಮಾಣದ, ಹಲವು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶನ ಕಂಡು ಪ್ರಶಸ್ತಿ ಪಡೆದಿರುವ, ಸಾಗರ್ ಪುರಾಣಿಕ್ ನಿರ್ದೇಶನದ 'ಡೊಳ್ಳು' ಸಿನಿಮಾವನ್ನೂ ತೆರೆಗೆ ತರುವ ತಯಾರಿ ನಡೆಸಿದ್ದಾರೆ ಪವನ್.

❖

ಐಪಿಎಲ್ ಬೆಟ್ಟಿಂಗ್‌ನಲ್ಲೊಂದು 'ಕ್ರಿಟಿಕಲ್ ಕೀರ್ತನೆಗಳು'

'ಕ್ರಿಟಿಕಲ್ ಕೀರ್ತನೆಗಳು'- ಹೀಗೊಂದು ಕಂಗ್ಲಿಷ್ ಶೀರ್ಷಿಕೆಯ ಚಿತ್ರವೊಂದು ಮೇ 12ರಂದು ತೆರೆಗೆ ಬರುತ್ತಿದೆ. ಈಗಾಗಲೇ ಸೆನ್ಸಾರ್‌ನಿಂದ 'ಯು/ಎ' ಪ್ರಮಾಣಪತ್ರ ಈ ಚಿತ್ರಕ್ಕೆ ಸಿಕ್ಕಿದೆ.

ಈ ಹಿಂದೆ 'ಕೆಮಿಸ್ಟ್ರಿ ಆಫ್ ಕರಿಯಪ್ಪ' ಚಿತ್ರವನ್ನು ನಿರ್ದೇಶಿಸಿದ್ದ ಕುಮಾರ್ ಎಲ್. ಈ ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ.

ಚಿತ್ರದ ಬಗ್ಗೆ ಮಾತನಾಡುವ ನಿರ್ದೇಶಕ ಕುಮಾರ್, 'ಇದೊಂದು ಐಪಿಎಲ್ ಬೆಟ್ಟಿಂಗ್ ಕಥಾಹಂದರ ಹೊಂದಿರುವ ಒಂದಷ್ಟು ನೈಜ ಘಟನೆಗಳನ್ನು ಆಧರಿಸಿ ಮಾಡಿರುವ ಸಿನಿಮಾ, ಇದು ಪೂರ್ಣಪ್ರಮಾಣದ ಕೌಟುಂಬಿಕ ಮನರಂಜನಾ ಚಿತ್ರ' ಎನ್ನುತ್ತಾರೆ.

ಚಿತ್ರದ ಟ್ರೈಲರ್ ಈಗಾಗಲೇ ಬಿಡುಗಡೆ ಆಗಿದೆ. ಈ ಐಪಿಎಲ್ ಸೀಸನ್‌ನಲ್ಲಿ ಐಪಿಎಲ್ ಕುರಿತಾದ 'ಐಪಿಎಲ್‌ನಲ್ ಎತ್ಕೊಂಡೆ ಕಾಲು...' ಎಂಬ ನವೀನ್ ಸಜ್ಜು ಹಾಡಿರುವ ಗೀತೆಯನ್ನು ಚಿತ್ರತಂಡ ಬಿಡುಗಡೆ ಮಾಡಿದೆ. ಈ ಹಾಡಿಗೂ ಭರ್ಜರಿ ಪ್ರತಿಕ್ರಿಯೆ ಸಿಕ್ಕಿದೆ.

ಅಪೂರ್ವಶ್ರೀ, ತಬಲಾ ನಾಣಿ

'ಕ್ರಿಟಿಕಲ್ ಕೀರ್ತನೆಗಳು' ಚಿತ್ರದಲ್ಲಿ ತಬಲಾ ನಾಣಿ, ಸುಚೇಂದ್ರ ಪ್ರಸಾದ್, ರಾಜೇಶ್ ನಟರಂಗ, ತರಂಗ ವಿಶ್ವ, ಅಪೂರ್ವ, ಅಪೂರ್ವ ಭಾರದ್ವಾಜ್, ಅರುಣಾ ಬಾಲರಾಜ್, ಧರ್ಮ, ದಿನೇಶ್ ಮಂಗಳೂರು, ರಘು ಪಾಂಡೇಶ್ವರ, ಯಶಸ್ ಅಭಿ, ದೀಪಾ, ಗುರುರಾಜ ಹೊಸಕೋಟೆ, ಮಾಸ್ಟರ್ ಮಹೇಂದ್ರ, ಮಾಸ್ಟರ್ ಪುಟ್ಟರಾಜು, ಯಶ್ ಶೆಟ್ಟಿ ಅಭಿನಯಿಸಿದ್ದಾರೆ.

'ಕೇಸರಿ ಫಿಲಂಸ್ ಕ್ಯಾಪ್ಚರ್' ಲಾಂಛನದಲ್ಲಿ ಕುಮಾರ್ ಮತ್ತು ಸ್ನೇಹಿತರು ಸೇರಿ ನಿರ್ಮಿಸಿರುವ ಚಿತ್ರಕ್ಕೆ ಶಿವಸೇನ ಮತ್ತು ಶಿವಶಂಕರ್ ಛಾಯಾಗ್ರಹಣವಿದೆ. ಮೂರು ಹಾಡುಗಳಿದ್ದು, ವೀರ್ ಸಮರ್ಥ್ ಸಂಗೀತ, ಅರವ್ ರಿಶಿಕ್ ಹಿನ್ನಲೆ ಸಂಗೀತವಿದೆ.

❖

ಶಿವರಾಜ್‌ಕುಮಾರ್‌ಗೆ ಶ್ರೀನಿ ಆ್ಯಕ್ಷನ್ ಕಟ್

ಶ್ರೀನಿ ಹಾಗೂ ಶಿವರಾಜ್‌ಕುಮಾರ್

ನಟ ಶಿವರಾಜ್‌ಕುಮಾರ್ ಅವರು ನಾಯಕನಾಗಿ ನಟಿಸಲಿರುವ ಸಂದೇಶ್ ಪ್ರೊಡಕ್ಷನ್ಸ್‌ನ ನೂತನ ಚಿತ್ರವನ್ನು ಚಿ.ಗುರುದತ್ ನಿರ್ದೇಶಿಸಲಿದ್ದಾರೆ ಎನ್ನುವ ಮಾಹಿತಿಯನ್ನು ಕೆಲ ತಿಂಗಳ ಹಿಂದಷ್ಟೇ ಚಿತ್ರತಂಡ ನೀಡಿತ್ತು. ಹೊಸ ಸುದ್ದಿ ಏನೆಂದರೆ ಇದೀಗ ಗುರುದತ್ ಅವರ ಬದಲಾಗಿ, 'ಬೀರ್ ಬಲ್', 'ಓಲ್ಡ್ ಮಾಂಕ್' ಸಿನಿಮಾ ಖ್ಯಾತಿಯ ನಟ ಶ್ರೀನಿ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ. ಚಿತ್ರಕ್ಕೆ 'ಗೋಸ್ಟ್' ಎನ್ನುವ ಶೀರ್ಷಿಕೆಯನ್ನು ಇಡಲಾಗಿದೆ.

ಚಿತ್ರದ ಕಥೆಯನ್ನು ಶ್ರೀನಿ ಅವರೇ ಬರೆದಿದ್ದು, ಉಳಿದ ಕಲಾವಿದರ ಹಾಗೂ ತಂತ್ರಜ್ಞರ ಆಯ್ಕೆ ನಡೆಯುತ್ತಿದೆ ಎಂದು ಚಿತ್ರತಂಡವು ತಿಳಿಸಿದೆ. ಒಂದೆರಡು ತಿಂಗಳಲ್ಲಿ ಚಿತ್ರೀಕರಣ ಆರಂಭವಾಗುವ ಸಾಧ್ಯತೆ ಇದೆ. ಈ ಆ್ಯಕ್ಷನ್ ಥ್ರಿಲ್ಲರ್ ಚಿತ್ರಕ್ಕೆ ಅರ್ಜುನ್ ಜನ್ಯ ಸಂಗೀತ ನೀಡಲಿದ್ದಾರೆ.

ಸದ್ಯಕ್ಕೆ ಶಿವರಾಜ್‌ಕುಮಾರ್ ಅವರು ತಮ್ಮ 125ನೇ ಚಿತ್ರ 'ವೇದ'ದ ಚಿತ್ರೀಕರಣದಲ್ಲಿ ತೊಡಗಿಸಿಕೊಂಡಿದ್ದಾರೆ. ಶಿವರಾಜ್‌ಕುಮಾರ್ ನಟನೆಯ 123ನೇ ಸಿನಿಮಾ 'ಬೈರಾಗಿ' ಬಿಡುಗಡೆಗೆ ಸಜ್ಜಾಗಿದೆ. ಅವರ ನಟನೆಯ 124ನೇ ಚಿತ್ರ 'ನೀ ಸಿಗೋವರೆಗೂ' ಚಿತ್ರದ ಒಂದು ಹಂತದ ಚಿತ್ರೀಕರಣ ಪೂರ್ಣಗೊಂಡಿದೆ.

❖

ರುಕ್ಮಿಣಿ ವಸಂತ್

'ಬಾನದಾರಿಯಲ್ಲಿ' ಸಿನಿಮಾದಲ್ಲಿ ಗೋಲ್ಡನ್ ಸ್ಟಾರ್ ಗಣೇಶ್‌ಗೆ ನಟಿ ರುಕ್ಮಿಣಿ ವಸಂತ್ ಜೋಡಿಯಾಗಿದ್ದಾರೆ

'ಬಾನದಾರಿಯಲ್ಲಿ' ರುಕ್ಮಿಣಿ ವಸಂತ್

'ಬೀರ್‌ಬಲ್' ಬೆಡಗಿಯಾಗಿ ಚಂದನವನ ಪ್ರವೇಶಿಸಿದ್ದ ನಟಿ ರುಕ್ಮಿಣಿ ವಸಂತ್ ಇದೀಗ 'ಲೀಲ' ಎಂಬ ಪಾತ್ರದ ಮುಖೇನ ಗೋಲ್ಡನ್ ಸ್ಟಾರ್ ಗಣೇಶ್‌ಗೆ ಜೋಡಿಯಾಗಿ 'ಬಾನದಾರಿಯಲ್ಲಿ' ಪಯಣ ಆರಂಭಿಸಲಿದ್ದಾರೆ.

ಸದ್ಯಕ್ಕೆ ನಟ ರಕ್ಷಿತ್ ಶೆಟ್ಟಿ ನಟನೆಯ, ಹೇಮಂತ್ ಎಂ. ರಾವ್ ನಿರ್ದೇಶನದ 'ಸಪ್ತ ಸಾಗರದಾಚೆ ಎಲ್ಲೋ' ಚಿತ್ರದಲ್ಲಿ ರುಕ್ಮಿಣಿ ಅವರು ನಾಯಕಿಯಾಗಿ ನಟಿಸುತ್ತಿದ್ದಾರೆ. ಈ ಚಿತ್ರದಲ್ಲಿ ಎರಡು ಶೇಡ್‌ಗಳಲ್ಲಿ ರಕ್ಷಿತ್ ಅವರು ಕಾಣಿಸಿಕೊಳ್ಳುತ್ತಿದ್ದು, ಮೊದಲನೇ ಹಂತದ ಚಿತ್ರೀಕರಣದ ಬಳಿಕ ರಕ್ಷಿತ್ ಅವರು ತೂಕ ಹೆಚ್ಚಿಸಿಕೊಳ್ಳಲು ಗ್ಯಾಪ್ ತೆಗೆದುಕೊಂಡಿದ್ದಾರೆ. ಹೀಗಾಗಿ ಎರಡನೇ ಹಂತದ ಚಿತ್ರೀಕರಣ ಆರಂಭಕ್ಕೂ ಮುನ್ನದ ಬಿಡುವಿನ ವೇಳೆ ರುಕ್ಮಿಣಿ ಅವರಿಗೆ ಹೊಸ ಚಿತ್ರದ ಆಫರ್ ಬಂದಿದೆ. 'ಬಾನದಾರಿಯಲ್ಲಿ' ವಾಟರ್‌ಸ್ಪೋರ್ಟ್ಸ್ ಕ್ರೀಡಾಪಟುವಾಗಿ ರುಕ್ಮಿಣಿ ಅವರು ಕಾಣಿಸಿಕೊಳ್ಳಲಿದ್ದಾರೆ. ಇದಕ್ಕಾಗಿ ಹೊಸ ಕೌಶಲವನ್ನೂ ರುಕ್ಮಿಣಿ ಕಲಿಯುತ್ತಿದ್ದಾರೆ.

'ಮುಂಗಾರು ಮಳೆ' ಸಿನಿಮಾಗೆ ಕಥೆ ಬರೆದಿದ್ದ ಪ್ರೀತಮ್ ಗುಬ್ಬಿ, 'ಮಳೆಯಲಿ ಜೊತೆಯಲಿ', 'ದಿಲ್ ರಂಗೀಲಾ' ಹಾಗೂ '99' ಸಿನಿಮಾದಲ್ಲಿ ಗಣೇಶ್‌ಗೆ ಆ್ಯಕ್ಷನ್ ಕಟ್ ಹೇಳಿದ್ದರು. ತಮಿಳಿನ '96' ಸಿನಿಮಾದ ರಿಮೇಕ್ ಆಗಿದ್ದ '99' ಹೆಚ್ಚು ಸದ್ದು ಮಾಡಿರಲಿಲ್ಲ. ಮೇನಲ್ಲಿ 'ಬಾನದಾರಿಯಲ್ಲಿ' ಚಿತ್ರದ ಚಿತ್ರೀಕರಣ ಆರಂಭವಾಗಲಿದೆ.

❖

ಅರ್ಜುನದಲ್ಲಿ ಮನಮೋಹಕ ವಿನ್ಯಾಸಗಳು

ಅಕ್ಷಯ ತೃತೀಯಾ ಒಂದು ಮಂಗಳಕರ ಸಂದರ್ಭ. ಏನನ್ನಾದರೂ ತಮ್ಮದಾಗಿಸಿಕೊಳ್ಳುವ ಒಂದು ಸುದಿನ. ಸಾಮಾನ್ಯವಾಗಿ ಈ ಸಂದರ್ಭದಲ್ಲಿ ಚಿನ್ನಾಭರಣಗಳನ್ನೇ ಖರೀದಿಸುತ್ತಾರೆ.

ಕೋವಿಡ್ ಸಾಂಕ್ರಾಮಿಕತೆ ಬೆನ್ನ ಹಿಂದೆಯೇ ಇದ್ದರೂ ಕೂಡ, ಈ ವರ್ಷದ ಅಕ್ಷಯ ತೃತೀಯ ಚಿನ್ನಾಭರಣಗಳ ಖರೀದಿಯಲ್ಲಿ ದಟ್ಟಣೆಗೆ ಸಾಕ್ಷಿಯಾಗಲಿದೆ. ಇಂತಹ ಗಳಿಗೆಯಲ್ಲಿ ಅರ್ಜುನ ವರ ಜ್ಯುವೆಲ್ಲರ್ಸ್ ಮಳಿಗೆಗೆ ನಿಮ್ಮ ಆದ್ಯತೆ ಇರಲಿ.

ಅರ್ಜುನ ವರ ಜ್ಯುವೆಲ್ಲರ್ಸ್ ತನ್ನ ಉತ್ಕೃಷ್ಟ ಗುಣಮಟ್ಟದ ಹಾಗೂ ಸೊಗಸಾದ ಕರಕುಶಲ ಚಿನ್ನಾಭರಣಗಳ ವ್ಯಾಪಾರದಲ್ಲಿ ಪ್ರತಿಷ್ಠೆ ಪಡೆದಿದೆ. ಮಳಿಗೆಯಲ್ಲಿ ಅಪರೂಪದ ಹಲವಾರು ವಿನ್ಯಾಸದ, ಬಣ್ಣದ ಹರಳುಗಳು ಮತ್ತು ಜೆಮ್‌ಸ್ಟೋನ್ ಹುದುಗಿಸಲಾಗಿರುವ ವೈವಿಧ್ಯಮಯ ಚಿನ್ನ ಮತ್ತು ಬೆಳ್ಳಿ ಆಭರಣಗಳಿವೆ.

ಮಳಿಗೆಯ ಸಹ ಸಂಸ್ಥಾಪಕರಾದ ರಾಹುಲ್ ಎ ಜೈನ್ ಮತ್ತು ಅಕ್ಷಯ್ ಎ ಜೈನ್ ಜಂಟಿಯಾಗಿ, ಈ ಅಕ್ಷಯ ತೃತೀಯಾ ಸಂದರ್ಭದಲ್ಲಿ ಚಿನ್ನಾಭರಣಗಳ ಒಂದು ವಿಶೇಷ ಶ್ರೇಣಿಯನ್ನು ರೂಪಿಸಿದ್ದಾರೆ. "ಇಲ್ಲಿ ನೀವು, ನಿಮ್ಮ ಹಣಕ್ಕೆ ತಕ್ಕನಾದ ಆಕರ್ಷಕ ವಿನ್ಯಾಸವುಳ್ಳ ಮತ್ತು ವೈವಿಧ್ಯಮಯ ಚಿನ್ನಾಭರಣಗಳನ್ನು ನಿರೀಕ್ಷಿಸಬಹುದು", ಎಂದರು.

ರಾಹುಲ್ ಎ ಜೈನ್ ಮತ್ತು ಅಕ್ಷಯ್ ಎ ಜೈನ್ ಅರ್ಜುನ ಜ್ಯುವೆಲ್ಲರ್ಸ್ ಮಳಿಗೆಯ ಸಹ ಸಂಸ್ಥಾಪಕರು

ಅರ್ಜುನ ವರ ಜ್ಯುವೆಲ್ಲರ್ಸ್ ಮಳಿಗೆಯಲ್ಲಿ ಈ ಅಕ್ಷಯ ತೃತೀಯಾದಂದು ನಿಮಗೆ ಕೆಲವು ಆಕರ್ಷಕ ಕೊಡುಗೆಗಳನ್ನು ರೂಪಿಸಲಾಗಿದೆ. ತಾಳಿ ಮತ್ತು ಮಾಂಗಲ್ಯದ ಮೇಲೆ ಮೇಕಿಂಗ್/ವೇಸ್ಟೇಜ್ ಶುಲ್ಕಗಳಿಲ್ಲ, ಖರೀದಿಸುವ ಪ್ರತಿ ಕಿಲೋಗ್ರಾಮ್ ಬೆಳ್ಳಿಗೆ ರೂ.1,200 ಕಡಿತ, ಹಳೆಯ ಚಿನ್ನದ ವಿನಿಮಯದ ಮೇಲೆ ಪ್ರತಿ ಗ್ರಾಮ್‌ಗೆ ರೂ.121 ಹೆಚ್ಚಿನ ದರ, ಖರೀದಿಸುವ ಪ್ರತಿ ಗ್ರಾಮ್ ಚಿನ್ನದ ಮೇಲೆ ರೂ.121 ಕಡಿತ ಮತ್ತು ವಜ್ರಾಭರಣಗಳ ಖರೀದಿಯಲ್ಲಿ ಪ್ರತಿ ಕ್ಯಾರೆಟ್‌ಗೆ ರೂ.12,000 ಕಡಿತ. ಇವೆಲ್ಲ ಕೊಡುಗೆಗಳು ಏಪ್ರಿಲ್ 21 ರಿಂದ ಮೇ 12 ರವರೆಗೆ ಮಾತ್ರ ಲಭ್ಯ.

ಅರ್ಜುನ ವರ ಜ್ಯುವೆಲ್ಲರ್ಸ್

69, 38ನೇ ಅಡ್ಡರಸ್ತೆ, 4ನೇ ಟಿ ಬ್ಲಾಕ್, ಜಯನಗರ

ಫೋನ್: 63628 24611

080-26651969/41241969

ವೆಬ್‌ಸೈಟ್: www.arjunaa.com

ಇನ್‌ಸ್ಟಾ:@arjunaa_jewellers